ಮಂಗಳವಾರ, ಫೆಬ್ರುವರಿ 3, 2026| ₹ 7.00
prajavani.net | prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ...



ನರೇಗಾ ಯೋಜನೆಯನ್ನು ಮರುಸ್ಥಾಪಿಸುವಂತೆ ಒತ್ತಾಯಿಸಿ ‘ನರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ’ ಸದಸ್ಯರು ಬೆಂಗಳೂರಿನಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಮಹಿಳೆ

ಬಾಲರಾಮ...



ರಾಯಚೂರಿನಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ‘ಮಕ್ಕಳ ಹಬ್ಬ’ದಲ್ಲಿ ಶ್ರೀರಾಮನ ವೇಷದಲ್ಲಿ ಕಾಣಿಸಿಕೊಂಡ ಬಾಲಕ ಮಂಜುನಾಥ

ಕಮಿಷನ್ ಆರೋಪ: ಮೌನವೇಕೆ?

ಸರ್ಕಾರಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘ ಮಾಡಿದ ಶೇ 80ರಷ್ಟು ಕಮಿಷನ್ ಆರೋಪ ಸುಳ್ಳಾಗಿದ್ದರೆ ಕ್ರಮ ಕೈಗೊಳ್ಳಬಹುದಿತ್ತು. ಮೌನ ಗಮನಿಸಿದರೆ ಸರ್ಕಾರ ತಪ್ಪು ಮಾಡಿರುವುದು ಸತ್ಯ ಎನಿಸುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.


ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಅವರು ಮಾತನಾಡಿದರು. ಬಿಜೆಪಿ ಆಡಳಿತದ ಅವಧಿಯಲ್ಲಿ ಗುತ್ತಿಗೆದಾರರ ಸಂಘ ಮಾಡಿದ್ದ 40 ಪರ್ಸೆಂಟ್ ಆರೋಪವನ್ನೇ ದಾಳವಾಗಿಸಿಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಈಗ ಅದೇ ಸಂಘ ಮೂರು ಬಾರಿ ಸುದ್ದಿಗೋಷ್ಠಿ ನಡೆಸಿ, ನಿಮ್ಮ ವಿರುದ್ಧವೇ ಭ್ರಷ್ಟಾಚಾರದ ಗಂಭೀರ ಆರೋಪ ಮಾಡಿದೆ. ಹಳೆಯ ಬಿಲ್‌ಗಳಿಗೂ ಕಮಿಷನ್ ಪಡೆಯುತ್ತಿದ್ದಾರೆ. ಆರೋಪ ಈಗಾಗಲೇ ರಾಹುಲ್ ಗಾಂಧಿ ಅವರನ್ನೂ ತಲುಪಿದೆ. ₹37,370 ಕೋಟಿ ಬಾಕಿ ಇದ್ದರೂ ಹಣ ಬಿಡುಗಡೆ ಮಾಡಿಲ್ಲ. ರಾಜ್ಯದ ಕಾಮಗಾರಿಗಳ ಗುತ್ತಿಗೆಯಲ್ಲಿ ಆಂಧ್ರಪ್ರದೇಶದ ಲಾಬಿ ಜೋರಾಗಿದೆ ಎಂದು ದೂರಿದರು.

2019ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ₹14,000 ಕೋಟಿ ಬಾಕಿ ಬಿಟ್ಟಿದ್ದರು. ಸರ್ಕಾರ ಬದಲಾದರೂ ಹಿಂದಿನ ಪ್ರಕ್ರಿಯೆಗಳ ಮುಂದುವರಿಕೆ ಇದ್ದೆ ಇರುತ್ತದೆ. ಬಿಲ್ ಪಾವತಿಸುವುದು ನಿರಂತರ ಪ್ರಕ್ರಿಯೆ. 40 ಪರ್ಸೆಂಟ್ ಎಂಬ ಭಿತ್ತಿಪತ್ರಗಳನ್ನು ಕಾಂಗ್ರೆಸ್ ನಾಯಕರು ಎಲ್ಲ ಕಡೆ ಅಂಟಿಸಿದ್ದರು. ಈಗ ಈ ಆರೋಪದ ಪತ್ರಗಳನ್ನು ಜನರು ಕಾಂಗ್ರೆಸ್ ನಾಯಕರ ಮುಖದ ಮೇಲೆ ಅಂಟಿಸುತ್ತಾರೆ ಎಂದರು.

ಸಿದ್ದರಾಮಯ್ಯ ಈಗ 'ಇಲಿಯಾ'

ಮೊದಲ ಅವಧಿಯಲ್ಲಿ ಎಲ್ಲರೂ ಮೆಚ್ಚುವ 'ಹುಲಿಯಾ' ಆಗಿದ್ದ ಸಿದ್ದರಾಮಯ್ಯ ಈಗ 'ಇಲಿಯಾ' ಆಗಿದ್ದಾರೆ ಎಂದು ಆರ್.ಅಶೋಕ ಹೇಳಿದರು.

ಬಿಜೆಪಿ ವಿರುದ್ಧ ಗುತ್ತಿಗೆದಾರರ ಸಂಘ ಮಾಡಿದ್ದ ಆರೋಪವನ್ನೇ ಬಂಡವಾಳ ಮಾಡಿಕೊಂಡು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಜೋಡೆತ್ತುಗಳಂತೆ 'ಪೇಸಿಎಂ' ಎಂದು ಬೊಬ್ಬೆ ಹಾಕಿದ್ದರು. ಈಗ ಇಬ್ಬರೂ ಕುಂಟೆತ್ತುಗಳಾಗಿದ್ದಾರೆ. ಬೇರೆ ಬೇರೆ ದಿಕ್ಕಿಗೆ ಎಳೆಯುತ್ತಿದ್ದಾರೆ ಎಂದು ಟೀಕಿಸಿದರು.



ದೇಶದ ವಿವಿಧ ಯೋಜನೆಗಳಿಗೆ ಇಟ್ಟಿರುವ ಇಂದಿರಾ ಗಾಂಧಿ ಕುಟುಂಬದ ಹೆಸರುಗಳನ್ನು ಪ್ರದರ್ಶಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ

ತಿದ್ದುಪಡಿ, ಬದಲಾವಣೆ ಬೇರೆ..

ಜವಾಹರಲಾಲ್ ನೆಹರೂ 17 ಬಾರಿ, ಇಂದಿರಾಗಾಂಧಿ 29 ಬಾರಿ, ರಾಜೀವ್‌ಗಾಂಧಿ 10 ಬಾರಿ ಸೇರಿದಂತೆ ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ 72ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಗಿದೆ ಎಂದು ಆರ್.ಅಶೋಕ ಟೀಕಿಸಿದರು.

ವಾಜಪೇಯಿ 14 ಬಾರಿ ಹಾಗೂ ನರೇಂದ್ರ ಮೋದಿ 8 ಬಾರಿ ತಿದ್ದುಪಡಿ ಮಾಡಿದ್ದಾರೆ. ಅತಿ ಹೆಚ್ಚು ಬಾರಿ ತಿದ್ದುಪಡಿ ಮಾಡಿದ ಕಾಂಗ್ರೆಸ್ ಬಿಜೆಪಿ ಮೇಲೆ ಸಂವಿಧಾನ ಬದಲಾವಣೆಯ ಆರೋಪ ಮಾಡುತ್ತಿದೆ ಎಂದರು.

ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವ ರಾಮ ಲಿಂಗಾರೆಡ್ಡಿ, 'ಸಂವಿಧಾನ ತಿದ್ದುಪಡಿಯೇ ಬೇರೆ ಬದಲಾವಣೆಯೇ ಬೇರೆ' ಎಂದರು.

'ನಾಮ'ದ ಜಟಾಪಟಿ

ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ 445 ಯೋಜನೆಗಳಿಗೆ ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸಂಜಯ್ ಗಾಂಧಿ ಹೆಸರಿಟ್ಟಿದೆ. ಮಹಾತ್ಮ ಗಾಂಧಿ ಹೆಸರನ್ನೇ ಹೈಜಾಕ್ ಮಾಡಿದೆ. ನರೇಗಾ ಯೋಜನೆ ಹೆಸರು ಬದಲಾಯಿಸಿದ್ದಕ್ಕೆ ಸಹಿಸಲು ಅವರಿಗೆ ಆಗುತ್ತಿಲ್ಲ ಎಂದು ಆರ್. ಅಶೋಕ ದೂರಿದರು.

ರಾಮನ ಹೆಸರು ಕೇಳಿದರೆ ಅವರಿಗೆ ಆಗುವುದಿಲ್ಲ. ಅದಕ್ಕಾಗಿಯೇ ರಾಮನಗರದ ಹೆಸರನ್ನೂ ಬದಲಾಯಿಸಿ, ದಕ್ಷಿಣ ಬೆಂಗಳೂರು ಎಂದು ಮಾಡಿದರು. ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಹೆಸರಿನಲ್ಲೂ ರಾಮ ಇದೆ. ಅವರ ತಂದೆ ಇಟ್ಟಿದ್ದಕ್ಕೆ ಇದೆ. ಇವರೇ ಇಟ್ಟುಕೊಳ್ಳುವುದಾಗಿದ್ದರೆ ರಾಮ ಪದವನ್ನೇ ಬಿಡುತ್ತಿದ್ದರು ಎಂದರು.

ಆಗ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ ಇರುವ ಯೋಜನೆಗಳನ್ನು ಓದಲು ಆರಂಭಿಸಿದರು. ಇದು ಕಾಂಗ್ರೆಸ್–ಬಿಜೆಪಿ ಸದಸ್ಯರ ನಡುವೆ ಜಟಾಪಟಿಗೆ ದಾರಿ ಮಾಡಿಕೊಟ್ಟಿತು.

ರಾಜ್ಯಪಾಲರ ವಿರುದ್ಧವಿಲ್ಲ ಕೇಂದ್ರದ ವಿರುದ್ಧ– ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲರು ಪೂರ್ತಿ ಭಾಷಣ ಓದದೆ, 'ಜೈ ಸಂವಿಧಾನ' ಎನ್ನುವುದನ್ನೂ ಉಲ್ಲೇಖಿಸದೆ, ರಾಷ್ಟ್ರಗೀತೆ ಮುಗಿಯುವವರೆಗೂ ಕಾಯದೆ ಆತುರಾತುರವಾಗಿ ಹೋದರು. ಇದು ಸರಿಯಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ವಿಧಾನ ಸಭೆಯಲ್ಲಿ ಉತ್ತರಿಸಿದ ಅವರು, 'ರಾಜ್ಯಪಾಲರು ಮೂಲತ: ಉತ್ತಮ ವ್ಯಕ್ತಿಯೇ. ನಾವು ರಾಜ್ಯಪಾಲರ ವಿರುದ್ಧವಿಲ್ಲ. ಆದರೆ, ಕೇಂದ್ರ ಸರ್ಕಾರದ ವಿರುದ್ಧ' ಎಂದರು.

ರಾಜ್ಯಪಾಲರ ಭಾಷಣದ ಕುರಿತು 'ಪ್ರಜಾವಾಣಿ'ಯೂ ಸೇರಿದಂತೆ ನಾಡಿನ ವಿವಿಧ ಪತ್ರಿಕೆಗಳು ಬರೆದಿದ್ದ ಸಂಪಾದಕೀಯದ ಸಾಲುಗಳನ್ನು ಓದಿದ ಮುಖ್ಯಮಂತ್ರಿ, 'ರಾಜ್ಯಪಾಲರು ಸರ್ಕಾರದ ಭಾಷಣ ಓದದೇ ಇರಲು ಸಂವಿಧಾನದಲ್ಲಿ ಆಯ್ಕೆಯಿಲ್ಲ. ರಾಜ್ಯಪಾಲರ ನಡವಳಿಕೆ ಅವರ ಘನತೆಗೆ ತಕ್ಕುದಾದುದಲ್ಲ. ಅಧಿವೇಶನ ಐತಿಹಾಸಿಕ ಕಳಂಕಕ್ಕೆ ಸಾಕ್ಷಿಯಾಯಿತು. ರಾಜ್ಯಪಾಲರು ರಾಜಕೀಯ ಏಜೆಂಟ್ ರಂತೆ ವರ್ತಿಸುತ್ತಿರುವುದೇ ಇದಕ್ಕೆ ಕಾರಣ ಎಂಬಿತ್ಯಾದಿ ಸಂಪಾದಕೀಯಗಳು ಪ್ರಕಟವಾಗಿದ್ದವು' ಎಂದರು.

'ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನುದಾನ ಕಡಿತದ ಬಗ್ಗೆ ನಾನು ಹಲವು ಬಾರಿ ಸಂಬಂಧಿಸಿದವರಿಗೆ ಪತ್ರ ಬರೆದಿದ್ದೇನೆ. ಕೇಂದ್ರ ವಿತ್ತ ಸಚಿವರನ್ನು ಈ ಸಂಬಂಧ ಭೇಟಿ ಮಾಡಲಾಗಿದೆ. ಜಿಎಸ್‌ಟಿ ಸಮಿತಿ ಸಭೆಯಲ್ಲಿ ರಾಜ್ಯ ಸರ್ಕಾರ ತನ್ನ ನಿಲುವನ್ನು ಮಂಡಿಸಿದರೂ, ಅದನ್ನು ಪರಿಗಣಿಸಲಾಗಿಲ್ಲ' ಎಂದು ದೂರಿದರು.

'ಹಿಂದುಳಿದ ವರ್ಗದವರ ಬಗ್ಗೆ ಕಾಳಜಿಯಿರುವ ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿ 2013–2018 ರವರೆಗೆ 543 ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ. ನಂತರ ಬಂದ ಬಿಜೆಪಿ ಸರ್ಕಾರ (2019ರಿಂದ 2023) ಕೇವಲ ಐದು ಹಾಸ್ಟೆಲ್‌ಗಳನ್ನು ನಿರ್ಮಿಸಿದೆ. ಕಾಂಗ್ರೆಸ್ ಸರ್ಕಾರ 2023-24ರಿಂದ ಇಲ್ಲಿಯವರೆಗೆ 220 ಹಾಸ್ಟೆಲ್ ನಿರ್ಮಿಸಿದೆ. ನಮ್ಮ ಸರ್ಕಾರ 14.52 ಲಕ್ಷ ಮನೆಗಳನ್ನು ನಿರ್ಮಿಸಿದೆ. ಬಿಜೆಪಿ ಅವಧಿಯಲ್ಲಿ ಕೇವಲ 5 ಲಕ್ಷ ಮನೆಗಳಾಗಿವೆ. ಈ ಎಲ್ಲ ಸತ್ಯಾಂಶಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಲಾಗಿತ್ತು' ಎಂದರು.

ಮುಖ್ಯಮಂತ್ರಿಯ ಉತ್ತರವನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡುತ್ತಿದ್ದಂತೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಪ್ರಸ್ತಾವಕ್ಕೆ ಸದನ ಒಪ್ಪಿಗೆ ನೀಡಿತು.

'ಎಲ್ಲರೂ ಸಂವಿಧಾನ ಒಪ್ಪಲೇಬೇಕು'

'ಜನರು ನಮ್ಮನ್ನು ಅವರ ಪ್ರತಿನಿಧಿಯಾಗಿ ಆಯ್ಕೆ ಮಾಡುತ್ತಾರೆ. ವಿರೋಧ ಪಕ್ಷದವರ ಮತ್ತು ಸರ್ಕಾರದವರ ಸಿದ್ಧಾಂತಗಳು ವಿಭಿನ್ನವಾಗಿರುತ್ತವೆ. ನಾವಿಬ್ಬರೂ ಪರಸ್ಪರ ಒಪ್ಪಲೇಬೇಕೆಂಬ ಷರತ್ತಿಲ್ಲ. ಆದರೆ, ನಾವೆಲ್ಲರೂ ಸಂವಿಧಾನ ಒಪ್ಪಲೇಬೇಕು. ಸಂವಿಧಾನಬದ್ಧವಾಗಿ ಸರ್ಕಾರ, ಆಡಳಿತ ನಡೆಯಲೇಬೇಕು. ಸಂವಿಧಾನವನ್ನು ಯಾವುದೇ ಕಾರಣಕ್ಕೂ ವಿರೋಧಿಸಬಾರದು. ಗ್ರಾಮೀಣಾಭಿವೃದ್ಧಿಗೆ ನರೇಗಾ ಸಂಜೀವಿನಿ ಎಂದು ಮುಖ್ಯಮಂತ್ರಿ ಆಗಿದ್ದಾಗ ಕುಮಾರಸ್ವಾಮಿ ಹೇಳಿದ್ದರು. ಈಗ ಇದ್ದಕ್ಕಿದ್ದ ಹಾಗೇ ವಿರೋಧಿಸುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಟೀಕಿಸಿದರು.

ಉರ್ದು ಶಾಲಾ ಸಮಯ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ತಿಂಗಳಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಉರ್ದು ಶಾಲೆಗಳ ಸಮಯ ಬದಲಾವಣೆ ಮಾಡಿ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿದೆ.

ರಂಜಾನ್ ತಿಂಗಳ ಉಪವಾಸ ಆರಂಭವಾಗುವ ದಿನದಿಂದ ಮಾರ್ಚ್ 31ರವರೆಗೆ ಈ ನಿಯಮ ಅನ್ವಯವಾಗುತ್ತದೆ. ಪ್ರತಿ ದಿನ ಬೆಳಿಗ್ಗೆ 8ಕ್ಕೆ ಆರಂಭವಾಗಿ ಮಧ್ಯಾಹ್ನ 12.45ಕ್ಕೆ ಎಲ್ಲ ತರಗತಿಗಳನ್ನು ಮುಗಿಸಲು ಸೂಚಿಸಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಇತರೆ ಪರೀಕ್ಷೆಗಳನ್ನು ನಿಗದಿತ ವೇಳಾಪಟ್ಟಿಯಂತೆ ನಡೆಸಬೇಕು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ನಿಯೋಜಿತವಾಗಿರುವ ಉರ್ದು ಮಾಧ್ಯಮ ಶಿಕ್ಷಕರಿಗೆ ಈ ಆದೇಶ ಅನ್ವಯವಾಗುವುದಿಲ್ಲ ಎಂದು ನಿರ್ದೇಶನಾಲಯ ಹೇಳಿದೆ.

'ರಾಜ್ಯದಲ್ಲಿ 370 ಬಾಂಗ್ಲಾ ಪ್ರಜೆಗಳು ಪತ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಒಟ್ಟು 370 ಬಾಂಗ್ಲಾ ಪ್ರಜೆಗಳನ್ನು ಗುರುತಿಸಲಾಗಿದೆ. ಈ ಪೈಕಿ, 196 ಜನರನ್ನು ಈಗಾಗಲೇ ಗಡಿಪಾರು ಮಾಡಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಮಾಹಿತಿ ನೀಡಿದರು.

ಕಾನೂನು ಸುವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರ ಆಕ್ಷೇಪಗಳಿಗೆ ಉತ್ತರಿಸಿದ ಅವರು, 'ಕೇವಲ ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲಿ ಬಾಂಗ್ಲಾದೇಶದವರು ನೆಲಸಿದ್ದಾರೆ. ಅವರು ಸಾಮಾನ್ಯವಾಗಿ ಕೋಲ್ಕತ್ತಾ ಮೂಲಕ ದೇಶದ ಒಳಗೆ ಬರುತ್ತಾರೆ. ಗಡಿಯಲ್ಲಿ ಅವರನ್ನು ತಡೆಯುವ ಜವಾಬ್ದಾರಿ ಸೈನಿಕರ ಮೇಲಿರುತ್ತದೆ. ಆದರೂ ಒಳನುಸುಳಿ, ಕೆಲಸ ಅರಸಿ ಬೆಂಗಳೂರು, ಮುಂಬೈ ಸೇರಿದಂತೆ ದೇಶದ ವಿವಿಧ ನಗರಗಳಿಗೆ ವಲಸೆ ಬರುತ್ತಾರೆ' ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- 196 ಜನರ ಗಡಿಪಾರು: ಸಚಿವ ಜಿ.ಪರಮೇಶ್ವರ ಮಾಹಿತಿ
- ಕಟ್ಟುನಿಟ್ಟಿನ ನಿಗಾ ವಹಿಸಲು ಸೂಚನೆ
- ಇಲಾಖೆಯಲ್ಲಿ ಪ್ರತ್ಯೇಕ ಕಾರ್ಯಪಡೆ

'ರಾಜ್ಯದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬಾಂಗ್ಲಾದೇಶದವರು ನೆಲಸಿದ್ದಾರೆ' ಎಂಬ ಆರೋಪವನ್ನು ತಳ್ಳಿಹಾಕಿದ ಸಚಿವರು, 'ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅವರು ಇಲ್ಲಿರುವುದನ್ನು ನಾನು ಒಪ್ಪುವುದಿಲ್ಲ. ಈ ಬಗ್ಗೆ ನಿಗಾ ವಹಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದರು.

'ರಾಜ್ಯದ ರಾಜಧಾನಿ ಬೆಂಗಳೂರಿನಲ್ಲೇ ಅತಿ ಹೆಚ್ಚು, 284 ಮಂದಿ ಬಾಂಗ್ಲಾ ಪ್ರಜೆಗಳು ನೆಲಸಿದ್ದಾರೆ. ಉಳಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 37, ಶಿವಮೊಗ್ಗದಲ್ಲಿ 12 ಹಾಗೂ ಹಾಸನದಲ್ಲಿ 3 ಜನ ಬಾಂಗ್ಲಾದೇಶದವರು ಇರುವುದನ್ನು ಗುರುತಿಸಲಾಗಿದೆ' ಎಂದರು.

'ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಇದಕ್ಕಾಗಿ ಈಗಾಗಲೇ ಪೊಲೀಸ್ ಇಲಾಖೆಯಲ್ಲಿ ಪ್ರತ್ಯೇಕ ಕಾರ್ಯಪಡೆ ರಚಿಸಲಾಗಿದೆ. ರಾಜ್ಯ ಸರ್ಕಾರವು ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವ ಕೆಲಸ ಮಾಡುತ್ತಿದ್ದರೆ, ಕೇಂದ್ರ ಸರ್ಕಾರ ಅವರನ್ನು ಗಡಿಪಾರು ಮಾಡುವ ಪ್ರಕ್ರಿಯೆಯನ್ನು ನಡೆಸುತ್ತಿದೆ' ಎಂದರು.

ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ, 'ಪುನೀತ್ ಕೆರೆಹಳ್ಳಿ ಹೋದಾಗ ನಾವು ಬಾಂಗ್ಲಾದಿಂದ ಬಂದವರು ಎಂದು ಕೆಲವರು ಒಪ್ಪಿಕೊಂಡಿದ್ದಾರೆ. ಅವರಲ್ಲಿ ಎಷ್ಟು ಜನರನ್ನು ಹಿಡಿದು ವಾಪಸ್ ಕಳುಹಿಸಿದ್ದೀರಿ. ಇದಕ್ಕೆ ರಾಜ್ಯ ಸರ್ಕಾರ ಉತ್ತರ ಕೊಡಬೇಕಲ್ಲವೇ? ಪುನೀತ್ ಮೇಲೆಯೇ ಕೇಸ್ ಹಾಕಿದಿರಿ' ಎಂದರು.

ಆಗ ಪರಮೇಶ್ವರ, 'ಪುನೀತ್ ಕೆರೆಹಳ್ಳಿಗೆ ಅಧಿಕಾರ ಕೊಟ್ಟವರು ಯಾರು? ಅವರು ನಮಗೆ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನು ಕೈಗೆ ತೆಗೆದುಕೊಳ್ಳಲು ಸಾಧ್ಯವೇ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೋಗಿಲು: ಬಾಂಗ್ಲಾದವರಿಲ್ಲ– ಸಿದ್ದರಾಮಯ್ಯ

'ಯಲಹಂಕ ವ್ಯಾಪ್ತಿಯ ಕೋಗಿಲು ಲೇ ಔಟ್‌ನಲ್ಲಿ ಸರ್ವೆ ಮಾಡುತ್ತಿದ್ದೇವೆ. ಅಲ್ಲಿ ಬಾಂಗ್ಲಾದವರು ಯಾರೂ ಇಲ್ಲ. ಇದ್ದರೆ ಅವರನ್ನು ರಾಜ್ಯದಿಂದ ಹೊರಗೆ ಹಾಕುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಸೋಮವಾರ ಉತ್ತರಿಸುವ ವೇಳೆ ಅವರು, 'ರಾಜ್ಯದಲ್ಲಿ ಅಕ್ರಮವಾಗಿ ನೆಲಸಿರುವ ಬಾಂಗ್ಲಾ ದೇಶೀಯರಿಗೆ ಮನೆಗಳನ್ನು ನೀಡುವುದಿಲ್ಲ' ಎಂದರು.

'ಕೋಗಿಲು ಲೇ ಔಟ್‌ನಲ್ಲಿ 2019-22ರ ಮಧ್ಯೆ ಮನೆಗಳನ್ನು ಕಟ್ಟಿದ್ದಾರೆ. ಆಗ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇತ್ತು' ಎಂದೂ ಹೇಳಿದರು.

'ದೇಶದ ಗಡಿಯ ಮೂಲಕ ಬಾಂಗ್ಲಾ ನುಸುಳುಕೋರರು ಒಳಗೆ ಬರುತ್ತಾರೆ ಕೇಂದ್ರದಲ್ಲಿ ಯಾರ ಸರ್ಕಾರ ಅಧಿಕಾರದಲ್ಲಿದೆ? ಅವರನ್ನು ತಡೆಯುವುದು ಯಾರ ಜವಾಬ್ದಾರಿ. ಕೇಂದ್ರದಲ್ಲಿ ಇರುವವರು ತಡೆಯಬೇಕಲ್ಲವೇ' ಎಂದೂ ಪ್ರಶ್ನಿಸಿದರು.

'ರಾಜ್ಯ ಅಪರಾಧಿಗಳ ಸ್ವರ್ಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯವು ಅಪರಾಧಿಗಳ ಸ್ವರ್ಗವಾಗುತ್ತಿದೆ. ಪೊಲೀಸರಿಗೆ ನಿಯಂತ್ರಣವೇ ಇಲ್ಲದಂತಾಗಿದೆ' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷಗಳ ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಸೋಮವಾರದ ಕಲಾಪದ ವೇಳೆ ಚರ್ಚೆ ಮುಂದುವರಿಸಲಾಯಿತು. ರಾಜ್ಯಪಾಲರ ಭಾಷಣದಲ್ಲಿ 'ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡಿದ್ದೇವೆ' ಎಂಬ ಅಂಶಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ಎತ್ತಿದರು.

ಕೆ.ಎಸ್.ನವೀನ್, 'ನಮ್ಮ ರಾಜ್ಯವು ಈ ಹಿಂದೆ ಬೇರೆ–ಬೇರೆ ವಿಚಾರಗಳಲ್ಲಿ ಮೊದಲ ಸ್ಥಾನದಲ್ಲಿತ್ತು. ಈ ಸರ್ಕಾರ ಬಂದ ಮೇಲೆ ಮಾದಕ ವಸ್ತುಗಳ ರಾಜಧಾನಿ ಆಗುತ್ತಿದೆ. ಸರ್ಕಾರಕ್ಕೆ, ಪೊಲೀಸರಿಗೆ ನಿಯಂತ್ರಣವೇ ಇಲ್ಲದಂತಾಗಿದೆ. ಕಾಂಗ್ರೆಸ್‌ನದ್ದು ಭಸ್ಮಾಸುರ ಕೈ ಆಗಿದ್ದು, ರಾಜ್ಯವನ್ನು ನಾಶಮಾಡಿಯೇ ಕಾಂಗ್ರೆಸ್ ಅಧಿಕಾರದಿಂದ ಕೆಳಗಿಳಿಯುವುದು' ಎಂದು ಹೇಳುತ್ತಾ ರಾಜ್ಯಪಾಲರ ಭಾಷಣವನ್ನು ಖಂಡಿಸಿದರು.

'ರಾಜ್ಯದಲ್ಲಿ ಕೊಲೆ ಎಂಬುದು ಸಾಮಾನ್ಯ ಎಂಬುವಂತಾಗಿದೆ. ಬಳ್ಳಾರಿಯಲ್ಲಿ ಶಾಸಕರ ಖಾಸಗಿ ಅಂಗವಿಕಲರೇ ಅಮಾಯಕನೊಬ್ಬನನ್ನು ಕೊಂದಿದ್ದಾರೆ. ಬೇರೆಡೆಯೂ ಕೊಲೆಗಳು ನಡೆಯುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ಭಾರತಿ ಶೆಟ್ಟಿ ಮಾತನಾಡಿ, 'ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ನಡೆಯುತ್ತಲೇ ಇವೆ. ಮೈಸೂರಿನಲ್ಲಿ ಬಲೂನು ಮಾರುವ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಕೊಲ್ಲಲಾಯಿತು. ಹಂಪಿಯಲ್ಲಿ ಪ್ರವಾಸಿಗರ ಮೇಲೆ ಅತ್ಯಾಚಾರ ನಡೆಯಿತು. ರಾಜ್ಯದ ಎಲ್ಲೆಡೆ ಇಂತಹ ಪ್ರಕರಣಗಳು ವರದಿಯಾಗುತ್ತಲೇ ಇವೆ. ಜನ ಸಾಮಾನ್ಯರು ಓಡಾಡುವುದೇ ಕಷ್ಟವಾಗಿದೆ. ಹೀಗಿದ್ದೂ ಕಾನೂನು ಮತ್ತು ಸುವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಿಕೊಂಡಿದ್ದಾರೆ' ಎಂದರು.

ಪ್ರಧಾನಿ ವಿರುದ್ಧ ಮಾತು; ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್‌ನ ನಸೀರ್ ಅಹ್ಮದ್ ಆಡಿದ ಮಾತೊಂದು ವಿಧಾನ ಪರಿಷತ್‌ನಲ್ಲಿ ಕೋಲಾಹಲ ಸೃಷ್ಟಿಸಿತು.

'ನಸೀರ್ ಅಹ್ಮದ್ ಅವರು ಹೇಳಿದ ಮಾತನ್ನು ಕಡತದಿಂದ ತೆಗೆದು ಹಾಕಿದ್ದೇನೆ. ತಪ್ಪಾಗಿ ಮಾತನಾಡಿರುವ ಬಗ್ಗೆ ಏನು ಹೇಳುತ್ತಾರೋ ಅವರಿಗೆ ಬಿಟ್ಟದ್ದು, ನನಗೇನು ಮಾಡಕಾಗುವುದಿಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದರು. 'ಕ್ಷಮಾಪಣೆ ಕೇಳಲೇಬೇಕು' ಎಂದು ಪಟ್ಟು ಹಿಡಿದ ಬಿಜೆಪಿ ಸದಸ್ಯರು ಧರಣಿ ನಡೆಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ನೀಡುತ್ತಿದ್ದ ಸಂದರ್ಭದಲ್ಲಿ, 'ವಿಬಿ ಜಿ ರಾಮ್ ಜಿ ಕಾಯ್ದೆ ಪ್ರಕಾರ ರಾಜ್ಯ ಶೇ 40ರಷ್ಟು ಕೊಡಬೇಕು. ಕೇಂದ್ರ ಶೇ 60ರಷ್ಟು ನೀಡುತ್ತದೆ. ಇದರ ಅರ್ಥ ಏನು. ರಾಜ್ಯದಲ್ಲಿ ದುಡ್ಡಿಲ್ಲ ಎಂದು ಈ ರೀತಿ ಹೇಳುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಆಗ ಕಾಂಗ್ರೆಸ್‌ನ ನಾಗರಾಜ ಯಾದವ್ ಅವರು 'ಕೇಂದ್ರ ದಿವಾಳಿ ಆಗಿದೆ ಸರ್' ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಭಾರತಿ ಶೆಟ್ಟಿ, 'ಅದಕ್ಕೆ ಆರ್ಥಿಕ ಸ್ಥಿತಿಯಲ್ಲಿ ದೇಶ ನಾಲ್ಕನೇ ಸ್ಥಾನದಲ್ಲಿದೆ' ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ವಾಗ್ವಾದ ಹೆಚ್ಚಾಯಿತು. 'ಪಾಕಿಸ್ತಾನ, ಬಾಂಗ್ಲಾಕ್ಕೆ ಜೈ ಹಾಕಿದಂತಲ್ಲ' ಎಂದು ಭಾರತಿ ಶೆಟ್ಟಿ ಅವರು ನಸೀರ್ ಅಹ್ಮದ್ ಉದ್ದೇಶಿಸಿ ಹೇಳಿದರು. ಆಗ ನಸೀರ್ ಅವರು ಬಳಸಿದ ಪದ ಮಾತಿನ ಚಕಮಕಿಗೆ ದಾರಿ ಮಾಡಿಕೊಟ್ಟಿತು.

'ನಸೀರ್ ಅಹ್ಮದ್ ಅವರು ಕ್ಷಮೆ ಕೇಳಬೇಕು, ಅವರು ದೇಶದ ಪ್ರಧಾನಿ ಅವರನ್ನು 'ದೇಶದ್ರೋಹಿ' ಎಂದಿದ್ದಾರೆ. ಅದನ್ನು ಒಪ್ಪಲು ಸಾಧ್ಯವೇ ಇಲ್ಲ. ಅವರನ್ನು ಅಮಾನತು ಮಾಡಬೇಕು' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಭಾರತಿ ಶೆಟ್ಟಿ, ಎನ್. ರವಿಕುಮಾರ್, ಸಿ.ಟಿ. ರವಿ ಅವರು ಸೇರಿದಂತೆ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಉತ್ತರ ನೀಡುವುದನ್ನು ನಿಲ್ಲಿಸಿದರು. ಸಭಾಪತಿಯವರು 'ನಸೀರ್ ಮಾತನ್ನು ಕಡತದಿಂದ ತೆಗೆದುಹಾಕಲಾಗಿದೆ' ಎಂದರು. ಬಿಜೆಪಿ, ಕಾಂಗ್ರೆಸ್ ಸದಸ್ಯರು ಪರಸ್ಪರ ಧಿಕ್ಕಾರ ಕೂಗಿಕೊಂಡರು. ಆಗ, ಸಭಾಪತಿಯವರು 'ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಮತಕ್ಕೆ ಹಾಕಿ, ಅಂಗೀಕಾರವಾಗಿದೆ' ಎಂದು ಘೋಷಿಸಿ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಸಭಾಪತಿಯವರಿಗೆ ದೂರು



ಬಸವರಾಜ ಹೊರಟ್ಟಿ

ಕಲಾಪ ಮುಗಿದ ನಂತರ, ಸಭಾಪತಿಯವರನ್ನು ಭೇಟಿ ಮಾಡಿ ದೂರು ಸಲ್ಲಿಸಿದ ಎನ್. ರವಿಕುಮಾರ್ ಹಾಗೂ ಬಿಜೆಪಿ ಸದಸ್ಯರು, 'ಪ್ರಧಾನ ಮಂತ್ರಿಯವರನ್ನು 'ದೇಶದ್ರೋಹಿ' ಮತ್ತು 'ದೇಶಕ್ಕೆ ದ್ರೋಹ ಮಾಡಿದವರು' ಎಂದು ನಸೀರ್ ಅಹ್ಮದ್ ಸಂಬೋಧಿಸಿರುವುದು ಅತ್ಯಂತ ಖಂಡನೀಯ. ಇಂತಹ ಬೇಜವಾಬ್ದಾರಿ ಹೇಳಿಕೆ ನೀಡಿದ ಸದಸ್ಯರನ್ನು ಸದನದಿಂದ ಅಮಾನತು ಮಾಡಬೇಕು' ಎಂದು ಮನವಿ ಮಾಡಿದರು.

ನರೇಗಾ– ಜಿ ರಾಮ್‌ಜಿ: ಪರಿಷತ್ತಿನಲ್ಲಿ ವಾಗ್ವಾದ

ಬೆಂಗಳೂರು: 'ವಿಬಿ ಜಿ–ರಾಮ್‌ಜಿ ಯೋಜನೆಯನ್ನು ಜಾರಿಗೆ ತರುವ ಮೂಲಕ ಕೇಂದ್ರ ಸರ್ಕಾರವು ಅಧಿಕಾರ ಕೇಂದ್ರೀಕರಣಕ್ಕೆ ಯತ್ನಿಸುತ್ತಿದೆ' ಎಂದು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರು ಪ್ರತಿಪಾದಿಸಿದರು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ವಿಧಾನ ಪರಿಷತ್ತಿನಲ್ಲಿ ಸೋಮವಾರ ಚರ್ಚೆಯ ವೇಳೆ, ಕಾಂಗ್ರೆಸ್‌ನ ಈ ಪ್ರತಿಪಾದನೆಯನ್ನು ಬಿಜೆಪಿ ಸದಸ್ಯರು ಖಂಡಿಸಿದರು. 'ನರೇಗಾ ಯೋಜನೆಯಲ್ಲಿನ ಲೋಪಗಳನ್ನು ಸರಿಪಡಿಸುವುದು ಕೇಂದ್ರ ಸರ್ಕಾರದ ಗುರಿ' ಎಂದು ಸಮರ್ಥಿಸಿಕೊಂಡರು.

ಕಾಂಗ್ರೆಸ್ ಕಟುವಿರೋಧ

ನರೇಗಾ ಯೋಜನೆ ಅಡಿ ಗ್ರಾಮ ಪಂಚಾಯಿತಿ ಸದಸ್ಯರು, ತಮ್ಮ ವ್ಯಾಪ್ತಿಯಲ್ಲಿ ಯಾವೆಲ್ಲಾ ಕೆಲಸ ಮಾಡಬಹುದು ಎಂದು ನಿರ್ಧರಿಸುತ್ತಿದ್ದರು. ಅಧಿಕಾರ ವಿಕೇಂದ್ರೀಕರಣದ ಪರಿಣಾಮಕಾರಿ ಅನುಷ್ಠಾನಕ್ಕೆ ನರೇಗಾ ಕಾರಣವಾಗಿತ್ತು. ಆದರೆ ಬಿಜೆಪಿಗೆ ಅಧಿಕಾರ ವಿಕೇಂದ್ರೀಕರಣ ಬೇಕಿಲ್ಲ. ವಿಬಿ ಜಿ–ರಾಮ್‌ಜಿ ಮೂಲಕ ಗ್ರಾಮ ಪಂಚಾಯತಿಗಳ ಅಧಿಕಾರವನ್ನು ಕೇಂದ್ರ ಸರ್ಕಾರ ಕಸಿದುಕೊಂಡಿದೆ

ಡಿ.ಟಿ.ಶ್ರೀನಿವಾಸ್, ಕಾಂಗ್ರೆಸ್

ನರೇಗಾವು ಗ್ರಾಮ ಸ್ವರಾಜ್ಯದ ಗುರಿ ಸಾಧನೆಯೆಡೆಗಿನ ಕ್ರಮವಾಗಿತ್ತು. ಆ ಯೋಜನೆಯನ್ನು ರದ್ದುಪಡಿಸುವ ಮೂಲಕ, ಗ್ರಾಮ ಪಂಚಾಯಿತಿಗಳ ಅಸ್ತಿತ್ವವನ್ನೇ ಹೊಸಕಿಹಾಕಲು ಕೇಂದ್ರ ಸರ್ಕಾರ ಹೊರಟಿದೆ. ಇದು ಸರಿಯಲ್ಲ. ಜನರು ತಮ್ಮ ಮನೆ-ಹೊಲಗಳಿಗೆ ರಸ್ತೆ ನಿರ್ಮಿಸಿಕೊಳ್ಳುವ, ಬದು ಹಾಕುವಂತಹ ಕೆಲಸಗಳಿಗೆ ನರೇಗಾ ನೀಡಿದ್ದ ಶಕ್ತಿಯನ್ನು ವಿಬಿ ಜಿ–ರಾಮ್‌ಜಿ ಕಿತ್ತುಕೊಂಡಿದೆ

ತಿಪ್ಪಣ್ಣಪ್ಪ ಕಮಕನೂರ, ನಾಮನಿರ್ದೇಶಿತ ಸದಸ್ಯ

ಕೋವಿಡ್ ಅವಧಿಯಲ್ಲಿ ಕೋಟ್ಯಂತರ ಜನರಿಗೆ ಉದ್ಯೋಗ, ಭದ್ರತೆ ಒದಗಿಸಿದ್ದು ನರೇಗಾ. ಗ್ರಾಮ ಪಂಚಾಯತಿಯ ಸದಸ್ಯರು ನಿರ್ಧರಿಸುತ್ತಿದ್ದ ಕೆಲಸವನ್ನು, ದೆಹಲಿಯಲ್ಲಿ ಕೂತ ನಾಲ್ಕಾರು ಗುಜರಾತಿ ಅಧಿಕಾರಿಗಳು ಇನ್ನು ಮುಂದೆ ನಿರ್ಣಯಿಸಲಿದ್ದಾರೆ. ಜಿ–ರಾಮ್‌ಜಿ ಎಂಬುದನ್ನು, ಗುಜರಾತ್ ರಾಮ್‌ಜಿ ಎಂದು ಕರೆದರೆ ಸೂಕ್ತವಾದೀತು. ಕೇಂದ್ರವು ತನ್ನ ಪಾಲನ್ನು ಶೇ 90ರಿಂದ ಶೇ 60ಕ್ಕೆ ಇಳಿಸಿದೆ. ಶೇ 40ರಷ್ಟು ವೆಚ್ಚವನ್ನು ರಾಜ್ಯವೇ ಭರಿಸುವುದಾದರೆ, ನಾವೇ ಹೊಸ ಯೋಜನೆ ಆರಂಭಿಸಬಹುದಲ್ಲವೇ

ಎಂ.ಆರ್.ಸೀತಾರಾಂ, ಕಾಂಗ್ರೆಸ್

ಬಿಜೆಪಿ ಸಮರ್ಥನೆ

ವಿಬಿ ಜಿ–ರಾಮ್‌ಜಿಯನ್ನು ವಿರೋಧಿಸಿ ಗಾಂಧೀಜಿ ಮತ್ತು ಸಂಘಪ್ಪ ಅವರ ಜಾಹೀರಾತನ್ನು ಸರ್ಕಾರ ನೀಡಿದೆ. ಗಾಂಧೀಜಿ ಅವರು, 'ರಾಮರಾಜ್ಯದ ಕನಸನ್ನು ನನಸು ಮಾಡಲು ಜಿ–ರಾಮ್–ಜಿ ಬರುತ್ತಿದ್ದಾನೆ. ನನ್ನ ರಾಮನನ್ನು ಕಂಡರೆ ನಿಮಗೇಕೆ ಅಲರ್ಜಿ' ಎಂದು ಪ್ರಶ್ನಿಸುವ ಸಾಲನ್ನು ಆ ಜಾಹೀರಾತಿಗೆ ಸೇರಿಸಬೇಕಿತ್ತು. ಸಂಘಪ್ಪ ಸಂಘ ಜೀವಿ ಎಂಬುದನ್ನೂ ಸೇರಿಸಬೇಕಿತ್ತು

ಭಾರತಿ ಶೆಟ್ಟಿ, ಬಿಜೆಪಿ

ನರೇಗಾದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲೆಂದೇ ವಿಬಿ ಜಿ–ರಾಮ್‌ಜಿಯನ್ನು ಜಾರಿಗೆ ತರಲಾಗಿದೆ. ಈ ಬಗ್ಗೆ ಚರ್ಚೆ ನಡೆಸುವ ಅಗತ್ಯವೇ ಇರಲಿಲ್ಲ. ಆದರೆ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವನ್ನು ತೆಗಳಬೇಕು ಎಂಬ ಒಂದೇ ಉದ್ದೇಶದಿಂದ ವಿಶೇಷ ಅಧಿವೇಶನ ಕರೆದಿದೆ. ವಿಬಿ ಜಿ–ರಾಮ್–ಜಿಗೆ ಕಾಂಗ್ರೆಸ್‌ನ ವಿರೋಧವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ

ಕೆ.ಎಸ್.ನವೀನ್, ಬಿಜೆಪಿ

ವಿಕಸಿತ ಭಾರತವನ್ನು ಸಾಧಿಸಲು ಜಿ–ರಾಮ್‌ಜಿ ನೆರವಾಗಲಿದೆ. ಗ್ರಾಮೀಣ ಭಾಗದ ಜನರಿಗೆ ಈ ಯೋಜನೆ ಶಕ್ತಿ ನೀಡಲಿದೆ. ಕೇಂದ್ರ ಸರ್ಕಾರದ ಅನುದಾನ, ಆದಾಯದ ಹಂಚಿಕೆ ಬಗ್ಗೆ ಸಮಸ್ಯೆ ಇದ್ದರೆ ಮುಖ್ಯಮಂತ್ರಿ ಅವರು ಜಿಎಸ್‌ಟಿ ಸಭೆಗೆ ಹೋಗಲಿ. ಸಮಸ್ಯೆ ಬಗೆಹರಿಯದೇ ಇದ್ದರೆ ನ್ಯಾಯಾಲಯದ ಮೊರೆ ಹೋಗಲಿ. ಬದಲಿಗೆ ಸುಮ್ಮನೆ ಕೇಂದ್ರ ಸರ್ಕಾರದ ಬಗ್ಗೆ ಸುಳ್ಳು ಹೇಳಿದರೆ ಪ್ರಯೋಜನವಾಗುವುದಿಲ್ಲ

ಡಿ.ಎಸ್.ಅರುಣ್, ಬಿಜೆಪಿ

ಹತ್ತಾರು ಸಂಘಟನೆಗಳ ಸಾವಿರಾರು ಮಂದಿ ಭಾಗಿ • ವಿಬಿ- ಜಿ ರಾಮ್ ಜಿ ಕಾಯ್ದೆ ರದ್ದುಪಡಿಸಲು ಆಗ್ರಹ

ನರೇಗಾ ಉಳಿಸಲು ಮಹಾಪಂಚಾಯಿತಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಳಿಸಿ ಆಂದೋಲನದ ಭಾಗವಾಗಿ 'ನರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ ವತಿಯಿಂದ ಸೋಮವಾರ ನಡೆದ ಮಹಾ ಪಂಚಾಯತ್, 'ವಿಬಿ– ಜಿ ರಾಮ್ ಜಿ'ಯನ್ನು ತಿರಸ್ಕರಿಸಲು ನಿರ್ಧರಿಸಿದೆ.

'ನರೇಗಾ ಯೋಜನೆಯನ್ನು ಮುಂದುವರಿಸಲು ರಾಷ್ಟ್ರಪತಿಯವರು ಆದೇಶ ಹೊರಡಿಸಬೇಕು. ವಿಬಿ– ಗ್ರಾಮ್ ಜಿ ಕಾಯ್ದೆಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು' ಎಂದು ನಿರ್ಣಯ ಕೈಗೊಂಡಿದೆ. 'ವಿಬಿ– ಜಿ ರಾಮ್ ಜಿ'ಯನ್ನು 'ವಿಬಿ– ಗ್ರಾಮ್ ಜಿ' ಎಂದೇ ಕರೆಯಲಾಯಿತು.

ಗ್ರಾಮೀಣ ಭಾಗದ ಬಡವರ ಬೆನ್ನೆಲುಬು, ಸಂವಿಧಾನದಬದ್ಧ ಹಕ್ಕು ಆಗಿದ್ದ ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಜನರನ್ನು ಅತಂತ್ರಗೊಳಿಸುವ, ಎಲ್ಲ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ಕೇಂದ್ರ ಸರ್ಕಾರವೇ ವಶಪಡಿಸಿಕೊಳ್ಳುವ ಮತ್ತು ಜವಾಬ್ದಾರಿಯನ್ನು ರಾಜ್ಯ ಸರ್ಕಾರದ ಮೇಲೆ ಹೊತ್ತು ಹಾಕುವ ವಿಬಿ– ಜಿ ರಾಮ್ ಜಿ ಕಾಯ್ದೆಯನ್ನು ಜಾರಿಗೆ ತಂದಿದೆ ಎಂದು ಪಂಚಾಯಿತಿಯಲ್ಲಿ ತಿಳಿಸಲಾಯಿತು.

ಮಹಾಪಂಚಾಯಿತಿ ತೆಗೆದುಕೊಂಡಿರುವ ನಿರ್ಣಯಗಳನ್ನು ರಾಜ್ಯ ಸರ್ಕಾರವು ರಾಜ್ಯಪಾಲರ ಮೂಲಕ ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಬೇಕು. ನರೇಗಾವನ್ನು ಬಲಗೊಳಿಸುವ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.

ವಿಕೇಂದ್ರೀಕರಣದ ಸಂಕೇತವಾಗಿ ಇದ್ದ ನರೇಗಾವನ್ನು ರದ್ದು ಮಾಡಿ ಈಗ ಕೇಂದ್ರೀಕರಣದ ಯೋಜನೆಯನ್ನು ಜಾರಿಗೆ ತರಲಾಗಿದೆ. ನರೇಗಾವನ್ನು ಮುಂದುವರಿಸಬೇಕು. ಅಲ್ಲದೇ ಕುಟುಂಬಕ್ಕೆ ನೂರು ದಿನ ಕೆಲಸ ಎಂಬುದನ್ನು ಪ್ರತಿ ವ್ಯಕ್ತಿಗೆ ನೂರು ದಿನ ಎಂದು ಪರಿವರ್ತಿಸಬೇಕು. ಪ್ರತಿ ಕುಟುಂಬಕ್ಕೆ ಸರಾಸರಿ 300 ದಿನ ಕೆಲಸ ಸಿಗುವಂತೆ ಮಾಡಬೇಕು. ಕನಿಷ್ಠ ಕೂಲಿಯನ್ನು ₹ 600ಕ್ಕೆ ಏರಿಸಬೇಕು ಎಂದು ಒತ್ತಾಯಿಸಲಾಯಿತು.



ನರೇಗಾ ಮರುಸ್ಥಾಪನೆಗಾಗಿ ಒತ್ತಾಯಿಸಿ 'ನರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ', ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಮಹಾ ಪಂಚಾಯಿತಿ ನಡೆಸಿದರು –ಪ್ರಜಾವಾಣಿ ಚಿತ್ರ

ಶೇ 40ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ನೀಡಬೇಕಿದೆ. ಇದನ್ನು ತೆಗೆದು ಹಾಕಬೇಕು. ನರೇಗಾದಲ್ಲಿ ಮಧ್ಯವರ್ತಿಗಳಿಗೆ ಅವಕಾಶ ಇರಲಿಲ್ಲ. 'ವಿಬಿ– ಜಿ ರಾಮ್ ಜಿ'ಯಲ್ಲಿ ಮಧ್ಯವರ್ತಿಗಳಿಗೆ ಅವಕಾಶವಾಗಿದೆ. ಹಾಗಾಗಿ ನರೇಗಾವನ್ನು ಮತ್ತೆ ಸ್ಥಾಪಿಸಬೇಕು ಎಂದು ಒತ್ತಾಯಿಸಲಾಯಿತು.

ನರೇಗಾ ರಕ್ಷಣಾ ಒಕ್ಕೂಟ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ನಮ್ಮೂರ ಭೂಮಿ ನಮಗಿರಲಿ, ಅನ್ಯರಿಗಲ್ಲ ಸಂಘಟನೆ, ರೈತ ಸಂಘಟನೆಗಳು, ದಲಿತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಮಹಿಳಾ ಸಂಘಟನೆಗಳು ಸೇರಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಶಾರದಾ ಗೋಪಾಲ್, ನೂರ್ ಶ್ರೀಧರ್, ಅಭಯಕುಮಾರ್, ಹುಚ್ಚಮ್ಮ, ಕ್ಲಿಫ್ಟನ್ ಡಿ ರೋಜಾರಿಯೊ, ವಿ.ಗಾಯತ್ರಿ, ನ.ಸಂ.ಕೃ., ವಿ.ಎಸ್. ಉಗ್ರಪ್ಪ, ಮಾವಳ್ಳಿ ಶಂಕರ್, ಸ್ವರ್ಣ ಭಟ್, ಕೆ.ವಿ. ಭಟ್, ದೇವಿ, ಪ್ರಕಾಶ್ ಕಮ್ಮರಡಿ, ಪುಟ್ಟಮಾದು, ನವೀನ್, ಗುರುರಾಜ್ ಸಹಿತ ಅನೇಕರು ಭಾಗವಹಿಸಿದ್ದರು.

25 ವರ್ಷದಲ್ಲಿ ರೈತರಿಗೆ ₹111 ಲಕ್ಷ ಕೋಟಿ ನಷ್ಟ

ಕೃಷಿ ಸುಧಾರಣಾ ಸಮಿತಿ ಅಧ್ಯಕ್ಷ ದೇವಿಂದರ್ ಶರ್ಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧ್ಯಯನದ ಪ್ರಕಾರ 25 ವರ್ಷದಲ್ಲಿ (2000–2025ರ ಅವಧಿ) ದೇಶದ ರೈತರಿಗೆ ₹111 ಲಕ್ಷ ಕೋಟಿ ನಷ್ಟವಾಗಿದೆ. ಭಾರತ ಮಾತ್ರವಲ್ಲದೇ ವಿದೇಶಗಳಲ್ಲೂ ಕೃಷಿ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕೃಷಿ ಸುಧಾರಣಾ ಸಮಿತಿ ಅಧ್ಯಕ್ಷ ದೇವಿಂದರ್ ಶರ್ಮಾ ಹೇಳಿದರು.

ರೈತರ ಆತ್ಮಹತ್ಯೆಗಳ ತಡೆ ಸಮಿತಿ ನಗರದ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ರೈತರ ಆತ್ಮಹತ್ಯೆ ತಡೆಯುವ ಕುರಿತು ಚರ್ಚೆ ನಡೆಸಿ ಕೃಷಿ ತಂತ್ರಜ್ಞರ, ರೈತ ನಾಯಕರ ಸಲಹೆ ಪಡೆಯಲಾಯಿತು.

2000–2016ರ ಅವಧಿಯಲ್ಲಿ ₹45 ಲಕ್ಷ ಕೋಟಿ ರೈತರಿಗೆ ನಷ್ಟವಾಗಿತ್ತು. ಇದಕ್ಕೆ ಹಲವು ಕಾರಣಗಳಿವೆ. ಈ ವಿಷಯದ ಬಗ್ಗೆ ಸಂಸತ್, ವಿಧಾನ ಮಂಡಲ, ಕೃಷಿ ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳು ಹಾಗೂ ಮಾಧ್ಯಮಗಳಲ್ಲೂ ಚರ್ಚೆ ನಡೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಶೇ 3.4ರಷ್ಟು ಅನುದಾನ ನೀಡಲಾಗಿದೆ. ಕರ್ನಾಟಕದ ನೀತಿ ನಿರೂಪಕರು ಸಹ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, 'ರಾಜ್ಯ ಬಜೆಟ್ ಪೂರ್ವಭಾವಿ ಸಭೆಗೆ ಕೃಷಿ ತಜ್ಞರನ್ನು ಆಹ್ವಾನಿಸಿ, ಕೃಷಿ ಕ್ಷೇತ್ರಕ್ಕೆ ಅಗತ್ಯವಾದ ಬೇಡಿಕೆಗಳನ್ನು ಮುಖ್ಯಮಂತ್ರಿ ಬಳಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಲಾಗುವುದು. ಪ್ರತಿಷ್ಠೆಗಾಗಿ ಬಡವರು, ರೈತರು ಇತ್ತೀಚಿನ ದಿನಗಳಲ್ಲಿ ಸಾಲ ಮಾಡಿ ಮಕ್ಕಳ ಮದುವೆಯನ್ನು ಅದ್ದೂರಿಯಾಗಿ ಮಾಡುತ್ತಿದ್ದಾರೆ. ಮದ್ಯ ಮಾರಾಟದಿಂದಲೂ ತೊಂದರೆ ಉಂಟಾಗುತ್ತಿದ್ದು, ಸರ್ಕಾರಕ್ಕೆ ₹46 ಸಾವಿರ ಕೋಟಿ ಆದಾಯ ಬರುತ್ತದೆ ಎಂದು ಬೇರೆಯವರ ಬದುಕನ್ನು ಹಾಳು ಮಾಡುವುದು ಸರಿಯಲ್ಲ' ಎಂದರು

ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ರೈತ ನಾಯಕ ಕೆ.ಟಿ. ಗಂಗಾಧರ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಅಶೋಕ್ ದಳವಾಯಿ, ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಡಾ.ಎ.ಬಿ. ಪಾಟೀಲ, ರಾಜ್ಯ ಕೃಷಿ ಮಾರಾಟ ಮಂಡಳಿಯ ಮಾಜಿ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಹುಂಬರವಾಡಿ, ನಿವೃತ್ತ ಕೃಷಿ ಅಧಿಕಾರಿ ಬಿ.ಎಚ್.ಪಿಂಜಾರ್ ಹಾಜರಿದ್ದರು.

ಸಭೆಯಲ್ಲಿ ಕೇಳಿ ಬಂದ ಸಲಹೆಗಳು

- ಕೃಷಿ ಭೂಮಿಗಾಗಿ ರೈತರು ನ್ಯಾಯಾಲಯಕ್ಕೆ ಅಲೆದಾಡುವುದು ತಪ್ಪಿಸಬೇಕು
- ರೈತ ಕುಟುಂಬಗಳು ಸರಳ ಮದುವೆಗೆ ಒತ್ತು ನೀಡಬೇಕು
- ಸಮಗ್ರ ಕೃಷಿ ನೀತಿ ಜಾರಿಗೊಳಿಸಬೇಕು
- ಸರ್ಕಾರ ಬದಲಾದರೂ ಕೃಷಿ ಕಾರ್ಯಕ್ರಮಗಳು ನಿಲ್ಲಬಾರದು
- ಬೆಂಬಲ ಬೆಲೆ ಘೋಷಿಸಿದಾಗ 12 ತಿಂಗಳು ಖರೀದಿ ಕೇಂದ್ರ ತೆರೆಯಲಿ
- ರೈತರಿಗೆ ಸಿಬಿಲ್ ಅನ್ವಯವಾಗದಂತೆ ನೋಡಿಕೊಳ್ಳಬೇಕು
- ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿ ಮಾಡಬೇಕು * ಬಜೆಟ್‌ನಲ್ಲಿ ದ್ವಿತೀಯ ಕೃಷಿಗೆ ಒತ್ತು ನೀಡಬೇಕು.

prajavani.net prajavani | ಮಂಗಳವಾರ, ಫೆಬ್ರುವರಿ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 34 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಾದಿರ್ಬೆಕ್ 'ಕಿಂಗ್'
ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು 88ನೇ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು



ಸೆನ್ಸೆಕ್ಸ್ 81,666 | ನಿಫ್ಟಿ 25,088 | $/₹ 91.49 | ಚಿನ್ನ (Std. 10g) ₹1,56,050 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,70,900 (ಬೆಂಗಳೂರು)

ಟ್ರಂಪ್ ಸುಂಕ ಶೇ18ಕ್ಕೆ ಕಡಿತ

ಮೋದಿ ಜತೆ ದೂರವಾಣಿ ಸಂಭಾಷಣೆ ವ್ಯಾಪಾರ ಒಪ್ಪಂದ ಅಂತಿಮ ಎಂದು ಅಮೆರಿಕ ಅಧ್ಯಕ್ಷರ ಘೋಷಣೆ

ನವದೆಹಲಿ/ ವಾಷಿಂಗ್ಟನ್ (ಪಿಟಿಐ/ ಎಎಫ್‌ಪಿ): 'ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮಗೊಂಡಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಘೋಷಿಸಿದ್ದಾರೆ.

'ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲು ಮತ್ತು ವೆನೆಜುವೆಲಾದಿಂದ ಹೆಚ್ಚಿನ ತೈಲ ಖರೀದಿಸಲು ಒಪ್ಪಿಕೊಂಡಿದೆ. ಅದಕ್ಕೆ ಪ್ರತಿಯಾಗಿ ಅಮೆರಿಕವು ಪ್ರತಿಸುಂಕವನ್ನು ಪ್ರಸ್ತುತ ಶೇ 25ರಿಂದ ಶೇ 18ಕ್ಕೆ ಇಳಿಸಲಿದೆ' ಎಂದು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. 'ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಶೂನ್ಯ ಸುಂಕ ವಿಧಿಸಲಿದೆ' ಎಂದೂ ಹೇಳಿಕೊಂಡಿದ್ದಾರೆ.

ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ನಂತರದಲ್ಲಿ, ಭಾರತದಿಂದ ಆಮದು ಆಗುವ ಸರಕುಗಳಿಗೆ ಶೇಕಡ 50ರಷ್ಟು ಸುಂಕ ವಿಧಿಸಿದ್ದಾರೆ. ಈ ಪೈಕಿ ಶೇ 25ರಷ್ಟು 'ಪ್ರತಿಸುಂಕ'ದ ರೀತಿಯಲ್ಲಿದೆ. ಇನ್ನುಳಿದ ಶೇ 25ರಷ್ಟು ಸುಂಕವನ್ನು, ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದೆ ಎಂಬ ಕಾರಣಕ್ಕೆ ಹೇರಲಾಗಿದೆ.

'ಭಾರತವು ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿದರೆ ಹಾಗೂ ಅಮೆರಿಕದ ಸರಕುಗಳಿಗೆ ಶೂನ್ಯ ಸುಂಕ ವಿಧಿಸಿದರೆ ಭಾರತದ ಸರಕುಗಳ ಮೇಲಿನ ಸುಂಕವನ್ನು ಪ್ರಸ್ತುತ ಶೇ 50ರಿಂದ ಶೇ 18ಕ್ಕೆ ಇಳಿಸಲಾಗುವುದು' ಎಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಜತೆ ಸೋಮವಾರ ದೂರವಾಣಿ ಮೂಲಕ ಸಂಭಾಷಣೆ ನಡೆಸಿದ್ದು, ಅದರ ಬೆನ್ನಲ್ಲೇ ಈ ಮಹತ್ವದ ಘೋಷಣೆ ಮಾಡಿದ್ದಾರೆ.

'ಪ್ರಧಾನಿ ಮೋದಿ ಅವರೊಂದಿಗಿನ ಸ್ನೇಹ ಮತ್ತು ಗೌರವದಿಂದ ಹಾಗೂ ಅವರ ಕೋರಿಕೆಯಂತೆ, ತಕ್ಷಣವೇ ಜಾರಿಗೆ ಬರುವಂತೆ ನಾನು ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಮ್ಮತಿಸಿದ್ದೇನೆ' ಎಂದು ಹೇಳಿದ್ದಾರೆ.

ಅದರ ಬೆನ್ನಲ್ಲೇ ಪ್ರಧಾನಿ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, 'ಭಾರತದಲ್ಲಿ ತಯಾರಾದ ಉತ್ಪನ್ನಗಳಿಗೆ ಅಮೆರಿಕ ವಿಧಿಸುತ್ತಿದ್ದ ತೆರಿಗೆ ಈಗ ಶೇ 18ಕ್ಕೆ ಇಳಿಕೆಯಾಗಿರುವುದು ಸಂತಸ ಉಂಟುಮಾಡಿದೆ' ಎಂದು ಹೇಳಿದ್ದಾರೆ.

'ಈ ಮಹತ್ವದ ಘೋಷಣೆಗಾಗಿ ದೇಶದ 140 ಕೋಟಿ ಜನರ ಪರವಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದಗಳು' ಎಂದಿದ್ದಾರೆ. ಆದರೆ ಪ್ರಧಾನಿ ಅವರು ತಮ್ಮ ಪೋಸ್ಟ್‌ನಲ್ಲಿ ವ್ಯಾಪಾರ ಒಪ್ಪಂದದ ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ವಾಷಿಂಗ್ಟನ್‌ಗೆ ಮೂರು ದಿನಗಳ ಭೇಟಿಯನ್ನು ಪ್ರಾರಂಭಿಸಿದ ದಿನದಂದೇ ಈ ಬೆಳವಣಿಗೆ ನಡೆದಿದೆ.

> ಭಾರತದ ಪ್ರಧಾನಿ ಮೋದಿಯವರೊಂದಿಗೆ ಮಾತನಾಡಿದೆ. ಅವರು ನನ್ನ ಅತ್ಯುತ್ತಮ ಸ್ನೇಹಿತರಲ್ಲಿ ಒಬ್ಬರು ಮತ್ತು ಅವರ ದೇಶದ ಪ್ರಬಲ ಮತ್ತು ಗೌರವಾನ್ವಿತ ನಾಯಕ
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

> ಟ್ರಂಪ್ ಅವರ ನಾಯಕತ್ವವು ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಅತ್ಯಗತ್ಯ. ಶಾಂತಿ ಸ್ಥಾಪನೆಗಾಗಿ ಅವರು ನಡೆಸುತ್ತಿರುವ ಪ್ರಯತ್ನಗಳನ್ನು ಭಾರತ ಸಂಪೂರ್ಣವಾಗಿ ಬೆಂಬಲಿಸುತ್ತದೆ
> **ನರೇಂದ್ರ ಮೋದಿ,** ಪ್ರಧಾನಿ

ಪ್ರಧಾನಿ ಶರಣಾಗಿದ್ದಾರೆ: ಕಾಂಗ್ರೆಸ್

'ವ್ಯಾಪಾರ ಒಪ್ಪಂದ ಅಂತಿಮಗೊಂಡಿದೆ' ಎಂದು ಟ್ರಂಪ್ ಘೋಷಿಸಿದ ಬೆನ್ನಲ್ಲೇ ಕಾಂಗ್ರೆಸ್ ಪಕ್ಷವು ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದೆ.

'ಅಧ್ಯಕ್ಷ ಟ್ರಂಪ್ ಅವರು ಪ್ರಧಾನಿ ಮೋದಿ ಮೇಲೆ ಸ್ವಲ್ಪ ಹತೋಟಿ ಹೊಂದಿರುವಂತೆ ತೋರುತ್ತಿದೆ. ಮೋದಿ ಅವರು ಅಂತಿಮವಾಗಿ ಶರಣಾಗಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

'ಭಾರತದ ಜನರು ತಮ್ಮ ಸರ್ಕಾರ ಕೈಗೊಂಡ ನಿರ್ಧಾರಗಳ ಬಗ್ಗೆ ಅಮೆರಿಕದ ಅಧ್ಯಕ್ಷರು ಅಥವಾ ಅವರಿಂದ ನೇಮಕಗೊಂಡ ವ್ಯಕ್ತಿಗಳಿಂದ ಮಾತ್ರ ತಿಳಿದುಕೊಳ್ಳುತ್ತಿದ್ದಾರೆ. ಇದು ಆತ್ಮನಿರ್ಭರ ಅಲ್ಲ, ಟ್ರಂಪ್–ನಿರ್ಭರ' ಎಂದು ವ್ಯಂಗ್ಯವಾಡಿದ್ದಾರೆ.



'ಹೆಚ್ಚು ಖರೀದಿ: ಮೋದಿ ಬದ್ಧ'

'ಅಮೆರಿಕದಿಂದ ಹೆಚ್ಚಿನ ಉತ್ಪನ್ನಗಳನ್ನು ಖರೀದಿಸಲು ಮೋದಿ ಅವರು ಬದ್ಧರಾಗಿದ್ದಾರೆ' ಎಂದು ಟ್ರಂಪ್ ಹೇಳಿದ್ದಾರೆ. ಇಂಧನ, ತಂತ್ರಜ್ಞಾನ, ಕೃಷಿ ಉತ್ಪನ್ನ, ಕಲ್ಲಿದ್ದಲು ಮತ್ತು ಇತರ ಹಲವು ಉತ್ಪನ್ನಗಳ ಖರೀದಿಯನ್ನು ಹೆಚ್ಚಿಸಲು ಒಪ್ಪಿಕೊಂಡಿದ್ದಾರೆ ಎಂದಿದ್ದಾರೆ.

ಸೇನಾ ಮಾಜಿ ಮುಖ್ಯಸ್ಥರ ಆತ್ಮಚರಿತ್ರೆ ಪ್ರಸ್ತಾಪಿಸಿದ ರಾಹುಲ್ ಗಾಂಧಿ

ಸೇನಾ ವಿಚಾರ: ಕೋಲಾಹಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತ ಮತ್ತು ಚೀನಾ ನಡುವೆ 2020ರಲ್ಲಿ ಲಡಾಖ್‌ನಲ್ಲಿ ನಡೆದ ಸೇನಾ ತಿಕ್ಕಾಟದ ಬಗ್ಗೆ, ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರ ಅಪ್ರಕಟಿತ ಪುಸ್ತಕದಲ್ಲಿನ ಅಂಶಗಳ ಕುರಿತು ನಿಯತಕಾಲಿಕವೊಂದರಲ್ಲಿ ಪ್ರಕಟವಾಗಿರುವ ಲೇಖನವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಸೋಮವಾರ ಪ್ರಸ್ತಾಪಿಸಿದ್ದು ಭಾರಿ ಗದ್ದಲ ಎಬ್ಬಿಸಿತು.

ಈ ವೇಳೆ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆದು, ಕೋಲಾಹಲಕ್ಕೆ ಕಾರಣವಾಯಿತು. ರಾಹುಲ್ ಅವರು ಅಪ್ರಕಟಿತ ಪುಸ್ತಕದ ಕುರಿತು ಪ್ರಸ್ತಾಪಿಸಿ ಸದನದ ದಾರಿ ತಪ್ಪಿಸುತ್ತಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸೇರಿದಂತೆ ಬಿಜೆಪಿಯ ಹಲವು ಸದಸ್ಯರು ಆರೋಪಿಸಿದರು.

ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ಮುಂದಾದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ನನಗೂ ಮುನ್ನ ಮಾತನಾಡಿದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಕಾಂಗ್ರೆಸ್‌ನ ದೇಶಭಕ್ತಿ ಕುರಿತು ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಕುರಿತು ಮೊದಲು ಪ್ರತಿಕ್ರಿಯಿಸಲು ಬಯಸುತ್ತೇನೆ' ಎಂದು ಹೇಳಿ, ಜನರಲ್ ನರವಣೆ ಅವರ ಪುಸ್ತಕವನ್ನು ಉಲ್ಲೇಖಿಸಿದರು.

ಸೇನಾ ತಿಕ್ಕಾಟವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ನಿಭಾಯಿಸಿದ್ದ ರೀತಿಯ ಬಗ್ಗೆ ಈ ಅಪ್ರಕಟಿತ ಪುಸ್ತಕದಲ್ಲಿ ಪ್ರಶ್ನೆಗಳನ್ನು ಎತ್ತಲಾಗಿದೆ ಎಂದು ಗೊತ್ತಾಗಿದೆ.

ರಕ್ಷಣಾ ಸಚಿವರಿಂದ ಆಕ್ಷೇಪ: ಇದಕ್ಕೆ ಕೂಡಲೇ ಆಕ್ಷೇಪ ವ್ಯಕ್ತಪಡಿಸಿದ ರಕ್ಷಣಾ ಸಚಿವ, 'ಅಪ್ರಕಟಿತ ಪುಸ್ತಕ ಮತ್ತು ಅದರ ಸಾರಾಂಶವನ್ನು ಉಲ್ಲೇಖಿಸುವುದು ಸದನದ ನಿಯಮಗಳಿಗೆ ವಿರುದ್ಧವಾಗಿದೆ' ಎಂದರು.

2020ರ ಮೇ 5ರಂದು 'ಪಾಂಗಾಂಗ್' ಸರೋವರ ಪ್ರದೇಶದಲ್ಲಿ ಭಾರತ– ಚೀನಾ ಸೈನಿಕರ ನಡುವೆ ಹಿಂಸಾತ್ಮಕ ಘರ್ಷಣೆ ಭುಗಿಲೆದ್ದಿತು.

▶9

ಮುಖ್ಯಾಂಶಗಳು
- 'ದಿ ಕ್ಯಾರವಾನ್'ನಲ್ಲಿ ಪ್ರಕಟವಾಗಿರುವ ಲೇಖನ
- ಪ್ರಧಾನಿ, ರಕ್ಷಣಾ ಸಚಿವರ ನಡೆ ಬಗ್ಗೆ ಪ್ರಶ್ನೆ
- ಅಪ್ರಕಟಿತ ಪುಸ್ತಕದ ಸಾರಾಂಶ ಓದುವಂತಿಲ್ಲ– ರಾಜನಾಥ ಸಿಂಗ್



> ಸ್ಪೀಕರ್ ತೀರ್ಪನ್ನು ಧಿಕ್ಕರಿಸುವ ಮೂಲಕ ರಾಹುಲ್ ಗಾಂಧಿ ಅವರು ತಪ್ಪನ್ನು ಪುನರಾವರ್ತಿಸಿ ಸದನದ ಸಮಯವನ್ನು ವ್ಯರ್ಥ ಮಾಡಿದರು
> **ಕಿರಣ್ ರಿಜಿಜು**
> ಸಂಸದೀಯ ವ್ಯವಹಾರಗಳ ಸಚಿವ


ಮೋದಿ, ರಾಜನಾಥ ಸೇನೆಯನ್ನು ನಿರಾಶೆಗೊಳಿಸಿದ್ದಾರೆ: ರಾಹುಲ್

'ಭಾರತ– ಚೀನಾ ನಡುವೆ 2020ರಲ್ಲಿ ನಡೆದ ಸೇನಾ ತಿಕ್ಕಾಟದ ವೇಳೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸೇನೆಯನ್ನು ನಿರಾಶೆಗೊಳಿಸಿದ್ದರು ಎಂಬುದು ಭಾರತ ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ. ನರವಣೆ ಅವರ ಅಪ್ರಕಟಿತ ಪುಸ್ತಕದಿಂದ ಗೊತ್ತಾಗುತ್ತದೆ. ಈ ವಿಷಯ ಹೊರಗೆ ಬರಬಾರದು ಎಂಬ ಆತಂಕದಿಂದ ಅವರು ನನಗೆ ಈ ಪುಸ್ತಕವನ್ನು ಉಲ್ಲೇಖಿಸಲು ಅವಕಾಶ ನೀಡುತ್ತಿಲ್ಲ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದರು.

ಸಂಸತ್ ಭವನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸೇನೆಯ ಮಾಜಿ ಮುಖ್ಯಸ್ಥರ ಪುಸ್ತಕದ ಒಂದೆರಡು ಸಾಲನ್ನು ಪ್ರಸ್ತಾಪಿಸಲು ನಾನು ಬಯಸಿದ್ದೇನೆ. ಆದರೆ ಅದಕ್ಕೆ ಸರ್ಕಾರ ಹೆದರುತ್ತಿದೆ' ಎಂದು ವ್ಯಂಗ್ಯವಾಡಿದರು.

'ಪಲಾಯನ ಮಾಡಿದರು'

'ಭೂಮಿಯನ್ನು ಕಳೆದುಕೊಂಡಿದ್ದೇವೋ ಇಲ್ಲವೋ ಎಂಬುದು ಬೇರೆಯದ್ದೇ ವಿಷಯ. ದೇಶದ ನಾಯಕರು ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ಪಲಾಯನ ಮಾಡಬಾರದು ಮತ್ತು ಅದನ್ನು ಮತ್ತೊಬ್ಬರ ಹೆಗಲ ಮೇಲೆ ಬಿಡಬಾರದು. ಆದರೆ ಮೋದಿ ಅವರು ಮಾಡಿದ್ದು ಅದನ್ನೇ' ಎಂದು ರಾಹುಲ್ ಆರೋಪಿಸಿದರು. ಸೇನಾ ಮುಖ್ಯಸ್ಥರ ಈ ಪುಸ್ತಕ ಪ್ರಕಟಣೆಗೂ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂದೂ ದೂರಿದರು.



ಲೇಖನದ ಪ್ರತಿಯನ್ನು ರಾಹುಲ್ ಗಾಂಧಿ ಸದನದಲ್ಲಿ ಪ್ರದರ್ಶಿಸಿದರು – ಪಿಟಿಐ ಚಿತ್ರ

ದಲೈಲಾಮಾಗೆ ಗ್ರ್ಯಾಮಿ ಪ್ರಶಸ್ತಿ

ನವದೆಹಲಿ (ಎಎಫ್‌ಪಿ): ಟಿಬೆಟ್‌ನ ಬೌದ್ಧರ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರು 'ಗ್ರ್ಯಾಮಿ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.



ದಲೈ ಲಾಮಾ

ಆಡಿಯೊ ಪುಸ್ತಕ, ನಿರೂಪಣೆ ಹಾಗೂ ಕಥೆ ಹೇಳುವಿಕೆ, ಸಂಗೀತ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಎಂದು 'ಗ್ರ್ಯಾಮಿ'ಯನ್ನು ಗುರುತಿಸಲಾಗಿದೆ.

ಲಾಸ್ ಏಂಜಲೀಸ್‌ನಲ್ಲಿ ನಡೆದ ಗ್ರ್ಯಾಮಿ ಪ್ರಶಸ್ತಿ ಸಮಾರಂಭದಲ್ಲಿ 'ಮೆಡಿಟೇಷನ್ಸ್: ದಿ ರಿಫ್ಲೆಕ್ಷನ್ಸ್ ಆಫ್ ಹಿಸ್ ಹೋಲಿನೆಸ್ ದಿ ದಲೈ ಲಾಮಾ' ಎಂಬ ಆಡಿಯೊ ಬುಕ್‌ಗಾಗಿ ಪ್ರಶಸ್ತಿ ಘೋಷಣೆ ಮಾಡಲಾಯಿತು.

ಪ್ರಶಸ್ತಿಗೆ ಅರ್ಹರಾಗಿರುವುದಕ್ಕೆ ಕೃತಜ್ಞತೆ ಸಲ್ಲಿಸಿರುವ ದಲೈ ಲಾಮಾ, 'ಇದು ವೈಯಕ್ತಿಕ ಸಾಧನೆಯಲ್ಲ, ಜಾಗತಿಕ ಹೊಣೆಗಾರಿಕೆ ಹಾಗೂ ಸಹಾನುಭೂತಿಗೆ ಸಂದ ಮನ್ನಣೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಈ ಪ್ರಶಸ್ತಿಯನ್ನು ವಿನಮ್ರವಾಗಿ ಸ್ವೀಕರಿಸುತ್ತೇನೆ. ಶಾಂತಿ, ಸಹಾನುಭೂತಿ, ಪರಿಸರ ಬಗ್ಗೆ ಕಾಳಜಿ, ಮಾನವೀಯತೆಯ ಏಕತೆ ಮತ್ತು ಎಂಟು ಶತಕೋಟಿ ಜನರ ಯೋಗಕ್ಷೇಮ ಅತ್ಯಗತ್ಯ ಎಂದು ನಾನು ನಂಬಿಕೊಂಡಿದ್ದೇನೆ. ಈ ಸಂದೇಶವನ್ನು ಇನ್ನಷ್ಟು ಪಸರಿಸಲು ಗ್ರ್ಯಾಮಿ ಪ್ರಶಸ್ತಿ ಪ್ರೇರಣೆಯಾಗಲಿದೆ' ಎಂದು ಹೇಳಿದ್ದಾರೆ.

1959ರಲ್ಲಿ ಚೀನಾ ಸೇನೆಯ ಅತಿಕ್ರಮಣದಿಂದ ಜೀವಭಯಕ್ಕೆ ಒಳಗಾಗಿ ಭಾರತಕ್ಕೆ ಬಂದು ಆಶ್ರಯ ಪಡೆದಿದ್ದಾರೆ.

ಚೀನಾ ಆಕ್ಷೇಪ (ಬೀಜಿಂಗ್ ವರದಿ): ದಲೈ ಲಾಮಾ ಅವರಿಗೆ ಗ್ರ್ಯಾಮಿ ಪ್ರಶಸ್ತಿ ನೀಡಿದ್ದನ್ನು ಚೀನಾ ಖಂಡಿಸಿದೆ.

ಶಾಸಕರು ಜೊತೆಗಿಲ್ಲ ಎಂಬ ಪ್ರತಿಪಾದನೆಗೆ ಉತ್ತರ ನೀಡಿದ ಡಿ.ಕೆ.ಶಿವಕುಮಾರ್

'ಧೈರ್ಯಸ್ಥ ಬಹುಮತ ಸಾಧಿಸಬಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಎಂಬುದು ಸಾಧ್ಯತೆಗಳ ಕಲೆ. ಇಲ್ಲಿ ಎಲ್ಲವೂ ಸಾಧ್ಯ. ಧೈರ್ಯವಂತ ಒಬ್ಬನೇ ಬಹುಮತ ಸಾಧಿಸಬಲ್ಲ ಎಂಬುದನ್ನು ನಾನು ನಂಬಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ವಿಚಾರ ಚರ್ಚೆಯಲ್ಲಿರುವ ನಡುವೆಯೇ, ಅವರ ಈ ಮಾತು ರಾಜಕೀಯ ವಲಯದಲ್ಲಿ ನಾನಾ ವ್ಯಾಖ್ಯಾನಕ್ಕೆ ಕಾರಣವಾಗಿದೆ.

ವಂದನಾ ನಿರ್ಣಯದ ಚರ್ಚೆಗೆ ಸೋಮವಾರ ಉತ್ತರ ನೀಡುತ್ತಿರುವ ಮಧ್ಯೆ ಅಧಿಕಾರ ಹಂಚಿಕೆಯ ವಿಷಯ ಪ್ರಸ್ತಾಪಿಸಿದ ಸಿದ್ದರಾಮಯ್ಯ, ಪಕ್ಕದ ಆಸನದಲ್ಲಿ ಕುಳಿತಿದ್ದ ಡಿ.ಕೆ. ಶಿವಕುಮಾರ್ ಕಡೆಗೆ ನೋಡಿ, 'ಸಿಎಂಗೂ ಡಿ.ಕೆ. ಶಿವಕುಮಾರ್‌ಗೂ ಜಗಳವಿದೆ ಅಂತಿದ್ದಾರೆ. ನೋಡಪ್ಪ ನೀನು ಹಾಲಂತೆ, ನಾನು ಸಕ್ಕರೆಯಂತೆ. ನಿನಗೂ ನನಗೂ ಹಾಲಾಹಲ ಅಂತಲೂ ಹೇಳ್ತಾರೆ' ಎಂದರು.

ಕುಳಿತಲ್ಲಿಂದಲೇ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, 'ಸಮಯವೇ ಉತ್ತರ ಕೊಡುತ್ತದೆ ಬಿಡಿ' ಎಂದರು.

ಆಗ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಕರೆಕ್ಟ್. ಒಂದು ಮಾತು ನೂರು ಅರ್ಥ. ಇದು ಡಿಕೆಶಿ ಸ್ಟೈಲ್. ಸಮಯ ಉತ್ತರ ಕೊಡುತ್ತದೆ ಎಂದು ಶಿವಕುಮಾರ್ ಹೇಳಿದ್ದಾರೆ. ಆ ಸಮಯ ಯಾವಾಗ ಬರುತ್ತದೆ' ಎಂದರು.

'ಸಿದ್ದರಾಮಯ್ಯ ಅವರು ಶೇ 100ರಷ್ಟು ನನ್ನ ಜತೆಗಿದ್ದಾರೆ. ನಾವಿಬ್ಬರೂ ಪರಸ್ಪರ ಕೈಜೋಡಿಸಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ಮುಂದೆಯೂ ಮಾಡುತ್ತೇವೆ. ಜನಕ್ಕೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಕೆಲಸ ಮಾಡುತ್ತೇವೆ. ಅವರ (ಸಿದ್ದರಾಮಯ್ಯ) ಕಷ್ಟಕಾಲದಲ್ಲಿ ನಾನು ನಿಂತಿದ್ದೇನೆ, ಮುಂದೆಯೂ ನಿಲ್ಲುತ್ತೇನೆ. ಅವರೂ ಕಷ್ಟ ಕಾಲದಲ್ಲಿ ನನ್ನ ಜತೆ ನಿಲ್ಲಲಿದ್ದಾರೆ' ಎಂದರು.

'ನಿಮ್ಮ ಟ್ವೀಟ್ ಅರ್ಥವೇನು' ಎಂದು ಅಶೋಕ ಮತ್ತೆ ಕೇಳಿದಾಗ, 'ನೀವು ಟ್ವೀಟ್ ಅನ್ನು ಯಾವ ರೀತಿ ಅರ್ಥ ಮಾಡಿಕೊಳ್ಳುತ್ತೀರಿ ಎಂಬುದು ನಿಮಗೆ ಬಿಟ್ಟ ವಿಚಾರ' ಎಂದು ಹೇಳಿದರು.

'ನೀವು ಯಾವ ವಿಚಾರಕ್ಕೆ ತಾಳ್ಮೆ ಬಗ್ಗೆ ಮಾತನಾಡಿದ್ದೀರಿ' ಎಂದು ಅಶೋಕ ಪ್ರಶ್ನಿಸಿದರು. 'ಯಾರ್‍ಯಾರೊ ಮಾತನಾಡುವುದಕ್ಕೆ ನಾನು ಉತ್ತರ ನೀಡಲಾಗದು. ನಮ್ಮ ಪಕ್ಷ ಹಾಗೂ ನಿಮ್ಮ ಪಕ್ಷದಲ್ಲಿ ಸಂಖ್ಯಾಬಲಕ್ಕಿಂತ ಪಕ್ಷವೇ ತೀರ್ಮಾನ ಮಾಡುತ್ತದೆ. ನಿಮ್ಮ ಸರ್ಕಾರದಲ್ಲಿ ಎಷ್ಟೋ ಮುಖ್ಯಮಂತ್ರಿ ಬದಲಾದರು. ಹೀಗಾಗಿ ನಿಮ್ಮ ಮಾತಿಗೆ ನಾನು ಜಗ್ಗುವುದಿಲ್ಲ. ದೃಢವಾದ ನಿಲುವು, ಸಂಕಲ್ಪ ಹೊಂದಿದ್ದರೆ, ಒಬ್ಬನೇ ಸಾಕು. ಆತನ ಜೊತೆ 140 ಜನರೂ ಇರುತ್ತಾರೆ. ಇನ್ನೂ ಜಾಸ್ತಿನೂ ಆಗುತ್ತಾರೆ. ನೋಡೋಣ 2028ರಲ್ಲಿ ಏನಾಗುತ್ತದೆ' ಎಂದು ಸೂಚ್ಯವಾಗಿ ಹೇಳಿದರು.

ಲಾಡ್–ಅಶೋಕ ವಾಗ್ವಾದ: ಶಿವಕುಮಾರ್‌ಗೆ ಯಾವಾಗ ಸಮಯ ಬರುತ್ತದೆ ಎಂದು ಅಶೋಕ ಪ್ರಶ್ನಿಸಿದಾಗ, ಮಾತನಾಡಲು ಸಚಿವ ಸಂತೋಷ್ ಲಾಡ್ ಮುಂದಾದರು. ಆಗ ಪ್ರತಿಕ್ರಿಯಿಸಿದ ಅಶೋಕ, 'ಯಾರೊ ನನಗೆ ಹೇಳಿದ್ದು, ಶಿವಕುಮಾರ್ ಕಡೆ 56 ಶಾಸಕರು ಇದ್ದಾರೆ ಅಂತೆ. ಆದ್ರೆ ಸಂತೋಷ್ ಲಾಡ್ ಅಂಥವರು ಬೆಳಿಗ್ಗೆ ಅಲ್ಲಿ, ರಾತ್ರಿ ಇಲ್ಲಿ ಇರ್ತಾರೆ. ಅದಕ್ಕೆ ಶಿವಕುಮಾರ್‌ಗೆ ಲಾಡ್ ಅಂಥವರನ್ನು ನೋಡಿ, ಯಾರು ಯಾರ ಕಡೆ ಇದ್ದಾರೆಂದು ಗೊಂದಲ ಆಗಿದೆಯಂತೆ' ಎಂದು ಲಾಡ್ ಅವರ ಕಾಲೆಳೆದರು.

▶8



ವಿಧಾನ ಸಭೆಯ ಕಲಾಪದಲ್ಲಿ ಸಿದ್ದರಾಮಯ್ಯ ಮಾತನಾಡಿದರು. ಡಿ.ಕೆ.ಶಿವಕುಮಾರ್ ಇದ್ದರು

ಹಾದಿನೂ ತಪ್ಪಿಲ್ಲ, ಅಸಹಾಯಕನೂ ಅಲ್ಲ: ಸಿದ್ದರಾಮಯ್ಯ

'ಸರ್ಕಾರ ಹಾದಿನೂ ತಪ್ಪಿಲ್ಲ. ನಾನೂ ಅಸಹಾಯಕ ಮುಖ್ಯಮಂತ್ರಿನೂ ಅಲ್ಲ. ಜನರಿಗೆ ನೀಡಿರುವ ಭರವಸೆಗಳನ್ನು ಎರಡೂವರೆ ವರ್ಷದಲ್ಲಿ ಈಡೇರಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ಸಾಧನೆಗಳನ್ನು ಎದೆ ತಟ್ಟಿಕೊಂಡು ಸಮರ್ಥಿಸಿಕೊಂಡರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಎರಡೂ ಸದನಗಳಲ್ಲಿ ಅವರು ಸೋಮವಾರ ಸುದೀರ್ಘ ಉತ್ತರ ನೀಡಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಸರ್ಕಾರದ ಆಡಳಿತ ಹದಗೆಟ್ಟಿದೆ. ಸಂವಿಧಾನರಹಿತ ಸರ್ಕಾರ. ಅಸಹಾಯಕ ಮುಖ್ಯಮಂತ್ರಿ ಎಂದೆಲ್ಲ ನೀವು (ವಿರೋಧ ಪಕ್ಷ) ಟೀಕಿಸಿದ್ದೀರಿ. ಕೆಲವು ಬಾರಿ ಅಸತ್ಯದ ಎದುರು ಸತ್ಯ ಅಸಹಾಯಕವಾಗಿ ಬಿಡುತ್ತದೆ' ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

ಮುಖ್ಯಮಂತ್ರಿ ನೀಡಿದ ಉತ್ತರಕ್ಕೆ ತೃಪ್ತರಾಗದ ಬಿಜೆಪಿ, ಜೆಡಿಎಸ್ ಸದಸ್ಯರು, ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಸಭಾತ್ಯಾಗ ಮಾಡಿದರು.

ಸಿ.ಎಂ ಹೇಳಿದ್ದೇನು?: ಜಿಎಸ್‌ಟಿ ಪರಿಹಾರ ನಷ್ಟ, 16ನೇ ಹಣಕಾಸು ಆಯೋಗದ ಶಿಫಾರಸಿ ನಿಂದ ಅನ್ಯಾಯ ಆಗಿರುವ ಬಗ್ಗೆ ಪ್ರಸ್ತಾಪಿಸಿದ ಮುಖ್ಯಮಂತ್ರಿ, 'ಸಂಪನ್ಮೂಲ ಕ್ರೋಡೀಕರಣಕ್ಕೆ ತೆರಿಗೆ ಏರಿಕೆ ಅನಿವಾರ್ಯ. ಆದರೆ, ನಾವು ಹಾಕಿದ ತೆರಿಗೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಇದೆ' ಎಂದು ಪ್ರತಿಪಾದಿಸಿದರು.

▶8

'ಝೆನ್–ಜಿ ಪ್ರಚೋದನೆಗೆ ಗಾಂಧಿ ಭಾಷಣ ಬಳಕೆ'

ನವದೆಹಲಿ (ಪಿಟಿಐ): 'ನೇಪಾಳ, ಬಾಂಗ್ಲಾದೇಶದಲ್ಲಿ ನಡೆದ ಪ್ರತಿಭಟನೆಗಳಂತೆಯೇ ಇಲ್ಲಿಯೂ ಪ್ರತಿಭಟನೆ ನಡೆಸುವುದಕ್ಕೆ ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಅವರು ಝೆನ್–ಜಿ ಸಮುದಾಯವನ್ನು ಪ್ರಚೋದಿಸುತ್ತಿದ್ದರು. ತಮ್ಮ ಉದ್ದೇಶವನ್ನು ಮರೆಮಾಚಲು ಮಹಾತ್ಮ ಗಾಂಧಿ ಭಾಷಣಗಳನ್ನು ಉಲ್ಲೇಖಿಸಿದ್ದರು' ಎಂದು ಕೇಂದ್ರ ಸರ್ಕಾರ ಮತ್ತು ಲಡಾಖ್‌ನ ಆಡಳಿತವು ಸುಪ್ರೀಂ ಕೋರ್ಟ್‌ಗೆ ತಿಳಿಸಿವೆ.

ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ವಾಂಗ್ಚುಕ್ ಅವರನ್ನು ಬಂಧಿಸಿರುವುದರ ವಿರುದ್ಧ ಪತ್ನಿ ಗೀತಾಂಜಲಿ ಆಂಗ್ಮೊ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಪಿ.ಬಿ. ವರಾಳೆ ಅವರ ಪೀಠವು ಸೋಮವಾರ ನಡೆಸಿತು. 'ಅರಬ್ ಕ್ರಾಂತಿಯ ರೀತಿಯ ಪ್ರತಿಭಟನೆಗಳನ್ನೂ ವಾಂಗ್ಚುಕ್ ತಮ್ಮ ಭಾಷಣಗಳಲ್ಲಿ ಉಲ್ಲೇಖಿಸಿದ್ದರು' ಎಂದು ಕೇಂದ್ರ ವಾದಿಸಿತು.

'ವಾಂಗ್ಚುಕ್ ಅವರು ಕೇಂದ್ರ ಸರ್ಕಾರವನ್ನು 'ಅವರು' ಎಂದು ಸಂಬೋಧಿಸಿದ್ದರು. ಲಡಾಖ್ ಜನರನ್ನು 'ನಾವು' ಎಂದು ಸಂಬೋಧಿಸಿ ದೇಶದಿಂದ ಬೇರ್ಪಡಿಸಿದ್ದರು. 'ಜನಾಭಿಪ್ರಾಯ ಸಂಗ್ರಹ'ದಂಥ ಮಾತುಗಳನ್ನಾಡಿದ್ದರು. ಇಂಥ ಮಾತುಗಳು ಈ ಹಿಂದೆ ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಳಿಸುತ್ತಿದ್ದವು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿದರು.

ಧಮ್ಮಯಾತ್ರೆ

ಪ್ರಜಾವಾಣಿ ಚಿತ್ರ: **ತಾಜುದ್ದೀನ್ ಆಜಾದ್**



ಥಾಯ್ಲೆಂಡ್ ಬಿಕ್ಕು ಸಂಘವು ಕಲಬುರಗಿ ನಗರದ ಸಿದ್ಧಾರ್ಥ ಬುದ್ಧ ವಿಹಾರದಿಂದ ತೆಲಂಗಾಣದ ಬುದ್ಧವನಂವರೆಗೆ ಹಮ್ಮಿಕೊಂಡಿರುವ ಬೌದ್ಧ ಧರ್ಮದ 3ನೇ ಧಮ್ಮಯಾತ್ರೆ ಅಂಗವಾಗಿ ಬಿಕ್ಕುಗಳು ಸೋಮವಾರ ಪಾದಯಾತ್ರೆಯಲ್ಲಿ ಸಾಗಿದರು. ಅನುಯಾಯಿಗಳು ಹಿಂಬಾಲಿಸಿದರು


ಕುಸಿದ ಬೆಳ್ಳಿ ದರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಭಾರಿ ಇಳಿಕೆ ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹52 ಸಾವಿರ (ಶೇ 17ರಷ್ಟು) ಕಡಿಮೆಯಾಗಿ, ₹2.60 ಲಕ್ಷಕ್ಕೆ ಇಳಿದಿದೆ.



▶8

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಪಿನಾಕಿನಿ: ನ್ಯಾಯಮಂಡಳಿ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ರಚಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿದೆ. ಇದ ರಿಂದಾಗಿ, ಮಾತುಕತೆ ಮೂಲಕವೇ ವಿವಾದ ಬಗೆಹರಿಸಲು ಮುಂದಾಗಿದ್ದ ಕರ್ನಾಟಕಕ್ಕೆ ಹಿನ್ನಡೆಯಾಗಿದೆ.



ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ತೀರ್ಪನ್ನು ಕಾಯ್ದಿರಿಸಿದ್ದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಎನ್.ವಿ.ಅಂಜಾರಿಯಾ ಅವರಿದ್ದ ಪೀಠವು, '1956ರ ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆಯಡಿ ಕೇಂದ್ರ ಸರ್ಕಾರವು ಶಾಸನಬದ್ಧ ಕಾರ್ಯಗಳನ್ನು ನಡೆಸಲು ಯಾವುದೇ ಕಾನೂನು ಅಡಚಣೆ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ವಿವಾದ ಪರಿಹರಿಸಲು ನ್ಯಾಯಮಂಡಳಿ ರಚಿಸುವುದಕ್ಕೆ ಕೇಂದ್ರಕ್ಕೆ ಯಾವುದೇ ಅಡಚಣೆ ಇಲ್ಲ. ತಮಿಳುನಾಡು ತನ್ನ ದೂರನ್ನು ನ್ಯಾಯಮಂಡಳಿಯ ಮುಂದೆ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿತು. 2018ರಲ್ಲಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಪೀಠ ವಿಲೇವಾರಿ ಮಾಡಿತು.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯಮಂಡಳಿ ಸ್ಥಾಪಿಸುವಂತೆ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್ ತಿಂಗಳಲ್ಲಿ ಮನವಿ ಮಾಡಿತ್ತು.

ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರವನ್ನು 2024ರ ಜೂನ್‌ನಲ್ಲಿ ಒತ್ತಾಯಿಸಿತ್ತು.

ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು. ಈ ಸಮಿತಿಯು ಉಭಯ ರಾಜ್ಯಗಳ ನಡುವೆ ಒಂಬತ್ತು ಸಭೆಗಳನ್ನು ನಡೆಸಿತ್ತು.

ಜಲ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಮಾತುಕತೆಯ ಮೂಲಕ ಈ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಪತ್ರ ಬರೆದಿತ್ತು.

ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಬಳಸಲು ಯೋಜಿಸಲಾಗಿದೆ. ಇದರಲ್ಲಿ 2 ಟಿಎಂಸಿ ಮತ್ತು ವಾಡಿಕೆಗಿಂತ ಹೆಚ್ಚು ಮಳೆ ಬಂದಾಗ ದೊರೆಯುವ ಹೆಚ್ಚುವರಿ ನೀರು ತಮಿಳುನಾಡಿಗೆ ಉಳಿಯುತ್ತದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು.

ಸುಲಿಗೆ, ವೇಶ್ಯಾವಾಟಿಕೆ, ಜೇಬುಗಳ್ಳತನ ನಿರಂತರ

ಮೆಜೆಸ್ಟಿಕ್: ಅಕ್ರಮಗಳ ಹಾವಳಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಿಂದ, ಪರ ರಾಜ್ಯಗಳಿಂದ ಪ್ರತಿದಿನ ಲಕ್ಷಾಂತರ ಮಂದಿ ಬಂದು ಹೋಗುವ, ನಗರದ ಜನರು ನಿತ್ಯ ಸಂಚರಿಸುವ ಕೇಂದ್ರ ಸ್ಥಳವಾದ ಬೆಂಗಳೂರಿನ 'ಮೆಜೆಸ್ಟಿಕ್' ಎಂಬ ಮೋಹಕ ಜಾಗದಲ್ಲಿ ಸುಲಿಗೆಕೋರರ, ಕಳ್ಳಕಾಕರ, ವೇಶ್ಯಾವಾಟಿಕೆಯ ಹಾವಳಿ ಹೆಚ್ಚಾಗಿದೆ.

ಮೆಜೆಸ್ಟಿಕ್ ಬಂದಿಳಿಯುವ ಜನರಿಗೆ ಇಲ್ಲಿ ಯಾರು ಒಳ್ಳೆಯವರು ಯಾರು ಕೆಟ್ಟವರು ಎಂಬುದು ಗೊತ್ತಾಗದೇ, ಅನೇಕರು ಇಲ್ಲಿ 'ಎಲ್ಲ'ವನ್ನೂ ಕಳೆದುಕೊಂಡಿದ್ದಾರೆ. ಬೆಳಿಗ್ಗಿನ ಜಾವ ಮತ್ತು ರಾತ್ರಿ ಹೊತ್ತಿನಲ್ಲಿ ಮರ್ಯಾದಸ್ಥರು ಓಡಾಡುವುದೇ ಕಷ್ಟವಾಗಿದೆ.

ರಾತ್ರಿ 9.30ರ ನಂತರ ಕುಡಿದು ಇಲ್ಲವೇ ಅನಾರೋಗ್ಯದಿಂದ ಯಾರಾದರೂ ಮಲಗಿದ್ದರೆ ಅವರ ಜೇಬಲ್ಲಿದ್ದುದನ್ನು ಕಿತ್ತುಕೊಳ್ಳಲಾಗುತ್ತದೆ. ವಿರೋಧ ವ್ಯಕ್ತಪಡಿಸಿದವರಿಗೆ ಚೂರಿ ತೋರಿಸಿ ಬೆದರಿಸಿ ಸುಮ್ಮನಿರಿಸಲಾಗುತ್ತದೆ.

ರಾತ್ರಿ ಹೊತ್ತಲ್ಲಿ ಮಹಿಳೆಯರು ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಬಂದರೆ ಅವರನ್ನು 'ಬೆಲೆವೆಣ್ಣು'ಗಳೆಂದು ತಿಳಿದು ಕರೆಯುವಂಥ ಅಧೋಗತಿ ಬಂದೊಂದಗಿದೆ. ಪುರುಷರು ರಾತ್ರಿ ಒಬ್ಬರೇ ನಡೆದು ಹೋಗುತ್ತಿದ್ದರೆ ಅವರನ್ನು ಅಡ್ಡಗಟ್ಟಿ ಕರೆಯುವ ಲೈಂಗಿಕ ಕಾರ್ಯಕರ್ತೆಯರು, ಲಿಂಗತ್ವ ಅಲ್ಪಸಂಖ್ಯಾತರ ಹಾವಳಿ ಹೆಚ್ಚಾಗಿದೆ. ಹಿಂದಿ ಅಥವಾ ಉತ್ತರ ಭಾರತದ ಭಾಷೆಯನ್ನಾಡುವವರನ್ನೇ ಗುರಿ ಮಾಡಿ ಸುಲಿಗೆ ಮಾಡಲಾಗುತ್ತಿದೆ ಎಂದು ಇಲ್ಲಿ ಓಡಾಡಿ, ಸಂಕಷ್ಟಕ್ಕೆ ತುತ್ತಾದವರು ತಮ್ಮ ಅಳಲು ತೋಡಿಕೊಳ್ಳುತ್ತಾರೆ.

▶9



ಮೆಜೆಸ್ಟಿಕ್‌ನಲ್ಲಿರುವ ಪಾದಚಾರಿ ಮೇಲ್ಸೇತುವೆ ಹಗಲಿನಲ್ಲಿ ಜನಸಂಚಾರಕ್ಕೆ ಅನುಕೂಲವಾಗಿದ್ದು, ರಾತ್ರಿ ಅಪಾಯಕಾರಿ ಸ್ಥಳವಾಗುತ್ತಿದೆ ಪ್ರಜಾವಾಣಿ ಚಿತ್ರ

'ನಿಯಂತ್ರಣಕ್ಕೆ ಕ್ರಮ'

ಸುಲಿಗೆಗೆ ಸಂಬಂಧಿಸಿದಂತೆ ಕಳೆದ ಒಂದು ವಾರದಲ್ಲಿ ನಾಲ್ಕು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಮೆಜೆಸ್ಟಿಕ್ ಪಾದಚಾರಿ ಮೇಲ್ಸೇತುವೆಯಲ್ಲಿ ದೀರ್ಘ ಅವಧಿ ಯಾರೂ ನಿಲ್ಲದಂತೆ ಕ್ರಮ ಕೈಗೊಳ್ಳಲಾಗಿದೆ. ಯಾರಾದರೂ ನಿಂತಿದ್ದರೆ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಬಳಸಿ ಕಳುಹಿಸಲಾಗುತ್ತದೆ. ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ ಮೆಜೆಸ್ಟಿಕ್ ಸುತ್ತಮುತ್ತ ಅಪರಾಧ ಪ್ರಕರಣಗಳ ತಡೆಯಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಶ್ಚಿಮ ವಿಭಾಗದ ಡಿಸಿಪಿ ಎನ್. ಯತೀಶ್ ತಿಳಿಸಿದ್ದಾರೆ.

ಪಠ್ಯಪುಸ್ತಕ ಮುದ್ರಣ: ₹266.67 ಕೋಟಿ ಮೊತ್ತದ ಟೆಂಡರ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2026–27ನೇ ಶೈಕ್ಷಣಿಕ ಸಾಲಿನಲ್ಲಿ ಉಚಿತ ಪಠ್ಯಪುಸ್ತಕಗಳನ್ನು ಪೂರೈಸಲು ಶಾಲಾ ಶಿಕ್ಷಣ ಇಲಾಖೆ ₹266.67 ಕೋಟಿ ಮೊತ್ತಕ್ಕೆ ಟೆಂಡರ್ ಕರೆಯಲು ಅನುಮೋದನೆ ನೀಡಿ, ಆದೇಶ ಹೊರಡಿಸಿದೆ.

ಇದೇ ಮೊದಲ ಬಾರಿ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೂ ಉಚಿತ ಪಠ್ಯಪುಸ್ತಕ ಪೂರೈಸಲಾಗುತ್ತಿದ್ದು, ಪಿಯು ಬೇಡಿಕೆ 27.22 ಲಕ್ಷ ಸೇರಿ ಒಟ್ಟು 6.74 ಕೋಟಿ ಪಠ್ಯಪುಸ್ತಕ, ಅಭ್ಯಾಸ, ದಿನಚರಿ ಪುಸ್ತಕಗಳನ್ನು ಮುದ್ರಿಸಲು ಟೆಂಡರ್ ಆಹ್ವಾನಿಸುವಂತೆ ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಸೂಚಿಸಲಾಗಿದೆ.

ಹಿಂದಿನ ಸಾಲಿನಲ್ಲಿ 9.78 ಲಕ್ಷ ಪಠ್ಯಪುಸ್ತಕ ಹಾಗೂ ಅಭ್ಯಾಸ ಪುಸ್ತಕಗಳು ಉಳಿಕೆಯಾಗಿವೆ. ಅವುಗಳನ್ನು ಪರಿಗಣಿಸಿ ಬೇಡಿಕೆಗೆ ಅನುಗುಣವಾಗಿ ನಿಗದಿಪಡಿಸಿದ ಮೊತ್ತದ ಒಳಗೆ ಮುದ್ರಣ ಕಾರ್ಯ ಕೈಗೊಳ್ಳಬೇಕು. ಮೊತ್ತವನ್ನು ವಿದ್ಯಾವಿಕಾಸ ಯೋಜನೆಯ ಅನುದಾನದಲ್ಲಿ ಭರಿಸಬೇಕು. ರಾಜ್ಯದಲ್ಲಿ ಮುದ್ರಣ ಘಟಕ ಹೊಂದಿರುವ ಮುದ್ರಣಕಾರರಿಗೆ ಟೆಂಡರ್ ನೀಡಬೇಕು. ಶೈಕ್ಷಣಿಕ ವರ್ಷದ ಆರಂಭದಲ್ಲೇ ಪಠ್ಯಪುಸ್ತಕಗಳನ್ನು ಎಲ್ಲ ಶಾಲೆಗಳಿಗೂ ತಲುಪಿಸಬೇಕು ಎಂದು ಷರತ್ತುಗಳನ್ನು ವಿಧಿಸಲಾಗಿದೆ.

3,862 ಶಾಲೆಗಳಿಗೆ 'ಸ್ಮಾರ್ಟ್ ಕ್ಲಾಸ್'

ರಾಜ್ಯದಲ್ಲಿ 3,862 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಅಳವಡಿಸಲು ₹91.54 ಕೋಟಿ ಮೊತ್ತಕ್ಕೆ ಟೆಂಡರ್ ಆಹ್ವಾನಿಸಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

2022–23ನೇ ಸಾಲಿನಿಂದ 2025–26ನೇ ಸಾಲಿನವರೆಗೆ ಕರ್ನಾಟಕ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿ ಪಟ್ಟಿ ಮಾಡಲಾದ ಶಾಲೆಗಳಿಗೆ ಈ ಸೌಲಭ್ಯ ಸಿಗಲಿದೆ. 2026–26ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭದ ವೇಳೆಗೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಿನಿಮಾಗೆ ಎ.ಐ ವರ: ರತ್ನವೇಲು

'ಬೆಳಕು ಭಾಷೆಯಾದಾಗ' ಸಂವಾದದಲ್ಲಿ ಖ್ಯಾತ ಛಾಯಾಚಿತ್ರಗ್ರಾಹಕ ರತ್ನವೇಲು ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ವೈದ್ಯರಿಗೆ, ಎಂಜಿನಿಯರ್‌ಗಳಿಗೆ, ಸಿನಿಮಾಕರ್ತೃಗಳಿಗೂ ಅಪಾಯವಾಗಿದೆ ಎಂದು ಹೇಳುತ್ತಾರೆ. ಆದರೆ ಇದೊಂದು ವರ. ಇದರ ಬಗ್ಗೆ ಜ್ಞಾನ ಹೊಂದಿರುವವರು ಅದನ್ನು ಬಳಸಿಕೊಂಡೇ ಮುಂದಿನ ಹಂತಕ್ಕೆ ಬೆಳೆಯುತ್ತಾರೆ' ಎಂದು ಖ್ಯಾತ ಛಾಯಾಚಿತ್ರಗ್ರಾಹಕ ರತ್ನವೇಲು ಅಭಿಪ್ರಾಯಪಟ್ಟರು.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಸೋಮವಾರ ನಡೆದ 'ಬೆಳಕು ಭಾಷೆಯಾದಾಗ' ಎಂಬ ಸಂವಾದದಲ್ಲಿ ಅವರು ಮಾತನಾಡಿದರು. ನಿರ್ಮಾಪಕ, ಸಂಕಲನಕಾರ ಪ್ರಶಾಂತ್ ಪಂಡಿತ್ ಸಂವಾದ ನಡೆಸಿಕೊಟ್ಟರು.

'ಎಐ ಎಷ್ಟೇ ಮುಂದುವರಿದರೂ ಸೃಷ್ಟಿಕರ್ತರು ಸಿನಿಮಾಗೆ ತೊಂದರೆಯಾಗದು. ಕ್ಯಾಮೆರಾ ಬದಲಾವಣೆಯಾಗಬಹುದು, ಅದರೊಳಗಿರುವ ಸೆನ್ಸರ್‌ಗಳು ಮತ್ತು ಮೆಮೊರಿ ಪ್ರಮಾಣ ಬದಲಾಗಬಹುದು. ಆದರೆ ಸೃಷ್ಟಿಕರ್ತನಾದವನು ಯಾವತ್ತಿದ್ದರೂ ಉಳಿಯುತ್ತಾನೆ. ಎಐ ಎನ್ನುವುದನ್ನು ಇತ್ತೀಚೆಗೆ ಪ್ರಿಪ್ರೊಡಕ್ಷನ್ ಸಲಕರಣೆಯಾಗಿ ಬಳಸಲಾಗುತ್ತಿದೆ. ಕಲ್ಪನೆಯ ಲೋಕದ ಸೃಷ್ಟಿಗೆ ಇದು ಉಪಯೋಗ. ಆದರೆ ಇದು ದೃಶ್ಯರೂಪವಾಗಿ ತೆರೆ ಮೇಲೆ ಬರಲು ಇಡೀ ಸಿನಿಮಾ ತಂಡ ಬೇಕೇಬೇಕು. ಎಐಗೆ ಯಾರ ಸ್ಥಾನವನ್ನೂ ತುಂಬಲು ಸಾಧ್ಯವಿಲ್ಲ' ಎಂದರು.



ರತ್ನವೇಲು ಅವರಿಗೆ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ ಸ್ಮರಣಿಕೆ ನೀಡಿದರು

'ನಾನು ಚಿತ್ರದ ಕಥೆಯ ಹುಟ್ಟಿನಿಂದಲೇ ನಿರ್ದೇಶಕನ ಜೊತೆಗೆ ಹೆಜ್ಜೆ ಹಾಕುತ್ತೇನೆ. ಕಥೆ ಕೈಗೆ ಸಿಕ್ಕ ಕೂಡಲೇ ಅದನ್ನು ಮನಸ್ಸಿನಲ್ಲೇ ಚಿತ್ರೀಕರಿಸಿಕೊಳ್ಳುತ್ತೇನೆ. ಅದನ್ನು ಅನುಭವಿಸುತ್ತೇನೆ. ಕಳೆದ 29 ವರ್ಷದಲ್ಲಿ ಈ ವೃತ್ತಿಯಲ್ಲಿದ್ದುಕೊಂಡು ಒಂದು ಬಾರಿ ಒಂದೇ ಸಿನಿಮಾ ಮಾಡಿಕೊಂಡು ಬಂದಿದ್ದೇನೆ. ದೊಡ್ಡ ಸಿನಿಮಾಗಳಲ್ಲಿ ಡಿಒಪಿಗೆ ಒತ್ತಡ ಜಾಸ್ತಿ. ಒಂದು ರೀತಿಯಲ್ಲಿ ಟಿ-20 ಮ್ಯಾಚ್ ಆಡುತ್ತಿರುತ್ತೇವೆ. ಛಾಯಾಚಿತ್ರಗ್ರಾಹಕರು ಯೋಜನೆ ಮಾಡಿಕೊಳ್ಳುವುದು ಬಹುಮುಖ್ಯ. 'ರೋಬೊ' ಸಿನಿಮಾಗೆ 3,600 ಪುಟಗಳ ಕ್ಯಾಮೆರಾ ವರದಿ ಸಿದ್ಧಪಡಿಸಿದ್ದೆ. ಇದನ್ನು ಈಗಿನ ಯುವ ಛಾಯಾಚಿತ್ರಗ್ರಾಹಕರು ಅನುಸರಿಸಬೇಕು. ಈಗಿನವರು ಚಿತ್ರರಂಗಕ್ಕೆ ಬಂದ ಮೇಲೆ ಕಲಿಯುತ್ತೇನೆ ಎನ್ನುತ್ತಾರೆ. ಇದರಿಂದಾಗಿಯೇ ಸಂಕಲನಕಾರರ ಕಂಪ್ಯೂಟರ್‌ಗಳಲ್ಲಿ ಲೆಕ್ಕವಿರದಷ್ಟು ದೃಶ್ಯಗಳು ತುಂಬಿಕೊಂಡಿರುತ್ತವೆ' ಎಂದು ಅನುಭವ ಹಂಚಿಕೊಂಡರು.

ಕನ್ನಡದ 'ಸೈನೈಡ್' ಸಿನಿಮಾ ದಿನಗಳನ್ನು ನೆನಪಿಸಿಕೊಂಡ ಅವರು, 'ನಾನು 'ಆರ್ಯ', 'ತಿರುಮಲೈ'ಯಂಥ ಕಮರ್ಷಿಯಲ್ ಸಿನಿಮಾ ಮಾಡಿದ್ದ ಸಮಯವದು. ಎ.ಎಂ.ಆರ್. ರಮೇಶ್ ಅವರು ತಂದ 'ಸೈನೈಡ್' ಕಥೆ ಕುತೂಹಲಕಾರಿಯಾಗಿತ್ತು. ಆದರೆ 25 ದಿನಗಳಲ್ಲಿ ಈ ಸಿನಿಮಾ ಮುಗಿಸುವ ಸವಾಲಿತ್ತು. ಈ ಸಿನಿಮಾಗೆ ಕೇವಲ 4–5 ಲೈಟ್‌ಗಳನ್ನು ಬಳಸಿದ್ದೆವು. ಟ್ರಾಲಿ ಹಾಕುವ ಬಜೆಟ್ ಇರಲಿಲ್ಲ. ಸ್ಕೇಟರ್ ಬಳಸಿ ಚಿತ್ರೀಕರಣ ಮಾಡಿದ್ದೆ' ಎಂದರು.

ನೆಗೆಟಿವ್ ಬಳಸಿ 'ಪೆದ್ದಿ' ಶೂಟಿಂಗ್

'ಇತ್ತೀಚೆಗೆ ಭಾರತದಲ್ಲಿ ನೆಗೆಟಿವ್‌ನಲ್ಲಿ ಚಿತ್ರೀಕರಿಸಿದ ಸಿನಿಮಾಗಳೇ ಬರುತ್ತಿಲ್ಲ. ಅತ್ತ ಆಸ್ಕರ್‌ಗೆ ಆಯ್ಕೆಯಾಗುತ್ತಿರುವ ಬಹುತೇಕ ಸಿನಿಮಾಗಳು ಈ ಮಾದರಿಯಲ್ಲೇ ಚಿತ್ರೀಕರಿಸಿದ್ದಾಗಿರುತ್ತವೆ. ಡಿಜಿಟಲ್‌ನಲ್ಲಿ ಸೆರೆಹಿಡಿದ ದೃಶ್ಯಗಳು ಸುಂದರವಾಗಿ ಕಂಡರೂ ಅವುಗಳನ್ನು ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆ. ಆದರೆ ತನಗೆ ಬೇಕಾದಂತೆ ವಾತಾವರಣ ಸೃಷ್ಟಿಸಿಕೊಂಡು ನೆಗೆಟಿವ್‌ನಲ್ಲಿ ಸೆರೆಹಿಡಿಯುವ ಕೌಶಲ, ಖುಷಿ ಬೇರೆಯೇ. ರಾಮ್ ಚರಣ್ ನಟನೆಯ ಹೊಸ ಸಿನಿಮಾ 'ಪೆದ್ದಿ'ಯಲ್ಲಿ 17 ವರ್ಷಗಳ ಬಳಿಕ ಕೆಲ ದೃಶ್ಯಗಳನ್ನು ನೆಗೆಟಿವ್‌ನಲ್ಲಿ ಸೆರೆಹಿಡಿದಿದ್ದೇನೆ. ಪೂರ್ಣ ಸಿನಿಮಾವನ್ನೇ ಈ ರೀತಿ ಸೆರೆಹಿಡಿಯುವ ಆಸೆ ಇತ್ತು. ಆದರೆ ಬಜೆಟ್ ಮೂರು ಪಟ್ಟು ಆಗಲಿದೆ. 'ರಂಗಸ್ಥಳಂ'ಗಿಂತ ಭಿನ್ನವಾಗಿ 'ಪೆದ್ದಿ' ಇರಲಿದೆ. ಇದರ ಶೇಕಡ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಏಪ್ರಿಲ್–ಮೇನಲ್ಲಿ ಸಿನಿಮಾ ತೆರೆ ಕಾಣಲಿದೆ' ಎಂದರು ರತ್ನವೇಲು.

ಸುದ್ದಿ 2 ನಿಮಿಷ

ಪಂಪನ ಹೆಸರಿನಲ್ಲಿ ಪ್ರಾಧಿಕಾರ ಸ್ಥಾಪಿಸಿ: ಬರಗೂರು

ಬೆಂಗಳೂರು: ಕನ್ನಡದ ಆದಿಕವಿ ಪಂಪನ ಹೆಸರಿನಲ್ಲಿ ಪ್ರಾಧಿಕಾರ ಅಥವಾ ಪ್ರತಿಷ್ಠಾನ ಸ್ಥಾಪಿಸಿ, ಅಗತ್ಯ ಅನುದಾನ ನೀಡಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರಿಗೆ ಪತ್ರ ಬರೆದಿದ್ದಾರೆ. ಪಂಪನ ಹೆಸರಿನಲ್ಲಿ ಸಾಹಿತಿಗಳಿಗೆ ಒಂದು ಪ್ರಶಸ್ತಿ ನೀಡುವುದು ಹೊರತುಪಡಿಸಿ ಬೇರೇನೂ ಕೆಲಸಗಳು ಆಗುತ್ತಿಲ್ಲ. ಮೊದಲ ಬಾರಿಗೆ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಕನ್ನಡದ ಕವಿ ಎಂಬುದು ದಾಖಲೆಯ ವಿಷಯವಾಗಿದೆ ಎಂದು ಹೇಳಿದ್ದಾರೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪವಾಣಿ ಎಂದೆಂದಿಗೂ ಪ್ರಸ್ತುತವಾಗಿದೆ. 'ವಿಕ್ರಮಾರ್ಜುನ ವಿಜಯಂ' ಕಾವ್ಯದಲ್ಲಿ ಕರ್ಣನ ಪಾತ್ರವನ್ನು ಕುಲಪದ್ಧತಿಯ ಪ್ರತಿರೋಧದ ರೂಪಕವಾಗಿ ಬಳಸಿ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಮೊದಲ ಮನ್ನಣೆ ಮಹಾಕವಿಗೆ ಸಲ್ಲಬೇಕು ಎಂದು ತಿಳಿಸಿದ್ದಾರೆ.



ಪಂಪನ ಹೆಸರಿನಲ್ಲಿ ಪ್ರಾಧಿಕಾರ ಅಥವಾ ಪ್ರತಿಷ್ಠಾನ ಸ್ಥಾಪಿಸಿ, ಜಾತ್ಯತೀತ, ದೇಶಾಭಿಮಾನ ಹಾಗೂ ಸೃಜನಶೀಲ ಸ್ವಾತಂತ್ರ್ಯದ ವಿಷಯಗಳನ್ನೂ ಒಳಗೊಂಡಂತೆ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಅವರ ಸ್ಮಾರಕವನ್ನು ನಿರ್ಮಿಸಬಹುದು. ಅಣ್ಣಿಗೇರಿಯಲ್ಲಿರುವ ಪಂಪ ಭವನವನ್ನು ಉನ್ನತೀಕರಿಸಬಹುದು ಎಂದು ಬರಗೂರು ಸಲಹೆ ನೀಡಿದ್ದಾರೆ.

'12ನೇ ಶತಮಾನದ ಶಿವಶರಣರನ್ನು ಪೂಜಿಸಿ'

ಬೆಂಗಳೂರು: ಜೀವಂತ ಇರುವ ಸ್ವಾಮೀಜಿಗಳ ಭಾವಚಿತ್ರಗಳನ್ನು ಮನೆಯಲ್ಲಿ ಇಟ್ಟು ಆರಾಧಿಸುವ ಬದಲು 12ನೇ ಶತಮಾನದ ಶಿವಶರಣರ ಭಾವಚಿತ್ರಗಳನ್ನು ಇಟ್ಟು ಪೂಜಿಸಬೇಕು ಎಂದು ಮೂಡಲಗಿ ಭೋವಿ ಗುರುಪೀಠದ ಕೃಷ್ಣಪ್ಪ ಸ್ವಾಮೀಜಿ ಹೇಳಿದರು.

ಭೋವಿ ಜನಾಂಗ ಒಕ್ಕೂಟ ಭಾನುವಾರ ಆಯೋಜಿಸಿದ್ದ ಗುರು ಸಿದ್ಧರಾಮೇಶ್ವರರ 854ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೂಢನಂಬಿಕೆಗಳು ಹಾಗೂ ವಾಮಾಚಾರ ಮಾಡುವ ಸ್ವಾಮೀಜಿಗಳನ್ನು ನಂಬಬೇಡಿ. ಪ್ರತಿಯೊಬ್ಬರೂ ಶಿವಶರಣರಂತೆ ವಿಭೂತಿ ಹಚ್ಚಬೇಕು. ಗುರು ಸಿದ್ಧರಾಮೇಶ್ವರರ ಹಾದಿಯಲ್ಲಿ ನಡೆಯಬೇಕು. ಶರಣರು ಹೇಳಿದಂತೆ ಕಾಯಕವೇ ಕೈಲಾಸ ಎಂಬಂತೆ ಜೀವನ ನಡೆಸಬೇಕು. ನಮ್ಮ ಮಕ್ಕಳಿಗೆ ನಟ–ನಟಿಯರ ಹೆಸರುಗಳನ್ನು ನಾಮಕರಣ ಮಾಡುವ ಬದಲು ಶಿವಯೋಗಿ ಸಿದ್ಧರಾಮೇಶ್ವರ ಅವರ ಹೆಸರನ್ನು ಇಡಬೇಕು' ಎಂದು ಸಲಹೆ ನೀಡಿದರು.

'ಧರ್ಮದ ಕಾರ್ಯಕ್ರಮಗಳು, ಜಯಂತಿ ಸೇರಿದಂತೆ ಜಾತ್ರಾ ಮಹೋತ್ಸವಗಳಿಗೆ ದೇಣಿಗೆ ನೀಡಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದು ಕರೆ ನೀಡಿದರು. ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಎಂ.ಎ. ನಂಜಪ್ಪ ಭೋವಿ, ಪ್ರಧಾನ ಕಾರ್ಯದರ್ಶಿ ಕೆ.ನಾಗರಾಜು, ಮಹಿಳಾ ಘಟಕದ ಅಧ್ಯಕ್ಷೆ ಆರತಿ ಉಪಸ್ಥಿತರಿದ್ದರು.

ಕಂಪ್ಯೂಟರ್ ಕೌಶಲ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ನಗರದ ಉದಯಭಾನು ಕಲಾಸಂಘದಿಂದ ಮೂರು ತಿಂಗಳ ಕಂಪ್ಯೂಟರ್ ಕೌಶಲ ತರಬೇತಿ ಹಮ್ಮಿಕೊಳ್ಳಲಾಗಿದೆ.



30 ವರ್ಷದೊಳಗಿನ ಯುವ ಜನರು ತರಬೇತಿಯ ಪ್ರಯೋಜನ ಪಡೆದುಕೊಳ್ಳಬಹುದು. ಮೈಕ್ರೋಸಾಫ್ಟ್ ವಿಂಡೋಸ್, ಆಪರೇಟಿಂಗ್ ಸಿಸ್ಟಮ್, ಡಾಟಾ ಸ್ಟೋರೇಜ್ ಮತ್ತು ಫೈಲ್ ಫೋಲ್ಡರ್ ಮ್ಯಾನೇಜ್‌ಮೆಂಟ್, ಪವರ್ ಪಾಯಿಂಟ್, ನುಡಿ ಕುರಿತು ಮೂರು ತಿಂಗಳು ತರಬೇತಿ ನೀಡಲಾಗುತ್ತದೆ. ಫೆಬ್ರುವರಿ 28ರವರೆಗೆ ಪ್ರವೇಶ ಪತ್ರ ನೀಡಲಾಗುವುದು. ಮಾರ್ಚ್ ಮೊದಲ ವಾರದಿಂದ ತರಬೇತಿ ಪ್ರಾರಂಭಿಸಲಾಗುವುದು ಎಂದು ಸಂಘದ ಸಹಾಯಕ ಕಾರ್ಯದರ್ಶಿ ಕೆ.ಎನ್. ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಶ್ವಕರ್ಮ ಜನಜಾಗೃತಿ ಸಮಾವೇಶದಲ್ಲಿ ರಾಷ್ಟ್ರಮಟ್ಟದ ವಿಶ್ವಕರ್ಮ ಸೇವಾರತ್ನ ಪ್ರಶಸ್ತಿಯನ್ನು ರಾಕೇಶ್ ಎನ್. ನಿಡಗುಂದಿ, ಎ. ರಾಜೇಶ್, ಕಾವ್ಯ ವಿ, ಮಧುರ ಮೂರ್ತಿ ಎಂ.ಎಸ್ ಅವರಿಗೆ ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

ವಿಶ್ವಕರ್ಮ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕರ್ಮ ಸೇವಾ ಸಮಿತಿ ಆಯೋಜಿಸಿದ್ದ 43ನೇ ವರ್ಷದ ವಿಶ್ವಕರ್ಮ ಬ್ರಹ್ಮ ರಥೋತ್ಸವ ಹಾಗೂ ವಿಶ್ವಕರ್ಮ ಜನಜಾಗೃತಿ ಸಮಾವೇಶ ಭಕ್ತಿಭಾವದಿಂದ ನಡೆಯಿತು.

ನಗರ್ತಪೇಟೆಯ ಕಾಳಿಕಾಂಬಾ ಕಮಟೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶ್ವಕರ್ಮ ಬ್ರಹ್ಮ ರಥೋತ್ಸವ ನೆರವೇರಿತು. ಕಾರ್ಯಕ್ರಮದ ಅಂಗವಾಗಿ ವಿಶ್ವಕರ್ಮ ಸುಪ್ರಭಾತ, ಗಣಪತಿ ಪೂಜೆ, ವಿಶ್ವಕರ್ಮ ಹೋಮ ಹಾಗೂ ಪೂರ್ಣಾಹುತಿ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ವಿಶ್ವಕರ್ಮ ರಜತ ಮೂರ್ತಿಗೆ ಪಂಚಾಮೃತ ಅಭಿಷೇಕ ಜರುಗಿತು. ಬ್ರಹ್ಮರಥವು ದೇವಾಲಯದಿಂದ ಹೊರಟು ನಗರದ ಪ್ರಮುಖ ರಾಜಬೀದಿಗಳಲ್ಲಿ ಸಾಗಿತು. ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಜನಪದ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

ಸಂಜೆ ಪುರಭವನದಲ್ಲಿ ವಿಶ್ವಕರ್ಮ ಜನಜಾಗೃತಿ ಸಮಾವೇಶ ಆಯೋಜಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ, ಸಮುದಾಯದ ಹಿರಿಯರಿಗೆ ಸನ್ಮಾನ ಹಾಗೂ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆದವು.

ಶಿವಸುಜ್ಞಾನತೀರ್ಥ ಸ್ವಾಮೀಜಿ, ಬುದ್ಧಾತ್ಮಾನಂದ ಸರಸ್ವತಿ ಸ್ವಾಮೀಜಿ, ನೀಲಕಂಠಾಚಾರ್ಯ ಸ್ವಾಮೀಜಿ, ವಿಶ್ವಕರ್ಮ ಸೇವಾ ಸಮಿತಿ ಚಿನ್ನ ಬೆಳ್ಳಿ ಕಾರ್ಮಿಕರ ಘಟಕದ ಅಧ್ಯಕ್ಷ ಆರ್. ಮಧುಸೂದನ್, ಪ್ರಧಾನ ಕಾರ್ಯದರ್ಶಿ ಎಂ. ಮಧುಸೂದನ್, ಪ್ರಮುಖರಾದ ಪ್ರಭಾಕರ್, ಶ್ರೀನಿವಾಸಾಚಾರ್ಯ, ಲಕ್ಷ್ಮೀನಾರಾಯಣ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಎ.ಆರ್. ಸಪ್ತಗಿರಿ ಗೌಡ, ವಿಶ್ವಕರ್ಮ ಸೇವಾ ಸಮಿತಿ ಹಾಗೂ ಗೋಲ್ಡ್ ಅಂಡ್ ಸಿಲ್ವರ್ ವರ್ಕರ್ಸ್ ಯೂನಿಯನ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಿ. ಜಯಶ್ರೀಗೆ ಅಪಮಾನ; ಅಧಿಕಾರಿ ಅಮಾನತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದೆ ಬಿ.ಜಯಶ್ರೀ ಅವರು ರಂಗಚಟುವಟಿಕೆಗಳಿಗಾಗಿ ಐದು ಗುಂಟೆ ಜಮೀನು ದಾನ ಮಾಡಲು ಮುಂದಾಗಿದ್ದಾರೆ. ಅದಕ್ಕಾಗಿ ಮೂರು ಬಾರಿ ಅರ್ಜಿ ನೀಡಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಪಂದಿಸಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

'ಸರ್ವೆ ಕಚೇರಿಗೆ ಹೋಗಿ ವಿಚಾರಿಸಿದಾಗ ನಿಮ್ಮ ಕೆಲಸಕ್ಕಿಂತ ನಮ್ಮ ಮೇಲಧಿಕಾರಿಯ ಕೆಲಸ ಮುಖ್ಯ ಎನ್ನುತ್ತಾರೆ. ಅಧಿಕಾರಿ ಉಡಾಫೆಯಿಂದ ಮಾತಾಡುತ್ತಾರೆ' ಎಂದು ಜಯಶ್ರೀ ಬೇಸರ ವ್ಯಕ್ತಪಡಿಸಿದ್ದಾರೆ. ವಿಷಯ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ದಾನ ಮಾಡುವ ಜಮೀನಿನ ಸರ್ವೆಗೂ ಲಂಚ ನಿರೀಕ್ಷೆ ಮಾಡುತ್ತಾರೆ. ಅವರನ್ನು ಅಲೆಸುತ್ತಿದ್ದಾರೆ. ಅಧಿಕಾರಿಯನ್ನು ಕೂಡಲೇ ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

> **ಜಯಶ್ರೀ ಅವರ ಜಮೀನಿನ ಸರ್ವೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿ ಕರ್ತವ್ಯಚ್ಯುತಿ ಮಾಡಿದ್ದರೆ, ತಪ್ಪು ಎಸಗಿದ ಅಧಿಕಾರಿ ಮೇಲೆ ನಿಸ್ಸಂದೇಹವಾಗಿ ಕ್ರಮ ಕೈಗೊಳ್ಳಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಮನೆ ಬಾಗಿಲಿಗೆ ಸರ್ಕಾರ' ಎಂದು ಪ್ರಚಾರ ಮಾಡುತ್ತಾರೆ. ರಾಜ್ಯಸಭೆಯ ಮಾಜಿ ಸದಸ್ಯೆಯನ್ನೇ ಕಚೇರಿಗೆ ಅಲೆದಾಡಿಸುತ್ತಾರೆ. ಇನ್ನು ಜನಸಾಮಾನ್ಯರ ಸ್ಥಿತಿ ಹೇಗಿದೆ ಎಂದು ಊಹಿಸಲೂ ಆಗದು. ಇಂತಹ ಕಳ್ಳ ಅಧಿಕಾರಿಯ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎನ್‌ಎಸ್‌ಡಿ ರೆಪರ್ಟರಿ 19ಕ್ಕೆ ಉದ್ಘಾಟನೆ

ಭಾರತ ರಂಗ ಉತ್ಸವದಲ್ಲಿ ನಾಟಕ ಪ್ರದರ್ಶನ, ಸಂವಾದ, ಕವಿಗಳ ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ನಾಟಕ ಶಾಲೆಯು(ಎನ್‌ಎಸ್‌ಡಿ) ನಗರದ ಮಲ್ಲತ್ತಹಳ್ಳಿ ಕಲಾ ಗ್ರಾಮದಲ್ಲಿ ನಿರ್ಮಿಸಿರುವ ರೆಪರ್ಟರಿಯು ಫೆಬ್ರುವರಿ 19ರಿಂದ ಆರಂಭಗೊಳ್ಳಲಿದೆ' ಎಂದು ಎನ್‌ಎಸ್‌ಡಿ ನಿರ್ದೇಶಕ ಚಿತ್ತರಂಜನ್ ತ್ರಿಪಾಠಿ ತಿಳಿಸಿದರು.

ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ರಂಗಶಾಲೆಯೊಂದಿಗೆ ಮಲ್ಲತ್ತಹಳ್ಳಿ ಕಲಾ ಗ್ರಾಮದಲ್ಲಿ ಹಮ್ಮಿಕೊಂಡಿರುವ ಭಾರತ ರಂಗ ಉತ್ಸವ ಹಾಗೂ ರಂಗ ಪರಿಷೆಯಲ್ಲಿ ಸೋಮವಾರ ಪಾಲ್ಗೊಂಡು ಅವರು ಮಾತನಾಡಿದರು.

'ಎನ್‌ಎಸ್‌ಡಿ ಎಲ್ಲಾ ರಾಜ್ಯಗಳಲ್ಲೂ ರಂಗೋತ್ಸವ ನಡೆಸಲು ನೆರವು ನೀಡುತ್ತಿದೆ. ಕರ್ನಾಟಕದಲ್ಲೂ ರೆಪರ್ಟರಿ ಆರಂಭಿಸುವ ಬೇಡಿಕೆಗೆ ಸ್ಪಂದಿಸಿದ್ದೇವೆ. ಈಗಾಗಲೇ ₹4 ಕೋಟಿ ಅನುದಾನ ಒದಗಿಸಿದ್ದು, 200 ಆಸನಗಳ ಸಾಮರ್ಥ್ಯದ ಸಭಾಂಗಣದೊಂದಿಗೆ ರೆಪರ್ಟರಿ ಶುರುವಾಗುತ್ತಿದೆ' ಎಂದು ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಮಾತನಾಡಿ, 'ರಂಗ ಉತ್ಸವಕ್ಕೆ ಎನ್‌ಎಸ್‌ಡಿ ತಮಿಳುನಾಡಿಗೆ ನೆರವು ನೀಡುತ್ತಿದೆ. ನಮಗೂ ಅವಕಾಶ ಮಾಡಿಕೊಡಿ ಎಂದಾಗ 16 ನಾಟಕಗಳನ್ನು ಹಿಂದಿನ ವರ್ಷದ ಉತ್ಸವಕ್ಕೆ ನೀಡಿತ್ತು. ಈ ವರ್ಷವೂ ಸಹಕಾರ ನೀಡಿದೆ. ರೆಪರ್ಟರಿ ಆರಂಭಗೊಳ್ಳುವುದರಿಂದ ಸಹಕಾರಿ ಆಗಲಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಎಲ್ಲಾ ರಾಜ್ಯಗಳಲ್ಲೂ ರಂಗೋತ್ಸವ ನಡೆಸಲು ನೆರವು
- ಕರ್ನಾಟಕದಲ್ಲೂ ರೆಪರ್ಟರಿ ಆರಂಭಿಸುವ ಬೇಡಿಕೆಗೆ ಸ್ಪಂದನೆ
- ₹4 ಕೋಟಿ ಅನುದಾನದಲ್ಲಿ 200 ಆಸನಗಳ ಸಭಾಂಗಣ ರೆಪರ್ಟರಿ

ಕಲಾವಿದೆ ಗಿರಿಜಾ ಲೋಕೇಶ್ ಅವರಿಗೆ ಗೌರವ ಸಲ್ಲಿಸಲಾಯಿತು. ಮುಖ್ಯಮಂತ್ರಿ ಚಂದ್ರು, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ, ಅಕಾಡೆಮಿ ರಿಜಿಸ್ಟ್ರಾರ್ ನೀಲಮ್ಮ ಉಪಸ್ಥಿತರಿದ್ದರು.

ನಂತರ 'ಮುಖ್ಯಮಂತ್ರಿ', 'ಸಾಲು ಮರಗಳ ತಾಯಿ', 'ಧನ್ವಂತರಿ ಚಿಕಿತ್ಸೆ' ನಾಟಕ ಪ್ರದರ್ಶನಗೊಂಡವು. ಎರಡನೇ ದಿನ ನಾಟಕೋತ್ಸವಕ್ಕೆ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಸಾಹಿತ್ಯ ಎಚ್ಚರಗೊಳಿಸಲಿ: ಇದಕ್ಕೂ ಮೊದಲು ನಡೆದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಲೇಖಕ ಜಿ.ಎನ್.ಮೋಹನ್ ಮಾತನಾಡಿ, 'ಪುಸ್ತಕಗಳನ್ನು ದ್ವೇಷಿಸುವ ನಾಝಿ ಕಾಲವಿತ್ತು. ಈಗಲೂ ಪುಸ್ತಕ ದ್ವೇಷವನ್ನು ಹರಡಲಾಗುತ್ತಿದೆ. ಪ್ರಶ್ನೆ ಮಾಡುವ ಮನಸ್ಸನ್ನು ಮುರುಟಿ ಹಾಕುವ ಯತ್ನ ನಡೆಯುತ್ತಿದೆ. ರಂಗಭೂಮಿ ಹಾಗೂ ಸಾಹಿತ್ಯ ಸದಾ ಪ್ರಶ್ನೆ ಮಾಡಲು ಪ್ರೇರೇಪಿಸುತ್ತವೆ. ಸ್ಥಗಿತಗೊಂಡ ಸಮಾಜವನ್ನು ಎಚ್ಚರಗೊಳಿಸುವ ಕೆಲಸ ನಿರಂತರವಾಗಿರಲಿ' ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎಲ್.ಎನ್. ಮುಕುಂದರಾಜ್, ಕಾವ್ಯ ಪರಿಷೆ ಮುಖ್ಯಸ್ಥರಾದ ಮಲ್ಲಿಕಾರ್ಜುನ ಮಹಾಮನೆ, ಕವಿ ಬಿ.ಎನ್. ಮಲ್ಲೇಶ್, ಎಚ್.ಆರ್.ಸ್ವಾಮಿ, ಅಕಾಡೆಮಿ ಸದಸ್ಯರಾದ ಮಮತಾ ಅರಸೀಕೆರೆ, ರವಿಕುಮಾರ್ ಭಾಗಿ ಉಪಸ್ಥಿತರಿದ್ದರು.

ರಂಗ ಸಂವಾದ: ನಾಟಕೋತ್ಸವದ ಅಂಗವಾಗಿ ರಂಗ ಸಂವಾದ ಹಮ್ಮಿಕೊಂಡಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್. ಜಯಕರ ಚಾಲನೆ ನೀಡಿದರು.



ಕರ್ನಾಟಕ ನಾಟಕ ಅಕಾಡೆಮಿ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ ಆಯೋಜಿಸಿರುವ ಭಾರತ ರಂಗ ಉತ್ಸವದಲ್ಲಿ ಕಲಾವಿದೆ ಗಿರಿಜಾ ಲೋಕೇಶ್ ಅವರನ್ನು ಗೌರವಿಸಲಾಯಿತು. ಬಿ.ನೀಲಮ್ಮ, ರವೀಂದ್ರನಾಥ್ ಸಿರಿವರ, ಜಿ.ಎನ್. ಮೋಹನ್, ಚಿತ್ತರಂಜನ್ ತ್ರಿಪಾಠಿ, ಕೆ.ವಿ.ನಾಗರಾಜಮೂರ್ತಿ, ಕಾ.ತ.ಚಿಕ್ಕಣ್ಣ, ಮುಖ್ಯಮಂತ್ರಿ ಚಂದ್ರು, ವೀಣಾಶರ್ಮ ಭೂಸನೂರಮಠ ಉಪಸ್ಥಿತರಿದ್ದರು

ಕವಿಗೋಷ್ಠಿಯಲ್ಲಿ ಬಜೆಟ್ ನೋಟ!

ಭಾರತ ರಂಗ ಉತ್ಸವದಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿಯಲ್ಲಿ ಕೇಂದ್ರ ಬಜೆಟ್ ಅನ್ನು ಸಾಹಿತಿಯೊಬ್ಬರು ಕಾವ್ಯ ಸಾಲುಗಳಲ್ಲಿ ವಿಶ್ಲೇಷಣೆ ಮಾಡಿದರು.

ಸಂಬಂಧ ಎನ್ನುವ ಚುಟುಕುಗಳನ್ನು ವಾಚಿಸಿದ ಕವಿ ಟಿ.ಗೋವಿಂದರಾಜು ಅವರು, 'ಬಜೆಟ್‌ಗೂ ಸೀರೆಗೂ ಏನು ಸಂಬಂಧ. ಬಜೆಟ್‌ಗೆ ಒಂಬತ್ತು ಬಣ್ಣದ ಸ್ಯಾರಿ. ಬಜೆಟ್ ಎಂದರೆ ಭಾರೀ ಉಂಟು. ಹಲ್ವದಿಂದ ಬಜೆಟ್ ಆರಂಭಗೊಂಡರೂ ಜನರನ್ನು ಕೇಳಿ ಮಂಡನೆಯಂತೂ ಮಾಡೋಲ್ಲ' ಎಂದು ಪ್ರಸ್ತಾಪಿಸಿದರು.

ಬ್ಯಾಡರಹಳ್ಳಿ ಶಿವರಾಜು ಅವರ ಸಾವುಂಟೆ ಗಾಂಧಿಗೆ, ಪುನೀತ್ ತಥಾಗತ್ ಅವರ ಮದ್ದಿನ ಪುಡಿ , ಪ್ರವೀಣ್ ಮೈಸೂರು ಅವರ ಯುದ್ಧ, ಯುದ್ಧ ಎನ್ನುವ ಕವನಗಳು ಪ್ರಸ್ತುತ ಸನ್ನಿವೇಶದಿಂದ ಕೂಡಿದ್ದವು. ರುಕ್ಮಿಣಿ ನಾಯರ್ ಅಸಮಾನತೆ ಕುರಿತು, ಪ್ರಕೃತಿ ಶೆಟ್ಟಿ ಹೆಣ್ಣು ಭ್ರೂಣ, ಕಸ್ತೂರಿ ಪತ್ತಾರ ಅವರು ಬದುಕು, ಚಂದ್ರ ಮೊಗೆರೆ ಟೂರ್ ಪ್ರಾಂತದಲ್ಲಿ ನವೆಂಬರ್ ತಿಂಗಳು, ವಿಜಯಲಕ್ಷ್ಮಿ ನನ್ನೊಳಗೆ ನೀನು ಹಾಗೂ ಪದ್ಮಾ ಚಿನ್ಮಯಿ ರಸಪುರುಷ ಕವನ ವಾಚಿಸಿದರು.

'ಗಾಂಧೀಜಿ ದೃಷ್ಟಿಕೋನ ಹೊಂದಿರುವ ಭಾಗ್ಯ ಯೋಜನೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ನೀಡುತ್ತಿರುವ ಭಾಗ್ಯಗಳನ್ನು ಮಹಿಳಾ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಅವರು ಅಭಿಪ್ರಾಯಪಟ್ಟರು.

ಬಹುರೂಪಿ ಪ್ರಕಾಶನ ಈಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಚೀ.ಜ.ರಾಜೀವ ಅವರ 'ಪ್ರಿಯ ಗಾಂಧಿ' ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಭಾಗ್ಯಗಳನ್ನು ಕೊಡುಗೆಯಾಗಿ ನೋಡದೆ ಅದನ್ನು ಪರ್ಯಾಯ ದೃಷ್ಟಿಕೋನದಿಂದ ನೋಡಬೇಕಾದ ಅಗತ್ಯವಿದೆ. ಮಹಿಳಾ ಸಬಲೀಕರಣಕ್ಕೆ ಅದು ನೀಡಿರುವ ಕೊಡುಗೆ ದೊಡ್ಡದು. ಇವು ಗಾಂಧೀಜಿ ಅವರ ದೃಷ್ಟಿಕೋನವನ್ನು ಹೊಂದಿವೆ' ಎಂದರು.



ಸುನಂದಮ್ಮ

ಪತ್ರಕರ್ತೆ ಆರ್. ಪೂರ್ಣಿಮಾ ಮಾತನಾಡಿ, 'ಗಾಂಧೀಜಿ ಜಾಗತಿಕವಾಗಿ ಹರಡಿರುವ ರೀತಿ ನಮ್ಮೆಲ್ಲರಿಗೂ ಪಾಠ ಆಗಬೇಕು. ನಿಜ ಅರ್ಥದಲ್ಲಿ ಅವರೇ ವಿಶ್ವಗುರು. 'ಪ್ರಿಯ ಗಾಂಧಿ' ಕೃತಿಯಲ್ಲಿ ನಾವು ಮನಗಾಣಬೇಕಾದ, ಚರ್ಚಿಸಬೇಕಾದ ಹಲವು ವಿಷಯಗಳು ಇವೆ' ಎಂದರು.

ಪತ್ರಕರ್ತ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿ, 'ಗಾಂಧಿ ಪೀಠಗಳು, ಗಾಂಧಿ ಅಧ್ಯಯನ ಕೇಂದ್ರಗಳು ಸೊರಗುತ್ತಿವೆ. ಇವುಗಳನ್ನು ಸಶಕ್ತಗೊಳಿಸಿದರೆ ಗಾಂಧಿ ಚಿಂತನೆಗಳನ್ನು ಹರಡಲು ಸಹಕಾರಿ ಆಗಲಿದೆ' ಎಂದು ತಿಳಿಸಿದರು.

ಪತ್ರಕರ್ತ ಜಿ.ಎನ್.ಮೋಹನ್, ಬಹುರೂಪಿಯ ಶ್ರೀಜಾ ವಿ.ಎನ್. ಇದ್ದರು.

'ಸರ್ಕಾರ ಕ್ರಮ ಕೈಗೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರಾಗಿದ್ದ ಮಹೇಶ ಜೋಶಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿ ನೇಮಿಸಿರುವ ಸರ್ಕಾರ, ತನಿಖೆಯನ್ನು ಶೀಘ್ರ ಪೂರ್ಣಗೊಳಿಸಿ ಕಸಾಪ ಚಟುವಟಿಕೆಗಳು ರಾಜ್ಯದಾದ್ಯಂತ ನಡೆಯಲು ಕ್ರಮ ವಹಿಸಬೇಕು' ಎಂದು ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

'ಆಡಳಿತಾಧಿಕಾರಿ ನೇತೃತ್ವದಲ್ಲಿ ಆದರೂ ರಾಜ್ಯದಾದ್ಯಂತ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕಸಾಪ ಚಟುವಟಿಕೆಗಳನ್ನು ನಡೆಸುವುದು ಅಗತ್ಯವಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು ನಡೆಯುತ್ತಿಲ್ಲ. ಪರಿಷತ್ತಿನ ಮೇಲೆ ವಿಶ್ವಾಸವಿಟ್ಟು ಸ್ಥಾಪಿತವಾಗಿದ್ದ ದತ್ತಿ ಪ್ರಶಸ್ತಿಗಳು ಪ್ರದಾನವಾಗುತ್ತಿಲ್ಲ' ಎಂದು ಕಸಾಪ ಮಾಜಿ ಗೌರವ ಕಾರ್ಯದರ್ಶಿಯೂ ಆಗಿರುವ ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

'ಬಳ್ಳಾರಿಯಲ್ಲಿ ನಡೆಯಬೇಕಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಸ್ಥಗಿತಗೊಂಡಿದೆ. ಒಟ್ಟಾರೆ ಕನ್ನಡ ಸಾಹಿತ್ಯ ಪರಿಷತ್ತು ಹೆಸರಿಗೆ ಮಾತ್ರ ಎಂಬಂತಿದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಈ ಬಗ್ಗೆ ಕ್ರಮಕೈಗೊಳ್ಳಬೇಕು' ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಸದಸ್ಯತ್ವ ರದ್ದು ಮಾಡಿ: 'ಪ್ರಕರಣ ನ್ಯಾಯಾಲಯದಲ್ಲಿ ಇರುವಾಗ ಕಸಾಪ ಕಚೇರಿಯಲ್ಲಿ ನಾಟಕೀಯ ಪ್ರಸಂಗ ನಡೆಸಿದ ಮಹೇಶ ಜೋಶಿ ಅವರ ನಡೆ ಖಂಡನೀಯ. ಅಧಿಕಾರ ಕೇಳುವ ನೆಪದಲ್ಲಿ ಪ್ರತಿಭಟನೆ ಮಾಡುವ, ಬೆದರಿಕೆ ಹಾಕುವ ಅವರ ನಡೆ ಸಾಹಿತ್ಯ ಪರಿಷತ್ತಿನ ಚರಿತ್ರೆಗೆ ಕಳಂಕ ತಂದಿದೆ. ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು. ಅವರ ಸದಸ್ಯತ್ವವನ್ನೂ ರದ್ದುಪಡಿಸಿ, ಸಾಹಿತ್ಯ ಪರಿಷತ್ತಿನ ಗೌರವ ಕಾಪಾಡಬೇಕು' ಎಂದು ಕಸಾಪ ನಿಕಟಪೂರ್ವ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ಆಗ್ರಹಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಬಾಣಸವಾಡಿಯ 66 ಕೆ.ವಿ. ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಫೆ. 3ರಂದು (ಮಂಗಳವಾರ) ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಚ್‌ಆರ್‌ಬಿಆರ್ ಲೇಔಟ್ 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, ಸರ್ವೀಸ್ ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ಸಿಎಂಆರ್ ರಸ್ತೆ, ಬಾಬುಸಾಪಾಳ್ಯ, ಬಾಲಚಂದ್ರ ಲೇಔಟ್, ಫ್ಲವರ್ ಗಾರ್ಡನ್, ಎಂ.ಎಂ. ಗಾರ್ಡನ್, ಅರ್ಕಾವತಿ ಲೇಔಟ್, ಅಂಜನಾದ್ರಿ ಲೇಔಟ್ ಎನ್‌ಕ್ಲೇವ್, ದಿವ್ಯ ಉನ್ನತಿ ಲೇಔಟ್, ವಿಜಯೇಂದ್ರ ಗಾರ್ಡನ್, ಮಲ್ಲಪ್ಪ ಲೇಔಟ್, ಬಾಲಾಜಿ ಲೇಔಟ್, ಜಿಎನ್‌ಆರ್ ಗಾರ್ಡನ್, ಸುಬ್ಬಯ್ಯನಪಾಳ್ಯ, ಹೊರಮಾವು, ಮುನಿರೆಡ್ಡಿ ಲೇಔಟ್, ವಿಜಯ ಬ್ಯಾಂಕ್ ಕಾಲೊನಿ, ನಿಸರ್ಗ ಕಾಲೊನಿ, ನಂದನಂ ಕಾಲೊನಿ, ಅಮರ್ ಏಜೆನ್ಸಿ ಲೇಔಟ್, ಪಿ ಆ್ಯಂಡ್ ಟಿ ಲೇಔಟ್, ಪಪ್ಪಯ್ಯ ಲೇಔಟ್, ಕೊಕೊನಟ್ ಗ್ರೂವ್ ಲೇಔಟ್, ಆಶೀರ್ವಾದ್ ಕಾಲೊನಿ, ಶಕ್ತಿ ನಗರ, ಹೆಣ್ಣೂರು ಗ್ರಾಮ, ಭೈರವೇಶ್ವರ ಲೇಔಟ್, ಚಿಕ್ಕಣ್ಣ ಲೇಔಟ್, ಸಿಎಂಆರ್ ಲೇಔಟ್, ಕೆಂಚಪ್ಪ ಗಾರ್ಡನ್, ಬೃಂದಾವನ ಲೇಔಟ್, ಹೊಯ್ಸಳ ನಗರ, ಬೃಂದಾವನ ಅವೆನ್ಯೂ ಹೆರಿಟೇಜ್, ವಿನಾಯಕ ಲೇಔಟ್, ಜಯಂತಿ ಗ್ರಾಮ, ಓಎಂಬಿಆರ್ ಲೇಔಟ್, ಕಸ್ತೂರಿ ನಗರ, ರಾಮಯ್ಯ ಲೇಔಟ್, ದೊಡ್ಡ ಬಾಣಸವಾಡಿ, ರಾಮಮೂರ್ತಿ ನಗರ ಮುಖ್ಯರಸ್ತೆ, ಬಿ. ಚನ್ನಸಂದ್ರ, ನಂಜಪ್ಪ ಗಾರ್ಡನ್, ದೊಡ್ಡಯ್ಯ ಲೇಔಟ್, ಬ್ಯಾಂಕ್ ಅವೆನ್ಯೂ, ಆರ್.ಎಸ್. ಪಾಳ್ಯ, ಎಡಿಎಂಸಿ ಮಿಲಿಟರಿ ಗೇಟ್, ಮುನಿಸ್ವಾಮಿ ರಸ್ತೆ, ಕುಳ್ಳಪ್ಪ ವೃತ್ತ, ರಾಜ್‌ಕುಮಾರ್ ಉದ್ಯಾನ, ಮೇಘನಾ ಪಾಳ್ಯ, ಮುನಿಸ್ವಾಮಪ್ಪ ಲೇಔಟ್, ಬಂಜಾರ ಲೇಔಟ್, ವಿಜಯಲಕ್ಷ್ಮೀ ಲೇಔಟ್, ಸಂಕಲ್ಪ ಲೇಔಟ್, ಗ್ರೀನ್ ಗಾರ್ಡನ್ ಫೇಸ್–2, ಸಮೃದ್ಧಿ ಲೇಔಟ್, ಬೆಥೆಲ್ ಲೇಔಟ್, ಎಸ್‌ಎಲ್‌ಎಸ್ ಸ್ಪೆನ್ಸರ್ ಅಪಾರ್ಟ್‌ಮೆಂಟ್ಸ್, ಡಿಎಸ್-ಮ್ಯಾಕ್ಸ್ ಅಪಾರ್ಟ್‌ಮೆಂಟ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಹೊಸ ಪಡಿತರ ಚೀಟಿ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೂರು–ನಾಲ್ಕು ವರ್ಷಗಳಿಂದ ಹೊಸದಾಗಿ ಪಡಿತರ ಚೀಟಿಗಳನ್ನು ನೀಡುತ್ತಿಲ್ಲ. ಇದರಿಂದಾಗಿ ಬಡವರು ಪಡಿತರ ಚೀಟಿ ಇಲ್ಲದೆ ಕಂಗಾಲಾಗಿದ್ದಾರೆ. ಹೊಸ ಪಡಿತರ ಚೀಟಿಗಳನ್ನು ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಪವನ್ ಕುಮಾರ್ ಶಿರ್ವ ಅವರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಅಂಗವಿಕಲರು, ದುಡಿಯಲು ಸಾಮರ್ಥ್ಯ ಇಲ್ಲದವರು, ಅನಾರೋಗ್ಯ ಪೀಡಿತರಿಗೆ ಪಡಿತರ ಚೀಟಿ ಅವಶ್ಯಕವಾಗಿದೆ. ಆಹಾರ ಸಾಮಗ್ರಿ ಪಡೆಯಲು ಮಾತ್ರವಲ್ಲದೇ ಅಯುಷ್ಮಾನ್ ಭಾರತ್ ಸೇರಿದಂತೆ ಸರ್ಕಾರದ ಯೋಜನೆಗಳ ಸೌಲಭ್ಯ ಪಡೆಯಲು ಪಡಿತರ ಚೀಟಿ ಬೇಕಾಗಿದೆ. ಮುಖ್ಯಮಂತ್ರಿ, ಆಹಾರ ಸಚಿವರಿಗೆ ಪತ್ರ ಬರೆದಿದ್ದರೂ ಯಾವುದೇ ಕ್ರಮ ಆಗಿಲ್ಲ. ಹೀಗಾಗಿ ಹೊಸ ಪಡಿತರ ಚೀಟಿಗಳನ್ನು ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಶ್ರೀಗಂಧ ನೀತಿಗೆ ಸ್ವಾಗತ

ಬೆಂಗಳೂರು: ಕೇಂದ್ರ ಬಜೆಟ್‌ನಲ್ಲಿ ಶ್ರೀಗಂಧ ಕೃಷಿ ನೀತಿ ಘೋಷಣೆ ಮಾಡಿರುವುದನ್ನು ಅಖಿಲ ಭಾರತ ಶ್ರೀಗಂಧ ಬೆಳೆಗಾರರು ಹಾಗೂ ಮರ ಸಂಸ್ಕೃತಿ ಸಂಘಟನೆ (ಎಐಎಸ್‌ಜಿಟಿಎ) ಸ್ವಾಗತಿಸಿದೆ.



ಅಮರ ನಾರಾಯಣ

ಭಾರತದಲ್ಲಿ ಶ್ರೀಗಂಧ ಹಾಗೂ ವೃಕ್ಷ ಕೃಷಿಯ ಆರ್ಥಿಕ, ಪರಿಸರ ಹಾಗೂ ಜೀವನೋಪಾಯ ಸಾಮರ್ಥ್ಯವನ್ನು ಉತ್ತೇಜಿಸುವ ಕ್ರಮ ಇದಾಗಿದೆ. ಸುಸ್ಥಿರ ಕೃಷಿಯೊಂದಿಗೆ ಶ್ರೀಗಂಧದ ಮರ ಬೆಳೆಯಲು ಹಾಗೂ ಗ್ರಾಮೀಣ ಆರ್ಥಿಕತೆ ಬಲಪಡಿಸಲು ಸಹಕಾರಿಯಾಗಲಿದೆ ಎಂದು ಸಂಘಟನೆ ಅಧ್ಯಕ್ಷ ಕೆ. ಅಮರನಾರಾಯಣ ತಿಳಿಸಿದ್ದಾರೆ.

ಶ್ರೀಗಂಧ ಕ್ಷೇತ್ರದಲ್ಲಿ ಇರುವ ನಿಯಂತ್ರಣ ಹಾಗೂ ಮಾರುಕಟ್ಟೆ ಸಂಬಂಧಿತ ಸವಾಲುಗಳನ್ನು ಸರಳೀಕರಿಸಿ ಪರಿಸರ ಸಂರಕ್ಷಣೆ, ಕಾರ್ಬನ್ ಸಂಗ್ರಹಣೆ, ರೈತರ ದೀರ್ಘಕಾಲೀನ ಭದ್ರತೆಗೂ ಕೊಡುಗೆ ನೀಡಲಿದೆ ಎಂದು ತಿಳಿಸಿದ್ದಾರೆ.

'ಶ್ರೀಗಂಧ ನೀತಿಯನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲು ನಾವೂ ಸಹಕಾರ ನೀಡುತ್ತೇವೆ. ಭಾರತವು ಶ್ರೀಗಂಧ ಉತ್ಪಾದನೆಯಲ್ಲಿ ಜಾಗತಿಕ ನಾಯಕತ್ವ ಸಾಧಿಸುವಂತೆ ನೀತಿ ನಿರ್ಧಾರಗಳನ್ನು ನಿರಂತರ ಸಂವಾದದ ಮೂಲಕ ಜಾರಿಗೊಳಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಪರಿಸರ ಕಾಳಜಿಯ 'ಥೀಮ್ ಪಾರ್ಕ್'

ಎಚ್‌ಬಿಆರ್ ಲೇಔಟ್: ಕೆಪಿಟಿಸಿಎಲ್‌ನಿಂದ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಹಲವು ಕಾರ್ಯಕ್ರಮ

• ಎ.ಎಂ.ಸುರೇಶ

ಬ್ರ್ಯಾಂಡ್ ಬೆಂಗಳೂರು

ಬೆಂಗಳೂರು: ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಚ್‌ಬಿಆರ್ ಲೇಔಟ್‌ನಲ್ಲಿ 'ಥೀಮ್ ಪಾರ್ಕ್' ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಮುಂದಿನ ತಿಂಗಳ ಅಂತ್ಯದ ವೇಳೆಗೆ ಲೋಕಾರ್ಪಣೆಯಾಗಲಿದೆ.

ವಿದ್ಯುತ್ ಪ್ರಸರಣದ ಜವಾಬ್ದಾರಿ ಹೊತ್ತಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) ತನ್ನ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಹಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಅದರ ಭಾಗವಾಗಿ 'ಥೀಮ್ ಪಾರ್ಕ್' ನಿರ್ಮಿಸುವ ಮೂಲಕ ಪರಿಸರ ಸಂರಕ್ಷಣೆಯ ಬಗ್ಗೆಯೂ ಕಾಳಜಿ ವಹಿಸಿದೆ.

ಕೆಪಿಟಿಸಿಎಲ್‌ಗೆ ಸೇರಿದ ಈ ಜಾಗದಲ್ಲಿ ಹಲವು ವರ್ಷಗಳಿಂದ ತ್ಯಾಜ್ಯ, ಅನುಪಯುಕ್ತ ವಸ್ತುಗಳನ್ನು ಹಾಕಲಾಗುತ್ತಿತ್ತು. ಹಾವು, ಚೇಳು ಇತ್ಯಾದಿ ಸರೀಸೃಪಗಳ ಆವಾಸ ಸ್ಥಾನವಾಗಿತ್ತು. ಅಲ್ಲದೆ ಅನೈತಿಕ ಚಟುವಟಿಕೆಗಳ ತಾಣವಾಗಿದ್ದ ಕಾರಣ, ಈ ಭಾಗದ ಜನರು ಮುಕ್ತವಾಗಿ ಓಡಾಡಲು ಭಯಪಡುವಂಥ ವಾತಾವರಣ ಇತ್ತು. ನಿರಂತರ ಪ್ರಯತ್ನದಿಂದಾಗಿ ಇದಕ್ಕೆಲ್ಲ ಕಡಿವಾಣ ಬಿದ್ದಿದ್ದು, ಈಗ ಸುಂದರವಾದ ಉದ್ಯಾನ ಮೈದಳೆಯುತ್ತಿದೆ.

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ಕ್ಷೇತ್ರದಲ್ಲೇ 'ಥೀಮ್ ಪಾರ್ಕ್' ನಿರ್ಮಾಣವಾಗುತ್ತಿದೆ. ಸಿವಿಲ್ ಕಾಮಗಾರಿಗಳು ಈ ತಿಂಗಳ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದ್ದು, ಮುಂದಿನ ತಿಂಗಳು ಉದ್ಯಾನದ ಸುತ್ತಲಿನ ಸುಮಾರು 1,500 ಚದರಡಿ ಜಾಗದಲ್ಲಿ ಸಸಿಗಳನ್ನು ನೆಡಲಾಗುತ್ತದೆ.

₹4.39 ಕೋಟಿ ವೆಚ್ಚದಲ್ಲಿ ಥೀಮ್ ಪಾರ್ಕ್ ನಿರ್ಮಾಣ ಮಾಡುತ್ತಿದ್ದು, ಮಕ್ಕಳಿಗೆ ಇಷ್ಟವಾಗುವ ಉಯ್ಯಾಲೆ, ಜಾರುಬಂಡಿ ಸೇರಿದಂತೆ ವಿವಿಧ ಆಟಗಳಿಗೆ ಸಂಬಂಧಿಸಿದ ಉಪಕರಣಗಳು, ಜಿಮ್‌ಗೆ ಅಗತ್ಯವಿರುವ ಉಪಕರಣಗಳನ್ನು ಈಗಾಗಲೇ ಅಳವಡಿಸಲಾಗಿದೆ.

ಆ್ಯಂಪಿ ಥಿಯೇಟರ್‌ನಲ್ಲಿ 100ಕ್ಕೂ ಅಧಿಕ ಜನರಿಗೆ ಕುಳಿತುಕೊಳ್ಳಲು ಅವಕಾಶ ಇರಲಿದೆ. ಎಚ್‌ಬಿಆರ್ ಲೇಔಟ್‌ನ ನಾಗರಿಕರು ಸಣ್ಣಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ಹುಟ್ಟುಹಬ್ಬ ಆಚರಿಸಿಕೊಳ್ಳಲು ಅನುಕೂಲವಾಗುವಂತೆ ತ್ರಿಡಿ ದೀಪಾಲಂಕಾರದ ವ್ಯವಸ್ಥೆ ಮಾಡಲಾಗುತ್ತದೆ.

ಎಚ್‌ಬಿಆರ್ ಲೇಔಟ್‌ನ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಿರ್ಮಿಸುತ್ತಿರುವ ಈ ಪಾರ್ಕ್‌ನಲ್ಲಿ ತ್ರಿಭುಜಾಕಾರದ ಸುಮಾರು 700 ಮೀಟರ್ ನಡಿಗೆ ಪಥ ಇದೆ. ಮಕ್ಕಳಿಗೆ ಆಟದ ಮೈದಾನ, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಜಿಮ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಹಸಿರು ಕುರಿತ ಕಾಳಜಿಯೊಂದಿಗೆ ನಿರ್ಮಾಣವಾಗುತ್ತಿರುವ ಥೀಮ್ ಪಾರ್ಕ್ ಮನರಂಜನೆಗೆ ಅಷ್ಟೇ ಅಲ್ಲದೆ ನೈಸರ್ಗಿಕ ಸಂರಕ್ಷಣೆ, ಆರೋಗ್ಯಕರ ಜೀವನಶೈಲಿ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗೆ ವೇದಿಕೆಯಾಗಲಿದೆ. ಪಾರ್ಕ್‌ನ ಸುತ್ತ ಗಿಡಗಳನ್ನು ನೆಟ್ಟು ಹಸಿರೀಕರಣಗೊಳಿಸಲಾಗುವುದು. ಉದ್ಯಾನಕ್ಕೆ ಬರುವ ನಾಗರಿಕರು ಆಹ್ಲಾದಕರವಾದ ವಾತಾವರಣದಲ್ಲಿ ವಿಹರಿಸಬಹುದು ಎಂದು ಕೆಪಿಟಿಸಿಎಲ್‌ನ ಅಧಿಕಾರಿಗಳು, ಗುತ್ತಿಗೆದಾರರು ತಿಳಿಸಿದರು.

ಉದ್ಯಾನದಲ್ಲಿ ವಾಯುವಿಹಾರ ಮಾಡಿದ ಬಳಿಕ ವಿಶ್ರಾಂತಿ ಪಡೆಯಲು ಪ್ಯಾರಾಗೋಲಾ ನಿರ್ಮಿಸಲಾಗುತ್ತಿದೆ. ಅಲ್ಲದೆ ಕುಳಿತುಕೊಳ್ಳಲು ಕಲ್ಲಿನ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೆ ಪಾರ್ಕ್‌ನಲ್ಲಿ ಶೌಚಾಲಯ ವ್ಯವಸ್ಥೆ, ನಂದಿನಿ ಮಿಲ್ಕ್ ಬೂತ್ ಮತ್ತು ಹಾಪ್‌ಕಾಮ್ಸ್ ಮಳಿಗೆ ಕೂಡ ಇರಲಿದೆ. ಉದ್ಯಾನಕ್ಕೆ ಬರುವ ನಾಗರಿಕರಿಗೆ ಹಾಲು, ತರಕಾರಿ ಇತ್ಯಾದಿ ವಸ್ತುಗಳು ಇಲ್ಲೇ ಲಭ್ಯವಾಗಲಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 1990ರ ದಶಕದಲ್ಲಿ ಎಚ್‌ಬಿಆರ್ ಬಡಾವಣೆಯನ್ನು ನಿರ್ಮಿಸಿದೆ. ಆದರೆ, ಇಲ್ಲಿನ ಜನರಿಗೆ ಸೂಕ್ತವಾದ ಉದ್ಯಾನ ಇರಲಿಲ್ಲ. ಆ ಕೊರತೆಯನ್ನು ಇದು ನೀಗಿಸಲಿದೆ. ಇನ್ನು ಮುಂದೆ ಈ ಭಾಗದ ಜನರಿಗೆ ಮನರಂಜನೆ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗೆ ಈ ಉದ್ಯಾನವು ಕೇಂದ್ರ ಬಿಂದುವಾಗಲಿದೆ.

ಇಲ್ಲಿ ನೆಡುವ ಸಸಿಗಳಿಗೆ ನೀರಿನ ಅಗತ್ಯವಿರುವುದನ್ನು ಮನಗಂಡು ಈಗಾಗಲೇ ಕೊಳವೆಬಾವಿ ಕೊರೆದಿದ್ದು, ಹೇರಳವಾಗಿ ನೀರು ಲಭ್ಯವಾಗಿದೆ. ನೀರಿನ ಸಂಗ್ರಹಕ್ಕೆ ಸಂಪ್ ನಿರ್ಮಿಸಲಾಗಿದೆ. ಉದ್ಯಾನದ ನಿರ್ವಹಣೆಗೆ ತೋಟಗಾರಿಕೆ ಸಿಬ್ಬಂದಿ ಇರಲಿದ್ದು, ಅವರಿಗೆ ಹಾಗೂ ಭದ್ರತಾ ಸಿಬ್ಬಂದಿಗೆ ಪ್ರತ್ಯೇಕವಾಗಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ.

ಮುಖ್ಯಾಂಶಗಳು

- ಮಕ್ಕಳ ಆಟೋಟಗಳಿಗೆ ಪ್ರತ್ಯೇಕ ಅಂಗಳ
- ಹಿರಿಯರ ನಡಿಗೆಗೂ ಅವಕಾಶ
- ಹಸಿರಿನ ಜತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ವೇದಿಕೆ



ಹಸಿರು ಪರಿಕಲ್ಪನೆಯಡಿ ಥೀಮ್ ಪಾರ್ಕ್ ಆರಂಭಿಸುತ್ತಿದ್ದು ಜನರಿಗೆ ಅನುಕೂಲದ ಜತೆಗೆ ಸಮಾಜಕ್ಕೆ ಹಸಿರಿನ ಮಹತ್ವ ತಿಳಿಸುವುದೂ ನಮ್ಮ ಉದ್ದೇಶ
ಕೆ.ಜೆ.ಜಾರ್ಜ್, ಇಂಧನ ಸಚಿವ



ಬಯಲು ರಂಗಮಂದಿರದ ನೀಲನಕ್ಷೆ



ಎಚ್‌ಬಿಆರ್ ಲೇಔಟ್‌ನಲ್ಲಿ ನಿರ್ಮಾಣವಾಗುತ್ತಿರುವ ಥೀಮ್ ಪಾರ್ಕ್ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸುದ್ದಿ 2 ನಿಮಿಷ

ಸುರಂಗ ಯೋಜನೆಗೆ ಕಾರ್ಯಾದೇಶ ಸುಳ್ಳು: ಎಜಿ

ಬೆಂಗಳೂರು: 'ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೂ ಸುರಂಗ ರಸ್ತೆ ನಿರ್ಮಾಣ ಯೋಜನೆ ಕಾಮಗಾರಿ ಆರಂಭಿಸಲು ಇದೇ ತಿಂಗಳ ಅಂತ್ಯಕ್ಕೆ ಸರ್ಕಾರ ಕಾರ್ಯಾದೇಶ ನೀಡಲಿದೆ ಎಂಬ ಹೇಳಿಕೆ ಸುಳ್ಳು' ಎಂದು ಅಡ್ವೋಕೇಟ್ ಜನರಲ್ (ಎಜಿ) ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

'ಯೋಜನೆಗೆ ಸಂಬಂಧಿಸಿದ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿ ನಟ ಪ್ರಕಾಶ್ ಬೆಳವಾಡಿ ಮತ್ತು ಡಾ. ಆದಿಕೇಶವುಲು ರವೀಂದ್ರ, ವಿನೋದ್ ವ್ಯಾಸುಲು ಹಾಗೂ ಎನ್.ಎಸ್.ಮುಕುಂದ ಸಲ್ಲಿಸಿರುವ ಎರಡು ಪ್ರತ್ಯೇಕ ಪಿಐಎಲ್‌ಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಅರ್ಜಿಗೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದರು. ಇದಕ್ಕೆ ಅರ್ಜಿದಾರರ ಪರ ವಕೀಲರು, 'ಯೋಜನೆಯ ಕಾಮಗಾರಿ ಕೈಗೆತ್ತಿಗೊಳ್ಳಲು ಈ ತಿಂಗಳಾಂತ್ಯಕ್ಕೆ ಸರ್ಕಾರ ಕಾರ್ಯಾದೇಶ ನೀಡಲಿದೆ' ಎಂಬ ಮಾಧ್ಯಮಗಳ ವರದಿಯನ್ನು ನ್ಯಾಯಪೀಠದ ಗಮನಕ್ಕೆ ತಂದರು.



ಇದನ್ನು ಸ್ಪಷ್ಟವಾಗಿ ಅಲ್ಲಗಳೆದ ಅಡ್ವೊಕೇಟ್ ಜನರಲ್, 'ಈ ತಿಂಗಳಾಂತ್ಯಕ್ಕೆ ಕಾರ್ಯಾದೇಶ ನೀಡಲಾಗುವುದು ಎಂಬ ಹೇಳಿಕೆಯಲ್ಲಿ ಯಾವುದೇ ವಾಸ್ತವಾಂಶ ಇಲ್ಲ. ಈ ಕುರಿತು ನಾನು ನ್ಯಾಯಾಲಯಕ್ಕೆ ಭರವಸೆ ನೀಡುತ್ತೇನೆ' ಎಂದರು.

ಕೆಲ ಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು.

ದೇವನಹಳ್ಳಿ ಕೈಗಾರಿಕಾ ಪ್ರದೇಶ ಕೆಐಎಡಿಬಿಗೆ ಆಸ್ತಿ ತೆರಿಗೆ ಹೊಣೆ

ಬೆಂಗಳೂರು: ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶ–1 ಮತ್ತು 2, ಆದಿನಾರಾಯಣ ಹೊಸಹಳ್ಳಿ 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿನ ಸ್ವತ್ತುಗಳ ಆಸ್ತಿ ತೆರಿಗೆ ಸಂಗ್ರಹ ಹೊಣೆಗಾರಿಕೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ನೀಡಲಾಗಿದೆ.

ಮಂಡಳಿಯು ಈ ಸಂಬಂಧ ದೇವನಹಳ್ಳಿ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯತಿ ಮುಖ್ಯ ಅಧಿಕಾರಿ, ವಿಶ್ವನಾಥಪುರ ಮತ್ತು ಕೊಯಿರಾ ಗ್ರಾಮ ಪಂಚಾಯತಿಗಳ ಪಂಚಾಯತಿ ಆಡಳಿತಾಧಿಕಾರಿಗಳಿಗೆ ಸೋಮವಾರ ಪತ್ರ ಬರೆದಿದೆ.

'ಈ ಮೂರು ಕೈಗಾರಿಕಾ ಪ್ರದೇಶಗಳ ವ್ಯಾಪ್ತಿಯ 3,117 ಎಕರೆ ವಿಸ್ತೀರ್ಣದ ಜಾಗವನ್ನು 'ದೇವನಹಳ್ಳಿ ವಿಶೇಷ ಹೂಡಿಕೆ ವಲಯ' ಎಂದು ಘೋಷಿಸಲಾಗಿದೆ. ಈ ವಲಯದಲ್ಲಿರುವ ಉದ್ದಿಮೆದಾರರು ತೆರಿಗೆಯನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಪಾವತಿ ಮಾಡಬೇಕಾಗಿರುತ್ತದೆ. ಅದರಂತೆ 2025–26ನೇ ಸಾಲಿನ ಆಸ್ತಿ ತೆರಿಗೆಯನ್ನು ಮಂಡಳಿಯೇ ಪಾವತಿ ಮಾಡಿಸಿಕೊಳ್ಳಲಿದೆ' ಎಂದು ವಿವರಿಸಿದೆ.

'ಪಂಚಾಯತಿಗಳ ಸದರಿ ತೆರಿಗೆ ಬಾಬ್ತನ್ನು, ಸರ್ಕಾರದ ಆದೇಶದಂತೆ ತಮಗೆ ಪಾವತಿಸುತ್ತೇವೆ' ಎಂದೂ ತಿಳಿಸಿದೆ. ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶ–1ರಲ್ಲಿ ಇರುವ ಫಾಕ್ಸ್‌ಕಾನ್‌ನ ಐಫೋನ್ ತಯಾರಿಕಾ ಘಟಕಕ್ಕೂ ಮಂಡಳಿ ಪತ್ರ ಬರೆದಿದೆ.

'2025–26ನೇ ಸಾಲಿನ ಆಸ್ತಿ ತೆರಿಗೆಯನ್ನು ಮಂಡಳಿಗೇ ಪಾವತಿಸಿ. 2024–25ನೇ ಸಾಲಿನ ಆಸ್ತಿ ತೆರಿಗೆ ಹಿಂಬಾಕಿಗಳು ಇದ್ದರೆ, ಅದನ್ನು ಸಂಬಂಧಿತ ಗ್ರಾಮ ಪಂಚಾಯತಿಗೆ ಪಾವತಿಸಿ' ಎಂದು ಸೂಚಿಸಿದೆ.

₹2,097 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಮದ್ರಾಸ್ ರಸ್ತೆ ಸಮೀಪದ ಕೋನದಾಸಪುರದಲ್ಲಿರುವ 52 ಎಕರೆ ವಾಣಿಜ್ಯ ಭೂಮಿ ಹರಾಜು ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ₹2,097 ಕೋಟಿ ಸಂಗ್ರಹಿಸಿದೆ.

ಮೂಲ ಅಂದಾಜಿಗಿಂತ ₹468 ಕೋಟಿಯಷ್ಟು ಹೆಚ್ಚು ಆದಾಯ ತಂದುಕೊಟ್ಟಿದ್ದು, ಇ-ಹರಾಜು 20ಕ್ಕೂ ಹೆಚ್ಚು ಸುತ್ತುಗಳವರೆಗೆ ಮುಂದುವರಿಯಿತು. ಪ್ರಮುಖ ಕಂಪನಿಗಳ ಪ್ರತಿನಿಧಿಗಳು ಬಿಡ್ಡಿಂಗ್‌ಗೆ ಪೈಪೋಟಿ ನಡೆಸಿದ್ದು ಕಂಡು ಬಂತು.

ಬ್ರಿಗೇಡ್ ಗ್ರೂಪ್ ಮತ್ತು ಗೋದ್ರೆಜ್ ಪ್ರಾಪರ್ಟೀಸ್ ಸೇರಿ ಒಟ್ಟು ಐದು ಬಿಡ್ಡರ್‌ಗಳು ಹರಾಜಿನಲ್ಲಿ ಭಾಗವಹಿಸಿದ್ದರು. ಈ ಜಾಗದ ಒಂದು ಬದಿಯಲ್ಲಿ 80 ಅಡಿ ಅಗಲದ ರಸ್ತೆ ಇದ್ದು, ಮತ್ತೊಂದು ಬದಿಯಲ್ಲಿ ಹೊಸಕೋಟೆ–ವೈಟ್‌ಫೀಲ್ಡ್ ರಸ್ತೆ ಇದೆ. ಅಂತಿಮವಾಗಿ ಹೈದರಾಬಾದ್‌ನ ಶ್ರೀನಿ ನಿರ್ಮಾಣ್ ಪ್ರೈವೇಟ್ ಲಿಮಿಟೆಡ್ ₹2,097 ಕೋಟಿಯನ್ನು ಉಲ್ಲೇಖಿಸಿತು. ಅಂದರೆ ಪ್ರತಿ ಎಕರೆಗೆ ₹40.13 ಕೋಟಿಯಾಗಿದೆ.

ಎರಡು ದಶಕಗಳ ಹಿಂದೆ ಸ್ಟೀಲ್ ಯಾರ್ಡ್ ಸ್ಥಾಪಿಸಲು ಬಿಡಿಎ ಪ್ರಸ್ತಾಪಿಸಿತ್ತು. ಆದರೆ, ಯಾರೂ ಆಸಕ್ತಿ ತೋರಿಸದ ಕಾರಣ 52 ಎಕರೆ ಜಮೀನು, ಪ್ರಾಧಿಕಾರ ನೇರ ಬಿಡ್ಡಿಂಗ್‌ಗಾಗಿ ಪಟ್ಟಿ ಮಾಡಿದ ಮೂರು ಆಸ್ತಿಗಳಲ್ಲಿ ಒಂದಾಗಿದೆ. ಕೋನದಾಸಪುರದಲ್ಲೇ ಇರುವ ಇನ್ನೂ ಎರಡು ಸಣ್ಣ ಜಾಗಗಳು 2.19 ಎಕರೆ ಮತ್ತು 1.31 ಎಕರೆ ನೀರಿನ ಪ್ರದೇಶಕ್ಕೆ ಹೊಂದಿಕೊಂಡಿರುವ ಕಾರಣ ಬಿಡ್ಡರ್‌ಗಳನ್ನು ಆಕರ್ಷಿಸುವಲ್ಲಿ ವಿಫಲವಾದವು.

2026ನೇ ಹಣಕಾಸು ವರ್ಷದ ಅಂತ್ಯದೊಳಗೆ ವಿವಿಧ ಕ್ರಮಗಳ ಮೂಲಕ ಕನಿಷ್ಠ ₹10,000 ಕೋಟಿ ಸಂಗ್ರಹಿಸುವ ಗುರಿಯನ್ನು ಪ್ರಾಧಿಕಾರ ಹೊಂದಿದೆ. ಇದರಲ್ಲಿ ದೊಡ್ಡ ಪ್ರಮಾಣದ ಜಮೀನು ಮತ್ತು ವಸತಿ ನಿವೇಶನಗಳ ಇ-ಹರಾಜು, ಡಾ. ಶಿವರಾಮ ಕಾರಂತ ಬಡಾವಣೆಗೆ ಸಲ್ಲಿಸಿದ ಅರ್ಜಿಗಳ ಮೂಲಕ ಸಂಗ್ರಹಿಸಿದ ಠೇವಣಿಗಳು, ಫ್ಲ್ಯಾಟ್‌ಗಳು, ವಿಲ್ಲಾಗಳು ಹಾಗೂ ಸಿ.ಎ ಸೈಟ್‌ಗಳ ಮಾರಾಟ ಒಳಗೊಂಡಿದೆ.

ಈ ಹಣವನ್ನು ಬಳಸಿಕೊಂಡು, ಉತ್ತರ ಮತ್ತು ಪೂರ್ವ ಬೆಂಗಳೂರಿನಲ್ಲಿ ಆರು ವಸತಿ ಬಡಾವಣೆಗಳ ನಿರ್ಮಾಣ ಹಾಗೂ ಹೆಬ್ಬಾಳದಲ್ಲಿ ಅಂದಾಜು ₹ 2,215 ಕೋಟಿ ವೆಚ್ಚದಲ್ಲಿ 2.1 ಕಿ.ಮೀ ಉದ್ದದ ಸಣ್ಣ ಸುರಂಗ ಮಾರ್ಗ ನಿರ್ಮಾಣ ಸೇರಿದಂತೆ ಹಲವು ಮೂಲಸೌಕರ್ಯ ಯೋಜನೆಗಳನ್ನು ಬಿಡಿಎ ಪ್ರಸ್ತಾಪಿಸಿದೆ.

ಮುಖ್ಯಾಂಶಗಳು

- ಕೋನದಾಸಪುರ: 52 ಎಕರೆ ವಾಣಿಜ್ಯ ಭೂಮಿ ಹರಾಜಿನಿಂದ ಹಣ ಸಂಗ್ರಹ
- ಪ್ರಮುಖ ಕಂಪನಿಗಳ ಪ್ರತಿನಿಧಿಗಳಿಂದ ಬಿಡ್ಡಿಂಗ್‌ಗೆ ಪೈಪೋಟಿ
- ಸಂಗ್ರಹವಾದ ಹಣದಿಂದ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಪ್ರಸ್ತಾಪಿಸಿದ ಬಿಡಿಎ

'ಇ-ಹರಾಜು: ವ್ಯಾಪಕ ಪ್ರಚಾರದಿಂದ ಲಾಭ'

'ಬಿಡ್ಡಿಂಗ್‌ನಲ್ಲಿ ಪಾರದರ್ಶಕತೆ ಖಚಿತಪಡಿಸಿ ಹಾಗೂ ಇ-ಹರಾಜಿನ ಬಗ್ಗೆ ವ್ಯಾಪಕ ಪ್ರಚಾರ ನೀಡುವ ಮೂಲಕ ಪ್ರಮುಖ ಕಂಪನಿಗಳು ಭಾಗವಹಿಸಲು ಪ್ರೋತ್ಸಾಹಿಸಲಾಗಿದೆ. ಅದರ ಫಲಿತಾಂಶ ಎಲ್ಲರಿಗೂ ಗೋಚರಿಸುತ್ತದೆ. ಈ ಹಣವನ್ನು ಬಳಸಿಕೊಳ್ಳಲು ಸರ್ಕಾರದ ಅನುಮೋದನೆ ಪಡೆಯಲಾಗುವುದು' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಎಲ್ಲೆಲ್ಲಿ ಎಷ್ಟು ಆಸ್ತಿ ತೆರಿಗೆ ಬಾಕಿ?

ನಗರ ಪಾಲಿಕೆ	ಆಸ್ತಿಗಳು	ತೆರಿಗೆ	ಸೆಸ್	ಬಡ್ಡಿ	ದಂಡ	ಘನತ್ಯಾಜ್ಯ ಸೆಸ್, ಬಳಕೆದಾರರ ಶುಲ್ಕ	ಒಟ್ಟು ಕೋಟಿಗಳಲ್ಲಿ
		ಕೋಟಿಗಳಲ್ಲಿ					
ಪೂರ್ವ	1,615	₹48.98	₹12.41	₹21.98	₹36.14	₹38.23 ಲಕ್ಷ	₹119.90
ಪಶ್ಚಿಮ	1,504	₹35.83	₹9.14	₹13.83	₹24.78	₹62.86 ಲಕ್ಷ	₹84.23
ಕೇಂದ್ರ	1,398	₹34.26	₹8.73	₹13.70	₹23.89	₹66.96 ಲಕ್ಷ	₹81.26
ಉತ್ತರ	1,156	₹32.77	₹8.36	₹13.37	₹24.90	₹41.58 ಲಕ್ಷ	₹79.83
ದಕ್ಷಿಣ	1,347	₹30.04	₹7.66	₹12	₹22.08	₹51.01 ಲಕ್ಷ	₹72.30
ಒಟ್ಟು	7,020	₹181.90	₹46.32	₹74.91	₹131.80	₹2.60 ಕೋಟಿ	₹437.55

7 ಸಾವಿರ ಆಸ್ತಿಗಳ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ಅಡಿಯಲ್ಲಿ ಬರುವ ಐದು ನಗರ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಏಳು ಸಾವಿರ ಆಸ್ತಿಗಳನ್ನು ಹರಾಜು ಹಾಕಲು ನಿರ್ಧರಿಸಲಾಗಿದೆ.

ಆಸ್ತಿ ತೆರಿಗೆ, ಸೆಸ್, ಬಡ್ಡಿ, ದಂಡ ಹಾಗೂ ಘನತ್ಯಾಜ್ಯ ಸೆಸ್, ಬಳಕೆದಾರರ ಶುಲ್ಕ ಸೇರಿ ₹437 ಕೋಟಿ ಬಾಕಿ ಉಳಿದಿದೆ. ಈ ಸಂಬಂಧ ಆಸ್ತಿ ಮಾಲೀಕರಿಗೆ ಬೇಡಿಕೆ ನೋಟಿಸ್ ಕಳುಹಿಸಲಾಗಿತ್ತು. ಆದರೂ, ತೆರಿಗೆ ಪಾವತಿಸದೆ ಇರುವುದರಿಂದ, ಮುಂದಿನ ಕ್ರಮವಾಗಿ ಜಪ್ತಿ ಆದೇಶ ಹೊರಡಿಸಲಾಗಿದೆ ಎಂದು ಜಿಬಿಎ ಕಂದಾಯ ವಿಭಾಗದ ಪ್ರಕಟಣೆ ತಿಳಿಸಿದೆ.

ಜಪ್ತಿ ಆದೇಶ ಹೊರಡಿಸಿದ ಬಳಿಕವೂ ತೆರಿಗೆ ಪಾವತಿ ಆಗದಿರುವುದರಿಂದ ಈ ಆಸ್ತಿಗಳನ್ನು ಆಯಾ ವಲಯಗಳ ಜಂಟಿ ಆಯುಕ್ತರ ಕಚೇರಿಗಳಲ್ಲಿ ಫೆ.17ರಂದು ಹರಾಜಿಗೆ ದಿನ ನಿಗದಿಪಡಿಸಲಾಗಿದೆ. ಹರಾಜಿಗೆ ಸಂಬಂಧಿಸಿದ ನೋಟಿಸ್‌ಗಳ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸಂಬಂಧಿತ ಆಸ್ತಿ ಮಾಲೀಕರು ತಕ್ಷಣವೇ https://BBMPTax.karnataka.gov.in ಮೂಲಕ ಆನ್‌ಲೈನ್ ಪಾವತಿ ಮಾಡಿದಲ್ಲಿ, ಹರಾಜು ಪ್ರಕ್ರಿಯೆಯನ್ನು ತಪ್ಪಿಸಿಕೊಳ್ಳಬಹುದು ಎಂದು ತಿಳಿಸಲಾಗಿದೆ.



ತೆರಿಗೆ ಬಾಕಿ

ಉದ್ದಿಮೆ ಪರವಾನಗಿ: ಉದ್ದಿಮೆದಾರರು ತಮ್ಮ ಅನುಕೂಲದ ಅನ್ವಯ ಒಂದರಿಂದ ಐದು ಆರ್ಥಿಕ ವರ್ಷಗಳ ಅವಧಿಗೆ ಆನ್‌ಲೈನ್‌ನಲ್ಲಿ ಉದ್ದಿಮೆ ಪರವಾನಗಿಯನ್ನು ದಂಡ ಶುಲ್ಕವಿಲ್ಲದೆ ಫೆ.28ರೊಳಗೆ ಪಡೆದುಕೊಳ್ಳಬಹುದು.

ಕಳೆದ ಸಾಲಿನಂತೆ ಉದ್ದಿಮೆ ಪರವಾನಗಿ ಶುಲ್ಕವನ್ನು ಆನ್‌ಲೈನ್ ಮುಖಾಂತರ ಹಾಗೂ ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕಿನಲ್ಲಿ ಪಾವತಿಸಬಹುದು. ಮಾರ್ಚ್ 1ರಿಂದ 31ರವರೆಗೆ ಪರವಾನಗಿ ನವೀಕರಣ ಶುಲ್ಕದ ಶೇಕಡ 25ರಷ್ಟು ದಂಡ ಮೊತ್ತ ಪಾವತಿಸಬೇಕಾಗುತ್ತದೆ. ಏಪ್ರಿಲ್ 1ರಿಂದ ಪರವಾನಗಿ ಶುಲ್ಕದ ಶೇಕಡ 100ರಷ್ಟು ದಂಡದ ಮೊತ್ತ ಪಾವತಿಸಬೇಕಾಗುತ್ತದೆ.

ಪರವಾನಗಿ ನವೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕವೇ ನಡೆಸಲಾಗುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಎತ್ತಿನಹೊಳೆ: ಕೇಂದ್ರದ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎತ್ತಿನಹೊಳೆ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಆದರೆ, ಯೋಜನೆಗೆ ಅವಕಾಶ ಸಿಗುತ್ತಿಲ್ಲ' ಎಂದು ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಶಿವಲಿಂಗೇಗೌಡ ಅವರ ಮಾತಿಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಗದ್ದಲದ ನಡುವೆಯೂ ಮಾತು ಮುಂದುವರಿಸಿದ ಶಿವಲಿಂಗೇಗೌಡ, 'ನೀವು ನೀರಾವರಿ ಯೋಜನೆಯನ್ನು ಹಾಳು ಮಾಡಿದವರು. ಯಾವ ಯೋಜನೆಗೆ ಕೇಂದ್ರದವರು ಅನುಮತಿ ಕೊಟ್ಟಿದ್ದಾರೆ? ಮಹದಾಯಿ ಯೋಜನೆಗೆ ಅವಕಾಶ ಕೊಟ್ರಾ' ಎಂದು ಕೆಣಕಿದರು.

'ನಾವು ಭಾರತ ದೇಶದ ಪ್ರಜೆಗಳು ಕಣ್ರೀ. ಕೇಳೋ ಹಕ್ಕು ನಮಗಿದೆ. ಎಲ್ಲದಕ್ಕೂ ಕೇಂದ್ರ ಸರ್ಕಾರ ಅಡ್ಡಿ ಮಾಡುತ್ತಿದೆ' ಎಂದೂ ಕಿಡಿಕಾರಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಕ್ರಿಯಿಸಿ, 'ಎತ್ತಿನ ಹೊಳೆ ಯೋಜನೆಗೆ ಅರಣ್ಯ ಇಲಾಖೆಯ ಭೂಮಿ ಬೇಕಿದ್ದು, ಅದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ಬೇಕಿದೆ. ಅವರು ಕೇಳಿದ ಎಲ್ಲ ಸ್ಪಷ್ಟೀಕರಣ ಕೊಟ್ಟಿದ್ದೇವೆ. ಎಲ್ಲ ಷರತ್ತುಗಳನ್ನೂ ಪೂರೈಸಿದ್ದೇವೆ. ಕೇಂದ್ರ ನಮಗೆ ಅವಕಾಶ ಮಾಡಿಕೊಡಬೇಕು' ಎಂದರು.

ನಗರದಲ್ಲಿ ಇಂದು

ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ: ಸಂಜೆ 4ಕ್ಕೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿ: ಉಪನ್ಯಾಸ: ಮಾಳವಿಕಾ, ಅಧ್ಯಕ್ಷತೆ: ಜಿ.ಎನ್. ಮೋಹನ್, ಕವಿಗಳು: ಎಚ್. ಲಕ್ಷ್ಮೀನಾರಾಯಣಸ್ವಾಮಿ, ರೂಮಿ ಹರೀಶ್, ಚಾಂದ್‌ಪಾಷ ಎನ್.ಎಸ್., ವಿಶ್ವನಾಥ ಗುಂಡಿಗೆರೆ, ಸಂಜೆ 5.30ಕ್ಕೆ ಅತಿಥಿಗಳು: ಹಂ.ಪ. ನಾಗರಾಜಯ್ಯ, ಟಿ.ಎಸ್. ನಾಗಾಭರಣ, ಉತ್ಸವ ಗೌರವ ಸ್ವೀಕರಿಸುವವರು: ಸುರೇಶ್ ಆನಗಳ್ಳಿ, ಉಪಸ್ಥಿತಿ: ಶುಭಾ ಧನಂಜಯ್, ಬಾಬಾಸಾಹೇಬ್ ಎಸ್. ಕಾಂಬ್ಳೆ, ಜಾಹಿದಾ ಎಂ.ಎ., ರಂಗ ಗೌರವ ಸ್ವೀಕರಿಸುವವರು: ರಾಜರಾಜೇಶ್ವರಿ ರಂಗ ಸಮೂಹ, ಸ್ನೇಹರಂಗ, ಸಂಜೆ 7ರಿಂದ 'ಸತ್ತವರ ನೆರಳು' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ಕಾರಂತ, 'ಶೂದ್ರ ತಪಸ್ವಿ' ನಾಟಕ ಪ್ರದರ್ಶನ: ನಿರ್ದೇಶನ: ಎಂ. ಮಧು, 'ರಣದುಂಧುಭಿ ಐತಿಹಾಸಿಕ ನಾಟಕ' ಪ್ರದರ್ಶನ: ನಿರ್ದೇಶನ: ಐ.ಟಿ. ರಾಮಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾ ಗ್ರಾಮ, ಮಲ್ಲತ್ತಹಳ್ಳಿ.

ಜ್ಯೋತಿನಗರ ವೈಶ್ಯ ಯಜಮಾನ್ ಜನೋಪಕಾರಿ ದೊಡ್ಡಣ ಸ್ವಾಮಿ 186ನೇ ಜಯಂತಿ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ಉದಯ್ ಗರುಡಾಚಾರ್, ವಿ.ಆರ್. ಸುದರ್ಶನ್, ಬಿ. ರಮೇಶ್, ಅಧ್ಯಕ್ಷತೆ: ಎಸ್. ಸುರೇಶ್, ಆಯೋಜನೆ ಮತ್ತು ಸ್ಥಳ: ಲ.ನ. ಧರ್ಮಸಂಸ್ಥೆಯ ಆವರಣ, ಕೋಟೆ, ಬೆಳಿಗ್ಗೆ 11ರಿಂದ

'ಭೀಮಾ ಕೋರೆಗಾಂವ್ ವಿಜಯೋತ್ಸವ ಮತ್ತು ದಲಿತರ ಮುಂದಿರುವ ಸವಾಲುಗಳು' ವಿಚಾರಸಂಕಿರಣ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ವರಜ್ಯೋತಿ ಭಂತೇಜಿ, ಉದ್ಘಾಟನೆ: ಪ್ರಿಯಾಂಕ್ ಖರ್ಗೆ, ವಿಚಾರ ಮಂಡನೆ: ದಿನೇಶ್ ಅಮೀನ್ ಮಟ್ಟು, ಅಧ್ಯಕ್ಷತೆ: ಮಲ್ಲಪ್ಪ ಹೊಸ್ಮನಿ ಇಂಗನಕಲ್, ಅತಿಥಿಗಳು: ಸತೀಶ್ ಜಾರಕಿಹೊಳಿ, ಎನ್.ಎಸ್. ಬೋಸರಾಜು, ಅಬ್ಬಯ್ಯ ಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಮಾವಳ್ಳಿ ಶಂಕರ್, ಬಸವರಾಜ್ ಕೌತಾಳ್, ದತ್ತಾತ್ರಯ ಇಕ್ಕಳಕಿ, ಆಯೋಜನೆ: ಭಾರತೀಯ ದಲಿತ ಪ್ಯಾಂಥರ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



ಜ್ಞಾನಪ್ರಕಾಶ ಸ್ವಾಮೀಜಿ

ಡಾ.ಸಿದ್ಧಲಿಂಗಯ್ಯ ಅವರ 73ನೇ ವರ್ಷದ ನುಡಿ ನಮನ ಸಮಾರಂಭದ ಉದ್ಘಾಟನೆ: ಎಚ್. ಆಂಜನೇಯ, ಅಧ್ಯಕ್ಷತೆ: ಕಾಳೇಗೌಡ ನಾಗವಾರ, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಮಾವಳ್ಳಿ ಶಂಕರ್, ಜಾನ್ ದೇವರಾಜ್, ರಾಮದೇವಿ, ಶಿವಶಂಕರ್, ಆಯೋಜನೆ: ಕರ್ನಾಟಕ ಅಹಿಂದ ಹೋರಾಟ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11ರಿಂದ

ವ.ಚ. ಚನ್ನೇಗೌಡ ಅವರ 'ನಾಡ ಹಣತೆಗಳು' ಪುಸ್ತಕ ಬಿಡುಗಡೆ: ಹಿ.ಚಿ. ಬೋರಲಿಂಗಯ್ಯ, ಪುಸ್ತಕದ ಕುರಿತು: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ಆರ್. ದೊಡ್ಡೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸಾಂಸ್ಕೃತಿಕ ಕಲಾ ಕುಟೀರ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ನೇರಂಬಳ್ಳಿ ರಾಘವೇಂದ್ರ ರಾಯರು, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಮುನಿರತ್ನ–ಡಿಕೆಶಿ ನಡುವೆ 'ಆರ್‌ಎಸ್‌ಎಸ್'

ವಿಧಾನಮಂಡಲ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನಗಿಂತಲೂ ಆರ್‌ಎಸ್‌ಎಸ್‌ನಲ್ಲಿ ನೀವೇ ಹಳಬರು. 'ನಮಸ್ತೆ ಸದಾ ವತ್ಸಲೇ' ಗೀತೆ ಮೊದಲು ಕಲಿತವರೇ ನೀವು' ಎಂದು ಬಿಜೆಪಿಯ ಮುನಿರತ್ನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾಲೆಳೆದ ಪ್ರಸಂಗ ವಿಧಾನಸಭೆಯಲ್ಲಿ ನಡೆಯಿತು.

ಆರ್.ಆರ್. ನಗರದ ಶಾಸಕ ಮುನಿರತ್ನ ಅವರು ಸುಮನಹಳ್ಳಿ ಮೇಲ್ಸೇತುವೆ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಕೆಟ್ಟುಹೋಗಿರುವ ಬಗ್ಗೆ ಪ್ರಸ್ತಾಪಿಸಿದರು. 'ಬೀದಿ ದೀಪಗಳನ್ನು ಸರಿಪಡಿಸಿರುವುದಾಗಿ ಸರ್ಕಾರ ಉತ್ತರ ನೀಡಿದೆ. ಆದರೆ, ಅಲ್ಲಿ ದೀಪಗಳೇ ಇಲ್ಲದಿದ್ದಾಗ ಸರಿಪಡಿಸುವ ಮಾತೆಲ್ಲಿ ಬರುತ್ತದೆ' ಎಂದು ಪ್ರಶ್ನಿಸಿದರು.

'ನನ್ನ ಕ್ಷೇತ್ರ ವರ್ತುಲ ರಸ್ತೆಯ 30 ಕಿ.ಮೀ ವ್ಯಾಪ್ತಿಯಲ್ಲಿ ಬರುತ್ತದೆ. ಸಂಜೆ ಸ್ವಿಚ್ ಹಾಕಿದರೂ ದೀಪಗಳು ಉರಿಯುವುದಿಲ್ಲ. ನೂರು ಲೈಟ್ ಇದ್ದರೆ ಅದರಲ್ಲಿ ಅರವತ್ತು ಉರಿಯುತ್ತವೆ' ಎಂದರು.

ಮುನಿರತ್ನ ಅವರ ಪ್ರಶ್ನೆಗೆ ಉತ್ತರಿಸಲು ಎದ್ದು ನಿಂತ ಶಿವಕುಮಾರ್, ಹಳೆಯ ಘಟನೆ ನೆನಪಿಸಿದರು. 'ನಿಮ್ಮ ಕ್ಷೇತ್ರದ ಸಮಸ್ಯೆ ಆಲಿಸಲು ನಾವು ಸಭೆ ಕರೆದಿದ್ದೆವು. ಆದರೆ, ನೀವು ಆ ಸಭೆಗೆ ಟೋಪಿ ಹಾಕಿ ಬಂದು ಏನೇನೊ ಮಾಡಿದಿರಿ' ಎಂದು ಕಿಚಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಮುನಿರತ್ನ, 'ಮೂಗು ಇರೋವರೆಗೂ ನೆಗಡಿ ಹೋಗೋದಿಲ್ಲ. ಅದು ನಡೆಯುತ್ತಲೇ ಇರುತ್ತೆ ಬಿಡಿ ಸರ್' ಎಂದರು.

ತಕ್ಷಣವೇ ಶಿವಕುಮಾರ್, 'ಅದು ನಿಮ್ಮ ಚರಿತ್ರೆಯಲ್ಲೇ ಬಂದುಬಿಟ್ಟಿದೆ' ಎಂದು ಟಾಂಗ್ ನೀಡಿದರು. 'ಅದು ಹೋಗೋದಿಲ್ಲ ಬಿಡಿ ಸರ್, ಈಗ ಸಮಸ್ಯೆ ಬಗ್ಗೆ ಹೇಳಿ' ಎಂದು ಮುನಿರತ್ನ ಪ್ರತಿಕ್ರಿಯಿಸಿದರು.

ಅದಕ್ಕೆ ಶಿವಕುಮಾರ್, 'ಬಾ ಅಂತಾ ಕರೆದರೆ ಚಡ್ಡಿ ಹಾಕಿಕೊಂಡು ಕುಳಿತುಕೊಂಡೆ. ನಿನ್ನ ಆ ರೂಪಕ್ಕೆ ಉತ್ತರ ಕೊಡಬೇಕಲ್ವಾ ನಾನು? ಟೋಪಿ ಹಾಕಬೇಡ ಅಂತಾ ಹೇಳೋದಿಲ್ಲ, ಹಾಕು, ನಿನಗೆ ಅದು ಹೊಸತು' ಎಂದು ತಿರುಗೇಟು ನೀಡಿದರು.

ಆಗ ಮುನಿರತ್ನ, 'ನೀವು ನನಗಿಂತಲೂ ಆರ್‌ಎಸ್‌ಎಸ್‌ಗೆ ಹಳಬರು ಸರ್. 'ನಮಸ್ತೆ ಸದಾ ವತ್ಸಲೇ' ಗೀತೆಯನ್ನು ಹಾಡಿದ್ದೀರಿ' ಎಂದು ಚಾಟಿ ಬೀಸಿದರು. ನಗುತ್ತಲೇ ಉತ್ತರಿಸಿದ ಶಿವಕುಮಾರ್, 'ನನ್ನ ಗರಡಿಯಲ್ಲಿ ನೀನು ಕಲಿತವನು. ನಿನ್ನ ಕ್ಷೇತ್ರದ ಬಗ್ಗೆ ಚರ್ಚಿಸಲು ಗೌರವದಿಂದ ಕರೆದಿದ್ದೆವು' ಎಂದು ಚರ್ಚೆಗೆ ಅಂತ್ಯ ಹಾಡಿದರು.

'62,857 ಪ್ರಕರಣಗಳ ವಿಲೇವಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಹಲವು ವರ್ಷಗಳಿಂದ ಬಾಕಿಯಾಗಿದ್ದ 60,000ಕ್ಕೂ ಹೆಚ್ಚು ವ್ಯಾಜ್ಯಗಳನ್ನು ಎರಡೂವರೆ ವರ್ಷದಲ್ಲಿ ವಿಲೇವಾರಿ ಮಾಡಿದ್ದೇವೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಸೋಮವಾರ ವಿಡಿಯೊ ಸಂವಾದದ ಮೂಲಕ ಉಪ ವಿಭಾಗಾಧಿಕಾರಿಗಳ ಜತೆಗಿನ ತಿಂಗಳ ಪ್ರಗತಿ ಪರಿಶೀಲನಾ ಸಭೆಯ ಕುರಿತು ಮಾಹಿತಿ ನೀಡಿರುವ ಅವರು, '2023ಕ್ಕೂ ಮೊದಲು ಎಲ್ಲ ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ 62,857 ತಕರಾರು ಪ್ರಕರಣಗಳು ಉಳಿದುಕೊಂಡಿದ್ದವು. ಅಲ್ಲದೆ, 11,000ದಷ್ಟು ಪ್ರಕರಣಗಳು ದಾಖಲಾತಿ ಹಂತದಲ್ಲಿದ್ದವು. ಎಲ್ಲವೂ ಸೇರಿ 73,000ಕ್ಕೂ ಹೆಚ್ಚು ಪ್ರಕರಣಗಳು ಬಾಕಿಯಾಗಿದ್ದವು. ಜನಸಾಮಾನ್ಯರು ಪ್ರತಿ ದಿನವೂ ಅಲೆಯುವ ಪರಿಸ್ಥಿತಿ ಇತ್ತು' ಎಂದಿದ್ದಾರೆ.

'ನಮ್ಮ ಸರ್ಕಾರ ಬಂದ ನಂತರ ಈ ಎಲ್ಲ ಪ್ರಕರಣಗಳ ತ್ವರಿತ ವಿಲೇವಾರಿಗೆ ಕ್ರಮ ತೆಗೆದುಕೊಂಡಿದ್ದು, ಈಗ 10,656 ಪ್ರಕರಣಗಳಷ್ಟೇ ಬಾಕಿಯಾಗಿವೆ' ಎಂದು ವಿವರಿಸಿದ್ದಾರೆ.

ಬಾಕಿ ಇರುವಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳ ಪ್ರಕರಣಗಳ ಸಂಖ್ಯೆಯೇ ಹೆಚ್ಚು. ಅವುಗಳನ್ನು ಮಾರ್ಚ್ ಅಂತ್ಯದೊಳಗೆ ವಿಲೇವಾರಿ ಮಾಡಲು ಸೂಚಿಸಲಾಗಿದೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ಹೇಳಿಕೆ

ಡೋಂಗಿತನ ವಿರೋಧಿಸಿದ್ದ ಮಾಚಿದೇವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಡಿವಾಳ ಮಾಚಿದೇವರು ಸಮಾಜದಲ್ಲಿನ ತಾರತಮ್ಯ ಮತ್ತು ಡೋಂಗಿತನವನ್ನು ವಿರೋಧಿಸುವ ಮೂಲಕ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದ್ದರು. ಅಂತಹ ವೈಚಾರಿಕ ಪ್ರಜ್ಞೆ ನಮ್ಮಲ್ಲೂ ಬರಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನುಭವ ಮಂಟಪ ಕಟ್ಟುವಲ್ಲಿ ಮಡಿವಾಳ ಮಾಚಿದೇವರ ಕಾಯಕ ಮಹತ್ವದ್ದಾಗಿತ್ತು. ಮನುಷ್ಯನಿಗೆ ದೈಹಿಕ ಮತ್ತು ಮಾನಸಿಕ ಅಚ್ಚುಕಟ್ಟುತನ, ಶುಚಿ ಅಗತ್ಯ. ಜೊತೆಗೆ ಪರಿಸರವೂ ಶುಚಿಯಾಗಿರಬೇಕು. ಮಡಿವಾಳ ಮಾಚಿದೇವ ಅಂಥ ದಾರಿ ತೋರಿದವರು. ಕಾಯಕ ಮಾಡುತ್ತಲೇ ವಚನ ರಚಿಸಿ ಹಾಡಿದವರು ಎಂದು ನೆನಪು ಮಾಡಿಕೊಂಡರು.

ಇಂದು ಸಮಾಜದಲ್ಲಿ ಜಾತಿಗಳ ನಡುವೆ ಹಾಗೂ ಧರ್ಮಗಳ ನಡುವೆ ಚರ್ಚೆ ಮತ್ತು ಸಂಘರ್ಷ ಹೆಚ್ಚಾಗಿರುವುದು ವಿಪರ್ಯಾಸ. ಇದನ್ನು ಮೀರಿ ಬದುಕುವ ತತ್ವವನ್ನು ಶರಣರು ನಮಗೆ ನೀಡಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಯವರ ವೈದ್ಯಕೀಯ ಸಲಹೆಗಾರ ಡಾ.ರವಿಕುಮಾರ್, ಮಡಿವಾಳ ಅಭಿವೃದ್ಧಿ ನಿಗಮದ ಅಧ್ಯಕ್ಷ ನಂಜಪ್ಪ, ಸಮುದಾಯದ ಮುಖಂಡ ಗೋಪಾಲ್, ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಉಪಸ್ಥಿತರಿದ್ದರು.



ಮಡಿವಾಳ ಮಾಚಿದೇವ ಅವರ ಭಾವಚಿತ್ರಕ್ಕೆ ಶಿವರಾಜ ಎಸ್.ತಂಗಡಗಿ, ಡಾ.ಎಚ್.ರವಿಕುಮಾರ್, ಸಿ.ನಂಜಪ್ಪ, ಜಿ.ವಿ.ಗೋಪಾಲ್, ಕೆ.ಎಂ.ಗಾಯಿತ್ರಿ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ಗುರುಪೀಠಕ್ಕೆ ಒಂದು ಎಕರೆ ಜಾಗ'

ಹಿಂದುಳಿದ ವರ್ಗಗಳ ಸಮುದಾಯದ ಎಲ್ಲ ಮಠಗಳಿಗೆ ಬೆಂಗಳೂರಿನ ಸುತ್ತಮುತ್ತ ಒಂದೆರಡು ಎಕರೆ ಜಾಗ ನೀಡುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಮಡಿವಾಳ ಸಮುದಾಯದ ಗುರು ಪೀಠಕ್ಕೆ ಒಂದು ಎಕರೆ ನೀಡಲು ತೀರ್ಮಾನಿಸಲಾಗಿದೆ ಎಂದು ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಕೆಂಗೇರಿಯಲ್ಲಿರುವ ಗುರುಪೀಠದ ಮೂರು ಎಕರೆ ಜಮೀನನ್ನು ಭೂಗಳ್ಳರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಮುಖಂಡರು ಕಾರ್ಯಕ್ರಮದಲ್ಲಿ ಸಚಿವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಕಂದಾಯ ಸಚಿವರು ಮತ್ತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು. ಒತ್ತುವರಿಯಾಗಿರುವ ಜಾಗವನ್ನು ಗುರು ಪೀಠಕ್ಕೆ ಕೊಡಿಸಲಾಗುವುದು' ಎಂದು ಭರವಸೆ ನೀಡಿದರು.

ಪಿಎಸ್‌ಎಲ್‌ವಿ ಉಡಾವಣೆಗೆ ಮತ್ತೆ ಪ್ರಯತ್ನ: ಸಚಿವ

ನವದೆಹಲಿ (ಪಿಟಿಐ): 'ಸತತ ಎರಡು ವೈಫಲ್ಯಗಳ ನಂತರ ಇಸ್ರೊ ಪಿಎಸ್‌ಎಲ್‌ವಿ ರಾಕೆಟ್ ಉಡಾವಣೆಯನ್ನು ಜೂನ್‌ನಲ್ಲಿ ಮತ್ತೊಮ್ಮೆ ನಡೆಸಲು ಪ್ರಯತ್ನಿಸಲಿದೆ' ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.



ಜಿತೇಂದ್ರ ಸಿಂಗ್

ಇದೇ ವೇಳೆ, ಈ ವೈಫಲ್ಯಗಳ ಹಿಂದೆ ವಿಧ್ವಂಸಕ ಕೃತ್ಯ ನಡೆದಿದೆ ಎಂಬ ಶಂಕೆಯನ್ನು ಅವರು ತಳ್ಳಿಹಾಕಿದ್ದಾರೆ.

'ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಪಿಎಸ್‌ಎಲ್‌ವಿ– ಸಿ61 ಮತ್ತು ಈ ವರ್ಷ ಜನವರಿಯಲ್ಲಿ ನಡೆದ ಪಿಎಸ್‌ಎಲ್‌ವಿ– ಸಿ62 ಉಡಾವಣೆಯು ವಿಫಲಗೊಳ್ಳಲು ಒಂದೇ ರೀತಿಯ ಕಾರಣಗಳು ಇರಲಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದ್ದಾರೆ.

‘ಮೈಸೂರಲ್ಲೇ ಗಾಂಜಾ ಕೇಸು ಜಾಸ್ತಿ ಏಕೆ?’

ಲೋಕ್ ಅದಾಲತ್‌ನಲ್ಲಿ ಗಾಂಜಾ ಕೇಸು ಸೆಟಲ್ ಮಾಡಲಾಗುತ್ತದೆಯೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕ್ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೂ ಸೆಟಲ್ ಮಾಡಲಾಗುತ್ತದೆಯೇ’ ಎಂದು ಹೈಕೋರ್ಟ್ ತೀವ್ರ ಆಶ್ಚರ್ಯ ವ್ಯಕ್ತಪಡಿಸಿದೆ.

ಗಾಂಜಾ ಮಾರಾಟದ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ರದ್ದುಪಡಿಸುವಂತೆ ಕೋರಿ ನ್ಯಾಯಾಂಗ ಬಂಧನದಲ್ಲಿರುವ ಮೈಸೂರಿನ ಸಮೀರ್ ಖಾನ್ ಅಲಿಯಾಸ್ ದಾದು (51) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ಕೆ. ಮಹದೇವ, ‘ಅರ್ಜಿದಾರರನ್ನು ಮೈಸೂರಿನ ಬಿಇಒ ಕಚೇರಿ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಬಂಧಿಸಲಾಗಿದೆ. ಅವರಿಂದ 53 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ದಾಖಲಾಗಿರುವ ಕಲಂಗಳು ಜಾಮೀನು ಪಡೆಯಲು ಅರ್ಹವಾಗಿವೆ. ಆದರೆ, ವಿಚಾರಣಾ ಕೋರ್ಟ್ ಜಾಮೀನು ಅರ್ಜಿ ತಿರಸ್ಕರಿಸಿದೆ. ಆದ್ದರಿಂದ, ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, ‘ಈಗಾಗಲೇ ಇದೇ ಅರ್ಜಿದಾರರನ್ನು ಮಾದಕ ದ್ರವ್ಯ ಮಾರಾಟದ ಇಂತಹುದೇ ಆರೋಪದಡಿ ಮತ್ತೊಂದು ಕೇಸಿನಲ್ಲಿ ವಿಚಾರಣಾ ಕೋರ್ಟ್ ಅಪರಾಧಿ ಎಂದು ತೀರ್ಪು ನೀಡಿದೆ’ ಎಂದರು.

ಇದಕ್ಕೆ ಮಹದೇವ, ‘ಸ್ವಾಮಿ, ಆ ಕೇಸಿನಲ್ಲಿ ಅರ್ಜಿದಾರರು ಅಪರಾಧ ಒಪ್ಪಿಕೊಂಡ (ಪ್ಲೀಡ್ ಗಿಲ್ಟಿ) ಕಾರಣ ಲೋಕ್ ಅದಾಲತ್‌ನಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡಲಾಗಿದೆ’ ಎಂದರು.

ಈ ಮಾತಿಗೆ ನ್ಯಾಯಮೂರ್ತಿಗಳು, ‘ಏನ್ರೀ ಇದು ಲೋಕ್ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೆಲ್ಲಾ ಸೆಟಲ್ ಮಾಡಲಾಗುತ್ತದೆಯೇ? ಹೀಗಾದರೆ ಹೇಗೆ? ನಾಳೆ ಎಂಡಿಎಂಎ (ಮಾದಕ ದ್ರವ್ಯ) ಕೇಸುಗಳನ್ನೂ ರಾಜಿ ಸಂಧಾನದ ಮೂಲಕ ಲೋಕ್ ಅದಾಲತ್‌ನಲ್ಲಿ ವಿಲೇವಾರಿ ಮಾಡಬಹುದಲ್ಲವೇ? ಇಂತಹ ಗಾಂಜಾ ಅಪರಾಧಿಗಳು ಅಪರಾಧ ಒಪ್ಪಿಕೊಂಡು ಕನಿಷ್ಠ ದಂಡ ಕಟ್ಟಿ ಜೈಲಿನಲ್ಲಿರಲು ಸಿದ್ಧರಾದರೆ ಗತಿ ಏನು’ ಎಂದು ಕಳವಳ ವ್ಯಕ್ತಪಡಿಸಿದರು.

ಇದೇ ವೇಳೆ, ‘ಮೈಸೂರಿನಲ್ಲೇ ಗಾಂಜಾ ಕೇಸುಗಳು ಯಾಕೆ ಜಾಸ್ತಿ’ ಎಂದು ಅರ್ಜಿದಾರರ ಪರ ವಕೀಲರನ್ನು ಕೌತುಕದಿಂದ ಪ್ರಶ್ನಿಸಿದ ನ್ಯಾಯಮೂರ್ತಿಗಳು, ‘ಮುಂದೆ ಏನಾದರೂ ಈ ಆರೋಪಿಯ ಕೈಯಿಂದ ವಾಣಿಜ್ಯ ಉದ್ದೇಶದ ಹೊರತಾದ 3 ಗ್ರಾಂ ಗಾಂಜಾ ಸಿಕ್ಕರೂ ಬಿಡುವುದಿಲ್ಲ. ಜೈಲಿಗೆ ಕಳುಹಿಸುತ್ತೇನೆ’ ಎಂದು ಎಚ್ಚರಿಸಿ, ಮಧ್ಯಂತರ ಮನವಿಯ ಅನುಸಾರ ಜಾಮೀನು ಮಂಜೂರು ಮಾಡಿದರು.

₹10 ಲಕ್ಷ ದಂಡ ಎಚ್ಚರಿಕೆ: ಸಿ.ಎಂ ವಿರುದ್ಧದ ಕೇಸು ವಜಾ

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಒಟ್ಟು 51 ಜನರನ್ನು ಅವರ ಹುದ್ದೆಗಳಿಂದ ವಜಾಗೊಳಿಸಿ ತನಿಖೆಗೆ ಆದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿದಾರರೊಬ್ಬರಿಗೆ ₹10 ಲಕ್ಷ ದಂಡ ಹಾಕುವುದಾಗಿ ಎಚ್ಚರಿಸಿದ ಹೈಕೋರ್ಟ್, ಅವರ ಅರ್ಜಿ ವಜಾಗೊಳಿಸಿದೆ.

ಈ ಸಂಬಂಧ ನೆಲೋಗಿಯ ‘ಭ್ರಷ್ಟಾಚಾರ ವಿರೋಧ ಪಕ್ಷ’ದ ರಾಷ್ಟ್ರೀಯ ಅಧ್ಯಕ್ಷ ಕಲ್ಲಾಲಿಂಗ ಈ. ಹೂಗಾರ ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ‘ಈ ಅರ್ಜಿಯಲ್ಲಿ ಹುರುಳಿಲ್ಲ. ಅರ್ಜಿದಾರರು ವಜಾಗೊಂಡ ಕೆಪಿಟಿಸಿಎಲ್ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) ನೌಕರ ಎಂಬ ಕಾರಣಕ್ಕೆ ಸುಮ್ಮನೇ ಬಿಡುತ್ತಿದ್ದೇನೆ. ಇಲ್ಲವಾದಲ್ಲಿ ₹10 ಲಕ್ಷ ದಂಡ ವಿಧಿಸುತ್ತಿದ್ದೆ’ ಎಂದು ಎಚ್ಚರಿಸಿದರು.

ಕೋರಿಕೆ ಏನು?: ‘ಸಿದ್ದರಾಮಯ್ಯ, ಶಿವಕುಮಾರ್ ಅಲ್ಲದೆ, ಜೇವರ್ಗಿ ಕ್ಷೇತ್ರದ ಶಾಸಕ ಡಾ.ಅಜಯ್ ಸಿಂಗ್, ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ, ಕೆಪಿಟಿಸಿಎಲ್ ಮತ್ತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳೂ ಸೇರಿದಂತೆ ಒಟ್ಟು 51 ಜನರ ವಿರುದ್ಧ ತಕ್ಷಣವೇ ಸಿಬಿಐ, ಎನ್ಐಎ, ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಯಿಂದ ತುರ್ತು ತನಿಖೆಗೆ ನಿರ್ದೇಶಿಸಬೇಕು’ ಎಂದು ಕೋರಿದ್ದರು.

‘ಪ್ರತಿವಾದಿಗಳು ಭಾರತೀಯ ಸಂವಿಧಾನವನ್ನು ಅವಮಾನಿಸಿದ್ದಾರೆ. ಭಾರತೀಯ ಚುನಾವಣಾ ಆಯೋಗವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇದರಲ್ಲಿ ಭ್ರಷ್ಟಾಚಾರವೂ ಅಡಕವಾಗಿದೆ. ಆದ್ದರಿಂದ, ಇವರೆಲ್ಲಾ ಪಡೆಯುತ್ತಿರುವ ಸಂಬಳ, ಸಂಬಳದ ಪ್ರಯೋಜನ, ಪಿಂಚಣಿ ಇತ್ಯಾದಿಗಳನ್ನು ಕ್ರಿಮಿನಲ್ ಅಪರಾಧ ಕೃತ್ಯದಡಿ ಪರಿಗಣಿಸಿ ಕಾನೂನು ಕ್ರಮಕ್ಕೆ ಆದೇಶಿಸಬೇಕು’ ಎಂದು ಕೋರಿದ್ದರು.



ಹೇರೋಹಳ್ಳಿಯಲ್ಲಿ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಆಂಜನೇಯಸ್ವಾಮಿ ಬ್ರಹ್ಮರಥೋತ್ಸವ ಭಾನುವಾರ ಜರುಗಿತು

ರಥೋತ್ಸವ

ರಾಜರಾಜೇಶ್ವರಿನಗರ: ಪುರಾಣ ಪ್ರಸಿದ್ಧ ಹೇರೋಹಳ್ಳಿ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ ಭಾನುವಾರ ಜರುಗಿತು.

ರಥೋತ್ಸವಕ್ಕೆ ಶಾಸಕ ಎಸ್.ಟಿ. ಸೋಮಶೇಖರ್, ಪಶ್ಚಿಮ ನಗರ ಪಾಲಿಕೆ ಜಂಟಿ ಆಯುಕ್ತೆ ಆರತಿ ಆನಂದ್, ಉಪ ತಹಶೀಲ್ದಾರ್ ಸವಿತಾ, ಧರ್ಮದರ್ಶಿ ಸುರೇಶ್ ಚಾಲನೆ ನೀಡಿದರು.

ಕಂಬ ಬಿದ್ದು ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಗಾಂಧಿನಗರದ ಅಮರ್ ಹೋಟೆಲ್‌ನಲ್ಲಿ ನವೀಕರಣ ಕಾಮಗಾರಿ ನಡೆಸಲು ಅಳವಡಿಸಿದ್ದ ಕಂಬಗಳು ಬಿದ್ದು, ಮೂವರು ಗಾಯಗೊಂಡಿದ್ದಾರೆ.

ಹೋಟೆಲ್‌ನಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿತ್ತು. ಕಾಮಗಾರಿ ನಡೆಯುತ್ತಿದ್ದ ಸ್ಥಳದ ಪಕ್ಕದಲ್ಲಿ ಸಾರ್ವಜನಿಕರು ನಿಂತಿದ್ದರು. ಏಕಾಏಕಿ ಕಂಬಗಳು ಬಿದ್ದಿದ್ದರಿಂದ ಮೂವರಿಗೆ ಸಣ್ಣಪುಟ್ಟ ಗಾಯವಾಗಿದೆ. ತಕ್ಷಣವೇ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

7ನೇ ಮಹಡಿಯಿಂದ ಬಿದ್ದು ಬಾಲಕ ಸಾವು

ಮದ್ಯಪಾನ ಮಾಡಲು ಅವಕಾಶ: ಪಬ್ ಮಾಲೀಕರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಮುಖ್ಯ ರಸ್ತೆಯ ಅಪಾರ್ಟ್‌ಮೆಂಟ್‌ನ ಏಳನೇ ಮಹಡಿಯಿಂದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಬಿದ್ದು ಮೃತಪಟ್ಟಿದ್ದಾನೆ. ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಕೇರಳದ ಜಾಕೂಬ್ ಜಾನ್ ಎಂಬವರ ಪುತ್ರ ರಿಯಾನ್ ಜಾಕೂಬ್ (15) ಮೃತಪಟ್ಟ ಬಾಲಕ.

ಜಾಕೂಬ್ ಅವರು ಪತ್ನಿ, ಇಬ್ಬರು ಮಕ್ಕಳೊಂದಿಗೆ ಉತ್ತರಹಳ್ಳಿ ಮುಖ್ಯರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದಾರೆ ಎಂದು ಪೊಲೀಸರು ಹೇಳಿದರು.

ಖಾಸಗಿ ಶಾಲೆಯಲ್ಲಿ ರಿಯಾನ್ ಎಸ್ಸೆಸ್ಸೆಲ್ಸಿ ಓದುತ್ತಿದ್ದ. ಶಾಲೆಯಲ್ಲಿ ಜ.31ರಂದು ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮಕ್ಕೆ ತೆರಳಿದ್ದ. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಸ್ನೇಹಿತರ ಜತೆಗೆ ಪಬ್‌ಗೆ ತೆರಳಿದ್ದ. ರಾಜರಾಜೇಶ್ವರಿ ನಗರದ ಪಬ್‌ಗೆ ಹೋಗಿ ಸ್ನೇಹಿತರೆಲ್ಲರೂ ಮದ್ಯಪಾನ ಮಾಡಿದ್ದರು. ನಂತರ ರಿಯಾನ್, ಸ್ನೇಹಿತರನ್ನು ಪಬ್‌ನಿಂದ ಕಳುಹಿಸಿ, ಅಪಾರ್ಟ್‌ಮೆಂಟ್‌ಗೆ ಹಿಂದಿರುಗಿದ್ದ ಎಂದು ಪೊಲೀಸರು ಹೇಳಿದರು.

ಅಪಾರ್ಟ್‌ಮೆಂಟ್‌ನ 7ನೇ ಮಹಡಿಯಲ್ಲಿ ಜಾಕೂಬ್ ಜಾನ್ ಅವರ ಫ್ಲ್ಯಾಟ್ ಇದೆ. ಅಲ್ಲಿಗೆ ಲಿಫ್ಟ್‌ನಲ್ಲಿ ತೆರಳಿದ್ದ ವಿದ್ಯಾರ್ಥಿ, ಅಲ್ಲಿಂದ ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾನೆ ಎಂದು ಮೂಲಗಳು ಹೇಳಿವೆ.

‘ಮದ್ಯದ ನಶೆಯಲ್ಲಿ ಆಯತಪ್ಪಿ ಕೆಳಗೆ ಬಿದ್ದಿದ್ದಾನೆಯೇ ಅಥವಾ ಆತ್ಮಹತ್ಯೆ ಮಾಡಿಕೊಂಡಿದ್ದಾನೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ರಿಯಾನ್ ಶಾಲೆಯಲ್ಲಿ ಪರೀಕ್ಷೆಯಿತ್ತು. ಪರೀಕ್ಷೆಯ ಭಯದಿಂದ ಏನಾದರೂ ಈ ರೀತಿ ಮಾಡಿಕೊಂಡಿದ್ದಾನೆಯೇ ಎಂಬ ಆಯಾಮದಲ್ಲೂ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಪಬ್ ವಿರುದ್ಧ ಎಫ್ಐಆರ್: ಮದ್ಯಪಾನ ಮಾಡಲು ಅವಕಾಶ ನೀಡಿದ್ದ ಪಬ್ ಮಾಲೀಕರ ವಿರುದ್ಧ ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪುತ್ರನ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿ ವಿದ್ಯಾರ್ಥಿಯ ತಂದೆ, ರಾಜರಾಜೇಶ್ವರಿ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಪೊಲೀಸರು, ವಿದ್ಯಾರ್ಥಿ ಪಬ್‌ವೊಂದರಲ್ಲಿ ಸ್ನೇಹಿತರೊಂದಿಗೆ ಮದ್ಯಪಾನ, ಧೂಮಪಾನ ಮಾಡಿರುವುದನ್ನು ಪತ್ತೆಹಚ್ಚಿದ್ದಾರೆ.

ನಾಲ್ಕನೇ ಮಹಡಿಯಿಂದ ಜಿಗಿದು ಯುವಕ ಆತ್ಮಹತ್ಯೆ

ಭಾರತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರ ನಾಲ್ಕನೇ ಮಹಡಿಯಿಂದ ಜಿಗಿದು ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಭಾರತೀನಗರ ನಿವಾಸಿ ಇರ್ಫಾನ್ ಮುಲ್ಲಾನಿ (26) ಮೃತ ಯುವಕ. ಜ.30ರಂದು ಘಟನೆ ನಡೆದಿದ್ದು, ಇರ್ಫಾನ್ ಮುಲ್ಲಾನಿ ಕುಟುಂಬದ ಸದಸ್ಯರು ಕೊಲೆ ಆರೋಪ ಮಾಡಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಭಾರತೀನಗರ ಠಾಣೆ ಪೊಲೀಸರು ಮಾಹಿತಿ ನೀಡಿದರು.

ಇರ್ಫಾನ್ ಮುಲ್ಲಾನಿ ಅವರು ಚಿನ್ನದ ಮಾರಾಟದ ವ್ಯವಹಾರ ಮಾಡುತ್ತಿದ್ದರು. ಜ.30ರಂದು ಭಾರತೀನಗರದ ಹಣ್ಣಿನ ಮಾರುಕಟ್ಟೆ ಸಮೀಪದಲ್ಲಿರುವ ತನ್ನ ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ಹೋಗಿದ್ದರು. ರಾತ್ರಿ 10 ಗಂಟೆ ಸುಮಾರಿಗೆ ಕಟ್ಟಡದ ನಾಲ್ಕನೇ ಮಹಡಿಗೆ ಹೋಗಿ ಅಲ್ಲಿಂದ ಬಿದ್ದಿದ್ದಾರೆ. ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ತನಿಖೆ ನಡೆದಿದ್ದು, ಇರ್ಫಾನ್ ಅವರೊಬ್ಬರೇ ನಾಲ್ಕನೇ ಮಹಡಿಗೆ ಹೋಗಿದ್ದಾರೆ ಎಂಬುದು ಕಂಡುಬಂದಿದೆ ಎಂದು ಪೊಲೀಸರು ಹೇಳಿದರು.

ಲಂಚ ಪಡೆದ ಖಾಸಗಿ ಸರ್ವೇಯರ್‌ಗೆ ಜೈಲು

ದೇವನಹಳ್ಳಿ: ಜಮೀನು ಸರ್ವೆ ಕಾರ್ಯ ಹಾಗೂ 11ಇ ನಕ್ಷೆ ಮಾಡಿಕೊಡಲು ರೈತನಿಂದ ಲಂಚ ಪಡೆದ ಆರೋಪ ಸಾಬೀತಾದ ಕಾರಣ ಖಾಸಗಿ ಸರ್ವೇಯರ್‌ಗೆ ಜಿಲ್ಲಾ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮದ ರೈತ ಎನ್. ಲಕ್ಷ್ಮಣ ಬಿನ್ ನಾರಾಯಣಪ್ಪ ಅವರಿಗೆ ಸೇರಿದ ಸಾಸಲು ಗ್ರಾಮದ ಸರ್ವೆ ನಂ. 26/2ರಲ್ಲಿ 30 ಗುಂಟೆ ಜಮೀನಿನ ಸರ್ವೆ ಹಾಗೂ 11ಇ ನಕ್ಷೆ ಮಾಡಿಕೊಡಲು ಖಾಸಗಿ ಸರ್ವೇಯರ್ ಆಗಿದ್ದ ಡಿ.ಬಿ.ಗೌಡ ₹3,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 2013ರ ನವೆಂಬರ್ 29ರಂದು ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದರು.

ಆಟೊ ನಿಲುಗಡೆ ವಿಚಾರಕ್ಕೆ ಆರು ಮಂದಿ ನಡುವೆ ಗಲಾಟೆ

ಸ್ನೇಹಿತರ ನಡುವೆ ಜಗಳ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಂಡಹಳ್ಳಿ ಸಮೀಪದ ಅಂಬೇಡ್ಕರ್ ಕಾಲೊನಿಯಲ್ಲಿ ಭಾನುವಾರ ರಾತ್ರಿ ಮನೆಯ ಬಳಿ ಆಟೊ ನಿಲುಗಡೆಯ ವಿಚಾರಕ್ಕೆ ಸ್ನೇಹಿತರ ನಡುವೆ ನಡೆದ ಜಗಳದ ವೇಳೆ, ಯುವಕನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಅಂಬೇಡ್ಕರ್ ಕಾಲೊನಿ ನಿವಾಸಿ ಗುಣ (26) ಕೊಲೆಯಾದ ಯುವಕ. ಪ್ರಕರಣದ ಸಂಬಂಧ ವಿನೋದ್, ಅಜಿತ್, ಕುಮಾರ್ ಮತ್ತು ದೀನ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಗುಣ ಅವರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಗುಣ ಅವರ ಸ್ನೇಹಿತ ವೇಲು ಅವರ ಮೇಲೂ ಆರೋಪಿಗಳು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸದ್ಯ ಅವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ಗುಣ, ವೇಲು ಹಾಗೂ ಆರೋಪಿಗಳಾದ ವಿನೋದ್, ಅಜಿತ್, ಕುಮಾರ್ ಹಾಗೂ ದೀನ ಅವರು ಹಲವು ವರ್ಷಗಳಿಂದ ಸ್ನೇಹಿತರು. ಒಂದೇ ಬಡಾವಣೆಯಲ್ಲಿ ನೆಲಸಿದ್ದರು. ಎಲ್ಲರೂ ಜಿಬಿಎಗೆ ಸೇರಿದ ಕಸ ವಿಲೇವಾರಿ ವಾಹನಗಳಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಮನೆ ಬಳಿ ಆಟೊ ನಿಲ್ಲಿಸುವ ವಿಚಾರಕ್ಕೆ ಗುಣ ಮತ್ತು ಆರೋಪಿ ವಿನೋದ್ ನಡುವೆ ಶುಕ್ರವಾರ ರಾತ್ರಿ ಗಲಾಟೆ ನಡೆದಿತ್ತು. ಈ ವೇಳೆ ವಿನೋದ್ ಹಾಗೂ ಆರೋಪಿಗಳು ಒಟ್ಟಾಗಿ ಗುಣ ಅವರ ಆಟೊವನ್ನು ಜಖಂಗೊಳಿಸಿದ್ದರು. ಬಳಿಕ, ಸ್ಥಳೀಯರು ಜಗಳ ಬಿಡಿಸಿ ಕಳುಹಿಸಿದ್ದರು ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಜಗಳದ ಬಳಿಕ ವಿನೋದ್ ಅವರು ಗುಣ ವಿರುದ್ಧ ಕೋಪಗೊಂಡಿದ್ದರು. ಭಾನುವಾರ ರಾತ್ರಿ ಗುಣ ಮತ್ತು ವೇಲು ಬೈಕ್‌ನಲ್ಲಿ ತೆರಳುತ್ತಿದ್ದರು. ಆರೋಪಿಗಳು ಅವರನ್ನು ಅಡ್ಡಗಟ್ಟಿ ಮತ್ತೆ ಜಗಳ ಮಾಡಿದ್ದರು. ಬಳಿಕ ಜಗಳ ವಿಕೋಪಕ್ಕೆ ಹೋಗಿ ವಿನೋದ್ ಮತ್ತು ಸಹಚರರು, ಗುಣ ಹಾಗೂ ವೇಲು ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದಿದ್ದರು. ಗುಣ ಸ್ಥಳದಲ್ಲೇ ಮೃತಪಟ್ಟಿದ್ದರೆ, ವೇಲು ಗಂಭೀರವಾಗಿ ಗಾಯಗೊಂಡಿದ್ದರು ಎಂದು ಪೊಲೀಸರು ಹೇಳಿದರು.

ಗುಣ, ವೇಲು ಹಾಗೂ ವಿನೋದ್‌ಗೆ ಅಪರಾಧ ಹಿನ್ನೆಲೆಯಿದ್ದು, ಈ ಮೂವರ ವಿರುದ್ಧ 2018ರಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಭರಣ ಕಳ್ಳತನ: ಆರೋಪಿ ದಂಪತಿ ಪತ್ತೆಗೆ ಪೊಲೀಸ್ ತಂಡ

ಕೆಂಪಾಪುರ ರಸ್ತೆಯ ಯಮಲೂರಿನ ಬಿಲ್ಡರ್ ಎಂ.ಆರ್. ಶಿವಕುಮಾರ್ ಅವರ ಮನೆಯಲ್ಲಿ ₹18 ಕೋಟಿ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ದಂಪತಿಯ ಪತ್ತೆಗೆ ಏಳು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ.

ಆರೋಪಿತ ದಂಪತಿ, ಮಹಾರಾಷ್ಟ್ರದಲ್ಲೂ ಇದೇ ಮಾದರಿಯಲ್ಲಿ ಬೇರೆ ಬೇರೆ ಹೆಸರಿನಲ್ಲಿ ಕೆಲಸಕ್ಕೆ ಸೇರಿಕೊಂಡು ಕಳ್ಳತನ ಮಾಡಿರುವ ಸಂಗತಿ ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಎಂ.ಆರ್.ಶಿವಕುಮಾರ್ ಅವರ ಮನೆಯಲ್ಲಿ ಜ.25ರಂದು ಚಿನ್ನ ಹಾಗೂ ವಜ್ರದ ಆಭರಣಗಳನ್ನು ನೇಪಾಳದ ದಿನೇಶ್ (32) ಮತ್ತು ಅವರ ಪತ್ನಿ ಕಮಲಾ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಮುಂದಾಗಿರುವ ಪೊಲೀಸರು ದೆಹಲಿ, ಮುಂಬೈ, ಕೋಲ್ಕತ್ತ, ಪುಣೆ, ನೇಪಾಳದ ಗಡಿಭಾಗದಲ್ಲಿ ಹುಡುಕಾಟ ನಡೆಸಿದ್ದಾರೆ. ಇದುವರೆಗೂ ಆರೋಪಿಗಳ ಪತ್ತೆ ಆಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಈ ದಂಪತಿ 2025ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ನಿವೃತ್ತ ಅಧಿಕಾರಿಯೊಬ್ಬರ ಮನೆಯಲ್ಲಿ ದಿನೇಶ್ ಮತ್ತು ಸಲೀನಾ ಎಂಬ ಹೆಸರಿನಲ್ಲಿ ಕೆಲಸಕ್ಕೆ ಸೇರಿಕೊಂಡು ₹16 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ್ದರು. ಆ ಬಳಿಕ ಬೆಂಗಳೂರಿಗೆ ಬಂದು ಬಿಲ್ಡರ್ ಮನೆಯಲ್ಲಿ ಕಳ್ಳತನ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ನೇಪಾಳದ ಮಾಯಾ ಹಾಗೂ ವಿಕಾಸ್ ದಂಪತಿ ಬಿಲ್ಡರ್ ಮನೆಯಲ್ಲಿ ಏಳು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಊರಿಗೆ ಹೋಗುವುದಾಗಿ ಹೇಳಿ ಕೆಲವು ದಿನಗಳ ಹಿಂದೆ ಕೆಲಸ ಬಿಟ್ಟಿದ್ದರು. ಅದಾದ ಮೇಲೆ ಅವರೇ ನೇಪಾಳದ ದಿನೇಶ್ ಹಾಗೂ ಕಮಲಾ ಅವರನ್ನು ಬಿಲ್ಡರ್ ಶಿವಕುಮಾರ್ ಮನೆಯಲ್ಲಿ ಕೆಲಸಕ್ಕೆ ಸೇರಿಸಿದ್ದರು ಎಂದು ಮೂಲಗಳು ಹೇಳಿವೆ.



ಆನೇಕಲ್ ತಾಲ್ಲೂಕಿನ ಚಂದಾಪುರದಲ್ಲಿ ಶಿವಣ್ಣ ಆಪ್ತ ಬಳಗ ಆಯೋಜಿಸಿದ್ದ ರಾಜ್ಯ ಮಟ್ಟದ ಕೊಕ್ಕೊ ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಮೊದಲ ಸ್ಥಾನ ಪಡೆದ ಬೆಂಗಳೂರು ಪಯೋನಿಯರ್ಸ್ ತಂಡಕ್ಕೆ ಬಹುಮಾನ ವಿತರಿಸಲಾಯಿತು

ಕೊಕ್ಕೊ: ಬೆಂಗಳೂರು, ಮೈಸೂರು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಚಂದಾಪುರ (ಆನೇಕಲ್): ಚಂದಾಪುರದಲ್ಲಿ ಬಿ.ಶಿವಣ್ಣ ಆಪ್ತ ಬಳಗ ಆಯೋಜಿಸಿದ್ದ ರಾಜ್ಯಮಟ್ಟದ ಕೊಕ್ಕೊ ಪಂದ್ಯಾವಳಿಯ ಬಾಲಕರ ವಿಭಾಗದಲ್ಲಿ ಬೆಂಗಳೂರು ಪಯೋನಿಯರ್ಸ್ ಹಾಗೂ ಬಾಲಕಿಯರ ವಿಭಾಗದಲ್ಲಿ ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಕುರುಬೂರು ತಂಡ ಜಯಗಳಿಸಿವೆ.

ಭಾನುವಾರ ರಾತ್ರಿ ಅಂತಿಮ ಪಂದ್ಯ ನಡೆದವು. ಬಾಲಕರ ವಿಭಾಗದಲ್ಲಿ ಬೆಂಗಳೂರು ಪಯೋನಿಯರ್ಸ್ ಮತ್ತು ಬೆಂಗಳೂರು ವಿಜಯನಗರದ ಯಂಗ್ ಪಯೋನಿಯರ್ಸ್ ತಂಡ ಮುಖಾಮುಖಿಯಾದವು. ಅಂತಿಮ ಹಣಾಹಣಿಯಲ್ಲಿ ಬೆಂಗಳೂರು ಪಯೋನಿಯರ್ಸ್ ತಂಡವು ಜಯಗಳಿಸಿತು. ₹50ಸಾವಿರ ನಗದು, ಟ್ರೋಫಿಯನ್ನು ತಮ್ಮದಾಗಿಸಿಕೊಂಡಿತು. ರನ್ನರ್ ಅಪ್ ತಂಡಕ್ಕೆ ₹30 ಸಾವಿರ ನಗದು ಮತ್ತು ಟ್ರೋಫಿ ನೀಡಲಾಯಿತು.

ಮೈಸೂರು ಮತ್ತು ಚಾಲುಕ್ಯ ಸ್ಪೋರ್ಟ್ಸ್ ಕ್ಲಬ್ ಕ್ರಮವಾಗಿ ಮೂರು, ನಾಲ್ಕನೇ ಸ್ಥಾನದೊಂದಿಗೆ ತಲಾ ₹15 ಸಾವಿರ ನಗದು ಬಹುಮಾನ ಪಡೆದುಕೊಂಡವು.

ಬಾಲಕಿಯರ ವಿಭಾಗದಲ್ಲಿ ಮೈಸೂರು ಜಿಲ್ಲೆಯ ಕಾವೇರಿ ಕಪಿಲಾ ಸ್ಪೋರ್ಟ್ಸ್ ಕ್ಲಬ್ ಕುರುಬೂರು ತಂಡ ಹಾಗೂ ಬಿಸಿವೈಸಿ ಬೆಂಗಳೂರು ತಂಡ ಮುಖಾಮುಖಿಯಾಗಿದ್ದವು. ರೋಚಕ ಸೆಣಸಾಟದಿಂದ ಜಯ ಸಾಧಿಸಿದ ಮೈಸೂರು ತಂಡವು ₹50 ಸಾವಿರ ನಗದು ಹಾಗೂ ಟ್ರೋಫಿ ಮುಡಿಗೇರಿಸಿಕೊಂಡಿತು.

ರನ್ನರ್ ಅಪ್ ಬಿಸಿವೈಸಿ ಬೆಂಗಳೂರು ತಂಡಕ್ಕೆ ₹30 ಸಾವಿರ ನಗದು, ಮೈಸೂರು ಚಾಮುಂಡೇಶ್ವರಿ ಸ್ಪೋರ್ಟ್ಸ್ ಕ್ಲಬ್ ಮತ್ತು ರಾಯಚೂರು ತಂಡ ಮೂರು, ನಾಲ್ಕನೇ ಸ್ಥಾನದೊಂದಿಗೆ ತಲಾ ₹15 ಸಾವಿರ ನಗದು ಬಹುಮಾನ ತಮ್ಮದಾಗಿಸಿಕೊಂಡವು.

ಪಂದ್ಯಾವಳಿಯಲ್ಲಿ ಕೋಲಾರ, ಚಿತ್ರದುರ್ಗ, ರಾಯಚೂರು, ತುಮಕೂರು, ಬೆಂಗಳೂರು, ಸೇರಿದಂತೆ ರಾಜ್ಯದ ವಿವಿಧೆಡೆಯಿಂದ 39ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

5ರಿಂದ ಎರಡು ದಿನ ನೀರು ಸರಬರಾಜು ವ್ಯತ್ಯಯ

ಬೆಂಗಳೂರು: ಜಲಮಂಡಳಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವ ಕಾರಣದಿಂದ ಫೆ.5, 6ರಂದು ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಮಂಡಳಿ ವತಿಯಿಂದ ಸಾರಕ್ಕಿ ಮಾರ್ಗವಾಗಿ ಬರುವ ನೀರಿನ ಪೈಪ್‌ಲೈನ್ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿ ಅಡಿಯಲ್ಲಿ 1,200 ಮಿ.ಮೀ. ಮತ್ತು 700 ಮಿ.ಮೀ. ವ್ಯಾಸದ ಕೊಳವೆ ಮಾರ್ಗಗಳನ್ನು ಜೋಡಿಸುವ ಕಾರಣದಿಂದ ಕಾವೇರಿ ನೀರು ಸರಬರಾಜು ಯೋಜನೆಯ ಮೊದಲನೇ ಮತ್ತು ಎರಡನೇ ಹಂತಗಳ ಜಲರೇಚಕ ಯಂತ್ರಾಗಾರಗಳನ್ನು ಫೆ.5ರ(ಗುರುವಾರ) ಬೆಳಿಗ್ಗೆ 6ರಿಂದ ಫೆ.6ರ(ಶುಕ್ರವಾರ) ಬೆಳಿಗ್ಗೆ 6ರವರೆಗೆ 24 ಗಂಟೆ ಕಾಲ ಸ್ಥಗಿತಗೊಳಿಸಲಾಗುತ್ತದೆ. ನಾಗರಿಕರು ಅಗತ್ಯವಿರುವ ನೀರನ್ನು ಸಂಗ್ರಹಣೆ ಮಾಡಿಕೊಳ್ಳುವಂತೆ ಅವರು ಕೋರಿದ್ದಾರೆ.

ಎಲ್ಲೆಲ್ಲಿ ವ್ಯತ್ಯಯ: ಮಾಗಡಿ ರಸ್ತೆ, ಕದಿರೇನಹಳ್ಳಿ, ಮಿನಜ್ ನಗರ, ಗಂಗಾಧರ ನಗರ, ಪ್ರಗತಿಪುರ, ಪದ್ಮನಾಭ ನಗರ,ಆರ್.ಕೆ ಲೇಔಟ್, ಚಿಕ್ಕಲ್ಲಸಂದ್ರ, ಹನುಮಗಿರಿ ನಗರ, ಮುನೇಶ್ವರ ನಗರ, ಬೇಂದ್ರೆನಗರ, ಕುಮಾರಸ್ವಾಮಿ ಬಡಾವಣೆ 1ನೇ ಮತ್ತು 2ನೇ ಹಂತ, ಚಂದ್ರಾನಗರ, ಮಾರುತಿ ಬಡಾವಣೆ, ವಿಠ್ಠಲ ನಗರ, ಇಸ್ರೊ ಬಡಾವಣೆ, ಟೀಚರ್ಸ್ ಕಾಲೊನಿ, ಯಲಚೇನಹಳ್ಳಿ, ಕನಕಪುರ ಮುಖ್ಯರಸ್ತೆ.

ಇಲಿಯಾಸ್ ನಗರ, ಪೂರ್ಣ ಪ್ರಜ್ಞ ಲೇಔಟ್, ಉತ್ತರಹಳ್ಳಿ, ಕೆ.ಎಸ್.ಆರ್.ಟಿ.ಸಿ ಬಡಾವಣೆ, ಅಂಕಪ್ಪ ಬಡಾವಣೆ, ಗುಮ್ಮಯ್ಯ ಬಡಾವಣೆ, ಬನಶಂಕರಿ 5ನೇ ಹಂತ, ಎ.ಜಿ.ಎಸ್ ಬಡಾವಣೆ, ಸಾರ್ವಭೌಮನಗರ ಸುಬ್ರಮಣ್ಯಪುರ, ಬಿ.ಎಚ್.ಸಿ.ಎಸ್ ಬಡಾವಣೆ, ಕೆನರಾ ಬ್ಯಾಂಕ್ ಕಾಲೊನಿ, ಕಾಕತೀಯ ನಗರ, ಸುದ್ದಗುಂಟೆ ಪಾಳ್ಯ, ಮಾರುತಿ ನಗರ, ಭವಾನಿ ಲೇಔಟ್, ವೆಂಟೇಶ್ವರ ಲೇಔಟ್, ಬೃಂದಾವನ ಲೇಔಟ್, ಮಡಿವಾಳ, ಚಿನ್ನಮ್ಮ ಲೇಔಟ್, ಕೋರಮಂಗಲ 2,4,5,6,7 ಮತ್ತು 8 ನೇ ಬ್ಲಾಕ್, ಚಿಕ್ಕಆಡುಗೋಡಿ, ಸೆಂಟ್ ಜಾನ್ಸ್ ಆಸ್ಪತ್ರೆ, ರಾಜೇಂದ್ರ ನಗರ, ಆಡುಗೋಡಿ, ಜಾನ್ಸನ್ ಮಾರ್ಕೆಟ್, ಸಿಎಲ್‌ಆರ್ ಭಾಗ.

ಶಾಂತಿನಗರ, ಎಂ.ಜಿ ರಸ್ತೆ, ರಿಚ್‌ಮಂಡ್ ಟೌನ್, ನೀಲಸಂದ್ರ, ಅಶೋಕ ನಗರ, ಆಸ್ಟಿನ್ ಟೌನ್, ವಿವೇಕ್ ನಗರ, ಈಜಿಪುರ, ದೊಮ್ಮಲೂರು, ಕೋಡಿಹಳ್ಳಿ, ಕಮಾಂಡೊ ಆಸ್ಪತ್ರೆ, ಜೋಗುಪಾಳ್ಯ, ಕೇಂಬ್ರಿಡ್ಜ್ ಲೇಔಟ್ ಚಾಮರಾಜಪೇಟೆ, ಶ್ರೀನಗರ, ಬಿಎಸ್‌ಕೆ 1ನೇ ಹಂತ, ಅಶೋಕ್ ನಗರ ಪೈಪ್ ಲೈನ್ ರಸ್ತೆ, ಜಯನಗರ 4ನೇ ಮತ್ತು ಟಿ ಬ್ಲಾಕ್, ತಿಲಕ್ ನಗರ, ಮಾಧವನ್ ಪಾರ್ಕ್, ಹೊಂಬೇಗೌಡ ನಗರ, ಲಕ್ಕಸಂದ್ರ, ಶಾಂತಿನಗರ ಲೇಔಟ್, ಜೆ.ಕೆ.ಪುರ, ಅಕ್ಕಿತಿಮ್ಮನಹಳ್ಳಿ, ಜಗಜೀವನರಾಮ್ ನಗರ, ರುದ್ರಪ್ಪ ಗಾರ್ಡನ್, ವಾಲ್ಮೀಕಿ ನಗರ, ಮಾವಳ್ಳಿ, ಶಂಕರಪುರ, ಕೆಂಪೇಗೌಡನಗರ, ಸುಧಾಮನಗರ, ಬನಗಿರಿ, ಜಯನಗರ, 6,7 ಮತ್ತು 8ನೇ ಬ್ಲಾಕ್, ಯಡಿಯೂರು, ಇಟ್ಟಮಡು, ಎಸ್‌ಬಿಎಂ ಕಾಲೊನಿ, ಹೊಸಕೆರೆಹಳ್ಳಿ, ಐಟಿಐ ಲೇಔಟ್, ಶ್ರೀನಿವಾಸ ನಗರ, ಡಿಸೋಜಾ ನಗರ, ಕೆರೆಕೋಡಿ, ಮುನೇಶ್ವರ ನಗರ, ಜೆ.ಪಿ.ನಗರ 1, 2, 3ನೇ ಹಂತ, ಮಾರೇನಹಳ್ಳಿ, ಜಯನಗರ 5, 9ನೇ ಬ್ಲಾಕ್, ಭೈರಸಂದ್ರ, ಎಲ್‌ಐಸಿ ಕಾಲೊನಿ, ಸಿದ್ದಾಪುರ, ವಿಲ್ಸನ್ ಗಾರ್ಡನ್, ನಿಮಾನ್ಸ್ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತೊಂದರೆಯಾಗಬಹುದು ಎಂದು ಜಲಮಂಡಳಿ ತಿಳಿಸಿದೆ.

ಸ್ಕೂಟರ್ ಬೆನ್ನಟ್ಟಿ ₹31.30 ಲಕ್ಷ ದೋಚಿದ ದುಷ್ಕರ್ಮಿಗಳು

ಪ್ರಜಾವಾಣಿ ವಾರ್ತೆ

ಬನ್ನೇರುಘಟ್ಟ (ಆನೇಕಲ್): ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯ ಸಕಲವಾರದ ಬಳಿ ಭಾನುವಾರ ಹಣ ಸಾಗಿಸುವ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬನನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು ಮಾರಾಕಸ್ತ್ರ ತೋರಿಸಿ ₹31.30 ಲಕ್ಷ ನಗದು ದೋಚಿದ್ದಾರೆ.

ಉಡಾನ್ ಕ್ಯಾಶ್ ಕಲೆಕ್ಟಿಂಗ್ ಖಾಸಗಿ ಕಂಪನಿಯ ಹಣ ಸಂಗ್ರಹ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಕೈಲಾಶ್ ಭಾನುವಾರ ವಿವಿಧ ಶಾಖೆಗಳಿಗೆ ತೆರಳಿ ₹31,38,625 ಸಂಗ್ರಹಿಸಿ ಸ್ಕೂಟರ್ ಡಿಕ್ಕಿಯಲ್ಲಿ ಇಟ್ಟುಕೊಂಡು ಹೊರಟಿದ್ದರು. ಎರಡು ಬೈಕ್‌ಗಳಲ್ಲಿ ಅವರನ್ನು ಹಿಂಬಾಲಿಸಿಕೊಂಡು ಬಂದ ನಾಲ್ವರು ದುಷ್ಕರ್ಮಿಗಳು ಬನ್ನೇರುಘಟ್ಟ ಬಳಿ ಸ್ಕೂಟರ್ ಅಡ್ಡಗಟ್ಟಿದರು.

ಕೈಲಾಶ್ ಅವರಿಗೆ ಲಾಂಗ್ ತೋರಿಸಿ ಬೆದರಿಸಿದ ದುಷ್ಕರ್ಮಿಗಳು ₹31.30 ಲಕ್ಷ ಇದ್ದ ಸ್ಕೂಟರ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಘಟನೆ ಸಂಭವಿಸಿದ ಜಾಗದ ಒಂದೆರಡು ಕಿಲೋ ಮೀಟರ್ ದೂರ ಹೋದ ನಂತರ ಸ್ಕೂಟರ್‌ನಲ್ಲಿದ್ದ ಹಣ ತೆಗೆದುಕೊಂಡು, ಸ್ಕೂಟರ್ ಅಲ್ಲಿಯೇ ಬಿಟ್ಟು ಹೋಗಿದ್ದಾರೆ. ಸಿಸಿಟಿವಿ ಕ್ಯಾಮೆರಾದಲ್ಲಿ ದರೋಡೆಯ ದೃಶ್ಯ ಸೆರೆಯಾಗಿದೆ.

ಕೈಲಾಶ್ ಉಡಾನ್ ಕ್ಯಾಶ್ ಕಲೆಕ್ಟಿಂಗ್ ಕಂಪನಿಯ ಏಜೆಂಟ್ ಆಗಿದ್ದು ಕಳೆದು ಐದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರು. ಇ-ಕಾಮರ್ಸ್ ಕಂಪನಿಗಳು ಮತ್ತು ಗೋದಾಮುಗಳಿಂದ ನಗದು ಸಂಗ್ರಹಿಸಿ ತೆರಳುತ್ತಿದ್ದಾಗ ಸಂಜೆ 4.30ಕ್ಕೆ ಮುಖ್ಯರಸ್ತೆಯಲ್ಲೇ ದರೋಡೆ ನಡೆದಿದೆ.

₹70 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಜನವರಿ 31ರ ರಾತ್ರಿ ಬ್ಯಾಂಕಾಕ್‌ನಿಂದ ಬಂದಿಳಿದ ವಿದೇಶಿ ಪ್ರಯಾಣಿಕನ ಬಳಿ 2 ಕೆ.ಜಿ. ಹೈಡ್ರೊ ಗಾಂಜಾ ಪತ್ತೆಯಾಗಿದೆ.

ಕಸ್ಟಮ್ಸ್ ಹಾಗೂ ವೈಮಾನಿಕ ಗುಪ್ತಚರ ದಳದ ಸಿಬ್ಬಂದಿ ವಿದೇಶಿ ಪ್ರಯಾಣಿಕರನ್ನು ತೀವ್ರ ತಪಾಸಣೆ ನಡೆಸಿದ ವೇಳೆ ಕಳ್ಳಸಾಗಣೆ ಪತ್ತೆಯಾಗಿದೆ.

ಆರೋಪಿಯಿಂದ ಜಪ್ತಿ ಮಾಡಿರುವ ಗಾಂಜಾದ ಮೌಲ್ಯವು ಸುಮಾರು ₹70 ಲಕ್ಷ ಎಂದು ಅಂದಾಜಿಸಲಾಗಿದೆ.

ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

‘ಕೆಪಿಎಸ್-ಮ್ಯಾಗ್ನೆಟ್’ಗೆ ವಿರೋಧ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸರ್ಕಾರಿ ಶಾಲೆಗಳನ್ನು ಮುಚ್ಚಿ ‘ಕೆಪಿಎಸ್- ಮ್ಯಾಗ್ನೆಟ್’ ಯೋಜನೆ ಜಾರಿಗೊಳಿಸುವುದನ್ನು ವಿರೋಧಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ವಿಶ್ವೇಶ್ವರಪುರದ ಸರ್ಕಾರಿ ಶಾಲೆಯ ಮುಂಭಾಗ ಪ್ರತಿಭಟನಾ ಸಮಾವೇಶ ಆಯೋಜಿಸಲಾಗಿತ್ತು.

ತಾಲ್ಲೂಕಿನ ವಿಶ್ವೇಶ್ವರಪುರ, ಲೋಹಿತನಗರ, ಮೈಲನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಇಸ್ಲಾಂಪುರದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳನ್ನು ಉಳಿಸಿಕೊಳ್ಳಲು ನಡೆದ ಸಮಾವೇಶದಲ್ಲಿ ಐದು ಹಳ್ಳಿಗಳ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ವಿ.ಕಲ್ಯಾಣ್ ಕುಮಾರ್ ಮಾತನಾಡಿ, ‘ಶಿಕ್ಷಣದ ಹಕ್ಕನ್ನು ಉಳಿಸಿಕೊಳ್ಳಲು ಎಐಡಿಎಸ್‌ಒ ದೇಶದಾದ್ಯಂತ ಹೋರಾಟ ನಡೆಸುತ್ತಿದೆ. ಸರ್ಕಾರವು ಮೂಲಸೌಕರ್ಯ ಒದಗಿಸದೆ, ದಾಖಲಾತಿ ಕೊರತೆಯ ನೆಪವೊಡ್ಡಿ ಮ್ಯಾಗ್ನೆಟ್ ಯೋಜನೆಯ ಮೂಲಕ ರಾಜ್ಯದ 40 ಸಾವಿರ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಖಂಡನೀಯ’ ಎಂದರು.

‘ವಾಹನ ಸೌಲಭ್ಯದ ಆಮಿಷವೊಡ್ಡಿ ಹಳ್ಳಿ ಶಾಲೆಗಳನ್ನು ನಾಶಮಾಡಿ, ಪೋಷಕರನ್ನು ಖಾಸಗಿ ಶಾಲೆಗಳತ್ತ ತಳ್ಳಲಾಗುತ್ತಿದೆ. ಖಾಸಗಿ ಸಂಸ್ಥೆಗಳಿಗೆ ಮಣೆ ಹಾಕುವ ಬದಲು ಹಳ್ಳಿಯ ಶಾಲೆಗಳನ್ನೇ ಮಾದರಿ ಶಾಲೆಗಳನ್ನಾಗಿ ಮಾಡಲು ಸರ್ಕಾರ ಮುಂದಾಗಬೇಕು’ ಎಂದು ಆಗ್ರಹಿಸಿದರು.

ವಿಶ್ವೇಶ್ವರಪುರ ಶಾಲೆ ನಿವೃತ್ತ ಶಿಕ್ಷಕಿ ಗೀತಾ ಮಾತನಾಡಿ, ‘5 ಕಿಲೋಮೀಟರ್ ದೂರದ ಶಾಲೆಗೆ ಪುಟ್ಟ ಮಕ್ಕಳು ಪ್ರತಿದಿನ ಪ್ರಯಾಣ ಮಾಡುವುದು ಅಸಾಧ್ಯ. ಇದು ಮಕ್ಕಳನ್ನು ಶಿಕ್ಷಣದಿಂದ ದೂರವಿಡುವ ಸಂಚು’ ಎಂದು ಆತಂಕ ವ್ಯಕ್ತಪಡಿಸಿದರು.

ಎಐಡಿಎಸ್‌ಒ ರಾಜ್ಯ ಉಪಾಧ್ಯಕ್ಷರಾದ ಅಭಯ ದಿವಾಕರ್, ಮೈಲನಹಳ್ಳಿಯ ವೆಂಕಟೇಶ್, ವಿಶ್ವೇಶ್ವರಪುರ ಮುಖಂಡ ಬೈಲಮೂರ್ತಿ, ಇಸ್ಲಾಂಪುರ ‘ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ’ಯ ಸದಸ್ಯರಾದ ಅಸ್ಲಾಂ ಪಾಷ, ಎಐಯುಟಿಯುಸಿ ಕಾರ್ಮಿಕ ಮುಖಂಡರಾದ ಹನುಮೇಶ್ ಮಾತನಾಡಿದರು. ಎಐಡಿಎಸ್‌ಒ ಜಿಲ್ಲಾ ಕಾರ್ಯಕಾರಿ ಮಂಡಳಿಯ ಸದಸ್ಯೆ ಎಸ್.ಪ್ರಕೃತಿ ಭಾಗವಹಿಸಿದ್ದರು.



ಕೆಪಿಎಸ್– ಮ್ಯಾಗ್ನೆಟ್ ಯೋಜನೆ ವಿರುದ್ಧ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಜಲಮಂಡಳಿ ಅಧಿಕಾರಿಗಳು, ಸಿಬ್ಬಂದಿಯ ನಿರ್ಲಕ್ಷ್ಯದ ಆರೋಪ

ಚೇಂಬರ್‌ಗೆ ಬಿದ್ದು ಬಾಲಕ ಸಾವು: ತನಿಖೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೂವರು ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚನೆ
- ಫೆಬ್ರುವರಿ 5ರ ಒಳಗಾಗಿ ವರದಿ ಸಲ್ಲಿಸಲು ಸೂಚನೆ

ಬೆಂಗಳೂರು: ಜಲಮಂಡಳಿಯ ಕಾವೇರಿ ಐದನೇ ಹಂತದ ಕೊಳವೆ ಮಾರ್ಗದ ಚೇಂಬರ್‌ಗೆ ಬಿದ್ದು 9ನೇ ತರಗತಿಯ ವಿದ್ಯಾರ್ಥಿ ಪ್ರೀತಂ (14) ಮೃತಪಟ್ಟ ಪ್ರಕರಣದ ತನಿಖೆಗೆ ಜಲಮಂಡಳಿಯು ಮೂವರು ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಿದೆ. ಫೆಬ್ರುವರಿ 5ರ ಒಳಗಾಗಿ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಎಂಬಲ್ಲಿ ಘಟನೆ ನಡೆದಿತ್ತು.

ಅಧಿಕಾರಿಗಳು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯದಿಂದಲೇ ಬಾಲಕನ ಸಾವು ಸಂಭವಿಸಿದೆ ಎಂಬ ಆರೋಪವಿದ್ದು, ತನಿಖೆಗೆ ಸಮಿತಿ ರಚಿಸಲಾಗಿದೆ ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.

ಕನಕಪುರ ರಸ್ತೆಯಲ್ಲಿ ಕಾವೇರಿ ನೀರು ಪೂರೈಕೆ ಯೋಜನೆಯ ಕಾಮಗಾರಿ ನಡೆಯುತ್ತಿದೆ. ಈ ವೇಳೆ ಕಗ್ಗಲೀಪುರದಲ್ಲಿ ಚೇಂಬರ್ ತೆಗೆದು ಹಾಗೆಯೇ ಬಿಡಲಾಗಿತ್ತು. ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಈ ನಡುವೆ ಪ್ರೀತಂ ನಾಲ್ಕು ದಿನದ ಹಿಂದೆಯೇ ಚೇಂಬರ್ ಬಳಿ ಹೋದಾಗ ಬಿದ್ದಿದ್ದ. ಅಂದು ಸಂಜೆಯಾದರೂ ಬಾಲಕ ಮನೆಗೆ ಬಾರದೇ ಇದ್ದಾಗ ಆತಂಕಗೊಂಡ ಪೋಷಕರು ನಾಪತ್ತೆ ದೂರು ನೀಡಿದ್ದರು. ಕಗ್ಗಲೀಪುರ ಠಾಣೆಯ ಪೊಲೀಸರು ದೂರು ದಾಖಲಿಸಿಕೊಂಡಿದ್ದರು. ಚೇಂಬರ್ ಬಳಿಯೇ ವಾಸನೆ ಬಂದಿದ್ದರಿಂದ ಹುಡುಕಾಟ ನಡೆಸಿದಾಗ ಆತನ ಶವ ಪತ್ತೆಯಾಗಿತ್ತು.

‘ಈ ಹಿಂದೆಯೇ ಚೇಂಬರ್ ತೆರೆದಿರುವುದು, ಸುರಕ್ಷತಾ ಕ್ರಮ ವಹಿಸದ ಬಗ್ಗೆ ಜಲಮಂಡಳಿಗೆ ದೂರು ನೀಡಿದ್ದೆವು. ಯಾವುದೇ ಕ್ರಮ ಕೈಗೊಂಡಿರಲಿಲ್ಲ. ನಮ್ಮ ಮಗನನ್ನು ಕಳೆದುಕೊಳ್ಳುವಂತಾಯಿತು’ ಎಂದು ತಾಯಿ ಪುಷ್ಪಾ ಹಾಗೂ ಕುಟುಂಬದವರು ಕಣ್ಣೀರಿಟ್ಟರು.

ವರದಿ ನಂತರ ಕ್ರಮ: ‘ಘಟನೆಯ ಬಗ್ಗೆ ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್.ದಲಾಯತ್, ಮುಖ್ಯ ಎಂಜಿನಿಯರ್‌ಗಳಾದ ಎ. ರಾಜಶೇಖರ್, ಕೆ.ಎನ್. ಮಹೇಶ್ ನೇತೃತ್ವದಲ್ಲಿ ತನಿಖೆ ನಡೆಸಲು ತಂಡ ನೇಮಿಸಲಾಗಿದೆ. ವರದಿ ಬಂದ ನಂತರ, ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.



ಅಧಿಕ ನಾರಿನಂಶ ಹಾಗೂ ಹೇರಳವಾದ ಸಿ ವಿಟಮಿನ್‌ಗೆ ಹೆಸರಾದ ಸೀಬೆಹಣ್ಣಿನಲ್ಲಿರುವ ಆ್ಯಂಟಿ-ಆಕ್ಸಿಡೆಂಟ್‌ಗಳು ಚರ್ಮದ ಆರೋಗ್ಯವನ್ನು ಕಾಪಾಡಬಲ್ಲವು

ಔಷಧದಂಗಡಿಯಲ್ಲಿ ಕಾವ್ಯೌಷಧ!

● ಡಾ. ಕೆ.ಎಸ್. ಪವಿತ್ರ

ಕಳೆದ ವರ್ಷ ಇಂಗ್ಲೆಂಡ್‌ನ ಗ್ರೇಟ್ ಮ್ಯಾಂಚೆಸ್ಟರ್‌ನಲ್ಲಿ 'ಪೊಯೆಟ್ರಿ ಫಾರ್ಮಸಿ' ಎಂಬ ಜಾಹೀರಾತಿನ ಪೋಸ್ಟರ್‌ಗಳು ಎಲ್ಲೆಡೆ ಹರಿದಾಡಲಾರಂಭಿಸಿದವು. ಪ್ರತಿ ಪ್ರೌಢಶಾಲೆ, ಕುಟುಂಬ ವೈದ್ಯರ ಕ್ಲಿನಿಕ್‌ಗಳು, ಆಸ್ಪತ್ರೆಗಳಲ್ಲಿ 'ಪೊಯೆಟ್ರಿ ಫಾರ್ಮಸಿ'ಯ ಕ್ಯೂಆರ್ ಸ್ಕ್ಯಾನ್ ಕೋಡ್‌ಗಳನ್ನು ಹಾಕಲಾಯಿತು. ಜನರಿಗೆ ತಮ್ಮ ಆರೋಗ್ಯದ ಸಮಸ್ಯೆ ಹದಗೆಟ್ಟ ಮನಃಸ್ಥಿತಿಯಲ್ಲಿ ತಾವು ಓದಿದ ಕವನ ಎಷ್ಟು ಸೂಕ್ತ, ಸಮಾಧಾನ ನೀಡುವಂತಹದ್ದು ಎನಿಸಿತು ಎಂಬ ಬಗ್ಗೆ ಪ್ರತಿಕ್ರಿಯೆ ನೀಡುವ ಅವಕಾಶ, ಕೆಲವು 'ನೋವನ್ನು ಮಾಯಿಸುವ' ಕವನಗಳನ್ನು ಆಸ್ಪತ್ರೆಗಳಲ್ಲಿ ಪ್ರದರ್ಶಿಸುವುದು, ವೈದ್ಯಕೀಯ ಕ್ಷೇತ್ರದ ಸಿಬ್ಬಂದಿಗಳು ಮತ್ತು ರೋಗಿಯ ಕುಟುಂಬದವರಿಗೆ ಸಾಂತ್ವನ ನೀಡುವ ಪ್ರಯತ್ನಗಳು ಮೊದಲಾದ ಚಟುವಟಿಕೆಗಳು ನಡೆದವು.

'ಪೊಯೆಟ್ರಿ ಫಾರ್ಮಸಿ' ಅಥವಾ ಕವಿತೆಗಳೇ ಔಷಧಗಳಾಗಿ ದೊರೆಯುವ ಔಷಧದಂಗಡಿ ಎಂಬ ಪದಗಳು ಹೊಸತಾಗಿರಬಹುದು; ಆದರೆ ಪರಿಕಲ್ಪನೆಯೇನೂ ಹೊಸತಲ್ಲ. ಹಿಂದಿನಿಂದ ಇಂದಿನವರೆಗೂ, ಆರೋಗ್ಯದ ಯಾವುದೇ ಸಮಸ್ಯೆಗೂ (ದೈಹಿಕ-ಮಾನಸಿಕ ಆರೋಗ್ಯಗಳೆರಡನ್ನೂ ಒಳಗೊಂಡು) ಕೇವಲ ರೋಗಕ್ಕೆ ಚಿಕಿತ್ಸೆ ನೀಡುವುದಲ್ಲ, 'ರೋಗಿ' ಎಂಬ ವ್ಯಕ್ತಿಗೆ ಚಿಕಿತ್ಸೆ ನೀಡಬೇಕು ಎನ್ನುವುದು ವೈದ್ಯಕೀಯ ಕ್ಷೇತ್ರದ ಬಲವಾದ ಪ್ರತಿಪಾದನೆ. ಜೀವನದ ಗುಣಮಟ್ಟವನ್ನು ಕಾಪಾಡಲು, ವರ್ಧಿಸಲು ಚಿಕಿತ್ಸೆಯ ಚೀಟಿಯಲ್ಲಿ, ಬರೆಹದಲ್ಲಿ ಮಾತ್ರೆ-ಟಾನಿಕ್ಕು-ಇಂಜೆಕ್ಷನ್ನುಗಳನ್ನು ಬರೆದರೂ, ಅದನ್ನಷ್ಟೇ 'ಪ್ರಿಸ್ಕ್ರಿಪ್ಷನ್' ಎಂಬ ಹೆಸರಿನಿಂದ ನಾವು ಕರೆದರೂ, ಅದರೊಂದಿಗೆ ವೈದ್ಯನಾದವನು ಜೀವನವನ್ನು ಸಂತಸಮಯವಾಗಿಸುವ, ನರಳುವಿಕೆ ತಗ್ಗಿಸುವ ಹಲವು ಸೂಚನೆಗಳನ್ನು ನೀಡಬಹುದು, ನೀಡಬೇಕು; ಅದೂ ಕೂಡ ಪ್ರಿಸ್ಕ್ರಿಪ್ಷನ್‌ನ ಭಾಗವೇ ಎಂಬುದನ್ನು ವೈದ್ಯಕೀಯ ಕ್ಷೇತ್ರ ಸ್ಪಷ್ಟವಾಗಿಯೇ ಹೇಳುತ್ತಲೇ ಬಂದಿದೆ.

ಆಧುನಿಕ ವಿಜ್ಞಾನ ಕುತೂಹಲದಿಂದ ಮತ್ತಷ್ಟು ಮುಂದುವರಿದು, ಕಲಾ-ಸಾಹಿತ್ಯ ಚಿಕಿತ್ಸೆಗಳು ಮಿದುಳಿನ ಆರೋಗ್ಯವನ್ನು ಸುಧಾರಿಸುತ್ತವೆ; ಒತ್ತಡವನ್ನು ಕಡಿಮೆ ಮಾಡಿ, ಹಲವು ದೈಹಿಕ ಕಾಯಿಲೆಗಳನ್ನು ತಡೆಯುತ್ತವೆ ಎಂಬುದನ್ನು ದೃಢಪಡಿಸಿವೆ. ಅವು ರಕ್ತದೊತ್ತಡವನ್ನು ಕಡಿಮೆ ಮಾಡಿ, ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ; ಒಂಟಿತನವನ್ನು ಈ ಚಿಕಿತ್ಸೆಗಳು ಆಶ್ಚರ್ಯಕರವಾಗಿ ಕಡಿಮೆ ಮಾಡಬಲ್ಲವು ಎಂದೂ ನಿರೂಪಿಸಿವೆ.



ಆಲೋಚನೆ ಹಳೆಯದೇ, ಗೊತ್ತಿರುವಂತಹ ಸಂಗತಿಯೇ ಆದರೂ, ಅದನ್ನು ವ್ಯಾಪಕವಾಗಿ, ಜನರು ಅದನ್ನು ಒಪ್ಪಿಕೊಂಡು, ಬಳಕೆಯಲ್ಲಿ ರೂಢಿಯಾಗುವಂತೆ ಮಾಡುವ ಕಾರ್ಯ ಸುಲಭವೇನಲ್ಲ. 'ನೋವಿನ ಮಾತ್ರೆ ನುಂಗೋಣ, ನೋವು ಮಾಯವಾಗುತ್ತದೆ' ಎಂಬ ತಿಳಿವಳಿಕೆಗೂ, ತಲೆನೋವು ಬಂದಾಕ್ಷಣ 'ಮಾತ್ರೆ ನುಂಗಿದರೂ ಪರವಾಗಿಲ್ಲ, ಅದು ಮತ್ತೆ ಬರದಿರುವಂತೆ ಮಾಡಲು, ಒಂದು ಗಂಟೆಯಲ್ಲಿ ಕಡಿಮೆಯಾಗಬಹುದಾಗಿದ್ದ ತಲೆನೋವು ಅರ್ಧಗಂಟೆಯಲ್ಲಿ ಇಳಿಯುವಂತೆ ಮಾಡಲು ನೋವಿನ ಬಗೆಗಿರುವ ಕವಿತೆಯನ್ನೋ, ಹಾಸ್ಯಮಯವಾದ ಕವಿತೆಯನ್ನೋ ಓದೋಣ' ಎಂಬ ಅರಿವಿಗೂ ಬಹು ಅಂತರವಿದೆಯಷ್ಟೆ!

'ಕಾವ್ಯದಂತಹ ಚಿಕಿತ್ಸೆಯೆಂದರೆ ಅದು ತುರ್ತು ಪರಿಸ್ಥಿತಿಗಳಲ್ಲಾಗಲಿ, ದೇಹದ ಆರೋಗ್ಯ ಸಮಸ್ಯೆಗಳಲ್ಲಾಗಲೀ ಬೇಡದಿರುವಂತಹದ್ದು, ಕೊಡಲಾಗದಂತಹದ್ದು. ಕಾವ್ಯವೇನಿದ್ದರೂ ಹೊಟ್ಟೆ ತುಂಬಿ, ಆರಾಮವಾಗಿ, ಯಾವ ಕಷ್ಟವೂ ಇರದಿದ್ದಾಗ, ಕೆಲಸಗಳೆಲ್ಲವೂ ಮುಗಿದಾಗ ಓದಬೇಕಾದಂತಹದ್ದು. ಅದಕ್ಕೂ ಆರೋಗ್ಯಕ್ಕೂ ಯಾವ ಸಂಬಂಧವೂ ಇಲ್ಲ. ಅಲ್ಪಸ್ವಲ್ಪವೇನಾದರೂ ನಂಟು ಎಂಬುದಿದ್ದರೆ ಅದೇನಿದ್ದರೂ ಮಾನಸಿಕ ಆರೋಗ್ಯಕ್ಕೆ ಮಾತ್ರ' ಎಂದು ಎನಿಸಬಹುದು. ಆದರೆ ವಸ್ತುಸ್ಥಿತಿ ಇದಲ್ಲ. ಸಿಗ್‌ಹಾರ್ಟ್ ರಾಷ್ಟ್ರೀಯ ಆರೋಗ್ಯ ಸೇವೆಯ ಜೊತೆಗೆ 'ಪೊಯೆಟ್ರಿ ಫಾರ್ಮಸಿ'ಯನ್ನು ಜೋಡಿಸಿರುವ ಹಿಂದೆ ಬಲವಾದ ವೈಜ್ಞಾನಿಕ ಆಧಾರವಿದೆ. ದೇಹ-ಮನಸ್ಸು-ಮಿದುಳುಗಳನ್ನು, ಅವುಗಳ ಸಮಸ್ಯೆಗಳನ್ನು ಪ್ರತ್ಯೇಕವಾಗಿ ನೋಡಲಾಗದು; ಅವುಗಳ ಸ್ಥಿತಿ, ಕಾರ್ಯ ಒಂದನ್ನೊಂದು ಅವಲಂಬಿಸಿದೆ, ಮನಸ್ಸು-ಮಿದುಳುಗಳು ಕವಿತೆಯೊಂದನ್ನು ಓದಿ ಅರ್ಥಮಾಡಿಕೊಂಡು, ಅವರೊಡನೆ ಗುರುತಿಸಿಕೊಳ್ಳಲು ಸಾಧ್ಯವಾದರೆ, ಅದರಿಂದ ಉಂಟಾಗುವ ಬದಲಾವಣೆ ಇಡೀ ದೇಹಕ್ಕೆ, ಯಾವುದೇ ಆರೋಗ್ಯ ಸಮಸ್ಯೆಗೆ ಉಪಯುಕ್ತ ಎನಿಸಬಲ್ಲದು.

ಈ ವೈಜ್ಞಾನಿಕ ಆಧಾರದ ಹಿನ್ನೆಲೆಯಲ್ಲಿಯೇ ಕಾವ್ಯೌಷಧದಂಗಡಿಯಲ್ಲಿ ಖಿನ್ನತೆಗೆ, ಶೋಕಕ್ಕೆ, ಒತ್ತಡಕ್ಕೆ, ಈಗಷ್ಟೇ ಶಸ್ತ್ರಚಿಕಿತ್ಸೆಯಾಗಿರುವವರಿಗೆ, ಕ್ಯಾನ್ಸರ್‌ನಿಂದ ನರಳುವವರಿಗೆ, ಸಾವನ್ನು ಎದುರು ನೋಡಬೇಕಾದ ಗಂಭೀರ ಆರೋಗ್ಯ ಸಮಸ್ಯೆಗಳಿರುವವರಿಗೆ, ರಕ್ತದೊತ್ತಡ ಇರುವವರಿಗೆ, ನಡಿಗೆಯಂತಹ ಆರೋಗ್ಯಕರ ನಡವಳಿಕೆಗಳನ್ನು ರೂಢಿಸಿಕೊಳ್ಳಲು ಆಗುತ್ತಿಲ್ಲ ಎನ್ನುವವರಿಗೆ, ಕಾಲು-ಕೈ ಮುರಿದಿರುವವರಿಗೆ ಇನ್ನೂ ಇಂತಹ ಎಷ್ಟೋ ಆರೋಗ್ಯದ ಸಮಸ್ಯೆಗಳಿಗೆ ಕ್ಯಾಪ್ಸೂಲ್, ಬಾಟಲಿ, ಮಾತ್ರೆಗಳ ಕವಚಗಳೊಳಗೆ ಹುದುಗಿರುವ ಕವಿತೆಗಳೆಂಬ ಸಾಮಗ್ರಿಯ ಔಷಧಗಳಿವೆ.

ನಮ್ಮ ಊರುಗಳಲ್ಲಿ ಸಿಗ್‌ಹಾರ್ಟ್ ತೆರೆದಂತಹ ಕಾವ್ಯೌಷಧದಂಗಡಿ ಇಲ್ಲದಿರಬಹುದು. ಆದರೆ ನಮ್ಮದೇ ಮನೆಮದ್ದುಗಳ ಕಪಾಟಿನಲ್ಲಿ ಅದರ ಪಕ್ಕವೇ ಕಾವ್ಯ ಮದ್ದುಗಳು ಪುಟ್ಟದೊಂದು ಬುಟ್ಟಿಯನ್ನಿರಿಸಿಕೊಳ್ಳುವುದು ಕಷ್ಟವೇನಲ್ಲ. ಅದು ಕನ್ನಡ, ಇಂಗ್ಲಿಷ್, ಅಥವಾ ಇನ್ನಾವುದೇ ಭಾಷೆಯದ್ದೂ ಆಗಬಹುದು; ಜಗತ್ತಿನ ವಿವಿಧ ಭಾಷೆಗಳಿಂದ ಭಾಷಾಂತರವಾಗಿರುವ ನಮಗೆ ಸುಲಭವಾಗಿ ಮನಮುಟ್ಟುವ ಕವಿತೆಗಳೂ ಇರಬಹುದು. ನೋವು-ನರಳುವಿಕೆಗಳನ್ನು ಕಾವ್ಯಕ್ಕಿಂತ ಸಮರ್ಥವಾಗಿ ಹಿಡಿದಿಡುವುದು ಯಾವುದು? ಮತ್ತು ನೋವು ನರಳುವಿಕೆಗಳು ಜಗತ್ತಿನ ಎಲ್ಲೆಡೆಯೂ ಇವೆಯಷ್ಟೆ!

ಕಾವ್ಯೌಷಧದ ಇಂತಹ ಮನೆ ಮದ್ದುಗಳ ಕಪಾಟಿನಲ್ಲಿ ಸುಲಭವಾಗಿ ಸೇರಿಸಬಹುದಾದದ್ದು ಡಿ.ವಿ.ಜಿ.ಯವರ ಪುಟ್ಟ ಪುಸ್ತಕ 'ಮಂಕುತಿಮ್ಮನ ಕಗ್ಗ'. ನಾಲ್ಕು ಸಾಲುಗಳ ಚುಟುಕಾದ, ಬೇಗ ಅರ್ಥವಾಗುವ, ನಾವಿರುವ ಸಂದರ್ಭಕ್ಕೆ ಅನ್ವಯಿಸಿದರೆ ವಿಶೇಷ ಅರ್ಥಗಳನ್ನು ಹೊಳೆಯಿಸುವ ಕವಿತಾಗುಚ್ಛಗಳು ಮನಸ್ಸಿಗೆ ಸಾಂತ್ವನ ನೀಡುವ, ಹೀಗೆ ಮಾಡಿದರೆ ಒಳಿತು ಎಂದು ನಯವಾಗಿ ಹೇಳುವ ಈ ಕವಿತೆಗಳು ನೇರವಾಗಿಯೂ ಹೇಳುತ್ತವೆ; ಸೂಚಿಸುತ್ತವೆ; ಶಕ್ತಿಯಿದ್ದವನಿಗೆ ಪದಗಳ ಮಧ್ಯೆ ಹಲವು ವಿಶೇಷಾರ್ಥಗಳು ಕಾಣುವಂತೆ ಮಾಡುತ್ತವೆ. ವಚನಕಾರರ ವಚನಗಳು, ದಾಸಸಾಹಿತ್ಯದ ಹಲವು ಕೀರ್ತನೆಗಳು, ಆಧುನಿಕ ಯುಗದಲ್ಲಿ ಬಂದಿರುವ ಅದೆಷ್ಟೋ ಭಾವಸಾಂದ್ರತೆಯ ಕವಿತೆಗಳು ಇವುಗಳಲ್ಲಿ ಒಂದಿಷ್ಟನ್ನು ಆಯ್ದು ನಮ್ಮ ಬತ್ತಳಿಕೆಯಲ್ಲಿರಿಸಿಕೊಂಡರೆ ರೋಗಗಳು ಬಂದಾಗ ಔಷಧಗಳ ಜೊತೆಗೆ, ಕೆಲವೊಮ್ಮೆ ಔಷಧಗಳಿಲ್ಲದೆ ಕಾವ್ಯದ ಬಾಣಗಳನ್ನು ಬಿಟ್ಟು, ರೋಗವನ್ನು ಪರಿಣಾಮಕಾರಿಯಾಗಿ, ಬಹುಬೇಗ ದೂರ ಓಡಿಸಬಹುದು. ❖



ಕೆರೆಯಲು ಕರೆಯುವ ಅರ್ಟಿಕೇರಿಯ

● ಡಾ.ಬಿ.ಆರ್.ಸುಹಾಸ್

ಅರ್ಟಿಕೇರಿಯ, ಚರ್ಮದ ಅಲರ್ಜಿಗೆ ಸಂಬಂಧಿಸಿದ ಒಂದು ಸಾಮಾನ್ಯ ಸಮಸ್ಯೆ. ಅಲರ್ಜಿ ಅಥವಾ ಅತಿಸೂಕ್ಷ್ಮ ಚರ್ಮ ಹೊಂದಿರುವವರಲ್ಲಿ ಈ ಸಮಸ್ಯೆ ಉಂಟಾಗುತ್ತದೆ. ಅರ್ಟಿಕೇರಿಯ ಸಮಸ್ಯೆ ಇರುವವರ ಚರ್ಮ ನಿರ್ದಿಷ್ಟ ವಸ್ತುಗಳಿಗೆ ಬಹುಬೇಗ ಪ್ರತಿಕ್ರಿಯಿಸುತ್ತದೆ. ಚರ್ಮ ಇಂಥ ಪ್ರಚೋದನಾತ್ಮಕ ವಸ್ತುಗಳ ಸಂಪರ್ಕಕ್ಕೆ ಬಂದಾಗ ಇವರಲ್ಲಿ 'ಐಜಿ' (IgE) ಎಂಬ ಪ್ರತಿಕಾಯಗಳು ಹೆಚ್ಚಾಗಿ ಉತ್ಪತ್ತಿಯಾಗುತ್ತವೆ. ಅವು ರಕ್ತದಲ್ಲಿರುವ ಬೇಸೋಫಿಲ್‌ಗಳೆಂಬ ಬಿಳಿರಕ್ತಕಣಗಳನ್ನು ಚರ್ಮ, ಶ್ವಾಸಕಾಂಗ, ಜೀರ್ಣಾಂಗಗಳಲ್ಲಿರುವ ಜೀವಕೋಶಗಳಿಂದ ಹಿಸ್ಟಮಿನ್, ಲ್ಯುಕೋಟ್ರಿನ್ ಮೊದಲಾದ ರಾಸಾಯನಿಕಗಳು ಬಿಡುಗಡೆಯಾಗುವಂತೆ ಮಾಡಿ, ರಕ್ತನಾಳಗಳನ್ನು ಹಿಗ್ಗಿಸುತ್ತವೆ. ಮತ್ತು ನರಗಳನ್ನು ಪ್ರಚೋದಿಸುತ್ತವೆ. ಇದರಿಂದ ರಕ್ತ ಹೆಚ್ಚಾಗಿ ಹರಿದು, ಚರ್ಮದ ಮೇಲೆ ಊತಗಳಾಗುತ್ತವೆ.

ನರಗಳ ಪ್ರಚೋದನೆಯಿಂದ ಚರ್ಮದ ಮೇಲೆ ಬಹಳ ತುರಿಸುವ ಕೆಂಪು ದದ್ದುಗಳು/ ಗಂಧೆಗಳು ಉಂಟಾಗುತ್ತವೆ. ಈ ದದ್ದುಗಳು ಹೆಚ್ಚೆಂದರೆ ಇಪ್ಪತ್ತು ನಾಲ್ಕು ಗಂಟೆಗಳ ಕಾಲ ಇರುತ್ತವಷ್ಟೆ. ಆದರೆ ದದ್ದುಗಳು ಆಗಾಗ್ಗೆ ಆಗುತ್ತಿರಬಹುದು.

ಪ್ರಚೋದನಾತ್ಮಕ ಅಂಶಗಳು ಯಾವುವು?

ಈ ಅರ್ಟಿಕೇರಿಯಗೆ ಕಾರಣವಾಗುವ ಪ್ರಚೋದನಾತ್ಮಕ ವಸ್ತುಗಳು ಹಲವಾರಿವೆ. ಅವು ಆಹಾರ ಪದಾರ್ಥಗಳಿರಬಹುದು. ಸಾಮಾನ್ಯವಾಗಿ ಮೊಟ್ಟೆ, ಮೀನು, ಬೀಜಗಳು. ಉಸಿರಿನ ಮೂಲಕ ಪ್ರವೇಶ ಪಡೆಯುವಂಥದ್ದು; ರಸ್ತೆ ಅಥವಾ ಮನೆಯ ಕಿಟಕಿಯಲ್ಲಿರುವ ದೂಳು, ನುಸಿಯಂಥ ಕೀಟ, ಹೂವಿನ ಪರಾಗ, ಅನಿಲಗಳು, ಔಷಧ.

ಕೀಟಗಳ ಕಚ್ಚುವಿಕೆ, ಕರುಳಿನಲ್ಲಿರುವ ಜಂತುಹುಳು, ಕೊಕ್ಕೆ ಹುಳು, ಸೋಂಕು ರೋಗಗಳಿಗೆ ಕಾರಣವಾಗುವ ಬ್ಯಾಕ್ಟೀರಿಯಾಗಳು ಅಲರ್ಜಿಯನ್ನು ಪ್ರಚೋದಿಸುತ್ತವೆ.

ಇವಲ್ಲದೇ ಕೂದಲ ಬಣ್ಣ, ಸೌಂದರ್ಯ ವರ್ಧಕಗಳು, ಅಂಗರಾಗ ದ್ರವ್ಯಗಳು, ಪ್ರಾಣಿಗಳ ಕೂದಲು ಮತ್ತು ತಲೆಹೊಟ್ಟು ಅರ್ಟಿಕೇರಿಯ ಸಮಸ್ಯೆಯನ್ನು ಉಂಟುಮಾಡುತ್ತವೆ. ಚಳಿ, ಸೆಖೆ, ಬಿಸಿಲು, ನೀರು, ದೈಹಿಕ ಒತ್ತಡ, ಅತಿಯಾದ ವ್ಯಾಯಾಮವು ಅರ್ಟಿಕೇರಿಯವನ್ನು ಪ್ರಚೋದಿಸುತ್ತವೆ.

ಕೆಲವರಿಗೆ ವ್ಯಾಯಾಮದಿಂದ ಶ್ರಮ ಹೆಚ್ಚಾದಾಗ, ಅತಿ ಖಾರಪದಾರ್ಥಗಳನ್ನು ಸೇವಿಸಿದಾಗ ಮೈಯಲ್ಲಿ ಬಿಸಿಯೇರಿ ನರಗಳ ತುದಿಗಳಿಂದ ಅಸಿಟೈಲ್ ಕೋಲೀನ್ ದ್ರವ ಹೆಚ್ಚು ಒಸರುತ್ತದೆ. ಇದು ಅರ್ಟಿಕೇರಿಯನ್ನು ಪ್ರಚೋದಿಸುತ್ತದೆ. ಇದನ್ನು ಕೋಲಿನರ್ಜಿಕ್ ಅರ್ಟಿಕೇರಿಯ ಎನ್ನುತ್ತಾರೆ.

ಕೆಲವರಲ್ಲಿ ಸ್ವಯಂ ಪ್ರತಿಕಾಯಗಳು ಉತ್ಪತ್ತಿಯಾಗಿ, ಇವು 'ಐಜಿ' ಪ್ರತಿಕಾಯಗಳನ್ನು, ಮಾಸ್ಟ್ ಕೋಶಗಳನ್ನು, ಬೇಸೋಫಿಲ್‌ಗಳನ್ನೂ ಪ್ರಚೋದಿಸಿಯೂ ಅರ್ಟಿಕೇರಿಯ ಉಂಟಾಗುತ್ತದೆ. ಇದನ್ನು 'ಆಟೊ– ಇಮ್ಯೂನ್ ಅರ್ಟಿಕೇರಿಯ' ಎನ್ನುತ್ತಾರೆ.

ಈ ಮಾಸ್ಟ್ ಕೋಶಗಳು ಅತಿಯಾಗಿ ಇದ್ದಾಗಲೂ ಅರ್ಟಿಕೇರಿಯ ಉಂಟಾಗಬಹುದು. ಕೆಲವರಲ್ಲಿ ಚರ್ಮದ ಮೇಲೆ ಕಾಣಿಸಿಕೊಂಡ ದದ್ದೆಗಳು ಹೋದ ಬಳಿಕ ಆ ಭಾಗದಲ್ಲಿ ಕಲೆ ಉಳಿಯುತ್ತವೆ. ಇದನ್ನು 'ಅರ್ಟಿಕೇರಿಯ ಪಿಗ್ಮೆಂಟೋಸ' ಎಂದು ಕರೆಯಲಾಗುತ್ತದೆ.

ಅರ್ಟಿಕೇರಿಯವನ್ನು ತೀವ್ರ (ಅಕ್ಯೂಟ್) ಮತ್ತು ದೀರ್ಘಕಾಲದ (ಕ್ರಾನಿಕ್) ಎಂದು ವಿಂಗಡಿಸಲಾಗುತ್ತದೆ. ಅರ್ಟಿಕೇರಿಯ ಆರಂಭಗೊಂಡು ಆರು ವಾರಗಳಿದ್ದರೆ ಅದನ್ನು ತೀವ್ರ ಎನ್ನಲಾಗುತ್ತದೆ. ಆರು ವಾರಗಳ ನಂತರವೂ ಮುಂದುವರಿದರೆ ಅದನ್ನು ದೀರ್ಘ ಕಾಲದ್ದೆನ್ನಲಾಗುತ್ತದೆ. ತೀವ್ರ ಅರ್ಟಿಕೇರಿಯಕ್ಕೆ ಕಾರಣ ಸುಲಭವಾಗಿ ಕಂಡು ಹಿಡಿಯಬಹುದು ಮತ್ತು ಚಿಕಿತ್ಸೆಗೆ ಬೇಗ ಸ್ಪಂದಿಸುತ್ತದೆ.

ದೀರ್ಘಕಾಲದ ಅರ್ಟಿಕೇರಿಯದಲ್ಲಿ ಕಾರಣ ತಿಳಿಯುವುದು ಬಹಳ ಕಷ್ಟ. ಚಿಕಿತ್ಸೆಗೆ ನಿಧಾನವಾಗಿ ಸ್ಪಂದಿಸುತ್ತದೆ. ಎಷ್ಟೋ ದೀರ್ಘಾವಧಿಯ ಅರ್ಟಿಕೇರಿಯಗಳಲ್ಲಿ ಸೂಕ್ತ ಕಾರಣವೇ ಪತ್ತೆಯಾಗುವುದಿಲ್ಲ.

ನಿವಾರಣೆ ಹೇಗೆ?

ಅರ್ಟಿಕೇರಿಯವನ್ನು ಹೋಗಲಾಡಿಸಲು ಹಾಗೂ ಅದು ಬಾರದಂತೆ ತಡೆಯಲು ಪ್ರಚೋದನಾತ್ಮಕ ಅಂಶಗಳನ್ನು ಗುರುತಿಸಿ ಅವುಗಳಿಂದ ದೂರವಿರುವುದು ಬಹಳ ಮುಖ್ಯ. ವೈದ್ಯರು ರೋಗಿಯ ಸುದೀರ್ಘ ರೋಗಚರಿತ್ರೆಯನ್ನು ಪಡೆದು, ಪ್ರಚೋದನಾತ್ಮಕ ಅಂಶಗಳಿಗೆ ಕಾರಣವನ್ನು ಹುಡುಕುತ್ತಾರೆ. ಅರ್ಟಿಕೇರಿಯ ಲಕ್ಷಣಗಳನ್ನು ಹೋಗಲಾಡಿಸಲು ಆ್ಯಂಟಿಹಿಸ್ಟಮಿನ್ ಔಷಧಗಳನ್ನು ನೀಡಲಾಗುತ್ತದೆ. ಇವು ಹಿಸ್ಟಮಿನ್ ಅನ್ನು ವಿರೋಧಿಸಿ ದದ್ದೆಗಳು ಮತ್ತು ಅವುಗಳಿಂದ ಉಂಟಾಗುವ ಕೆರೆತವನ್ನೂ ಹೋಗಲಾಡಿಸುತ್ತವೆ.

ದೀರ್ಘಕಾಲದ ಅರ್ಟಿಕೇರಿಯ ಇದ್ದವರು ಎರಡು ಬಗೆಯ ಆ್ಯಂಟಿಹಿಸ್ಟಮಿನ್ ಮಾತ್ರೆಗಳನ್ನು ದೀರ್ಘಕಾಲ ಸೇವಿಸಬೇಕಾಗುತ್ತದೆ. ನಿದ್ರೆ ಬರುವುದು, ಬಾಯಿ ಒಣಗುವುದು ಸೇರಿದಂತೆ ಕೆಲವು ಅಡ್ಡಪರಿಣಾಮಗಳನ್ನು ಬಿಟ್ಟರೆ ಈ ಮಾತ್ರೆಗಳು ಬಹುತೇಕ ಸುರಕ್ಷಿತ. ಆದರೆ ಇವುಗಳನ್ನು ವೈದ್ಯರ ನಿರ್ದೇಶನದಂತೆಯೇ ಬಳಸಬೇಕು. ತೀವ್ರವಾದ ಅರ್ಟಿಕೇರಿಯಗೆ ಕೆಲವೊಮ್ಮೆ ಸ್ಟಿರಾಯ್ಡ್ ಮಾತ್ರೆ ಅಥವಾ ಚುಚ್ಚುಮದ್ದು ಬೇಕಾಗಬಹುದು. ಇದನ್ನೂ ವೈದ್ಯರ ನಿಗಾದಲ್ಲಿಯೇ ತೆಗೆದುಕೊಳ್ಳಬೇಕು.

ಅರ್ಟಿಕೇರಿಯದ ನವೆಯನ್ನು ಹೋಗಲಾಡಿಸುವಲ್ಲಿ ಕ್ಯಾಲಮಿನ್, ಆಲೋವೇರಾ, ತೇವಾಂಶ ಹೆಚ್ಚಿಸುವ ದ್ರಾವಣಗಳು ಸಹಾಯ ಮಾಡುತ್ತವೆ. ಜಂತುಹುಳು ಮೊದಲಾದ ಹುಳುಗಳ ಬಾಧೆಗೆ ಜಂತುನಿರೋಧಕ ಔಷಧಗಳನ್ನು ನೀಡಲಾಗುತ್ತದೆ.

ದೀರ್ಘಕಾಲದ ಅರ್ಟಿಕೇರಿಯ ಇದ್ದವರಿಗೆ ರಕ್ತ ಪರೀಕ್ಷೆಗಳನ್ನು ಮಾಡಿ, ಸೂಕ್ತ ಕಾರಣವನ್ನು ಪತ್ತೆ ಹಚ್ಚಿ, ಚಿಕಿತ್ಸೆ ನೀಡಲಾಗುತ್ತದೆ.

'ಆಟೊ –ಇಮ್ಯೂನ್ ಅರ್ಟಿಕೇರಿಯ' ಇರುವವರ ರಕ್ತದ ಮಾದರಿಯನ್ನು ತೆಗೆದುಕೊಂಡು ಸೆಂಟ್ರಿಫ್ಯೂಜ್ ಯಂತ್ರದಿಂದ ನೀರಿನಂಶ ಹಾಗೂ ಪ್ಲಾಸ್ಮಾವನ್ನು ಬೇರ್ಪಡಿಸಿ ಚುಚ್ಚುಮದ್ದು ನೀಡಲಾಗುತ್ತದೆ.

ದೀರ್ಘಕಾಲದ ಅರ್ಟಿಕೇರಿಯದಿಂದ ಬಳಲುವವರಿಗೆ ಮಾನಸಿಕವಾಗಿ ಹಿಂಸೆಯಾಗಬಹುದು. ಕೆರೆತ ಇರುವುದರಿಂದ ಸುಖವಾದ ಜೀವನಕ್ಕೆ ಧಕ್ಕೆಯಾಗಬಹುದು. ಹಾಗೆಂದು ಭರವಸೆ ಕಳೆದುಕೊಳ್ಳದೇ ಸಕಾಲಕ್ಕೆ ಚಿಕಿತ್ಸೆ ಪಡೆಯಬೇಕು. ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನವೆಯನ್ನು ಮರೆಯಲು ಪ್ರಯತ್ನಿಸಿದರೆ, ಅರ್ಟಿಕೇರಿಯದಲ್ಲಿ ಸುಧಾರಣೆ ಕಂಡುಬಂದು ಬೇಗನೆ ಗುಣವಾಗುತ್ತದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

20) ಒಬ್ಬ ವ್ಯಕ್ತಿಯು 3 ಬ್ಯಾಟ್‌ಗಳು ಮತ್ತು 2 ಚೆಂಡುಗಳನ್ನು ರೂ. 960 ಪಾವತಿಸಿ ಕೊಂಡುಕೊಳ್ಳುತ್ತಾನೆ, ಒಂದು ಬ್ಯಾಟ್‌ನ ಬೆಲೆ ರೂ. 300 ಆದರೆ, ಒಂದು ಚೆಂಡಿನ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:– ಬ್ಯಾಟ್‌ಗಳು x ಆಗಿರಲಿ, ಚೆಂಡುಗಳು y ಆಗಿರಲಿ

$$3x + 2y = 960$$
$$3 \times 300 + 2y = 960$$
$$900 + 2y = 960$$
$$2y = 960 - 900$$
$$2y = 60$$
$$y = \frac{60}{2}$$
$$\boxed{y = 30}$$

21)
$P(A) = 80\%$ ಆದರೆ, 'A' ಅಲ್ಲದ ಘಟನೆಯ ಸಂಭವನೀಯತೆ $\frac{1}{5}$ ಎಂದು ತೋರಿಸಿ.

ಉತ್ತರ:–

$$P(A) + P(\overline{A}) = 1$$
$$80\% + P(\overline{A}) = 100\%$$
$$P(\overline{A}) = 100 - 80$$
$$P(\overline{A}) = 20\%$$
$$P(A) = \frac{1}{5}$$

22)
$\frac{\sqrt{3}\sec A}{\operatorname{cosec} A} = 1$ ಆದರೆ, 'A' ಯ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:–

$$\frac{\sqrt{3}\sec A}{\operatorname{cosec} A} = 1$$
$$\frac{\frac{\sqrt{3}}{\cos A}}{\frac{1}{\sin A}} = 1$$
$$\frac{\sqrt{3} \times \sin A}{\cos A} = 1$$
$$\sqrt{3}\tan A = 1$$
$$\tan A = \frac{1}{\sqrt{3}}$$
$$\tan A = \tan 30^\circ$$
$$\boxed{A = 30^\circ}$$

23)
$\sin 30^\circ . \cos 60^\circ + \cos 30^\circ . \sin 60^\circ = \sin 90^\circ$ ಎಂದು ಸಾಧಿಸಿ.

ಉತ್ತರ:–

$\sin 30^\circ = \frac{1}{2}$, $\cos 60^\circ = \frac{1}{2}$, $\cos 30^\circ = \frac{\sqrt{3}}{2}$

$\sin 60^\circ = \frac{\sqrt{3}}{2}$

L.H.S $= \sin 30^\circ \cos 60^\circ + \cos 30^\circ \sin 60^\circ$

$= \frac{1}{2} \times \frac{1}{2} + \frac{\sqrt{3}}{2} \times \frac{\sqrt{3}}{2}$

$= \frac{1}{4} + \frac{3}{4}$

$= 1$ R.H.S .... (1)

$1 = \sin 90^\circ$ ....(2)

(1) ಮತ್ತು (2) ರಿಂದ

$\sin 30^\circ \cos 60^\circ + \cos 30^\circ \sin 60^\circ = \sin 90^\circ$

24) (–1, 7) ಮತ್ತು (4. –3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 2:3 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಉತ್ತರ:–

$(-1, 7)$ $(4, -3)$ $2 : 3$

(x_1, y_1) (x_2, y_2) $m_1 : m_2$

ರೇಖಾಖಂಡವನ್ನು ವಿಭಾಗಿಸುವ ಬಿಂದುಗಳ ನಿರ್ದೇಶಾಂಕಗಳು (x, y) ಆಗಿರಲಿ.

$$(x, y) = \left(\frac{m_1 x_2 + m_2 x_1}{m_1 + m_2}, \frac{m_1 y_2 + m_2 y_1}{m_1 + m_2}\right)$$
$$= \left(\frac{2\times(4) + 3(-1)}{2+3}, \frac{2\times(-3) + 3\times(7)}{2+3}\right)$$
$$= \left(\frac{8-3}{5}, \frac{-6+21}{5}\right)$$
$$= \left(\frac{5}{5}, \frac{15}{5}\right)$$
$$(x, y) = (1, 3)$$

25) ಕೆಳಗಿನ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯಿರಿ

ಉತ್ತರ:–

ವರ್ಗಾಂತರ	ಆವೃತ್ತಿ
0 — 5	4
5 — 10	10
10 — 15	6
15 — 20	4
20 — 25	5

ಉತ್ತರ:–

ಆವೃತ್ತಿ ವಿತರಣಾ ಕೋಷ್ಟಕದಿಂದ

$f_1 = 10$ $f_0 = 4$ $f_2 = 6$ $h = 5$ $l = 5$

$$\text{ಬಹುಲಕ} = l + \left[\frac{f_1 - f_0}{2f_1 - f_0 - f_2}\right] \times h$$
$$= 5 + \left[\frac{10-4}{2\times 10 - 4 - 6}\right] \times 5$$
$$= 5 + \left[\frac{6}{20-10}\right] \times 5$$
$$= 5 + \left[\frac{\frac{6}{10}}{}\right] \times 5$$
$$= 5 + 3$$
$$\boxed{\text{ಬಹುಲಕ} = 8}$$

26) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ

12, 16, 20, 24................248

$\Rightarrow a_2 - a_1 = 16 - 12 = 4$

$\Rightarrow a_3 - a_2 = 20 - 16 = 4$

$\Rightarrow a_4 - a_3 = 24 - 20 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHEMATICS

REVISION : MODEL QUESTIONS

26. Prove that $\tan^{-1} x + \tan^{-1} y = \tan^{-1} \frac{x+y}{1-xy}$, **where** $xy < 1$

Ans:- Let $\tan^{-1} x = A \Rightarrow x = \tan A$

$\tan^{-1} y = B \Rightarrow x = \tan B$

$$\tan(A+B) = \frac{\tan A + \tan B}{1 - \tan A \tan B}$$
$$A + B = \tan^{-1} \frac{x+y}{1-xy}$$

substitute the values of A and B

$$\tan^{-1} x + \tan^{-1} y = \tan^{-1} \frac{x+y}{1-xy}$$

27. Express the matrix $A = \begin{bmatrix} 1 & 2 \\ 3 & 4 \end{bmatrix}$ **as sum of symmetric and skew symmetric matrices**

Ans :– $A = \frac{1}{2}(A + A') + \frac{1}{2}(A + A')$

$A' = \begin{bmatrix} 1 & 3 \\ 2 & 4 \end{bmatrix}$; $A + A' = \begin{bmatrix} 1 & 5 \\ 5 & 4 \end{bmatrix}$ and $A - A' = \begin{bmatrix} 0 & -1 \\ 1 & 0 \end{bmatrix}$

$\therefore \frac{1}{2}\begin{bmatrix} 1 & 5 \\ 5 & 4 \end{bmatrix} + \frac{1}{2}\begin{bmatrix} 0 & -1 \\ 1 & 0 \end{bmatrix} = \begin{bmatrix} 1 & 2 \\ 3 & 4 \end{bmatrix}$

28. If $y = \tan^{-1}\left[\frac{\sqrt{1+x^2} - 1}{x}\right]$, prove that $\frac{dy}{dx} = \frac{1}{2(1+x^2)}$

Ans :– Let $x = \tan\theta$, $y = \tan^{-1}\left[\frac{\sqrt{1+(\tan\theta)^2} - 1}{\tan\theta}\right]$

$$y = \tan^{-1}\left(\frac{\sec\theta - 1}{\tan\theta}\right) = \tan^{-1}\left(\tan\frac{\theta}{2}\right)$$

$y = \frac{\theta}{2} \Rightarrow \frac{1}{2}\tan^{-1} x$ d.r.t.x

$$\frac{dy}{dx} = \frac{1}{2(1+x^2)}$$

29. If $x = at^2$; $y = 2$ **at find** $\frac{dy}{dx}$

Ans :– $\frac{dy}{dt} = 2a$; $\frac{dx}{dt} = 2at$

$$\frac{dy}{dx} = \frac{\frac{dy}{dt}}{\frac{dx}{dt}} = \frac{2a}{2at} = \frac{1}{t}$$

30. Find the intervals in which $f(x) = 4x^3 - 6x^2 - 72x + 30$ is

(i) Strictly increasing; (ii) Strictly decreasing

Ans:– $f'(x) = 12x^2 - 12x - 72$, $f'(x) = 0$ and $x = -2, 3$

Set of values for strictly increasing $(-\infty, -2) \cup (3, \infty)$

Set of values for strictly decreasing $(-2, 3)$

31. Find the anti derivative of $f(x) = 4x^3 - \frac{1}{x^3} + c$ **such that** $f(2) = 0$

Ans:- Integrate, we get $f(x) = x^4 - \frac{1}{x^3} + c$

Using $f(2) = 0$ we get $c = -\frac{129}{8}$

Integrate, we get $f(x) = x^4 - \frac{1}{x^3} + c$

Using $f(2) = 0$,
we get $c = -\frac{129}{8}$

$$f(x) = x^4 - \frac{1}{x^3} - \frac{129}{8}$$

32. Evaluate $\int \frac{dx}{x + x\log x}$

Ans :– $\int \frac{dx}{x(1+\log x)}$


$\Rightarrow \int \frac{dx}{(1+\log x)} \frac{dx}{x}$ $\left\{\text{let } 1 + \log x = t \text{ d.r.t.x } \frac{1}{x}dx = dt\right\}$

$\Rightarrow \int \frac{1}{t}dt = \log t + c = \log(1 + \log x) + c$

33. Find the area of the region bounded by curve $y^2 = x$, $x = 4$ $x = 9$, **X axis. In first Quadrant**

Ans :– $A = \int_4^9 y\,dx = \int_4^9 \sqrt{x}\,dx = \int_4^9 x^{\frac{1}{2}}\,dx = \frac{2}{3}x^{\frac{3}{2}}\Big]_4^9$

$A = \frac{38}{3}$ sq units



34. Form the differential equation of family of circles touching the Y axis at origin.

Ans:- Required equation of circle

$x^2 + y^2 - 2ax = 0$ $(2ax = x^2 + y^2)$

d.r.t.x, $2x + 2y\frac{dy}{dx} = 2a$

$2x^2 + 2xy\frac{dy}{dx} = 2ax$ (x by x)

$2x^2 + 2xy\frac{dy}{dx} = x^2 + y^2$

$x^2 + 2xy\frac{dy}{dx} = y^2$

35. If $\vec{a} = 2i + 2j + 3k$; $\vec{b} = -i + 2j + k$ **and** $\vec{c} = 3i + j$ **are such that** $\vec{a} + \lambda\vec{b}$ **is perpendicular to** $\vec{c}$ **then find the value of** λ

Ans:- $(\vec{a} + \lambda\vec{b}).\vec{c} = 0$

$3(2 - \lambda) + 1(2 + 2\lambda) + 0(3 + \lambda) = 0$

$\Rightarrow 6 - 3\lambda + 2 + 2\lambda = 0 \Rightarrow \lambda = 8$ (Contd)

ಚಾರ್ಮಾಡಿ: ಭಾರಿ ಕಾಳ್ಗಿಚ್ಚು

ಹತ್ತಾರು ಎಕರೆ ಹುಲ್ಲುಗಾವಲು ಭಸ್ಮ • ನಂದಿಸಲು ಕಸರತ್ತು

ಪ್ರಜಾವಾಣಿ ವಾರ್ತೆ



ಚಾರ್ಮಾಡಿ ಘಾಟಿಯಲ್ಲಿ ಸೋಮವಾರ ತಡರಾತ್ರಿ ಕಾಣಿಸಿಕೊಂಡ ಬೆಂಕಿ

ಮೂಡಿಗೆರೆ (ಚಿಕ್ಕಮಗಳೂರು): ದಕ್ಷಿಣ ಕನ್ನಡ-ಚಿಕ್ಕಮಗಳೂರು ಜಿಲ್ಲೆಯನ್ನು ಸಂಪರ್ಕಿಸುವ ಚಾರ್ಮಾಡಿ ಘಾಟಿ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಸೋಮವಾರ ರಾತ್ರಿ ಭಾರಿ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ.

ಮೂಡಿಗೆರೆ ಅರಣ್ಯ ವಲಯದ ವ್ಯಾಪ್ತಿಗೆ ಸೇರಿರುವ ಪ್ರದೇಶದೊಳಗೆ ಸಂಭವಿಸಿರುವ ಈ ಅಗ್ನಿ ಅವಘಡದಲ್ಲಿ, ಹತ್ತಾರು ಎಕರೆ ಹುಲ್ಲುಗಾವಲು ಸಂಪೂರ್ಣವಾಗಿ ಸುಟ್ಟು ಹೋಗಿದ್ದು, ಎರಡು ಗಂಟೆಗೂ ಹೆಚ್ಚು ಬೆಂಕಿಯ ಜ್ವಾಲೆ ಧಗಧಗಿಸುತ್ತಿತ್ತು.

ಗಾಳಿಯ ವೇಗ ಹೆಚ್ಚಿರುವುದರಿಂದ ಬೆಂಕಿ ಕ್ಷಿಪ್ರವಾಗಿ ಹರಡುತ್ತಿದ್ದು, ಅರಣ್ಯ ಸಂಪತ್ತಿಗೆ ಭಾರಿ ಹಾನಿಯಾಗುವ ಆತಂಕ ವ್ಯಕ್ತವಾಗಿದೆ. ರಸ್ತೆಯ ಪಕ್ಕದಲ್ಲೇ ಬೆಂಕಿ ಕಾಣಿಸಿಕೊಂಡಿರುವುದರಿಂದ ಚಾರ್ಮಾಡಿ ಘಾಟಿಯಲ್ಲಿ ಸಂಚರಿಸುವ ವಾಹನ ಸವಾರರಲ್ಲಿ ಆತಂಕ ಮೂಡಿದೆ.

ಮಾಹಿತಿ ಪಡೆದ ಕೂಡಲೇ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ದೌಡಾಯಿಸಿದ್ದು, ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಬೆಂಕಿಯಿಂದ ಇಡೀ ಗುಡ್ಡವೇ ಅಗ್ನಿಯುಂಡೆಯಂತೆ ಕಾಣುತ್ತಿದೆ.

ಬೆಂಕಿಯನ್ನು ನಿಯಂತ್ರಣಕ್ಕೆ ತರಲು ಪ್ರಯತ್ನಗಳು ಮುಂದುವರಿದಿವೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿದ್ದು, ತಡರಾತ್ರಿಯವರೆಗೂ ಕಾರ್ಯಚರಣೆ ಮುಂದುವರಿದಿತ್ತು.

ಕಿಡಿಗೇಡಿಗಳು ಉದ್ದೇಶ ಪೂರ್ವಕವಾಗಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಿಸಿಯೂಟದಲ್ಲಿ ನುಸಿ ಹುಳು?



ಕಲಘಟಗಿ (ಧಾರವಾಡ ಜಿಲ್ಲೆ): ತಾಲ್ಲೂಕಿನ ಗಂಬ್ಯಾಪುರ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳಿಗೆ ಇಸ್ಕಾನ್ ಸಂಸ್ಥೆಯಿಂದ ಪೂರೈಕೆಯಾದ ಮಧ್ಯಾಹ್ನದ ಬಿಸಿ ಊಟದ ಸಾಂಬಾರಿನಲ್ಲಿ ನುಸಿ ಹುಳುಗಳು ಕಂಡುಬಂದಿವೆ.

'ಸೋಮವಾರ ಮಧ್ಯಾಹ್ನ ಬಡಿಸಿದ್ದ ಸಾಂಬಾರ್‌ನಲ್ಲಿ ಹುಳುಗಳಿದ್ದವು. ಶಿಕ್ಷಕರು ಹಾಗೂ ಅಡುಗೆ ಸಹಾಯಕರು ಅದನ್ನೇ ಮಕ್ಕಳಿಗೆ ನೀಡಿದ್ದಾರೆ' ಎಂದು ಗ್ರಾಮಸ್ಥರು ದೂರಿದ್ದಾರೆ.

'ನುಸಿ ಹುಳು ಇದ್ದುದು ಗೊತ್ತಾಗಿದೆ. ಮಕ್ಕಳಿಗೆ ಬಡಿಸಿಲ್ಲ' ಎಂದು ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಗುವುದು' ಎಂದು ಬಿಇಒ ಗಾಯತ್ರಿದೇವಿ ಸಜ್ಜನ ಅವರು ಪ್ರತಿಕ್ರಿಯಿಸಿದರು.

ರೈಲ್ವೆ ಹೊಸ ಮಾರ್ಗಗಳಿಗೆ ₹3,085 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಈ ಸಲದ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣಕ್ಕೆ ₹3,085 ಕೋಟಿ ಹಾಗೂ ಜೋಡಿ ಹಳಿಗಳ ನಿರ್ಮಾಣಕ್ಕೆ ₹1,534 ಕೋಟಿ ಮೀಸಲಿಡಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಒಬಿ, ಆರ್‌ಯುಬಿ ನಿರ್ಮಾಣಕ್ಕೆ ಸಂಪೂರ್ಣ ಮೊತ್ತವನ್ನು ರೈಲ್ವೆ ಸಚಿವಾಲಯವೇ ಭರಿಸುತ್ತದೆ. ರಾಜ್ಯದಲ್ಲಿ ₹52,900 ಕೋಟಿ ಮೊತ್ತದ ರೈಲ್ವೆ ಕಾಮಗಾರಿಗಳು ಪ್ರಗತಿಯಲ್ಲಿವೆ' ಎಂದರು. 'ಅಮೃತ ಯೋಜನೆಯಡಿ ₹2,110 ಕೋಟಿ ವೆಚ್ಚದಲ್ಲಿ ರಾಜ್ಯದ 61 ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಒಂಬತ್ತು ನಿಲ್ದಾಣಗಳ ಕಾಮಗಾರಿ ಮುಗಿದಿದೆ' ಎಂದು ಅವರು ಮಾಹಿತಿ ನೀಡಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಹಾಗೂ ಉಪ ನಿರ್ದೇಶಕರು, ಆಡುಮಲ್ಲೇಶ್ವರ ಕಿರುಮೃಗಾಲಯ, ವಿ.ಪಿ ಬಡಾವಣೆ ಚಿತ್ರದುರ್ಗ 577501

ಇ-ಮೇಲ್: dcf.cta@gmail.com ದೂರವಾಣಿ ಸಂಖ್ಯೆ 08194-230402

ಸಂಖ್ಯೆ:ಎ7/ಉ.ನಿ/ಆಕಮೃ/ಇ-ಟೆಂಡರ್/2025-26 ದಿನಾಂಕ: 30.01.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರಂತೆ, ಉಪ ನಿರ್ದೇಶಕರು, ಆಡುಮಲ್ಲೇಶ್ವರ ಕಿರು ಮೃಗಾಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರು, ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರ ಕಛೇರಿಯಲ್ಲಿ 2025-26ನೇ ಸಾಲಿಗೆ ಆಡುಮಲ್ಲೇಶ್ವರ ಕಿರು ಮೃಗಾಲಯದಲ್ಲಿ KMERC project ಅನುಷ್ಠಾನಗೊಳಿಸಲು ಅನ್ವಯವಾಗುವ Preparation of Architectural Drawings. Structural Drawings, 2D Drawings, Estimates, Quotations with Detailed Project Report of the KMERC project Adumalleshwara Mini Zoo. Chitradurga ಬಗ್ಗೆ ನಿಯಮಾನುಸಾರ e-Tender ಮೂಲಕ ರೂ.19.19 ಲಕ್ಷಗಳ ಟೆಂಡರ್ ಮರು ಕರೆಯಲಾಗಿದ್ದು, ಪ್ರತಿಷ್ಠಿತ ಸಂಸ್ಥೆಗಳು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ: 10-02-2026 ರಂದು 4:30 ಗಂಟೆಯವರೆಗೆ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 12.02.2026 ರಂದು 11:30 ಗಂಟೆಯವರೆಗೆ.
ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.02.2026 ರಂದು 11:31 ಗಂಟೆಯ ನಂತರ

RO.No.639:DIPR/CTA/KSMCA/2025-26 — ಸಹಿ/-ಉಪನಿರ್ದೇಶಕರು, ಆಡುಮಲ್ಲೇಶ್ವರ ಕಿರು ಮೃಗಾಲಯ, ಚಿತ್ರದುರ್ಗ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
(CIN: U31401KA2002SGC030437)
ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580023
Website : www.hescom.karnataka.gov.in
E-mail: seepmc.hescom@gmail.com / eep3.hescom@gmail.com

No: HESCOM/SEE(PMC)/EE-P3/AEE-2/2025-26/CYS-10563
Date: 02-02-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಪಿಎಮ್‌ಸಿ, ನಿಗಮ ಕಚೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿಯವರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಅನು ಕ್ರಮ	ಯೋಜನೆ	ಬಿಡ್ ಇಂಡೆಂಟ್ ಸಂಖ್ಯೆ
1	ಹೆಸ್ಕಾಂ ವ್ಯಾಪ್ತಿಯ ಉಪವಿಭಾಗವಾರು/ವಿಭಾಗವಾರು ಪರಿವರ್ತಕಗಳನ್ನು ದುರಸ್ತಿಗೊಳಿಸಲು ದರ ಗುತ್ತಿಗೆ ಆಧಾರದ ಮೇಲೆ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸುವುದು.	HESCOM/2025-26/SE0721 (18 Packages) and HESCOM/2025-26/SE0722 (18 Packages)

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ ದಿನಾಂಕ: 03-02-2026 ರಂದು ಅಥವಾ ನಂತರ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನೀಯರರು(ವಿ) (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/1181/ಮಣಿಪಾಲ್/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ:/3054ರಾ.ಹೆ.ಸೇ/ಟೆಂಡರ್‌ಅಧಿಸೂಚನೆ:2025-26/3358 ದಿನಾಂಕ: 30.01.2026

ಇ-ಟೆಂಡರ್ ಅಧಿಸೂಚನೆ IFT-KW-2
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಧಿಕೃತ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಲಾದ ದಿನಾಂಕ ಹಾಗೂ ಇನ್ನಿತರ ವಿವರಗಳನ್ನು ಪರಿಶೀಲಿಸಿಕೊಂಡು ಟೆಂಡರನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳ ಈ ಕೆಳಗಿನಂತಿವೆ.

ಒಟ್ಟು 2 ಕಾಮಗಾರಿಗಳು
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 09-02-2026 (16.00 ಗಂಟೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 10-02-2026 (16.00 ಗಂಟೆವರೆಗೆ) (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 11-02-2026 (16.30 ಗಂಟೆವರೆಗೆ)

ಸಹಿ/-, (ಎಸ್.ಎ.ಸಿದ್ದಾಪುರ), ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಶಿರಸಿ. (ಉತ್ತರ ಕನ್ನಡ ಜಿಲ್ಲೆ)

DIPR/ADK/KSMCA/1029/25-26 Dt.02.02.2026

ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.
ದೂ.ಸಂ: 0821-2424070, E. mail : dudc_mys@yahoo.co.in
ಸಂ: ಮುನಿಸಿ(4) ಅ.ನ(ಮು) ಹಂತ-4/ನಂಜನಗೂಡು/ಸಿ.ಆರ್-42/2022-23
ದಿನಾಂಕ: 31-01-2026

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು www.kppp.karnataka. gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರಸಂ.1 ಇಂಡೆಂಟ್ ಸಂಖ್ಯೆ: DMA/2025-26/OW/WORK_INDENT 48811/CALL-3 **ಟೆಂಡರ್‌ಗಿಟ್ಟ ಮೊತ್ತ:** 354.16 **ಪೂರ್ವಭಾವಿ ಸಭೆ ದಿನಾಂಕ:** 04.02.2026 ಮಧ್ಯಾಹ್ನ 3.00 ಗಂಟೆಗೆ. **ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:** 10.02.2026 ಸಂಜೆ 5.00ರೊಳಗೆ. **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 12.02.2026 ಬೆಳಗೆ 11.00 ಗಂಟೆಗೆ ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು, ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು

DIPR/DDMYS/1591/KSMCA/901/2025-26



ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 069.
ದೂರವಾಣಿ: +91-80-22977666/276/433/216/217,
ಟೆಲಿ-ಫ್ಯಾಕ್ಸ್:080-26534625/477 । ಇ-ಮೇಲ್: director.sjicr@gmail.com

Ref.:SJICR/TS/47/2025-26 Date: 02-02-2026

ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಸಂಖ್ಯೆ / ಇಂಡೆಂಟ್ ಸಂಖ್ಯೆ	ವಿವರಗಳು
1.	ಎಸ್‌ಜೆಐಸಿಆರ್/2025-26/IND0054 ದಿನಾಂಕ: 02.02.2026	ನಾರ್ಕೋಟಿಕ್ಸ್ ಔಷಧಿಗಳ ಪೂರೈಕೆ.
2.	ಎಸ್‌ಜೆಐಸಿಆರ್/2025-26/IND0056 ದಿನಾಂಕ: 02.02.2026	ನ್ಯೂಕ್ಲಿಯರ್ ಕಾರ್ಡಿಯಾಲಜಿ ವಿಭಾಗಕ್ಕೆ ಜನರೇಟರ್‌ಗಳು & ಐಸೊಟೋಪ್‌ಗಳ ಪೂರೈಕೆ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ: 03-02-2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **17-02-2026ರ ಸಂಜೆ 4.00 ಗಂಟೆಯವರೆಗೆ.**
2. ಪೂರ್ವಭಾವಿ ಸಭೆಯ **ದಿನಾಂಕ: 10-02-2026 ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **18-02-2026 ಸಂಜೆ 4:00 ಗಂಟೆಗೆ.**
4. ಇ.ಎಂ.ಡಿ. : **ಟೆಂಡರ್ ದಾಖಲೆಯಲ್ಲಿ ಉಲ್ಲೇಖಿಸಿರುವಂತೆ.**
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/- ಮುಖ್ಯ ಆಡಳಿತಾಧಿಕಾರಿಗಳು.

ವಾಸಾಸಂಇ/ವಾಪ್ರ/ಜಿಎ/5363/2025-26

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ
ರೇಷ್ಮೆ ಇಲಾಖೆ
ಬಹುಮಹಡಿ ಕಟ್ಟಡ, 5ನೇ ಮಹಡಿ, 1ನೇ ಹಂತ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001
ದೂರವಾಣಿ: 080-22252611, ಇ-ಮೇಲ್: teamsilk.tech2@gmail.com

ಸಂಖ್ಯೆ: DOS:EPRO:RFIX:1:2026 ದಿನಾಂಕ: 31-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬಳಕೆ ಮಾಡುವ ಯಂತ್ರೋಪಕರಣಗಳ ಸರಬರಾಜಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. **(SD/2025-26/IND0163).** ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: 16/02/2026 ಸಂಜೆ 5.00 ಗಂಟೆಯವರೆಗೆ. ಆಸಕ್ತ ಬಿಡ್ಡುದಾರರು ಟೆಂಡರ್‌ನ ಬಿಡ್ ದಾಖಲೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಪಡೆಯಬಹುದು.

ಸಹಿ/- ರೇಷ್ಮೆ ಹೆಚ್ಚುವರಿ ನಿರ್ದೇಶಕರು (ತಾಂತ್ರಿಕ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

DIPR/CP/SPAN/5365/2025-26

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ-577204

ಐ.ಎಫ್.ಟಿ. ಸಂ:42/2025-26 ದಿನಾಂಕ: 02.02.2026

ಸೆಕ್ಷನ್ 1: ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)- ಕೆಡಬ್ಲ್ಯೂ - 4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-4ರ ಅನ್ವಯ ತರೀಕೆರೆ ಉಪವಿಭಾಗದ ವ್ಯಾಪ್ತಿಯಲ್ಲಿನ ಒಂದು ಕಾಮಗಾರಿ ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕು ಜಾವೂರು ಗ್ರಾಮದ ಹತ್ತಿರದ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿ"ಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.194.24 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್ ಮೆಂಟ್ ನ ವೆಬ್ ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿ:02.02.2026ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 12.02.2026 17:00 ಘಂಟೆ.ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25-26/14/02/1743

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.
ದೂರವಾಣಿ: 080-26422238/45, ಇ-ಮೇಲ್: mdktbs.tender@gmail.com
ವೆಬ್‌ಸೈಟ್: https://textbooks.karnataka.gov.in

ಸಂಖ್ಯೆ: A5/KTBS/ADM/DTPM/2/2025 E-68463 ದಿನಾಂಕ: 02.02.2026
E-Procurement tender hosted No. KTBS/2025-26/IND0016

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2026-27ನೇ ಸಾಲಿನ LKG, UKG ಹಾಗೂ 1ರಿಂದ 12ನೇ ತರಗತಿಯ ಅಂದಾಜು **1100 ಶೀರ್ಷಿಕೆಗಳ** ಮುದ್ರಣ ಪೂರ್ವ ಕಾರ್ಯಗಳು ಅಂದರೆ ಪಠ್ಯಪುಸ್ತಕಗಳ ಒಳಪುಟಗಳು, ರಕ್ಷಾಪುಟಗಳ ಹಾಗೂ ಇತರೆ ಡಿ.ಟಿ.ಪಿ. ಕಾರ್ಯದ ಸಂಬಂಧ ಮೂಲಭೂತ ಸೌಲಭ್ಯವುಳ್ಳ ಅರ್ಹ ಡಿ.ಟಿ.ಪಿ. ಸಂಸ್ಥೆಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 7 ದಿನಗಳ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: **09.02.2026 ಸಂಜೆ 5.30 ರವರೆಗೂ** ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: **https://kppp.karnataka.gov.in**
ಸಹಾಯವಾಣಿ: **+91-9240214000/+91-9240214001**
ಇಲಾಖೆ ವೆಬ್‌ಸೈಟ್: **https://textbooks.karnataka.gov.in**

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು-560001.
ಫೋನ್: 080-22223906, ಇ-ಮೇಲ್: dce.tenders2017@gmail.com

ಸಂಖ್ಯೆ: DCE/ITS/34/Tender/2025-26 (Computer No.1346706) ದಿನಾಂಕ : 02.02.2026

ಇ-ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ-ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://kppp.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀ-ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: DCE/2025-26/SE0009 "ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) ಯೋಜನೆಗೆ ಬ್ಯಾಂಕಿಂಗ್ ಪಾಲುದಾರರ ಆಯ್ಕೆಗಾಗಿ ಪ್ರಸ್ತಾವನೆ (RFP)".	02/02/2026	06/02/2026 ಬೆಳಿಗ್ಗೆ 11.00 ಗಂಟೆಗೆ	18/02/2026 ಸಂಜೆ 5.30 ಗಂಟೆಯವರೆಗೆ

ಸಹಿ/- ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು

DIPR/CP/5378/Zen/2025-26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438

ಸಂಕ್ಷಿಪ್ತ ಅವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, **ವಿಚಾರಣೆ/ಇಂಡೆಂಟ್ ಸಂ. ಬೆಸ್ಕಾಂ/2025-26/ಇಎಲ್/ವರ್ಕ್-ಇಂಡೆಂಟ್918** ಅನ್ವಯ ಬೆವಿಕಂನ ದಕ್ಷಿಣ ವೃತ್ತ ವ್ಯಾಪ್ತಿಯಲ್ಲಿ ಎಲ್ಲಾ ಸಂರಚನೆಯ ಮತ್ತು ಎಲ್ಲಾ ಮಾದರಿಯ ಡಾಸ್ ಮತ್ತು ನಾನ್-ಡಾಸ್ ಆರ್.ಎಂ.ಯುಗಳ ದೋಷ ತಡೆಗಟ್ಟುವಿಕೆ ಮತ್ತು ನಿರ್ವಹಣಾ ಕಾಮಗಾರಿಗಾಗಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಒಂದು ವರ್ಷ (ಹಾಗೂ ಮತ್ತೊಂದು ವರ್ಷಕ್ಕೆ ವಿಸ್ತರಿಬಹುದಾದ) ಅವಧಿಗೆ ಅರ್ಹ ಬಿಡ್ಡುದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಾಖಲೆಗಳ ಲಭ್ಯತೆ : 04-02-2026. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ :** 05-03-2026 ರಂದು 17:00 ಗಂಟೆಗಳು. **ಬಿಡ್ ದಾಖಲೆಯನ್ನು ತೆರೆಯುವ ದಿನಾಂಕ :** 06-03-2026 ರಂದು 17:15 ಗಂಟೆಗಳು.
ಕೆಪಿಪಿ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in.** ಮೂಲಕ ಟೆಂಡರ್‌ಗಳನ್ನು ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಮುಂದೆ, ಬಿಡ್ಡುದಾರರು ಕೆಪಿಪಿ ಸಹಾಯವಾಣಿ ಸಂಖ್ಯೆಗಳು (+91-8046010000, +91-8068948777) ಅಥವಾ ಇಮೇಲ್ **support@eprochelpdesk.com** ನಿಂದ ಸಹಾಯವನ್ನು ಪಡೆಯಬಹುದು.
ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಖರೀದಿ, ಬೆವಿಕಂ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ **Mobile APP** ಡೌನ್‌ಲೋಡ್ ಮಾಡಿಕೊಳ್ಳಿ

Ref No : ADM/ICTD/12092/2026 Date : 02.02.2026

THE BAGALKOTE DISTRICT CENTRAL CO-OP BANK., BAGALKOTE
HO : Sector No – 24, Navanagar, BAGALKOTE - 587103
Tel : 08354 – 236443, 235573, E-Mail : shrikant.801@bagalkotdccbank.com

E-Proc Ref No. BDCCBL/2025-26/SE0001/Call-2 Date : 02.02.2026

E-Tender Notification
(Through e-procurement portal only)

The Bagalkote DCC Bank Ltd., Bagalkote having its Head Office at Bagalkote District engaged in banking business operating through 58 branches inviting Tender for Appointment of empanelled auditors (approved) by CERT-In for conducting IS Audit, VAPT, NFS-OSG, Cyber Security Gap Analysis Audit and training session cyber security of bank for the year 2025-26. Tenders are advised to note the qualification criteria specified in the E-Procurement Portal to quality for award of contract. The Bagalkote DCC Bank Ltd., Bagalkot will not be held responsible for any type of website problems at tenders end. The details of the Notification, schedule of event and specification can be had, by visiting the link https://www.kppp.karnataka.gov.in, there by registering with e-procurement platform. Last date & Time for Receipt of Tender is 10.02.2026 @ 4:00 PM. All Vendors are requested to get updated with corrigendum/ addendum (if any) issued online at the following e-procurement.

Sd/-
CHIEF EXECUTIVE OFFICER

ಕರ್ನಾಟಕ ಸರ್ಕಾರ
ಪೊಲೀಸ್ ಮಹಾನಿರೀಕ್ಷಕರು, ಈಶಾನ್ಯ ವಲಯ ಕಲಬುರಗಿ
ಜಿಲ್ಲಾ ಪೊಲೀಸ್ ಭವನ, ಜಿ.ಜಿ.ಹೆಚ್. ರೋಡ್, ಕಲಬುರಗಿ-585105,
ದೂರವಾಣಿ ಸಂ. : 08472-263605, ಇ-ಮೇಲ್ ವಿಳಾಸ : estnergba@ksp.gov.in

No: STS/38/NER/DRONE/2025-26 ದಿನಾಂಕ: 02/02/2026

:: ಟೆಂಡರ ಪ್ರಕಟಣೆ ::

ಪೊಲೀಸ್ ಇಲಾಖೆಗೆ ಅವಶ್ಯಕತೆವಿರುವ SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES ಗಳನ್ನು ಅವಶ್ಯಕವಿರುವ ಡ್ರೋನ್ ಮತ್ತು ಅದರ ಸಾಧನ ಸಾಮಗ್ರಿಗಳನ್ನು ಖರೀದಿಸಲು ಆಳವಡಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ ಪ್ರಕಟಣೆ ಸಂಖ್ಯೆ: ಟೆಂಡರ No. KSP/2025-26/IND0535, 2) ಟೆಂಡರ ಪ್ರಕಟಣೆ ದಿನಾಂಕ: **30/01/2026,** 3) ಟೆಂಡರಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ: **06/02/2026 at 17:00 hrs**, 4) ಪ್ರಿ-ಬಿಡ್ ಮಿಟಿಂಗ್ ದಿನಾಂಕ : **04/02/2026 at 11:30 hrs**, ಸ್ಥಳ ಪೊಲೀಸ್ ಭವನ ಕಲಬುರಗಿ, 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ-Procurment portal ಮುಖಾಂತರ ಸಲ್ಲಿಸಲು **ಕೊನೆಯ ದಿನಾಂಕ: 12/02/2026 at 17:30 hrs**, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **16/02/2026 at 11:00 hrs,** 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **18-02-2026 at 11:00 hrs,** 8) ಟೆಂಡರನ ಅಂದಾಜು ಮೊತ್ತ ರೂ.: **Rs. 100 Lakhs,** 9) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ.: Rs. 1,50,000/- 10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ: ಪೊಲೀಸ್ ಮಹಾನಿರೀಕ್ಷಕರು ಈಶಾನ್ಯ ವಲಯ ಕಲಬುರಗಿ, ದೂ. : 08472-263605

ಸಹಿ/- ಪೊಲೀಸ್ ಉಪ ಮಹಾನಿರೀಕ್ಷಕರು ಈಶಾನ್ಯ ವಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1039/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಲಯ ಕಾರ್ಯಪಾಲಕ ಇಂಜಿನೀಯರ್ ಕನೀನಿನಿ ರವರ ಕಛೇರಿ,ಕೆ.ಪಿ.ಸಿ. ವಿಭಾಗ ನಂ.1, ಬೀದರ-585401.

ಸಂಖ್ಯೆ:ಎಇಂ/ಕನೀನಿನಿ/ಕೆಪಿಸಿ/ವಿ-1/ಬೀ/ತಾ.ಶಾ/2025-26/1851 ದಿನಾಂಕ:30-01-2026

(ಟೆಂಡರ ಸೂಚನೆ ಕರೆ-2)
ರಾಷ್ಟ್ರೀಯ ಸ್ಪರ್ಧಾತ್ಮಕ ಟೆಂಡರ ಅಧಿಸೂಚನೆ ಕೆಪಿಪಿಪಿ ಅಡಿಯಲ್ಲಿ ಟೆಂಡರ ಆಹ್ವಾನ
(ದ್ವಿ ಲಕೋಟೆಯಲ್ಲಿ)
ಅಣೆಕಟ್ಟು ಪುನ:ಶ್ಚೇತನ ಮತ್ತು ಸುಧಾರಣೆ ಯೋಜನೆ ಹಂತ-II

ಉಲ್ಲೇಖ:1)ಸಂಖ್ಯೆ:ಎಇಂ/ಕನೀನಿನಿ/ಕೆಪಿಸಿ/ವಿ-1/ಬೀ/ತಾ.ಶಾ/2025-26/1590 ದಿನಾಂಕ:22-12-2025
2) ಸಂಖ್ಯೆ:ಎಇಂ/ಕನೀನಿನಿ/ಕೆಪಿಸಿ/ವಿ-1/ಬೀ/ತಾ.ಶಾ/2025-26/1639 ದಿನಾಂಕ:31-12-2025

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆಯ ಡ್ರಿಪ್- IIಅಡಿಯಲ್ಲಿ ಬರುವ ಕಾಮಗಾರಿಯನ್ನು ಉಲ್ಲೇಖ (1) ಮತ್ತು (2)ರನ್ವಯ, ಈಗಾಗಲೇ ಟೆಂಡರ ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಅದರಲ್ಲಿ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರನ್ನು ಮರು ಕರೆಯಲಾಗಿರುತ್ತದೆ. ಕಾಮಗಾರಿಯ ಮೊತ್ತದಲ್ಲಿ ಹಾಗೂ ಕಾಲಾವಧಿಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲಾ. ದಿನಾಂಕಗಳು ಈ ಕೆಳಗಿನಂತಿರುತ್ತವೆ. 1)"ಇ"ಪ್ರೊಕ್ಯೂರಮೇಂಟ್‌ನಲ್ಲಿ htpps://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ-ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ ದಿನಾಂಕ: **30-01-2026 ರಿಂದ 18-02-2026 ರ 17.00 ಘಂಟೆಯವರೆಗೆ.** 2) **ದಿನಾಂಕ:10-02-2026 ರಂದು ಬೆಳಿಗ್ಗೆ 11.00 ಗಂಟೆಗೆ** ಅಧೀಕ್ಷಕ ಅಭಿಯಂತರರವರ ಕಛೇರಿಯಲ್ಲಿ ಪೂರ್ವ ಬಿಡ್ಡ್ ಸಭೆ, 3) ದಿನಾಂಕ: **10-02-2026 ರಂದು ಬೆಳಿಗ್ಗೆ 11.00 ಗಂಟೆಗೆ** ಆಕ್ಷೇಪಣೆಗಳು ಸಲ್ಲಿಸುವ ಕೊನೆಯ ದಿನಾಂಕ. 4) ದಿನಾಂಕ: **19-02-2026 ರಂದು 17.15 ಘಂಟೆಯ** ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. 5) ದಿನಾಂಕ: **20-02-2026 ರಂದು 17.20 ಘಂಟೆಯ** ನಂತರ ಅಥವಾ ತಾಂತ್ರಿಕ ಬಿಡ್ಡ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ "ಇ"ಪ್ರೊಕ್ಯೂರಮೇಂಟ್‌ನಲ್ಲಿ htpps://kppp.karnataka.gov.in ಖಾಲಿ-ಕೆಳಗೆ ಸಹಿ ಮಾಡಿದವರ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.1, ಬೀದರ.

ವಾ.ಸಾ.ಸಂ.ಇ/ಬೀದರ/318/ಕೆ.ಎಸ್.ಎಂ.ಸಿ.&ಎ/2025-26

OFFICE OF THE REGISTRAR,
CITY CIVIL COURT, BENGALURU
F.No. ADM II 19/2026 (Xerox Outsources)
Tel: 080 22939220 E-mail: cccadm2gmail.com

CCC.ADM.II. 19/2026 (Xerox Outsources)/OPEXPhase3&4) Date: 30.01.2026

BRIEF e-TENDER NOTIFICATION

This Office invites e-Bidding Proposals (Quotations) from the eligible (having business in Bengaluru city only) Firms/Agencies/Operators, through e-procurement portal **https://kppp.karnataka.gov.in/#/portal/Auctions/live),** to procure the Photocopier Services, valid for 3 years from the date of commencement of operations, subject to renewal every year, for preparing the copies of Orders, Judgments, I.A, Evidence, Exhibits And Case Files of Courts situated at City Civil Court and it's Units, till the pending copy applications are cleared off, as per the order of the Hon'ble High Court of Karnataka, Bengaluru, vide letter No. HCC No.52/2023 dated: 18.01.2024, as per the resolution of the Hon'ble Computers and Technology Committee, has approved for procuring through OPEX model Outsourcing, 12 Copier Machines each along with Operators (i.e., Men & Machine Work Services) on Cost/Rate per page basis, in addition to the already existing work service for 6 Copier Machines along with Operators, the details of which are as appended below:

1.	Tender No (As issued by the KPPP Portal) : **HCK/2025-26/SE0143 dated 29.01.2026** Tender No : **CCC.ADM.II. 19/2026/(Xerox Outsources)/OPEXPhase3Mayo**
	Particulars of the Tender : Inviting Proposals (Quotations) for Phase3-Procurement of Photocopier services of Three Photocopier Machine with Operators-manpower to be stationed at Mayo Hall Unit of City Civil Court, MG Road, Bengaluru (i.e., Men & Machine Work Services) on Cost/Rate per page basis. ***Estimated Approximate Total Tender Cost** : **Rs.6,70,800/-** per annum (Approx. Estimation based on calculations of present usage at the said units 86000 x 65 paise x 12). ***EMD Amount** (Payable through e-procurement portal only) : **Rs.13,416/-**to be remitted at relevant space in the KPP portal.
2.	Tender No (As issued by the KPPP Portal) : **HCK/2025-26/SE0144 dated 29.01.2026** Tender No : **CCC.ADM.II. 19/2026/(Xerox Outsources)/OPEXPhase4Commercial Court**
	Particulars of the Tender : Inviting Proposals (Quotations) for Phase4-Procurement of Photocopier services of One Photocopier Machine with Operators-manpower to be stationed at Commercial Court Unit of City Civil Court, BSNL Building, Bengaluru (i.e., Men & Machine Work Services) on Cost/Rate per page basis. ***Estimated Approximate Total Tender Cost : Rs.4,30,000/-** per annum (Approx. Estimation based on calculations of present usage at the said units 55000 x 65 paise x 12). ***EMD Amount** (Payable through e-procurement portal only) : **Rs.8,600/-** to be remitted at relevant space in the KPP portal.

* Billing model: **Monthly billing upon quality performance of the said Work services and certification from the Branch Supervisor.**
*Last date for clarifications : **06.02.2026 at 1.00 p.m.** The representations seeking clarification must reach this office before the above prescribed time.
* Closing Date & Time for submission of Tender proposal: **13.02.2026 at 3.00 p.m.**
* Tender Opening Date & Time : **Technical: 16.02.2026 at 3.01 p.m. Financial: Upon approval of Technical Bid.**
* Pre-bid Meeting Venue : **06.02.2026 at 1.00 p.m.,** at The Conference Hall, City Civil Court, First Floor, City Civil Court Complex, Next to Kaveri Bhavan, Ambedkar Veedhi, Bengaluru-09. Alternatively, if the above hall is occupied or lesser number bidders appear, then the venue may be shifted to The Registrar Chamber, City Civil Court Complex, Bengaluru. Issuing of Certificate of attendance will be done only till 1.30 p.m., or till the conclusion of the meeting to the participants only.
For more Information please Contact No: 080 22939220, Email : cccadm2@gmail.com

Sd/-
Registrar, City Civil Court, Bengaluru

DIPR/CP/5329/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಅಪಮಾನ ಸಹಿಸುವುದು ಕಷ್ಟವಲ್ಲ; ಆದರೆ, ಅದನ್ನು ಸಹಿಸಿಕೊಳ್ಳುವುದು ಅನ್ಯಾಯ.

-ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

ಮುಟ್ಟಿನ ಆರೋಗ್ಯ ಮೂಲಭೂತ ಹಕ್ಕು ಘನತೆಯ ಬದುಕಿಗೆ ಮಹತ್ವದ ಹೆಜ್ಜೆ

ಮುಟ್ಟಿನ ಆರೋಗ್ಯದ ಹಕ್ಕು ಸಂವಿಧಾನ ನೀಡಿರುವ ಜೀವಿಸುವ ಹಕ್ಕಿನ ಭಾಗ ಎಂದು ಘೋಷಿಸಿ ಸುಪ್ರೀಂ ಕೋರ್ಟ್ ನೀಡಿರುವ ಮಹತ್ವದ ತೀರ್ಪು ಮಹಿಳೆಯ ಘನತೆಯ ಬದುಕಿನತ್ತ ಇರಿಸಲಾದ ಮತ್ತೊಂದು ಹೊಸ ಹೆಜ್ಜೆ. ಸಂವಿಧಾನದ 21ನೇ ವಿಧಿ ಪ್ರಕಾರ ಬದುಕುವ ಹಕ್ಕೆಂಬುದು ಘನತೆಯಿಂದ ಬದುಕುವ ಹಕ್ಕನ್ನೂ ಒಳಗೊಳ್ಳುತ್ತದೆ. 'ಮುಟ್ಟಿನ ನೈರ್ಮಲ್ಯ ಸೌಕರ್ಯ'ಗಳು ಆರೋಗ್ಯದ ವಿಚಾರ ಮಾತ್ರವಲ್ಲ, ಅದೊಂದು ಸಾಂವಿಧಾನಿಕ ಹಕ್ಕು ಎಂದು ಈ ತೀರ್ಪು ಗುರುತಿಸಿದೆ. ಮುಟ್ಟಿನ ನೈರ್ಮಲ್ಯದ ಸೌಕರ್ಯಗಳು ಹೆಣ್ಣುಮಗುವಿನ ಬದುಕು, ಘನತೆ, ಆರೋಗ್ಯ ಹಾಗೂ ಶಿಕ್ಷಣದ ಹಕ್ಕಿನ ಅಂತರ್ಗತ ಭಾಗ ಎಂದೂ ಕೋರ್ಟ್ ಹೇಳಿದೆ. ಹೀಗಾಗಿ, ಎಲ್ಲ ಶಾಲೆಗಳಲ್ಲಿ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ಹಾಗೂ ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಸ್ವಚ್ಛ ಶೌಚಾಲಯ ಸೌಲಭ್ಯಗಳನ್ನು ಒದಗಿಸಬೇಕು ಎಂಬಂಥ ನ್ಯಾಯಿಕ ಪರಮಾದೇಶವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನೀಡಿದೆ; ಮೂರು ತಿಂಗಳೊಳಗೆ ಆದೇಶ ಪರಿಪಾಲನೆಯ ನಿರ್ದಿಷ್ಟ ಗಡುವನ್ನೂ ನೀಡಿದೆ. ಸಂವಿಧಾನದ 14ನೇ ವಿಧಿಯು ಸಮಾನತೆಯ ಹಕ್ಕನ್ನು ನೀಡುತ್ತದೆ. ಆದರೆ ಎಲ್ಲರನ್ನೂ ಒಂದೇ ಬಗೆಯಲ್ಲಿ ಸಮಾನವಾಗಿ ಕಾಣುವಂತಹದ್ದೂ ಅಸಮಾನತೆಯನ್ನು ಶಾಶ್ವತವಾಗಿಸಬಹುದು ಎನ್ನುವ ತರ್ಕ, ಕೋರ್ಟ್‌ನ ಈ ಆದೇಶದ ಹಿಂದೆ ಇದೆ. ಹೀಗಾಗಿ ಅಸಮಾನತೆಯ ಮೂಲ ಕಾರಣ, ವಿಭಿನ್ನ ಅಗತ್ಯಗಳು ಹಾಗೂ ನೀಡಬೇಕಾದ ಅಗತ್ಯ ಬೆಂಬಲಗಳನ್ನು ಆಧರಿಸಿ ನ್ಯಾಯಯುತ ಫಲಿತಗಳನ್ನು ಪಡೆಯುವಂತಹ ತರ್ಕದ (ಸಬ್‌ಸ್ಟಾಂಟಿವ್ ಈಕ್ವಾಲಿಟಿ) ಆಧಾರದಲ್ಲಿ ಕೋರ್ಟ್ ಈ ತೀರ್ಪು ಪ್ರಕಟಿಸಿದೆ. ಈ ಬಗೆಯ ಗ್ರಹಿಕೆಯು, ಮಹಿಳೆ ಹಾಗೂ ಪುರುಷರನ್ನು ಒಂದೇ ರೀತಿಯಲ್ಲಿ ಕಾಣಲಾಗದು ಎಂಬುದನ್ನು ಗುರುತಿಸುತ್ತದೆ. ಇಂತಹ ಕ್ರಮಗಳು ರಕ್ಷಣೆ ಅಥವಾ ಅವಲಂಬನೆಯನ್ನಲ್ಲ, ಸ್ವಾಯತ್ತೆಯನ್ನು ಖಾತರಿ ಪಡಿಸುವಂತಹದ್ದಾಗಿರಬೇಕು ಎಂಬುದನ್ನೂ ಪ್ರತಿಪಾದಿಸುತ್ತವೆ.



ಮುಟ್ಟಿನ ಆರೋಗ್ಯವೂ ಹಕ್ಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದು ಹೆಣ್ಣಿನ ಘನತೆಯನ್ನು ಎತ್ತಿಹಿಡಿಯುವ ಹಾಗೂ ಸಂವೇದನಾಶೀಲವಾದ ಮಹತ್ವದ ನಡೆ.

'ಪೀರಿಯಡ್ (ವಾಕ್ಯದ ಪೂರ್ಣ ವಿರಾಮದ ಚಿಹ್ನೆ), ವಾಕ್ಯದ ಅಂತ್ಯವನ್ನು ಸೂಚಿಸಬೇಕು, ಬಾಲೆಯ ಶಿಕ್ಷಣವನ್ನಲ್ಲ ಎನ್ನುವ, ಅಮೆರಿಕನ್ ಶಿಕ್ಷಣ ತಜ್ಞೆ ಮೆಲಿಸ್ಸಾ ಬರ್ಟನ್ ಅವರ ಮಾತುಗಳನ್ನು 127 ಪುಟಗಳ ತೀರ್ಪಿನ ಬರಹದ ಆರಂಭದಲ್ಲಿ ಉಲ್ಲೇಖಿಸಿರುವುದು ಗಮನಾರ್ಹ. ಮುಟ್ಟಿನ ನೈರ್ಮಲ್ಯ ಪರಿಕರಗಳು ಅಥವಾ ಶೌಚಾಲಯದ ಕೊರತೆಯಿಂದಾಗಿ ಬಾಲಕಿಯೊಬ್ಬಳು ತರಗತಿಗಳಿಗೆ ಹಾಜರಾಗುವುದು ಸಾಧ್ಯ ಆಗದಿದ್ದಲ್ಲಿ, ಆಗ ಆಕೆ ತನ್ನ ಸಹಪಾಠಿಗಳಾದ ಹುಡುಗರ ಜೊತೆ ಸಮಾನ ಹೆಜ್ಜೆ ಇರಿಸಲು ಅಸಾಧ್ಯವಾಗುತ್ತದೆ. ಮುಟ್ಟಿನ ನೈರ್ಮಲ್ಯ ಸೌಕರ್ಯ ಸಮಸ್ಯೆಗಳಿಂದಾಗಿಯೇ ದೇಶದಲ್ಲಿ ಸುಮಾರು 2.3 ಕೋಟಿ ಹರೆಯದ ಹೆಣ್ಣುಮಕ್ಕಳು ಅರ್ಧದಲ್ಲೇ ಶಾಲೆ ಬಿಡುತ್ತಾರೆಂಬುದು ಈಗಲೂ ನಮ್ಮ ಸಮಾಜ ಎದುರಿಸುತ್ತಿರುವಂತಹ ಕಟು ವಾಸ್ತವ. ಇಂತಹ ಸಂದರ್ಭದಲ್ಲಿ, ಮುಟ್ಟಿನ ನೈರ್ಮಲ್ಯ ನಿರ್ವಹಣೆ ವ್ಯವಸ್ಥೆಗಳಿಲ್ಲದೆ ಅರ್ಧಕ್ಕೇ ಶಾಲೆ ಬಿಡುವಂತಾಗುವುದು ಅಥವಾ ತರಗತಿಗಳಿಗೆ ಗೈರುಹಾಜರಾಗುವಂತಹದ್ದು ಆಕೆಯ ದೇಹದ ಸ್ವಾಯತ್ತೆ ಹಾಗೂ ಖಾಸಗೀತನವನ್ನು ಉಲ್ಲಂಘಿಸಿದಂತೆ ಎಂದು ಕೋರ್ಟ್ ಪರಿಗಣಿಸಿರುವುದು ಮಹತ್ವದ್ದು. 2009ರ 'ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯನ್ನು ಮುಟ್ಟಿನ ಆರೋಗ್ಯದ ನೆಲೆಯಲ್ಲಿ ವ್ಯಾಖ್ಯಾನಿಸಿರುವುದು ಹೆಣ್ಣುಮಗುವಿನ ಅಗತ್ಯಗಳಿಗೆ ಸಂವೇದನಾಶೀಲವಾದಂತಹ ಸ್ಪಂದನವಾಗಿದೆ. 'ಉಚಿತ ಶಿಕ್ಷಣ ಟ್ಯೂಷನ್ ಶುಲ್ಕ ರದ್ದತಿಗೆ ಸೀಮಿತವಲ್ಲ. ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಮೇಲಿನ ವೆಚ್ಚದಿಂದಾಗಿ ಹೆಣ್ಣುಮಕ್ಕಳು ಶಾಲೆ ಬಿಡುವಂತಾದರೆ ಅಥವಾ ತರಗತಿಗಳಿಗೆ ಗೈರುಹಾಜರಾಗುವಂತಾದರೆ ಆಗ ಶಿಕ್ಷಣದ ಹಕ್ಕು ಹೆಣ್ಣುಮಗುವಿಗೆ ಷರತ್ತುಬದ್ಧವಾಗಿಬಿಡುತ್ತದೆ. ಹೀಗಾಗಿ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದೂ ಶಾಸನಬದ್ಧ ಬಾಧ್ಯಸ್ಥಿಕೆಯಾಗುತ್ತದೆ ಎಂದು ಕೋರ್ಟ್ ವಿಶ್ಲೇಷಿಸಿರುವುದನ್ನು ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಮುಟ್ಟು ಕುರಿತಾಗಿ ಇರುವ ಮೌಢ್ಯ ಹಾಗೂ ಕೀಳು ಭಾವನೆಗಳನ್ನು ತೊಡೆದು ಹಾಕುವ ವಿಚಾರಕ್ಕೂ ತೀರ್ಪು ಒತ್ತು ನೀಡಿದೆ. ಮುಟ್ಟಿನ ಆರೋಗ್ಯವನ್ನು ಮುಟ್ಟಿನ ನೈರ್ಮಲ್ಯ ಪರಿಕರಗಳ ಸೌಕರ್ಯದಿಂದಾಚೆಗೆ ನೋಡುವುದೂ ಅಗತ್ಯ. ಗಂಡಾಳ್ವಿಕೆಯನ್ನು ತಳಕು ಹಾಕಿಕೊಂಡ ಸಾಮಾಜಿಕ-ಸಾಂಸ್ಕೃತಿಕ ರಚನೆಗಳ ಜೊತೆಗೂ ಇದು ಬೆಸೆದುಕೊಂಡಿದೆ. ಹಲವು ಬಗೆಯ ನಿಷೇಧಗಳು, ತಾರತಮ್ಯಗಳು, ಹೊರಗಿಡುವಿಕೆಗಳ ಸಾಮಾಜಿಕ ಪೂರ್ವಗ್ರಹ, ಸಾಂಸ್ಕೃತಿಕ ನಿಷೇಧಗಳ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮ ನಿರಂತರವಾಗಿರಬೇಕು. ಮುಟ್ಟಿನ ಜೈವಿಕ ವಾಸ್ತವದ ಬಗ್ಗೆ ಗಂಡುಮಕ್ಕಳಲ್ಲಿ ಅರಿವು, ಸಂವೇದನಾಶೀಲತೆ ಮೂಡಿಸಬೇಕಾದುದೂ ಮುಖ್ಯ. ಮುಟ್ಟು ಹಾಗೂ ಪ್ರೌಢಾವಸ್ಥೆ ಕುರಿತ ಪಠ್ಯಗಳ ಅಳವಡಿಕೆಗೆ ಕೋರ್ಟ್ ನೀಡಿರುವ ನಿರ್ದೇಶನಗಳು ಅನುಷ್ಠಾನ ಆಗುವುದು ಅಗತ್ಯ. ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಮುಟ್ಟಿನ ಆರೋಗ್ಯದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕಾಗಿ ಬಂದದ್ದು ನಮ್ಮ ಸಾಮಾಜಿಕ ಅಸೂಕ್ಷ್ಮತೆ ಹಾಗೂ ಆಡಳಿತಗಳ ವೈಫಲ್ಯಗಳಿಗೆ ನಿದರ್ಶನ.

ಚಾಟಿ

ಬಜೆಟ್ ಪ್ರಯೋಜನ ಏನು?



ಯಾವುದೇ ಬಜೆಟ್‌ನ ನಂತರ ದಿನಬಳಕೆಯ ವಸ್ತುಗಳು ಜನರ ಕೈಗೆಟಕುತ್ತವೆಯೇ? ದುಡಿಯುವ ಕೈಗಳಿಗೆ ಉದ್ಯೋಗ ಸೃಷ್ಟಿ ಆಗುತ್ತಿದೆಯೇ? ಶಿಕ್ಷಣ ಆರೋಗ್ಯ ಎಲ್ಲರಿಗೂ ಸಮಾನವಾಗಿ ಸಿಗಬಲ್ಲದೇ? ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಕಡಿಮೆಯಾಗುವುದಿರಲಿ, ಹೆಚ್ಚಾಗುವುದಾದರೂ ನಿಲ್ಲುತ್ತದೆಯೇ? ಖಂಡಿತಾ ಇಲ್ಲ!

ನಡಹಳ್ಳಿ ವಸಂತ್, ಆಪ್ತ ಸಮಾಲೋಚಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು 95 ಚುನಾವಣಾ ಸೋಲುಗಳ ನಂತರವೂ ಔಟ್ ಆಗದೆ ಮುನ್ನಡೆಯುತ್ತಿದೆ. ಶೀಘ್ರವೇ ಪಂಚರಾಜ್ಯಗಳ ಚುನಾವಣೆ ನಡೆಯಲಿದ್ದು, ಸೋಲಿನ ಶತಕದ ದಾಖಲೆಗೆ ಮುಂಚಿತವಾಗಿಯೇ ಶುಭ ಹಾರೈಕೆಗಳು.

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶನಿವಾರ, 3-2-2001

- **ಮತ್ತಷ್ಟು ತೆರಿಗೆ: ಪ್ರಧಾನಿ ಇಂಗಿತ**

ನವದೆಹಲಿ, ಫೆ. 2 (ಪಿಟಿಐ): ಭೂಕಂಪದಿಂದಾಗಿ ಗುಜರಾತಿನಲ್ಲಿ ಆಗಿರುವ ಅಪಾರ ಹಾನಿಯನ್ನು ತುಂಬಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ತೆರಿಗೆಗಳನ್ನು ವಿಧಿಸುವ ಇಂಗಿತವನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ನೀಡಿದರು.

ವೈಯಕ್ತಿಕ ಮತ್ತು ಕಾರ್ಪೊರೇಟ್ ಆದಾಯದ ಮೇಲೆ ಶೇಕಡಾ 2ರಷ್ಟು ಸರ್‌ಚಾರ್ಜ್ ವಿಧಿಸಲು ಕೇಂದ್ರ ಸಚಿವ ಸಂಪುಟ ನಿನ್ನೆಯಷ್ಟೆ ನಿರ್ಧರಿಸಿತ್ತು. ಆದರೆ, ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಪ್ರಧಾನಿ, 'ಭೂಕಂಪದ ವ್ಯಾಪಕ ಹಾನಿಯನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಶೇ 2ರಷ್ಟು ಸರ್‌ಚಾರ್ಜ್ ಏನೇನೂ ಸಾಲದು' ಎಂದರು.

- **ವಾಜಪೇಯಿ ಜತೆ ಮಾತಾಡಿದ ಪಾಕಿಸ್ತಾನದ ಮುಷರ್ರಫ್**

ನವದೆಹಲಿ, ಫೆ. 2 (ಪಿಟಿಐ): ಹದಿನಾರು ತಿಂಗಳುಗಳ ಹಿಂದೆ ಅಧಿಕಾರ ಸ್ವೀಕರಿಸಿದ ನಂತರ ಪಾಕಿಸ್ತಾನ ಮಿಲಿಟರಿ ಆಡಳಿತಗಾರ ಜನರಲ್ ಪರ್ವೇಜ್ ಮುಷರ್ರಫ್ ಅವರು ಇಂದು ಮೊದಲ ಬಾರಿಗೆ ಭಾರತದ ಪ್ರಧಾನಿ ವಾಜಪೇಯಿ ಅವರ ಜತೆ 5 ನಿಮಿಷ ದೂರವಾಣಿಯಲ್ಲಿ ಮಾತುಕತೆ ನಡೆಸಿದರು.

75 ವರ್ಷಗಳ ಹಿಂದೆ

ಶನಿವಾರ, 3-2-1951

- **'ಸ್ವತಂತ್ರ ಭಾರತದ ಪ್ರಪ್ರಥಮ ಜನಗಣನೆಯ ಕೀರ್ತಿ ನಿಮ್ಮದು'**

ನವದೆಹಲಿ, ಫೆ, 2– ಭಾರತದಲ್ಲಿ ಫೆಬ್ರವರಿ 9ರಿಂದ ಪ್ರಾರಂಭವಾಗುವ ಜನಗಣತಿ ಲೆಕ್ಕದ ಗಣತಿ ತೆಗೆದುಕೊಳ್ಳುವ 6 ಲಕ್ಷ ಮಂದಿಯನ್ನು ಕುರಿತು ಭಾರತದ ಗೃಹ ಸಚಿವ ರಾಜಾಜಿ ಸಂದೇಶ ಕೊಡುತ್ತಾ, ಈ ರಾಷ್ಟ್ರಾದ್ಯಂತ ಕಾರ್ಯಕ್ರಮದಲ್ಲಿ ತಮ್ಮ ಕಾಣಿಕೆಯ ಉತ್ತಮ ಸಾಧನೆ ಬಗ್ಗೆ ಹೆಮ್ಮೆಪಡಬೇಕಾದ ವಿಷಯವೆಂದು ತಿಳಿಸಿದರು.

ನವದೆಹಲಿ ಕೇಂದ್ರದಿಂದ ಮಾಡಿದ ರೇಡಿಯೋ ಪ್ರಸಾರ ಭಾಷಣದಲ್ಲಿ ಗೃಹಮಂತ್ರಿಗಳು, 'ಪ್ರಿಯ ಸಹ ಕಾರ್ಯಕರ್ತರೇ, ಇದು ಸ್ವತಂತ್ರ ಭಾರತದ ಪ್ರಥಮ ಸೆನ್ಸಸ್ ಕಾರ್ಯಕ್ರಮ' ಎಂದು ನುಡಿದರು.

ಇಕ್ಕೀಸ್: ಗೆದ್ದು ಸೋಲುವ ಆಟ



ವಿಶ್ಲೇಷಣೆ

ಪ್ರಶಾಂತ್ ಪಂಡಿತ್

ಯುದ್ಧೋನ್ಮಾದ ಸಿನಿಮಾಗಳ ಯಶಸ್ಸಿನ ನಡುವೆ, ಯುದ್ಧದ ಘೋರ ಪರಿಣಾಮಗಳನ್ನು ಹೇಳುವ ಕಾರಣಕ್ಕಾಗಿ 'ಇಕ್ಕೀಸ್' ಗಮನಸೆಳೆಯುತ್ತದೆ. ಮನುಷ್ಯ ಸಂಬಂಧಗಳಿಗೆ ದೇಶ–ಕಾಲದ ಗಡಿಯಿಲ್ಲ ಎನ್ನುವುದನ್ನು ರುಜುವಾತುಪಡಿಸುವ ಈ ಸಿನಿಮಾ, ಸಂಯಮ ಮತ್ತು ನೈತಿಕ ಸ್ಪಷ್ಟತೆ ಒಳಗೊಂಡಿರುವ ಕಲಾಕೃತಿ.

'ತುಂಡಾಗಿದೆ ಭೂಮಿ ಛಿದ್ರವಾಗಿದೆ ಬದುಕು/ ಜ್ವಲಿಸುತ್ತಿವೆ ಚಂಡಮಾರುತ ಎದೆಯೆದೆಯಲ್ಲೂ/ ಅಲ್ಲಿಯೂ ಇಲ್ಲಿಯೂ', 'ಪ್ರತಿ ಮನೆಯಲ್ಲಿ ಚಿತೆಯ ಜ್ವಾಲೆ/ ಹಬ್ಬುತಿದೆ ಬೆಂಕಿ ಊರೆಲ್ಲ ಖಾಲಿ/ ಅಲ್ಲಿಯೂ ಇಲ್ಲಿಯೂ' – ಕೈಫಿ ಆಜ್ಮಿ ಅವರ ಈ ಕವಿತೆಯೊಂದಿಗೆ ಶುರುವಾಗುವ ಕನ್ನಡಿಗ ಎಂ.ಎಸ್. ಸತ್ಯು ನಿರ್ದೇಶನದ 'ಗರಂ ಹವಾ' (1973) ಭಾರತೀಯ ಚಿತ್ರರಂಗದಲ್ಲಿ ಮೈಲಿಗಲ್ಲು ಎಂದೇ ಪರಿಗಣಿಸಲಾಗಿರುವ ಹಿಂದಿ ಸಿನಿಮಾ. ದೇಶ ವಿಭಜನೆಯ ನಂತರ ಭಾರತದಲ್ಲೇ ಉಳಿಯಲು ನಿರ್ಧರಿಸಿದ ಮುಸ್ಲಿಂ ಕುಟುಂಬವೊಂದರ ದುರಂತ ಕಥೆ ಈ ಚಿತ್ರದ್ದು. ದೇಶ ತುಂಡಾಗಿ ಜನರ ಮಧ್ಯೆ ಹೊಸದೊಂದು ಗಡಿಗೋಡೆ ಎದ್ದು ನಿಂತರೂ ಮನಸ್ಸುಗಳು ಬೆಸೆದುಕೊಂಡಿರುವ ಜನಸಾಮಾನ್ಯರ ಬದುಕು–ಬವಣೆಯನ್ನು ಚಿತ್ರ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಇದೀಗ 2026ರ ಮೊದಲ ದಿನ ತೆರೆಕಂಡ ತಮಿಳು ಮೂಲದ ಶ್ರೀರಾಮ್ ರಾಘವನ್ ನಿರ್ದೇಶನದ ಹಿಂದಿ ಚಿತ್ರ 'ಇಕ್ಕೀಸ್' ಭಾರತ–ಪಾಕಿಸ್ತಾನದ ಯುದ್ಧದ ಹಿನ್ನೆಲೆಯಲ್ಲಿ ಗಡಿಗೋಡೆಗಳನ್ನು ಮೀರಿದ ಜನಸಾಮಾನ್ಯರ ಬದುಕನ್ನು ವಿಶಿಷ್ಟ ಬಗೆಯಲ್ಲಿ ಕಟ್ಟಿಕೊಟ್ಟಿದೆ. ದೇಶ ವಿಭಜನೆ, ಯುದ್ಧದ ನೋವು, ಸಂಕಟಗಳನ್ನು ನೇರವಾಗಿ ಅನುಭವಿಸದ ದಕ್ಷಿಣ ಭಾರತೀಯರಿಬ್ಬರು ಇಂತಹ ಸಂಕೀರ್ಣ ವಿಷಯಗಳನ್ನುಳ್ಳ ಚಿತ್ರಗಳನ್ನು ಕಟ್ಟಿದ್ದು ಮಾನವ ಸಂಬಂಧಗಳಿಗೆ, ಸಂವೇದನೆಗಳಿಗೆ ದೇಶ–ಕಾಲಗಳ ಗಡಿಯಿಲ್ಲ ಎಂಬುದನ್ನು ಸಾರಿ ಹೇಳುವಂತಿದೆ.

ಕಥೆ, ಪಾತ್ರಗಳ ವಿವರ, ಕಾಲಘಟ್ಟ, ಇವೆಲ್ಲವೂ ಬೇರೆಯೇ ಆದರೂ 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದಲೆದೆಗೆ ಸತತ' ಎಂದು ಇವೆರಡೂ ಚಿತ್ರಗಳು ಆರ್ದ್ರವಾಗಿ ಹೇಳುತ್ತಿವೆ. ಇಂದಿನ ಅಬ್ಬರದ ದೇಶಭಕ್ತಿಗೆ, ಯುದ್ಧಪಿಪಾಸು ಮನಃಸ್ಥಿತಿಗೆ, ಉಗ್ರ ರಾಷ್ಟ್ರೀಯತೆಗೆ ದಿಟ್ಟವಾಗಿ ಪ್ರತಿರೋಧ ಒಡ್ಡಿವೆ. ಜನಸಾಮಾನ್ಯರ ಸಾವು–ನೋವು ಅಲ್ಲಿಯೂ ಇಲ್ಲಿಯೂ ಒಂದೇ ಬಗೆಯದು, ಮೇಲ್ನೋಟಕ್ಕೆ ಕಾಣುವ ಹಗೆ–ವೈರ ಜನಸಾಮಾನ್ಯರ ಆಯ್ಕೆಯಲ್ಲ ಎಂಬ ಸ್ಪಷ್ಟ ನಿಲುವು ಈ ಚಿತ್ರಗಳದ್ದು.

ಹಿಂದಿಯಲ್ಲಿ ಇಕ್ಕೀಸ್ ಎಂದರೆ ಇಪ್ಪತ್ತೊಂದು. 21ನೇ ವಯಸ್ಸಿನಲ್ಲೇ ಸಾವನ್ನಪ್ಪಿದ ಸೆಕೆಂಡ್ ಲೆಫ್ಟಿನೆಂಟ್ ಅರುಣ್ ಖೇತರ್‌ಪಾಲ್ (ಅಗಸ್ತ್ಯ ನಂದ) ಅವರ ಬದುಕನ್ನು ಆಧರಿಸಿದ್ದು ಈ ಚಿತ್ರ. ಈತ ಭಾರತದ ಅತಿ ಕಿರಿಯ 'ಪರಮವೀರಚಕ್ರ' ಪುರಸ್ಕೃತ. ಹಾಗೆಯೇ ಯುದ್ಧಭೂಮಿಯಲ್ಲಿ ಮಡಿದ ಮಗನನ್ನು 30 ವರ್ಷಗಳ ನಂತರವೂ ನೆನೆಯುತ್ತಲೇ ಇರುವ 81ರ ವಯಸ್ಸಿನ ಮದನ್‌ಲಾಲ್ ಖೇತರ್‌ಪಾಲ್ (ಧರ್ಮೇಂದ್ರ) ಅವರ ಬದುಕಿನ ಚಿತ್ರಣವೂ ಹೌದು. ಅರುಣ್, ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಸೈನಿಕ ತರಬೇತಿ ಪಡೆದು 1971ರ ಭಾರತ–ಪಾಕಿಸ್ತಾನ ಯುದ್ಧದ ಸಮಯದಲ್ಲಿ 17 ಪೂನಾ ಹಾರ್ಸ್ ರೆಜಿಮೆಂಟ್‌ನಲ್ಲಿ ಟ್ಯಾಂಕ್ ಕಮಾಂಡರ್ ಆಗಿ ಯುದ್ಧಭೂಮಿಯಲ್ಲಿ ಕಾದಾಡುತ್ತ ಸಾಯುವ ಚಿತ್ರಣ ಒಂದೆಡೆಯಾದರೆ, 2001ರಲ್ಲಿ ಲಾಹೋರ್‌ಗೆ ಭೇಟಿ ನೀಡುವ ನಿವೃತ್ತ ಬ್ರಿಗೇಡಿಯರ್ ಮದನ್‌ಲಾಲ್ ಅವರನ್ನು ಪಾಕಿಸ್ತಾನದಲ್ಲಿ ಬ್ರಿಗೇಡಿಯರ್ ನಿಸಾರ್ (ಜೈದೀಪ್ ಅಹಲಾವತ್) ಆತಿಥ್ಯ ಮಾಡುವ ಚಿತ್ರಣ ಇನ್ನೊಂದೆಡೆ. ಹೀಗೆ ಚಿತ್ರವು ಎರಡು ಕಾಲರೇಖೆಗಳಲ್ಲಿ ನಡೆಯುತ್ತದೆ. ಸೈನಿಕನಾಗಿ ಶತ್ರುಗಳ ವಿರುದ್ಧ ಯುದ್ಧಭೂಮಿಯಲ್ಲಿ ಸೆಣಸುವ ಬಗ್ಗೆ ಸಾಹಸಮಯ ಕಲ್ಪನೆಗಳನ್ನಿಟ್ಟುಕೊಂಡ ಬಿಸಿರಕ್ತದ ಯುವಕನ ಕಥೆ ಮತ್ತು ಅದರ ಪರಿಣಾಮಗಳೊಂದಿಗೆ ಹೋರಾಡುತ್ತಲೇ ಇರುವ ಇಳಿವಯಸ್ಸಿನ ತಂದೆ ಮತ್ತು 'ಶತ್ರುದೇಶದ' ಮಧ್ಯವಯಸ್ಕನ ಕಥೆ ಒಂದಕ್ಕೊಂದು ಹೆಣೆದುಕೊಂಡಿರುವ ಪರಿಯೇ ಚಿತ್ರದ ಜೀವಾಳ.

ಇತ್ತೀಚಿನ ವರ್ಷಗಳಲ್ಲಿ ಯುದ್ಧವನ್ನು ಅತಿರಂಜಿತವಾಗಿ ಚಿತ್ರಿಸಿ ನೋಡುಗರಲ್ಲಿ ರೋಷ ಉಕ್ಕುವಂತೆ ಪ್ರಚೋದಿಸುವ ಜವಾಬ್ದಾರಿಯನ್ನು ಆವಾಹಿಸಿಕೊಂಡಿರುವ ಬಾಲಿವುಡ್ ಚಿತ್ರಗಳು ಒಂದರ ಹಿಂದೆ ಒಂದು ಯಶಸ್ಸನ್ನು ಸಾಧಿಸುತ್ತಿರುವಾಗ, 'ಇಕ್ಕೀಸ್' ಇದ್ಯಾವುದನ್ನೂ ಲೆಕ್ಕಿಸದೆ ಅಪ್ಪ ಮತ್ತು ಮಗನ ಬದುಕನ್ನು ಭಾವನಾತ್ಮಕ ನೆಲೆಯಲ್ಲಿ ಸಂಧಿಸುವ ಹಾಗೆ ಕಟ್ಟುತ್ತ ಸಾಗುತ್ತದೆ. ಬಾಕ್ಸ್ ಆಫೀಸ್‌ನ ಪ್ರಲೋಭನೆಗಳಿಗೆ ಬಗ್ಗದ ಆತ್ಮವಿಶ್ವಾಸದ ಸಂವೇದನಾಶೀಲ ನಿರ್ದೇಶಕ, ಯುದ್ಧವೆಂದರೆ ದೇಶಭಕ್ತಿಯ ಹೆಸರಿನಲ್ಲಿ ನಡೆಸುವ ಅಬ್ಬರದ ಅರಚಾಟವಲ್ಲ, ತಲೆಮಾರುಗಳು ಅದರ ದುಷ್ಪರಿಣಾಮವನ್ನು ನೇರವಾಗಿಯೋ ಪರೋಕ್ಷವಾಗಿಯೋ ಎದುರಿಸಬೇಕಾಗುತ್ತದೆ ಎಂಬುದನ್ನು ಕೌಶಲದಿಂದ ಹೆಣೆದ ಚಿತ್ರಿಕೆಗಳಲ್ಲಿ ಬಿಚ್ಚಿಡುತ್ತಾರೆ. ಅರುಣ್ ಸೈನಿಕ ತರಬೇತಿಯಲ್ಲಿರುವಾಗ ಹೆಮಿಂಗ್ವೇಯ 'For Whom The Bell Tolls' ಕಾದಂಬರಿಯನ್ನು ಉಡುಗೊರೆಯಾಗಿ ಪಡೆಯುವ ದೃಶ್ಯ ಇದಕ್ಕೆ ಉದಾಹರಣೆ. ಯುದ್ಧದಲ್ಲಾಗುವ ಸಾವು–ನೋವಿನ ದುರಂತದ ಚಿತ್ರಣವಿರುವ ಕಾದಂಬರಿ ಇದು. ಅರುಣ್ ಕೈಗೆ ಈ ಪುಸ್ತಕವನ್ನಿಡುವ ನಿರ್ದೇಶಕ ಯುದ್ಧಗಳ ಕುರಿತ ತನ್ನ ನಿಲುವನ್ನು ಮೆಲುವಾಗಿ ಸ್ಪಷ್ಟ ಧ್ವನಿಯಲ್ಲಿ ಹೇಳಿಬಿಡುತ್ತಾರೆ. ನಿಜದಲ್ಲಿ ಶತ್ರುವೆಂದರೆ ಯಾರು, ಶತ್ರುನಾಶ ಎಂದರೆ ಏನು ಎಂಬೆಲ್ಲಾ ಸಂಕೀರ್ಣ ಪ್ರಶ್ನೆಗಳು ನೋಡುಗರ ಮನದಲ್ಲಿ ಹುಟ್ಟುವ ಹಾಗೆ ಮಾಡುತ್ತಾರೆ.

ಲಾಹೋರಿನ ತನ್ನ ಕಾಲೇಜಿಗೆ ಭೇಟಿ ಕೊಟ್ಟ ಮದನ್‌ಲಾಲ್ ಅಲ್ಲಿ ಸಾಲಾಗಿಟ್ಟ ಖ್ಯಾತನಾಮರ ಪಟಗಳ ಮಧ್ಯೆ ನಟ ದೇವಾನಂದರನ್ನು ತೋರಿಸಿ ಇವರು 'ನನ್ನ ಹಿರಿಯ' ಎಂದು ಗುರುತಿಸುವ ದೃಶ್ಯ, ಉರ್ದುವಿನಲ್ಲಿ ಟಿಪ್ಪಣಿಗಳನ್ನು ಬರೆದುಕೊಳ್ಳುವ ದೃಶ್ಯ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು. ಇತ್ತೀಚೆಗೆ ಪ್ರಜ್ಞಾಪೂರ್ವಕವಾಗಿ ತನ್ನ ಹಿಂದೂಸ್ತಾನಿ (ಹಿಂದಿ–ಉರ್ದು) ಬೇರುಗಳಿಂದ ದೂರ ಸರಿಯುತ್ತಿರುವ ಬಾಲಿವುಡ್ ಚಿತ್ರಗಳನ್ನು ನೋಡಿದಾಗ ಈ ದೃಶ್ಯಗಳ ಮಹತ್ವ ಅರಿವಾಗುತ್ತದೆ.

ಹಳೆಯ ಹಿಂದಿ ಸಿನಿಮಾಗಳ ಆರಾಧಕರಾದ ಶ್ರೀರಾಮ್ ಈವರೆಗಿನ ತಮ್ಮ ಎಲ್ಲಾ ಚಿತ್ರಗಳಲ್ಲಿ ಒಂದಿಲ್ಲೊಂದು ನೆಪದಲ್ಲಿ ಹಳೆಯ ಚಿತ್ರಗೀತೆಗಳ ತುಣುಕನ್ನು, ನಟ–ನಟಿಯರ ಚಿತ್ರಗಳನ್ನು, ಸಂಭಾಷಣೆಗಳನ್ನು ಕಥೆಯ ಭಾಗವಾಗಿ ಸಾವಯವವಾಗಿ ಹೆಣೆದಿದ್ದಾರೆ. ಅದು ಇಲ್ಲಿಯೂ ಮುಂದುವರಿದು ಇಡೀ ಚಿತ್ರಕ್ಕೆ ಒಂದು ಸುಂದರ ಆವರಣವನ್ನು ಒದಗಿಸಿದೆ. 50–60ರ ದಶಕದ ಹಿಂದಿಚಿತ್ರಗಳ ಜೀವಾಳವೇ ಆಗಿದ್ದ ಗಂಗಾ–ಜಮುನಿ ತಹಜ್ಜೀಬ್ (ಹಿಂದೂ–ಮುಸ್ಲಿಂ ಸಮನ್ವಯ ಸಂಸ್ಕೃತಿ) ಅನ್ನು ಅಳಿಸಿಹಾಕುವ ಇತ್ತೀಚಿನ ಪ್ರಯತ್ನಗಳನ್ನು ಶ್ರೀರಾಮ್ ತಮ್ಮದೇ ಶೈಲಿಯಲ್ಲಿ ಧಿಕ್ಕರಿಸುತ್ತ ಅವುಗಳನ್ನು ಮರುಸೃಷ್ಟಿಸುವ ಛಾತಿ ತೋರುತ್ತಾರೆ.

ಯುದ್ಧೋನ್ಮಾದ ಹೆಚ್ಚಿಸಿ, ನೆರೆಹೊರೆಯ ರಾಷ್ಟ್ರಗಳ ಕುರಿತ ಭೀತಿಯನ್ನು ಬಳಸಿ, ಮಾಧ್ಯಮಗಳ ಮೂಲಕ 'ರಣೋತ್ಸಾಹ'ವನ್ನು ಮನೆ ಮನೆಗೂ ಹಂಚಿ, ಹುತಾತ್ಮರನ್ನೂ ಬಿಡದೆ ಬಳಸಿಕೊಳ್ಳುತ್ತಿರುವ ರಾಜಕೀಯ–ಆರ್ಥಿಕತೆಯ ಈ ದಿನಗಳಲ್ಲಿ, 'ಇಕ್ಕೀಸ್' ದಟ್ಟವಾದ ವಿಷಾದದೊಂದಿಗೆ ಯುದ್ಧವೆಂದರೆ ಗೆದ್ದು ಸೋಲುವ ಆಟ ಎಂಬುದನ್ನು ಸಮರ್ಥವಾಗಿ ಚಿತ್ರಿಸುತ್ತದೆ. ಭಾರತದಲ್ಲಿ ಮಾತ್ರವಲ್ಲ, ಯುದ್ಧಪಿಪಾಸು ಇಸ್ರೇಲ್, ರಷ್ಯಾ ಮತ್ತು ಅಮೆರಿಕದಲ್ಲಿಯೂ ಶಾಂತಿ–ಸಂಧಾನದ ಮಾತಾಡುವುದನ್ನು ಇಂದು ದೌರ್ಬಲ್ಯವೆಂಬಂತೆ ನೋಡಲಾಗುತ್ತಿದೆ, ಅಟ್ಟಹಾಸದಿಂದ ಅಪಹಾಸ್ಯ ಮಾಡಲಾಗುತ್ತಿದೆ. ಈ ಚಿತ್ರದಲ್ಲಿ ಪಾಕಿಸ್ತಾನಿ ಸೇನಾಧಿಕಾರಿ ಭಾರತೀಯ ಅಧಿಕಾರಿಗೆ ಆತಿಥ್ಯ ನೀಡಿದ್ದಲ್ಲದೆ, ಅವರ ಮಗನನ್ನು ಕೊಂದ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದನ್ನು ಒಂದು ಯುಟೋಪಿಯನ್ ಕಲ್ಪನೆ ಎಂಬಂತೆ ತಳ್ಳಿಹಾಕಲಾಗುತ್ತಿದೆ. ಆದರೆ, ಇವೆಲ್ಲ ನೈಜ ಘಟನೆಗಳು. ಪಾಕಿಸ್ತಾನಿ ಅಧಿಕಾರಿ ನಿಸಾರ್ ಮದನ್‌ಲಾಲ್‌ರನ್ನು ಅವರ ಹುಟ್ಟೂರು ಸರಗೋಧಾಗೆ ತನ್ನ ಕಾರಿನಲ್ಲೇ ಕೊಂಡೊಯ್ಯುವುದು, ಅಲ್ಲಿ ಅವರ ಪೂರ್ವಜರು ವಾಸವಿದ್ದಲ್ಲಿ ಈಗ ಇರುವ ಕುಟುಂಬದವರು ಪ್ರೀತಿಯಿಂದ ಬರಮಾಡಿಕೊಳ್ಳುವುದು ಇವೆಲ್ಲವೂ ವಾಸ್ತವದಲ್ಲಿ ನಡೆದದ್ದೇ ಆಗಿವೆ. ಅದನ್ನು ಅಷ್ಟೇ ಪ್ರಾಮಾಣಿಕವಾಗಿ, ಆತ್ಮೀಯತೆಯಿಂದ ಶ್ರೀರಾಮ್ ಚಿತ್ರಿಸುತ್ತಾರೆ. ಅಲ್ಲಲ್ಲಿ ಸೃಜನಶೀಲ ಸ್ವಾತಂತ್ರ್ಯ ಬಳಸಿಕೊಂಡಿದ್ದರೂ, ಉಳಿದಂತೆ ಸಂಪೂರ್ಣವಾಗಿ ನೈಜ ಘಟನೆಗಳಿಗೆ ನಿಷ್ಠರಾಗಿಯೇ ಶ್ರೀರಾಮ್ ಚಿತ್ರವನ್ನು ಕಟ್ಟಿದ್ದಾರೆ. ಅದಕ್ಕಾಗಿ ನಾಲ್ಕೈದು ವರ್ಷಗಳ ಸಂಶೋಧನೆ, ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ ಎಲ್ಲವನ್ನೂ ಅವರ ತಂಡ ಅಚ್ಚುಕಟ್ಟಾಗಿ ಮಾಡಿದೆ. ಯಾವುದೇ ಆಧುನಿಕ ಗ್ರಾಫಿಕ್ಸ್, ಭಾವನೆಗಳನ್ನು ಉದ್ದೀಪಿಸುವ ಸಂಗೀತ ಬಳಸದೆ ನಿಜದಲ್ಲಿ ಯುದ್ಧಭೂಮಿ ಹೇಗಿರುವುದೋ ಹಾಗೆಯೇ ಚಿತ್ರಿಸಿರುವುದು ಗಮನಾರ್ಹ.

ಯೌವನದ ಕೆಚ್ಚಿನ ಅರುಣ್ ಯುದ್ಧಭೂಮಿಗೆ ಹೋಗಿ ಅಸಾಧಾರಣ ಶೌರ್ಯ ಪ್ರದರ್ಶಿಸಿ ನಂತರ ಹೆಣವಾಗುವ ತ್ಯಾಗವನ್ನು ಶ್ರೀರಾಮ್ ಈ ಕಾಲದ ಇತರ ಯುದ್ಧಕೇಂದ್ರಿತ ಚಿತ್ರಗಳಂತೆ ವಿಜೃಂಭಿಸದೆ, ಅಬ್ಬರದ ಭಾಷಣಕ್ಕೆ ಸರಕನ್ನಾಗಿಸದೆ ಯುದ್ಧದ ನಿಷ್ಪ್ರಯೋಜಕತೆಯನ್ನು ಸಶಕ್ತವಾಗಿ ಕಟ್ಟಿಕೊಡುತ್ತಾರೆ. ಮದನ್‌ಲಾಲ್ ಹುಟ್ಟೂರಿನಲ್ಲಿರುವಾಗ ಯುದ್ಧದಲ್ಲಿ ಒಂದು ಕಾಲನ್ನು ಕಳೆದುಕೊಂಡ ಮಾಜಿ ಪಾಕಿಸ್ತಾನಿ ಸೈನಿಕನೊಬ್ಬ ಅಲ್ಲಿಗೆ ಕುಂಟುತ್ತಲೇ ಬಂದು 'ಯಾರು ಈ ಶತ್ರುವನ್ನು ಇಲ್ಲಿ ಕರೆತಂದಿದ್ದು' ಎಂದು ಅಬ್ಬರಿಸುತ್ತಾನೆ. ಆಗ ಮದನ್‌ಲಾಲ್ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡು 'ಯಾರು ಶತ್ರು ಎಂದರೆ? ನೀನು ಒಂದು ಕಾಲನ್ನು ಕಳೆದುಕೊಂಡಿದ್ದಿ, ನಾನು ಮಗನನ್ನೇ ಕಳೆದುಕೊಂಡಿದ್ದೇನೆ' ಎಂದು ಕಣ್ಣೀರಾಗುವ ದೃಶ್ಯ ಮತ್ತು ಈ ಎಲ್ಲ ಸಂಘರ್ಷ ಎಂದಾದರೂ ಕೊನೆಗೊಳ್ಳುವುದೇ ಎಂಬ ನಿಸಾರ್‌ನ ಪ್ರಶ್ನೆಗೆ, 'ಕೊನೆಯಾಗಲೇಬೇಕು ಎಂದು ನಾವು ಪ್ರಯತ್ನಿಸಿದರೆ ಕೊನೆಯಾಗೇ ಆಗುತ್ತದೆ' ಎಂದು ಹೇಳುವ ದೃಶ್ಯ ಯುದ್ಧದಲ್ಲಿ ನೊಂದು ನಲುಗಿದ ಎಲ್ಲರ ಧ್ವನಿಯಾಗಿ ಕೇಳಿಸುತ್ತದೆ. 'ಇಕ್ಕೀಸ್' ಇತರ ಯುದ್ಧೋನ್ಮಾದದ ಚಿತ್ರಗಳಂತೆ ಯಶಸ್ವಿಯಾಗದೆ ಹೋದರೂ ಸಂಯಮ ಮತ್ತು ನೈತಿಕ ಸ್ಪಷ್ಟತೆಯನ್ನು ಆಯ್ದುಕೊಂಡ ಚಿತ್ರ ಎಂದು ಸದಾಕಾಲ ನೆನಪಿನಲ್ಲುಳಿಯುತ್ತದೆ.

ಲೇಖಕ: ಸಿನಿಮಾ ತಯಾರಕ ಹಾಗೂ ಸಂಕಲನಕಾರ



ವಾಚಕರ ವಾಣಿ

ಕೇಂದ್ರ ಬಜೆಟ್ ಮತ್ತು ರಾಜ್ಯದ ಹಣೆಬರಹ

ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆಂಬ ಮಾತು ಕೇಂದ್ರ ಬಜೆಟ್‌ನಿಂದ ಮತ್ತೆ ಸಾಬೀತಾಗಿದೆ. ಕರ್ನಾಟಕದಲ್ಲಿ ಈಗಿರುವುದು ಸಿಂಗಲ್ ಎಂಜಿನ್ ಸರ್ಕಾರ; ಹಾಗಾಗಿ, ಏನೂ ಸಿಕ್ಕಿಲ್ಲವೆಂದು ತಿಳಿಯುವುದು ತಪ್ಪು. ಡಬಲ್ ಎಂಜಿನ್ ಸರ್ಕಾರ ಇದ್ದಾಗಲೂ ಸಿಗುತ್ತಿದ್ದ ಅನುದಾನ ಅಷ್ಟಕ್ಕಷ್ಟೆ. ಒಟ್ಟಿನಲ್ಲಿ ಕನ್ನಡಿಗರು, ಕರ್ನಾಟಕದ ಹಣೆಬರಹ ಚೆನ್ನಾಗಿಲ್ಲ. ಕನ್ನಡಿಗರು ಅಮಾಯಕರು; ನೆರೆಹೊರೆಯ ರಾಜ್ಯದ ವರಂತೆ ಸಿಡಿದೇಳುವುದು ಗೊತ್ತಿಲ್ಲ. ಇದಕ್ಕಿರುವ ಏಕೈಕ ಪರಿಹಾರವೆಂದರೆ ಖ್ಯಾತ ಜ್ಯೋತಿಷಿಗಳ ಮೊರೆಹೋಗುವುದು. ಕರ್ನಾಟಕದ ಗ್ರಹಗತಿಯನ್ನು ನೆಟ್ಟಗಾಗಿಸಲು ಯಾವ ಪೂಜೆ, ಹೋಮಹವನ ಮಾಡಿಸಿದರೆ ಒಳ್ಳೆಯದೆಂದು ತಿಳಿದುಕೊಳ್ಳುವುದು. ಅದರಂತೆ ನಡೆದುಕೊಳ್ಳುವುದು ಅಥವಾ ಕೇಂದ್ರದ ಮನಸ್ಸನ್ನು ವಶೀಕರಿಸಿಕೊಳ್ಳಲು ಮತ್ತು ಪ್ರೀತಿ ಗಳಿಸಲು ಮಂತ್ರ ವಿದ್ಯೆಯೇನಾದರೂ ಸಹಾಯಕ್ಕೆ ಬರಬಹುದೆ ಎಂಬ ಸಾಧ್ಯತೆಯನ್ನು ಪರಿಶೀಲಿಸಬಹುದಾಗಿದೆ.

ಜಗದೀಶ್ ಎಚ್.ಬಿ., ಬೆಂಗಳೂರು

ಎತ್ತಿನಗಾಡಿ ಖಯಾಲಿ: ಜೋಪಾನ ಇರಲಿ

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಅಂತರಘಟ್ಟೆ ದುರ್ಗಾಂಬಾ ಜಾತ್ರೆಯಲ್ಲಿ ಎತ್ತು ಹಾಗೂ ಗಾಡಿಗಳನ್ನು ನೋಡುವುದೇ ಚೆಂದ. ಆದರೆ, ಅತಿಯಾದ ಜನಜಂಗುಳಿ ನಿಯಂತ್ರಿಸುವಾಗ ಪೊಲೀಸ್ ಅಧಿಕಾರಿಗಳಿಗೆ ಅಪಘಾತವಾಗಿರುವುದು ಶೋಚನೀಯ. ವರ್ಷಕ್ಕೊಮ್ಮೆ ನಡೆಯುವ ಈ ಜಾತ್ರೆಗೆ ಪಾನಕ, ಹೋಳಿಗೆ, ಮೊಸರು ಬುತ್ತಿ ಕಟ್ಟಿಕೊಂಡು ಎತ್ತಿನಗಾಡಿಯಲ್ಲಿ ಹೋಗಿ ದೇವಿಗೆ ಕೋಳಿ, ಕುರಿ ಬಲಿ ನೀಡುವುದು ವಾಡಿಕೆ. ಕೆಲವು ಸಂದರ್ಭಗಳಲ್ಲಿ ಗಾಡಿ ನೋಡಲು ಬಂದವರ ಮೇಲೂ ಎತ್ತುಗಳು ಗಾಬರಿಯಿಂದ ಹಾರಿ ಅವಘಡ ಸಂಭವಿಸಿರುವುದೂ ಇದೆ. ಎತ್ತಿನಗಾಡಿ ಓಡಿಸುವ ಖಯಾಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಇದಕ್ಕೆ ಅನುಗುಣವಾಗಿ ಮುನ್ನೆಚ್ಚರಿಕೆ ಕೂಡ ಅಗತ್ಯ.

ಲಾವಣ್ಯ ಬೀರೇಶ್, ಮುಗುಳಿ

ಮುಟ್ಟಿನ ಆರೋಗ್ಯ: ಹಕ್ಕು ಜಾರಿ ಮಾಡಿ

ಸಂವಿಧಾನದ 21ನೇ ವಿಧಿಯಲ್ಲಿ ಬರುವ ಜೀವಿಸುವ ಹಕ್ಕು, ಮುಟ್ಟಿನ ಆರೋಗ್ಯದ ಹಕ್ಕನ್ನೂ ಒಳಗೊಂಡಿದೆ; ಇದು ಸಂವಿಧಾನ ನೀಡಿರುವ ಜೀವಿಸುವ ಹಕ್ಕಿನ ಭಾಗವಾಗಿದೆಯೆಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ. ಜೊತೆಗೆ, ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸಬೇಕೆಂದು ಸೂಚಿಸಿದೆ. ಇದರೊಂದಿಗೆ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ಸೌಲಭ್ಯ ಒದಗಿಸಬೇಕು. ಶೌಚಾಲಯಗಳು ಅಂಗವಿಕಲ ಮಕ್ಕಳ ಅಗತ್ಯವನ್ನೂ ಪೂರೈಸುವಂತಿರಬೇಕು. ನ್ಯಾಯಾಲಯದ ಆದೇಶವನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಬೇಕಿದೆ.

ಕಾವ್ಯ ಡಿ.ಎಂ., ಚಿಕ್ಕಮಗಳೂರು

ಕಾಲದೊಳಗಿದ್ದು ಕಾಲ ಮೀರುವ ಪಂಪ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿರುವ, ಆದಿಕವಿ ಪಂಪನ ಕಲ್ಪಿತ ಜೀವನಾಧಾರಿತ 'ಮಹಾಕವಿ' ಸಿನಿಮಾದ ಪ್ರದರ್ಶನವಿತ್ತು. ಈ ಚಿತ್ರದಲ್ಲಿ ಪಂಪನ ಕಾವ್ಯಕ್ಕೆ ರಸಸಾರ ಒದಗಿಸಿರಬಹುದಾದ 10ನೇ ಶತಮಾನದ ಸಾಮಾಜಿಕ ನೆಲೆಗಟ್ಟನ್ನು ತಮ್ಮದೇ ಆದ ತಾತ್ವಿಕ ದೃಷ್ಟಿಕೋನದಲ್ಲಿ ನಿರ್ದೇಶಕರು ಕಟ್ಟಿಕೊಟ್ಟಿದ್ದಾರೆ. ಪಂಪನ ಕಾವ್ಯಪ್ರಪಂಚ ಹೇಗೆ ಅವನ ಕಾಲದೊಳಗಿದ್ದೂ ಕಾಲವನ್ನು ಮೀರುತ್ತದೆ ಎನ್ನುವುದು ನೋಡುಗರನ್ನು ತಟ್ಟುತ್ತದೆ. ಪಂಪನ ಮೂಲಕ ಸಮಕಾಲೀನ ಸಂದರ್ಭದಲ್ಲಿ ಲೇಖಕರಿಗೂ ಆಡಳಿತ–ಅಧಿಕಾರಕ್ಕೂ ಇರಲೇಬೇಕಾದ ಆರೋಗ್ಯಕರ ಅಂತರದ ಬಗ್ಗೆಯೂ ಚಿತ್ರವು ಶಕ್ತಿಯುತವಾಗಿ ಮಾತಾಡುತ್ತದೆ. ಪಂಪನ ಪಾತ್ರದಲ್ಲಿ ಕಿಶೋರ್ ಅವರ ನಟನೆ ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ. ರಾಜ್ಯದ ಎಲ್ಲರೂ ಕನ್ನಡದ ಆದಿಕವಿಯ ಕುರಿತಾದ ಈ ಚಿತ್ರ ನೋಡುವಂತಾಗಲಿ.

ಶ್ರೀಕಂಠ, ಬೆಂಗಳೂರು

ಮಹನೀಯರ ಬಗ್ಗೆ ಮತೀಯ ಸ್ಪರ್ಶ ಬೇಡ

ನಂಜನಗೂಡು ತಾಲ್ಲೂಕಿನ ಹಗಿನವಾಳುವಿನಲ್ಲಿ ಬಸವೇಶ್ವರ ಚಿತ್ರವಿದ್ದ ಬಾವುಟ ಹಾಕಿರುವ ಕಾರಣಕ್ಕೆ ಗ್ರಾಮದೇವತೆಯ ಜಾತ್ರೆ ಸ್ಥಗಿತಗೊಂಡಿದೆ. ಈ ಸುದ್ದಿ ಓದಿದಾಗ, 'ಸ್ವಾರ್ಥಿಗಳು ಹುಟ್ಟಿಸಿದ ಕುಲಾಭಿಮಾನದ ಹೊಟ್ಟೆ ಬೆಳೆ ಬೆಳೆದು ಡೊಳ್ಳಾಗಿ ಕಡೆಗೆ ಬಿರಿದೊಡೆದು ಸಿಡಿದು ಬೀಳುವವು ದ್ವೇಷಾಗ್ನಿಯ ಕಿಡಿಗಳು. ರುದ್ರಜ್ವಾಲೆಗಳಾಗಿ ಹೊತ್ತುವವು ನಾಡಿನ ತುಂಬೆಲ್ಲ. ಆಗ ನಾಡತಾಯಿಯ ಒಂದು ಕಣ್ಣಿಲ್ಲಿ ನೀರು; ಮತ್ತೊಂದು ಕಣ್ಣಿಲ್ಲಿ ನೆತ್ತರು!' ಎಂದು ಕಂದಗಲ್ ಹನುಮಂತ ರಾಯರ 'ರಕ್ತರಾತ್ರಿ' ನಾಟಕದಲ್ಲಿ ಅಶ್ವತ್ಥಾಮ ಹೇಳುವ ಮಾತು ನೆನಪಾಯಿತು. ಬುದ್ಧ, ಬಸವ, ಅಂಬೇಡ್ಕರ್ ಅವರು ವೈಚಾರಿಕ ಪ್ರಜ್ಞೆಯ ದೀವಟಿಗೆಗಳಾಗಿದ್ದಾರೆ. ಅವರ ಚಿಂತನೆಗಳ ಬಗ್ಗೆ ಅರಿಯದೆ ಸಮುದಾಯಗಳ ಅಸ್ಮಿತೆಯಂತೆ ಸಂಕುಚಿತಗೊಳಿಸುವುದು ಬೌದ್ಧಿಕ ದಿವಾಳಿತನದ ನಡೆಯಾಗಿದೆ.

ನಾಗರಾಜ ಮಗ್ಗದ, ಕೊಟ್ಟೂರು

ನೆಲಕಚ್ಚಿದ ಕಲ್ಪತರು: ಸಂಕಷ್ಟದಲ್ಲಿ ರೈತರು

ರೈತರ ಆದಾಯ ಹೆಚ್ಚಿಸಲು ಸರ್ಕಾರದ ಕಸರತ್ತು ನಿಜಕ್ಕೂ ಮೆಚ್ಚುವಂತಹದ್ದು. ತೆಂಗನ್ನು ಕಲ್ಪವೃಕ್ಷವೆಂದು ಕರೆಯುತ್ತೇವೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯ ಭಾಗವಾಗಿ ತೆಂಗು ಬೆಳೆಗೆ ಉತ್ತೇಜನ ನೀಡಬೇಕಿದೆ. ಬೆಳೆಗಾರರಿಗೆ ಅದು ಸಮರ್ಪಕವಾಗಿ ಮುಟ್ಟಿದರೆ ಯೋಜನೆಯು ಸಾರ್ಥಕವಾಗುತ್ತದೆ. ತೆಂಗು ಬೆಳೆಗಾರರು ಈಗಾಗಲೇ ಸಾಕಷ್ಟು ನೊಂದಿದ್ದಾರೆ. ತೆಂಗಿಗೆ ನುಸಿರೋಗ, ಕಪ್ಪುತಲೆ ಹುಳು ಬಾಧೆ ಕಾಣಿಸಿಕೊಂಡು ಗರಿಗಳು ಒಣಗಿದಂತೆ ಕಾಣುತ್ತವೆ. ಮರಗಳಲ್ಲಿ ಇನ್ನೂ ಕಾಯಿ ಹಿಡಿಯುವುದಾದರೂ ಹೇಗೆ? ತೆಂಗಿನಕಾಯಿ ಬೆಲೆ ಗಗನಕ್ಕೇರಿದೆ. ಆದರೆ, ರೈತರ ತೋಟಗಳಲ್ಲಿ ಕಾಯಿಗಳಿಲ್ಲ. ಸರ್ಕಾರ ಮತ್ತು ಅಧಿಕಾರಿಗಳು ತೆಂಗಿನ ಬೆಳೆಗಾರರ ನೋವಿಗೆ ಸ್ಪಂದಿಸಬೇಕಿದೆ. ಅವರಿಗೆ ಆತ್ಮಸ್ಥೈರ್ಯ ತುಂಬಿ ಹಿತ ಕಾಪಾಡಲು ಮುಂದಾಗಬೇಕು.

ಕುಂದೂರು ಮಂಜಪ್ಪ, ಹೊಳೆ ಸಿರಿಗೆರೆ

ಚುರುಮುರಿ



ಸುಧಾರಣಾ ಸುಂಕ

• ಲಿಂಗರಾಜು ಡಿ.ಎಸ್.

ಭರತನ ಮನೆಗೆ ಯುರೋಪಣ್ಣಾರು ಮುಕ್ತ ಯಾಪಾರಕ್ಕೆ ಬಂದು ಸುಂಕದ ಮಾತು–ಕತೆ ಆತಿತ್ತು. ಯುರೋಪಣ್ಣಾರು 'ಇದು ಸರ್ವ ಒಪ್ಪಂದಗಳ ತಾಯಿ ಕನ್ರಿ' ಅಂತಿದ್ರು. ರಷ್ಯಪ್ಪ, ಚೀನಣ್ಣ, ಬೇಲಿ ಮರೇಲಿ ನಿಂತು ಕದ್ದು ನೋಡ್ತಿದ್ದಾಗಲೂ ಪಾಕಣ್ಣ 'ಅಣ್ಣೈ ಏನಾದ್ರೂ ದಾನ ಕೊಡಿ' ಅಂತ ಕೇಳ್ತಿದ್ದ.

'ಹೌಡೀ ಭರತ. ಸುಂಕದ ಮಾತಾಡ್ತಿದ್ದಂಗಿತ್ತು? ಇನ್ನೊಂದೀಟು ಜನ ಕೆಲಸಕ್ಕೆ ಕಳುಗಿಸೋ ಭರತ' ಅಂದ್ಕಂದು ಅಮೆರಿಕಯ್ಯ ಎಂಟ್ರ ತಗಂದ. ಕಂಡೋರಿಗೆಲ್ಲ ಸುಂಕ ಜಡಿಯೋ ಇವನ ಕ್ಯಾಮೆ ಕಂಡು ಜನ ಈಯಪ್ಪನಿಗೆ ಸುಂಕಪ್ಪಯ್ಯ ಅಂತ ಅಡ್ಡೆಸರಿಟ್ಟಿದ್ದರು.

'ನಮ್ಮೋರೆಲ್ಲಾ ನಿಂತಾವೆ ಕೆಲಸಕ್ಕಿರದು ಮರೆತೋತಾ ಸುಂಕಪ್ಪಣ್ಣ? ಆದ್ರೂ ನಮಗೇ ಜಾಸ್ತಿ ಸುಂಕ, ವೀಸಾ ಪೀಜು ಜಡೀತಿದ್ದೀಯಪ್ಪ' ಅಂದ ಭರತ.

'ನಿನ್ನಂತಾ ದಾಸತ್ತುಗಾರ ನನ್ನ ಜೊತೆಗಿರದು ಕಂಡ್ರೆ ಎಲ್ಲಾರಿಗೂ ಹೊಟ್ಟುರಿ ಕಲಾ. ಬಂದು ನಿನಗೆ ಚಾಡಿ ಹೇಳ್ತರೆ. ಅದೆಲ್ಲಾ ತಲೆಗಾಕಬ್ಯಾಡ' ಸುಂಕಪ್ಪಣ್ಣ ಹೇಳಿದ.

'ನೀನು ಚೀನಣ್ಣನ ಮನೆಗೋಗಿ ಅವನ ಹೊಲದಾಗಲ ರೇರ್‌ಅರ್ತು ಮಣ್ಣೆಲ್ಲಾ ನಿನಗೇ ಮಾರಬಕು ಅಂತ ಕಾಲಿಡಕಂದಿದ್ದಂತೆ?' ಭರತ ಹಂಗಿಸಿದ.

'ಪಾಕಣ್ಣನ, ನೇಪಾಳಿ ಮನೆ ಸೊಂಪ್ಲಲ್ಲಿ ರೋಡು ಮಾಡಿಕ್ಯಂದು ಅವರುನ್ನಾö್ಯಕೆ ಬಾಳಗೆಡ್ಸತೀಯೋ ಚೀನಣ್ಣ ಅಂದುದ್ದು ತಪ್ಪಾತ? ಉಕ್ರೇನಿ ಗುಳೆ ಎಬ್ಬಿಸಕ್ಕೆ ರಷ್ಯಪ್ಪ ನಿನ್ನ ದುಡ್ಡು ಬಳಸಿಗ್ಯತಿರೋರು ತಪ್ಪಲ್ಲವಾ?' ಅಂದ ಸುಂಕಪ್ಪಯ್ಯ.

'ನೀನು ವೆನುಜುವೇಲಮ್ಮನ ಮನೆಗೆ ಸರೋತ್ತಲ್ಲಿ ನುಗ್ಗಿದ್ಯಾಕೋ? ಈಗ ಇರಾನುನ್ನ, ಗ್ರೀನ್‌ಲ್ಯಾಂಡುನ್ನ ಗಾವು ಸಿಗಿತೀನಿ ಅಂದಂತೆ?' ಭರತನ ಮಾತಿಗೆ ಸುಂಕಪ್ಪಯ್ಯನ ಮುಖ ಕೆಂಪಾತು.

'ಅಲ್ಲಿ–ಇಲ್ಲಿ ಮರೇಲಿ ನಿಂತೋರೆಲ್ಲಾ ಒಂದು ತಿಳಕಳಿ... ಡಾಲರ್ ಬುಟ್ಟು, ನನ್ನ ಬುಟ್ಟು ಯಾರೂ ಏನೂ ಮಾಡಾಕೆ ಆಗೋಲ್ಲ' ಎಂದು ಸುಂಕಪ್ಪಯ್ಯ ಸಿಟ್ಟುಗಂದು ಹೊಂಟೋದ.

'ಎಲ್ಲೋದ್ರೂ ಸುಂಕಪ್ಪಯ್ಯ ಟ್ಯಾಕ್ಸ್ ಟೆರರಿಸಂ ಬುಡಕುಲ್ಲ' ಅಂತ ಮರೇಲಿ ನಿಂತಿದ್ದ ಚೀನಣ್ಣ.

ರಷ್ಯಪ್ಪ ನೆಟಿಕೆ ಮುರಿದು ಕಿಸಕ್ ಅಂತ ನಕ್ಕರು.

ಸಂಗತ

ಗಾಂಧಿ: ಕಾಂಗ್ರೆಸ್‌ನ ರಾಜಕೀಯ ಗುರಾಣಿ

'ವಿಬಿ–ಜಿ ರಾಮ್ ಜಿ' ಕಾಯ್ದೆಯ ಅನುಕೂಲಗಳನ್ನು ಅರ್ಥ ಮಾಡಿಕೊಳ್ಳದ ಕಾಂಗ್ರೆಸ್, ಗಾಂಧೀಜಿ ಹೆಸರು ಬಳಸಿಕೊಂಡು ರಾಜಕೀಯ ಸಂಕಥನಗಳ ಕಟ್ಟುತ್ತಿದೆ.

• ಅರವಿಂದ ಬೆಲ್ಲದ




ಕೇಂದ್ರ ಸರ್ಕಾರ ಜಾರಿಗೆ ತಂದ 'ವಿಬಿ–ಜಿ ರಾಮ್ ಜಿ' ಕಾಯ್ದೆ ಈಗ ಕರ್ನಾಟಕದಲ್ಲಿ ಸುದ್ದಿಯಲ್ಲಿದೆ. ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಜಾರಿಗೆ ತಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬದಲಾಯಿಸಿ ಹೊಸ ಸ್ವರೂಪದಲ್ಲಿ ಜಾರಿಗೆ ತಂದಿರುವುದನ್ನು ಕಾಂಗ್ರೆಸ್ ಪಕ್ಷ ಆಕ್ಷೇಪಿಸಿದೆ. ಆದರೆ, ಈ ವಿರೋಧ ಎಲ್ಲಿ ವ್ಯಕ್ತವಾಗಬೇಕಿತ್ತೋ ಅಲ್ಲಿ ಪ್ರಕಟಗೊಳ್ಳದೆ ಕರ್ನಾಟಕ ವಿಧಾನಮಂಡಲದ ಅಧಿವೇಶನದಲ್ಲಿ ಅನಾವರಣಗೊಂಡಿದೆ. ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರ ಸೇರಿಸಿ ಕೇಂದ್ರ ಸರ್ಕಾರದ ಪ್ರತಿನಿಧಿಯಾದ ರಾಜ್ಯಪಾಲರ ಬಾಯಲ್ಲೇ ಕೇಂದ್ರದ ಕಾಯ್ದೆಯನ್ನು ಹಳಿಯುವ ವಿಫಲ ಪ್ರಯತ್ನ ನಡೆದಿದೆ. ಇನ್ನೊಂದೆಡೆ, ಗಾಂಧಿಯನ್ನು ಗುರಾಣಿಯಾಗಿಸಿಕೊಂಡು ರಾಜಕೀಯ ಸಂಕಥನ ಕಟ್ಟುವ ಕೆಲಸಕ್ಕೆ ಕಾಂಗ್ರೆಸ್ ಮುಂದಾಗಿದೆ.

ಹೊಸ ಕಾಯ್ದೆಯಲ್ಲಿ ಗಾಂಧಿ ಹೆಸರನ್ನು ಕೈ ಬಿಡಲಾಗಿದೆ ಎಂಬುದು ಕಾಂಗ್ರೆಸ್‌ಗೆ ಸಂಕಟ ಸೃಷ್ಟಿಸಿದೆಯೇ ವಿನಾ, ಈ ಕಾಯ್ದೆಯಿಂದ ಭಾರತದ ವಿಕಸಿತ ಗ್ರಾಮಗಳ ಬಲವರ್ಧನೆಗೆ ಆಗುವ ಅನುಕೂಲಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸದೆ ಇರುವುದು ಚೋದ್ಯವೇ ಸರಿ.

ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಾಂಗ್ರೆಸ್ ಪಾತ್ರ ಇಲ್ಲ ಎಂದು ಯಾರೂ ವಾದಿಸುವುದಿಲ್ಲ. ಆದರೆ, ಆ ಇತಿಹಾಸವನ್ನು ತನ್ನ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ಸರಕಾಗಿ ಬಳಸುವ ಕಾಂಗ್ರೆಸ್ ನಡೆ ಆಕ್ಷೇಪಾರ್ಹ. ಗಾಂಧಿ ಹೆಸರನ್ನು ಮುಂದಿಟ್ಟುಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ಆ ಪಕ್ಷದ ನಾಯಕರಿಗೆ ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಯಾವ ಸ್ವರೂಪದಲ್ಲಿ ಇರಬೇಕೆಂದು ಮಹಾತ್ಮ ಗಾಂಧಿ ಆಡಿದ ಮಾತುಗಳು ಮರೆತುಹೋಗಿವೆ. ಸ್ವಾತಂತ್ರ್ಯದ ಬಳಿಕ ಕಾಂಗ್ರೆಸ್ ವಿಸರ್ಜಿಸಿ, ಅದನ್ನು ಲೋಕಸೇವಕ ಸಂಘವಾಗಿ ಪರಿವರ್ತಿಸಬೇಕೆಂಬುದು ಗಾಂಧಿಯವರ ಆಶಯವಾಗಿತ್ತು.

ಹತ್ಯೆಯಾಗುವುದಕ್ಕೆ ಕೆಲ ದಿನಗಳಿಗೆ ಮುಂಚೆ 'ಹರಿಜನ' ಪತ್ರಿಕೆಯಲ್ಲಿ ಗಾಂಧಿ ಈ ವಿಚಾರವನ್ನು ಪ್ರತಿಪಾದಿಸಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ಅಗತ್ಯವನ್ನು ಕಾಂಗ್ರೆಸ್ ಪೂರೈಸಿದೆ. ಹೀಗಾಗಿ, ಅದು ರಾಜಕೀಯ ಪಕ್ಷವಾಗಿ ಉಳಿಯದೆ, ಗ್ರಾಮೀಣ ಸೇವೆ ಹಾಗೂ ಅಸ್ಪೃಶ್ಯತೆ ನಿವಾರಣಾ ಕಾರ್ಯದಲ್ಲಿ ಮಗ್ನವಾಗಬೇಕೆಂದು ಬಯಸಿದ್ದರು. ಆದರೆ, ಗಾಂಧಿಯ ಆಶಯ ಜಾರಿಗೆ ಬರಲಿಲ್ಲ. ದಶಕಗಳ ಕಾಲ ಗಾಂಧೀಜಿಯ ಈ ಅಭಿಪ್ರಾಯವನ್ನು ವ್ಯವಸ್ಥಿತವಾಗಿ ಮರೆ ಮಾಡಿದ ಕಾಂಗ್ರೆಸ್ ನಾಯಕರು– ಪಠ್ಯಪುಸ್ತಕಗಳಲ್ಲಿ, ಭಾಷಣಗಳಲ್ಲಿ, ಪಕ್ಷದ ಚಿಂತನೆಗಳಲ್ಲಿ ಈ ವಿಚಾರಕ್ಕೆ ಸ್ಥಾನ ಹಾಗೂ ಆದ್ಯತೆ ನೀಡಲಿಲ್ಲ. ಏಕೆಂದರೆ, ಗಾಂಧೀಜಿಯ ಮಾತು ಕಾಂಗ್ರೆಸ್‌ನ ಶಾಶ್ವತ ಅಧಿಕಾರ ರಾಜಕಾರಣಕ್ಕೆ ವಿರುದ್ಧವಾಗಿತ್ತು.



'ವಿಬಿ–ಜಿ ರಾಮ್ ಜಿ' ಕಾಯ್ದೆ ಕುರಿತು ದೇಶದಲ್ಲಿ ನಡೆಯಬೇಕಾಗಿರುವುದು ಸಂವಿಧಾನಾತ್ಮಕ, ಸಾಮಾಜಿಕ ಮತ್ತು ಆಡಳಿತಾತ್ಮಕ ಚರ್ಚೆ. ಕಾಯ್ದೆಯ ಉದ್ದೇಶ, ಪರಿಣಾಮ, ಲಾಭ–ಹಾನಿ ಕುರಿತು ಸ್ಪಷ್ಟ ವಾದ–ಪ್ರತಿವಾದಗಳು ನಡೆಯಬೇಕು. ಆದರೆ, ಕಾಯ್ದೆಯ ವಿಧಿಗಳನ್ನು ಪ್ರಶ್ನಿಸುವ ಬದಲು, ಗಾಂಧೀಜಿಯ ಹೆಸರನ್ನು ಮುಂದಿಟ್ಟುಕೊಂಡು ಭಾವನಾತ್ಮಕ ಸಂಕಥನ ಸೃಷ್ಟಿಸುವ ತಂತ್ರವನ್ನು ಕಾಂಗ್ರೆಸ್ ಅನುಸರಿಸುತ್ತಿದೆ.

ಸತ್ಯ, ತರ್ಕ ಮತ್ತು ನೈತಿಕತೆಯ ಮೇಲೆ ಚರ್ಚೆ ಸಾಗಬೇಕೆಂದು ಗಾಂಧೀಜಿ ವಾದಿಸುತ್ತಿದ್ದರು. ಆದರೆ, ಕಾಂಗ್ರೆಸ್ ಸಾಂವಿಧಾನಿಕ ಮೌಲ್ಯಗಳನ್ನು ಗಾಳಿಗೆ ತೂರಿ, ರಾಜ್ಯಪಾಲರ ಭಾಷಣದಲ್ಲಿ 'ವಿಬಿ–ಜಿ ರಾಮ್ ಜಿ' ವಿರೋಧಿಸಲು ಮುಂದಾಗಿದ್ದು ಆ ಪಕ್ಷದ ನೈತಿಕ ಅಧಃಪತನಕ್ಕೆ ಸಾಕ್ಷಿ. ಗಾಂಧಿ ಹೆಸರು, ಅವರ ಫೋಟೊ ಹಾಗೂ ಅವರ ಉಲ್ಲೇಖಗಳು ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಅಲಂಕಾರ ಮಾತ್ರ.

ಸಂಕಥನ ರಾಜಕಾರಣ ಎಂಬುದು ಈಗ ವಾದ ಸೋತವರ ಶಸ್ತ್ರ. ಈ ಹಿಂದೆ ಪೌರತ್ವ ಕಾಯ್ದೆ ಜಾರಿ ಸಂದರ್ಭದಲ್ಲಿ ಕಾಂಗ್ರೆಸ್ ಇದೇ ಮಾರ್ಗ ತುಳಿದಿತ್ತು. ರಫೇಲ್ ವಿಮಾನಗಳ ಖರೀದಿ ವಿಚಾರದಲ್ಲಿ ಇಂಥದ್ದೇ ಒಂದು ಸಂಕಥನ ರೂಪಿಸುವುದಕ್ಕೆ ಬಳಸಿ ವಿಫಲವಾಯಿತು. ಪಾಕಿಸ್ತಾನದ ಜತೆಗೆ ನಡೆದ ವೈಮಾನಿಕ ಸಂಘರ್ಷ ಕಾಲದಲ್ಲೂ ರಾಷ್ಟ್ರದ ಹಿತವನ್ನು ಬದಿಗಿಟ್ಟು ರಫೇಲ್ ಕುರಿತಂತೆ ಸುಳ್ಳುಗಳ ಸರಮಾಲೆಯನ್ನೇ ಹೆಣೆದಿತ್ತು. ಕೃಷಿ ಕಾಯ್ದೆಯ ವಿರೋಧ, ತೆರಿಗೆ ವಿಚಾರದಲ್ಲೂ ಇದೇ ಸಂಕಥನದ ಯುದ್ಧಕ್ಕೆ ಇಳಿದಿತ್ತು. ವೋಟ್ ಚೋರಿ ಎಂಬ ಅಣಕಕ್ಕೂ ಬೆಲೆ ಸಿಗದೇ ಇರುವಾಗ ಈಗ ಗಾಂಧಿ ಕೂಡ ಕಾಂಗ್ರೆಸ್‌ನ ಅಸ್ತಿತ್ವ ರಕ್ಷಣೆಯ ಹೋರಾಟದಲ್ಲಿನ ಅಸ್ತ್ರವಾಗಿರುವುದು ರಾಷ್ಟ್ರಪಿತನಿಗೆ ಮಾಡುವ ಅಪಮಾನದ ಪರಾಕಾಷ್ಠೆಯೇ ಸರಿ.

ಇಂದಿನ ಕಾಂಗ್ರೆಸ್ ರಾಜಕಾರಣ ಸಂಕಥನಗಳ ಮೇಲೆ ನಿಂತಿದೆ. ತತ್ತ್ವಗಳು ದುರ್ಬಲವಾದಾಗ, ಭಾವನೆಗಳನ್ನು ಬಳಸಲಾಗುತ್ತದೆ. ಆಡಳಿತದ ಪರ್ಯಾಯ ದೃಷ್ಟಿಕೋನ ಇಲ್ಲವಾದಾಗ ಇತಿಹಾಸವನ್ನು ಬಳಸಿ ಅನಗತ್ಯವಾಗಿ ಗದ್ದಲ ಸೃಷ್ಟಿಸಲಾಗುತ್ತದೆ. 'ವಿಬಿ–ಜಿ ರಾಮ್ ಜಿ' ವಿಚಾರದಲ್ಲೂ ಇದೇ ನಡೆಯುತ್ತಿದೆ.

ಜನ ತಾನು ಹೇಳಿದ್ದನ್ನೆಲ್ಲ ನಂಬುತ್ತಾರೆ ಎಂಬ ಕಾಂಗ್ರೆಸ್ ನಾಯಕರ ಪುರಾತನ ನಂಬಿಕೆ ಈಗ ನೆಲೆ ಕಳೆದುಕೊಂಡಿದೆ. ಉಚಿತ ಅನುಚಿತದ ಸಾರ್ವಜನಿಕ ಪ್ರಜ್ಞೆ ಜಾಗೃತವಾಗಿ ದಶಕಗಳು ಕಳೆದಿವೆ. ಹೀಗಾಗಿ, ಕಾಂಗ್ರೆಸ್ ಕಟ್ಟುವ ಸಂಕಥನಗಳೆಲ್ಲ ಮರಳಿನ ಸೌಧದಂತೆ ಚುನಾವಣೆಯಿಂದ ಚುನಾವಣೆಗೆ ಕುಸಿಯುತ್ತಿವೆ.

ಲೇಖಕ: ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅತಿ ಹಿಂದುಳಿದ ಉತ್ತರ ಅಸಮತೋಲನ ತೀವ್ರ

ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನದ ಬಗೆಗಿನ ಪ್ರೊ. ಎಂ.ಗೋವಿಂದ ರಾವ್ ವರದಿಯಲ್ಲಿ ಉಲ್ಲೇಖ; ಹಲವು ಕ್ರಮಗಳ ಶಿಫಾರಸು

ಸುಮಾರು 24 ವರ್ಷಗಳ ಹಿಂದೆ ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನದ ಬಗ್ಗೆ ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದ ಸಮಿತಿಯು ಅಧ್ಯಯನ ಮಾಡಿ ವರದಿ ನೀಡಿತ್ತು. ಮತ್ತೆ ಇಂತಹದ್ದೇ ಅಧ್ಯಯನ ನಡೆಸಿರುವ ಆರ್ಥಿಕ ತಜ್ಞ ಪ್ರೊ.ಗೋವಿಂದ ರಾವ್ ಅವರ ಅಧ್ಯಕ್ಷತೆಯ ಸಮಿತಿಯು, ರಾಜ್ಯ ಸರ್ಕಾರಕ್ಕೆ ಇದೀಗ ವರದಿ ಸಲ್ಲಿಸಿದೆ. ಹಿಂದುಳಿದಿರುವಿಕೆಯು ರಾಜ್ಯದ ಉತ್ತರ ಭಾಗದಲ್ಲಿಯೇ ಹೆಚ್ಚಾಗಿದೆ ಎಂದು ವರದಿ ಹೇಳಿದೆ. ಉತ್ತರ ಕರ್ನಾಟಕದ ಒಂದು ಜಿಲ್ಲೆಯನ್ನೂ ಅಭಿವೃದ್ಧಿ ಹೊಂದಿದ ಜಿಲ್ಲೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದಿರುವ ವರದಿಯು, ರಾಜ್ಯದ ಇತರೆ ತಾಲ್ಲೂಕುಗಳ ಹಿಂದುಳಿದ ಸ್ಥಿತಿಗತಿ, ಅಭಿವೃದ್ಧಿಯ ಚಿತ್ರಣವನ್ನೂ ಒಳಗೊಂಡಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

2024–25ನೇ ಸಾಲಿನಲ್ಲಿ ಕರ್ನಾಟಕದ ತಲಾ ನಿವ್ವಳ ರಾಜ್ಯ ಆಂತರಿಕ ಉತ್ಪನ್ನದ ಮೌಲ್ಯವು (ಎನ್‌ಎಸ್‌ಡಿಪಿ) ₹3.81 ಲಕ್ಷ ಇದ್ದು, ಅತಿ ಹೆಚ್ಚು ತಲಾದಾಯ ಹೊಂದಿರುವ ದೇಶದ ದೊಡ್ಡ ರಾಜ್ಯಗಳಲ್ಲಿ ಎರಡನೇ ಸ್ಥಾನ ಪಡೆದಿದೆ. ಆದರೆ, 1960ರಲ್ಲಿ ಕಡಿಮೆ ಆದಾಯದ ರಾಜ್ಯಗಳಲ್ಲಿ ಸ್ಥಾನ ಪಡೆದಿದ್ದ ಕರ್ನಾಟಕವು ದೇಶದ ಸರಾಸರಿ ತಲಾ ಆದಾಯಕ್ಕಿಂತ ಕಡಿಮೆ ತಲಾ ಆದಾಯ ಹೊಂದಿತ್ತು. ಸೇವಾ ವಲಯದಲ್ಲಿನ ಪ್ರಗತಿಯಿಂದಾಗಿ ಅಭಿವೃದ್ಧಿಯಲ್ಲಿ ದಾಪುಗಾಲಿಡುವ ಮೂಲಕ ದೇಶದ ಜಿಡಿಪಿಯಲ್ಲಿ ತನ್ನ ಪಾಲನ್ನು ರಾಜ್ಯವು ಹೆಚ್ಚಿಸಿಕೊಂಡಿದೆ. ಆದರೆ, ಆರ್ಥಿಕ ಪ್ರಗತಿಯು ಸಾಮಾಜಿಕ ಅಭಿವೃದ್ಧಿಯಾಗಿ ರೂಪಾಂತರಗೊಂಡಿಲ್ಲ ಮತ್ತು ಅಭಿವೃದ್ಧಿಯು ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕರಿಸಿದ್ದು, ಉಳಿದ ಜಿಲ್ಲೆಗಳು ಅತ್ಯಂತ ಹಿಂದುಳಿದಿವೆ; ರಾಜ್ಯದಲ್ಲಿ ಆರ್ಥಿಕ ಅಸಮತೋಲನವು ವ್ಯಾಪಕವಾಗಿದೆ ಎಂದು ಆರ್ಥಿಕ ತಜ್ಞ ಪ್ರೊ.ಗೋವಿಂದ ರಾವ್ ನೇತೃತ್ವದ ಸಮಿತಿ ವರದಿ ಹೇಳಿದೆ.

ವರದಿಯಲ್ಲಿ ರಾಜ್ಯವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಲಾಗಿದೆ; ಬೆಂಗಳೂರು, ಮೈಸೂರು, ಕಲಬುರಗಿ, ಬೆಳಗಾವಿ. ರಾಜ್ಯದ ಎಲ್ಲ ತಾಲ್ಲೂಕುಗಳನ್ನು ಹಿಂದುಳಿದ, ಅತಿ ಹಿಂದುಳಿದ, ಅತಿ ಹೆಚ್ಚು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ಎಂದು ನಾಲ್ಕು ಭಾಗಗಳನ್ನಾಗಿ ವರ್ಗೀಕರಿಸಲಾಗಿದೆ. ನಾಲ್ಕು ವಿಭಾಗಗಳ ಪೈಕಿ ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿಯೇ ಹಿಂದುಳಿದಿರುವಿಕೆ ಹೆಚ್ಚಾಗಿದೆ, ಬಡತನ ತೀವ್ರವಾಗಿದೆ ಎಂದು ವರದಿ ಉಲ್ಲೇಖಿಸಿದೆ. ಆದಾಗ್ಯೂ, ಇತರೆ ವಲಯಗಳಲ್ಲಿನ ಹಿಂದುಳಿದಿರುವಿಕೆ ಬಗ್ಗೆಯೂ ವರದಿ ಪ್ರಸ್ತಾಪಿಸಿದೆ.

ಮೈಸೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ವಿಜಯನಗರ, ಯಾದಗಿರಿ, ಕಲಬುರಗಿ, ಬೀದರ್ ಮತ್ತು ರಾಮನಗರ ವ್ಯವಸಾಯ ಸಂಪನ್ಮೂಲಗಳು ಹೇರಳವಾಗಿರುವ ಜಿಲ್ಲೆಗಳಾಗಿವೆ. ಆದರೆ, ಇವುಗಳಲ್ಲಿ ಮೂಲಸೌಕರ್ಯದ ಕೊರತೆಯಿದ್ದು, ಸರ್ಕಾರ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯ ಇದೆ. ನೀರು ಕೊಯ್ಲು, ಸಣ್ಣ ನೀರಾವರಿ, ಕೆರೆಗಳ ಪುನರುಜ್ಜೀವನ, ಶೈತ್ಯಾಗಾರ ವ್ಯವಸ್ಥೆ, ಭೌತಿಕ ಮತ್ತು ಇಂಟರ್ನೆಟ್ ಆಧಾರಿತ ಸಂಪರ್ಕ ವ್ಯವಸ್ಥೆ, ರೈತ ಉತ್ಪಾದನಾ ಸಂಸ್ಥೆಗಳನ್ನು ಮತ್ತು ಕೃಷಿ ವಿಸ್ತರಣೆಯ ಸೇವೆಗಳನ್ನು ಉತ್ತಮಗೊಳಿಸಬೇಕು ಎಂದು ವರದಿ ಸೂಚಿಸಿದೆ.

ಹಲವು ಕ್ರಮಗಳ ಶಿಫಾರಸು: ಸರ್ಕಾರದ 11 ಇಲಾಖೆಗಳಿಗೆ ಹೆಚ್ಚುವರಿ ಹಣ ಒದಗಿಸುವುದು, ಮುಖ್ಯಮಂತ್ರಿಗಳ ವಿವೇಚನಾ ಅನುದಾನವನ್ನು ಹೆಚ್ಚಿಸುವುದು, ಗುಣಮಟ್ಟದ ಶಿಕ್ಷಣ, ಕೌಶಲ ತರಬೇತಿ, ಆರೋಗ್ಯ ಸೇವೆಗಳ ಮೂಲಕ ಮಾನವ ಸಂಪನ್ಮೂಲವನ್ನು ಉತ್ತಮಪಡಿಸುವುದು, ಮುಂದಿನ ಐದು ವರ್ಷಗಳಲ್ಲಿ ₹30,000 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ವೃದ್ಧಿಸುವುದು, ಯೋಜನೆಗಳ ಜಾರಿಗೆ ಪೂರ್ವತಯಾರಿ ನಡೆಸುವುದು ಸೇರಿದಂತೆ ವರದಿಯು ಹಲವು ಶಿಫಾರಸುಗಳನ್ನು ಮಾಡಿದೆ.


ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಮಂಡಳಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳ ಕಾರ್ಯವೈಖರಿ ತೃಪ್ತಿಕರವಾಗಿಲ್ಲ ಎಂದಿರುವ ಸಮಿತಿಯು, ಅವುಗಳನ್ನು ವಿಸರ್ಜಿಸುವಂತೆ ಶಿಫಾರಸು ಮಾಡಿದೆ. ಅನುದಾನದ ಸಮರ್ಥ ಬಳಕೆಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಪುನರ್ ಸಂಘಟಿಸುವಂತೆ ಸೂಚಿಸಿದೆ.


ಕಲಬುರಗಿ ಹೊರವಲಯದ ಕಪನೂರಿನ ಸಿದ್ಧಾರೂಢ ಕಾಲೊನಿಯ ನೋಟ ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪ್ರಮುಖ ಅಂಶಗಳು

1. ಉತ್ತರ ಕರ್ನಾಟಕದಲ್ಲಿ ಹಿಂದುಳಿದಿರುವಿಕೆಯು ವ್ಯಾಪಕವಾಗಿದ್ದು, ಅದನ್ನು ಪರಿಹರಿಸಲು ನಿರ್ದಿಷ್ಟ ನೀತಿ/ಯೋಜನೆಗಳ ಜಾರಿ ಅಗತ್ಯವಾಗಿದೆ
2. ಉತ್ತರ ಕರ್ನಾಟಕದಲ್ಲಿ, ಹೆಚ್ಚು ಹಿಂದುಳಿದ ಜಿಲ್ಲೆಗಳು ಬೆಳಗಾವಿ ವಿಭಾಗದಲ್ಲಿದ್ದರೆ, ಅತಿ ಹೆಚ್ಚು ಹಿಂದುಳಿದಜಿಲ್ಲೆಗಳುಕಲಬುರಗಿವಿಭಾಗದಲ್ಲಿವೆ
3. ಅತಿ ಹೆಚ್ಚು ಹಿಂದುಳಿದ ಜಿಲ್ಲೆಗಳು ಎಲ್ಲ ಮಾನದಂಡಗಳಲ್ಲಿಯೂ ಹಿಂದುಳಿದಿವೆ. ಹೀಗಾಗಿ ಎಲ್ಲ ವಲಯಗಳನ್ನೂ ಆಧರಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು
4. ಹಿಂದುಳಿದ ಜಿಲ್ಲೆಗಳಲ್ಲಿ ಮೂಲಸೌಕರ್ಯ ಮತ್ತು ಸಂಪನ್ಮೂಲದ ಕೊರತೆ ಇದೆ (ಕೃಷಿ ಸಂಪನ್ಮೂಲ ಉತ್ತಮವಾಗಿರುವ ಜಿಲ್ಲೆಗಳನ್ನು ಹೊರತುಪಡಿಸಿ). ಕೃಷಿಯೇತರ ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಕರ್ಯ ಉತ್ತಮಪಡಿಸುವುದು ಅಭಿವೃದ್ಧಿಯ ಸಮತೋಲನ ಸಾಧಿಸಲು ಮುಖ್ಯ ಕ್ರಮವಾಗಿದೆ
5. ಕೃಷಿ ಸಂಪನ್ಮೂಲವು ಹೇರಳವಾಗಿರುವ ಜಿಲ್ಲೆಗಳಲ್ಲಿ ಕೈಗಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ತೀವ್ರಗತಿಯಲ್ಲಿ ನಡೆಯುತ್ತಿರುವ ಪರಿಣಾಮ, ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಆದಾಗ್ಯೂ ಕೆಲವು ಜಿಲ್ಲೆಗಳಲ್ಲಿ ಇಂಥ ಬದಲಾವಣೆ ಆಗದೇ ಇರುವುದರಿಂದ ಅಲ್ಲಿ ಸಂಪನ್ಮೂಲ ಮತ್ತು ಮೂಲಸೌಕರ್ಯದ ಕೊರತೆ ಇದೆ
6. ಹೆಚ್ಚು ಹಿಂದುಳಿದ ಮತ್ತು ಅತಿ ಹೆಚ್ಚು ಹಿಂದುಳಿದ ಜಿಲ್ಲೆಗಳ ಹೆಚ್ಚಿನ ಭಾಗಗಳಲ್ಲಿ ಸಾಮಾಜಿಕ ವಲಯಕ್ಕೆ ಸಂಬಂಧಿಸಿದ ಸಂಪನ್ಮೂಲಗಳು ಮತ್ತು ಮೂಲಸೌಕರ್ಯದ ಕೊರತೆ ಕಂಡುಬಂದಿದೆ

	ಡಿ.ಎಂ.ನಂಜುಂಡಪ್ಪ ವರದಿ	ಗೋವಿಂದ ರಾವ್ ವರದಿ
ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು	39	59
ಹೆಚ್ಚು ಹಿಂದುಳಿದ ತಾಲ್ಲೂಕುಗಳು	40	59
ಹಿಂದುಳಿದ ತಾಲ್ಲೂಕುಗಳು	35	59
ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು	61	59
ಒಟ್ಟು	175 (2002 ರಲ್ಲಿ ರಾಜ್ಯದಲ್ಲಿದ್ದ ತಾಲ್ಲೂಕುಗಳು)	236 (ಪ್ರಸ್ತುತ ರಾಜ್ಯದಲ್ಲಿರುವ ತಾಲ್ಲೂಕುಗಳು)



ವರದಿ ಹೇಳುವುದೇನು?

- ಅತಿ ಹೆಚ್ಚು ಹಿಂದುಳಿದ **59** ತಾಲ್ಲೂಕುಗಳಲ್ಲಿ **43** ಉತ್ತರ ಕರ್ನಾಟಕದಲ್ಲಿವೆ. **16** ದಕ್ಷಿಣ ಕರ್ನಾಟಕದಲ್ಲಿವೆ
- ಅಭಿವೃದ್ಧಿ ಹೊಂದಿದ **59** ತಾಲ್ಲೂಕುಗಳಲ್ಲಿ ಕೇವಲ **4** ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿವೆ
- ನಾಲ್ಕು ವಿಭಾಗಗಳ ಪೈಕಿ ಕಲಬುರಗಿ ವಿಭಾಗದಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಹೆಚ್ಚಿನ ಸಂಖ್ಯೆಯಲಿವೆ. **51**ರ ಪೈಕಿ **39** ತಾಲ್ಲೂಕುಗಳು ಅತಿ ಹೆಚ್ಚು ಹಿಂದುಳಿದವು. **9** ಹೆಚ್ಚು ಹಿಂದುಳಿದವು
- ಹೆಚ್ಚು ಹಿಂದುಳಿದ ವರ್ಗದಲ್ಲಿ ಬರುವ ತಾಲ್ಲೂಕುಗಳು ಬೆಳಗಾವಿ ವಿಭಾಗದಲ್ಲಿ ಜಾಸ್ತಿ ಇವೆ. ಒಟ್ಟು **72** ತಾಲ್ಲೂಕುಗಳ ಪೈಕಿ **20** ಅತಿ ಹೆಚ್ಚು ಹಿಂದುಳಿದಿವೆ. **34** ಹೆಚ್ಚು ಹಿಂದುಳಿದವು. **14** ತಾಲ್ಲೂಕುಗಳು ಹಿಂದುಳಿದ ವರ್ಗದಲ್ಲಿದ್ದು, ನಾಲ್ಕು ತಾಲ್ಲೂಕುಗಳು ಅಭಿವೃದ್ಧಿ ಹೊಂದಿವೆ
- ದಕ್ಷಿಣ ಕರ್ನಾಟಕದಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಸಂಖ್ಯೆ ಹೆಚ್ಚಿದೆ. ಅಭಿವೃದ್ಧಿ ಹೊಂದಿದ **59** ತಾಲ್ಲೂಕುಗಳ ಪೈಕಿ **55** ತಾಲ್ಲೂಕುಗಳು ಇಲ್ಲಿವೆ. ಈ ಪೈಕಿ ಮೈಸೂರು ವಿಭಾಗದಲ್ಲಿ **35** ತಾಲ್ಲೂಕುಗಳಿದ್ದರೆ, ಬೆಂಗಳೂರು ವಿಭಾಗದಲ್ಲಿ **20** ಇವೆ
- ನಾಲ್ಕು ವಿಭಾಗಗಳ ಪೈಕಿ ಮೈಸೂರು ವಿಭಾಗವು ಅಭಿವೃದ್ಧಿಯಲ್ಲಿ ಉತ್ತಮ ಸಾಧನೆ ತೋರಿದೆ. ಅಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಿಲ್ಲ. ಹೆಚ್ಚು ಹಿಂದುಳಿದ **4**, ಹಿಂದುಳಿದ ತಾಲ್ಲೂಕುಗಳು **20** ಇವೆ
- ಬೆಂಗಳೂರು ವಿಭಾಗದಲ್ಲಿ **12** ಅತಿ ಹೆಚ್ಚು ಹಿಂದುಳಿದ, ಎಂಟು ಹೆಚ್ಚು ಹಿಂದುಳಿದ, **23** ಹಿಂದುಳಿದ ತಾಲ್ಲೂಕುಗಳಿವೆ

ನಂಜುಂಡಪ್ಪ ವರದಿ ಈಗ ಅನ್ವಯವಾದರೆ...

ಡಿ.ಎಂ.ನಂಜುಂಡಪ್ಪ ಸಮಿತಿಯು ಪ್ರಾದೇಶಿಕ ಅಸಮತೋಲನದ ಅಧ್ಯಯನ ನಡೆಸುವಾಗ ರಾಜ್ಯದಲ್ಲಿ 175 ತಾಲ್ಲೂಕುಗಳಿದ್ದವು. ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ಹಣಕಾಸು, ಆರ್ಥಿಕ ಮೂಲಸೌಕರ್ಯ, ಸಾಮಾಜಿಕ ಮೂಲಸೌಕರ್ಯ ಮತ್ತು ಭೌಗೋಳಿಕ ಗುಣಲಕ್ಷಣಗಳು ಈ ಐದು ಮಾನದಂಡಗಳ ಆಧಾರದಲ್ಲಿ ಸಮಿತಿಯು ಸಮಗ್ರ ಸಂಯೋಜಿತ ಅಭಿವೃದ್ಧಿ ಸೂಚ್ಯಂಕ (ಸಿಸಿಡಿಐ–ಕಾಂಪ್ರಿಹೆನ್ಸಿವ್ ಕಾಂಪಸಿಟ್ ಡೆವೆಲಪ್‌ಮೆಂಟ್ ಇಂಡೆಕ್ಸ್) ಲೆಕ್ಕ ಹಾಕಿ, ಸೂಚ್ಯಂಕಗಳ ಅಂಕಗಳ ಆಧಾರದಲ್ಲಿ ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಲೆಕ್ಕಹಾಕಿತ್ತು.

ಆ ಲೆಕ್ಕಾಚಾರದಲ್ಲಿ ಕೆಲವು ಕೊರತೆಗಳಿವೆ ಎಂದು ಗೋವಿಂದರಾವ್ ಸಮಿತಿ ಹೇಳಿದೆ.

ನಂಜುಂಡಪ್ಪ ಸಮಿತಿ ಅನುಸರಿಸಿದ ವರ್ಗೀಕರಣ ವಿಧಾನ ಮತ್ತು ಮರುಲೆಕ್ಕ ಹಾಕಿದ ಸಿಸಿಡಿಐ ಅನ್ನು ಗೋವಿಂದರಾವ್ ಸಮಿತಿಯು ಈಗಿನ 236 ತಾಲ್ಲೂಕುಗಳಿಗೆ ಅನ್ವಯಿಸಿದೆ. ಅದರ ಪ್ರಕಾರ, 93 ತಾಲ್ಲೂಕುಗಳು ಅತಿ ಹೆಚ್ಚು ಹಿಂದುಳಿದಿದ್ದರೆ, 36 ಹೆಚ್ಚು ಹಿಂದುಳಿದಿವೆ. 43 ಮತ್ತು 64 ತಾಲ್ಲೂಕುಗಳು ಕ್ರಮವಾಗಿ ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ವರ್ಗದಲ್ಲಿ ಬರುತ್ತವೆ.

ಅದರ ಪ್ರಕಾರ:

- 2001–02ಕ್ಕೆ ಹೋಲಿಸಿದರೆ ಶೇ 65ರಷ್ಟಿದ್ದ ಹಿಂದುಳಿದ ತಾಲ್ಲೂಕುಗಳ ಪ್ರಮಾಣ 2022–23ಕ್ಕೆ ಶೇ 72.8ಕ್ಕೆ ಹೆಚ್ಚಾಗಿದೆ
- ಶೇ 60ರಷ್ಟು ಹಿಂದುಳಿದ ತಾಲ್ಲೂಕುಗಳು ಉತ್ತರ ಕರ್ನಾಟದಲ್ಲಿವೆ
- ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಕಲಬುರಗಿ ವಿಭಾಗದಲ್ಲಿವೆ (ಶೇ 42). ಬೆಳಗಾವಿಯಲ್ಲಿ ಶೇ 34ರಷ್ಟು ತಾಲ್ಲೂಕುಗಳಿವೆ
- ಹೆಚ್ಚು ಹಿಂದುಳಿದ ತಾಲ್ಲೂಕುಗಳ ಪ್ರಮಾಣ ಬೆಳಗಾವಿ ವಿಭಾಗದಲ್ಲಿದೆ (ಶೇ 33.7). ನಂತರ ಕಲಬುರಗಿ ವಿಭಾಗದಲ್ಲಿದೆ (ಶೇ 26.1)
- ಹೊಸದಾಗಿ ರಚನೆಯಾದ 61 ತಾಲ್ಲೂಕುಗಳಲ್ಲಿ 51 ತಾಲ್ಲೂಕು ಅತಿ ಹೆಚ್ಚು ಹಿಂದುಳಿದ ವರ್ಗದಲ್ಲಿ ಬರುತ್ತವೆ. 2 ಹೆಚ್ಚು ಹಿಂದುಳಿದ, 5 ಹಿಂದುಳಿದ ಮತ್ತು ಮೂರು ಅಭಿವೃದ್ಧಿ ಹೊಂದಿದ ವರ್ಗಗಳಲ್ಲಿ ಬರುತ್ತವೆ

ಮಾಪನಕ್ಕೆ ಭಿನ್ನ ವಿಧಾನ

ನಂಜುಂಡಪ್ಪ ಸಮಿತಿ ಅನುಸರಿಸಿದ್ದಕ್ಕಿಂತ ಕೊಂಚ ಭಿನ್ನವಾದ ವಿಧಾನ ಮತ್ತು ಮಾನದಂಡಗಳನ್ನು ಗೋವಿಂದ ರಾವ್ ಸಮಿತಿ ಅಳವಡಿಸಿಕೊಂಡು ತಾಲ್ಲೂಕುಗಳ ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆಯನ್ನು ಅಳೆದಿದೆ.

ಸಂಪನ್ಮೂಲ/ಮೂಲಸೌಕರ್ಯ ಮಾತ್ರವಲ್ಲದೆ ತಲಾ ಆದಾಯ, ಆರೋಗ್ಯ (ಐದು ವರ್ಷದ ಕೆಳಗಿನ ಮಕ್ಕಳ ಮರಣ ಪ್ರಮಾಣ ಮತ್ತು 15–49 ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆ ಪ್ರಮಾಣ) ಮತ್ತು ಶಿಕ್ಷಣಗಳನ್ನೂ (ಸಾಕ್ಷರತೆ, ಲಿಂಗವಾರು ವ್ಯತ್ಯಾಸ) ಮಾನದಂಡವಾಗಿ ಪರಿಗಣಿಸಿದೆ.

ಜೀವನ ಮಟ್ಟ, ಆರೋಗ್ಯಕ್ಷೇತ್ರ ಮತ್ತು ಶಿಕ್ಷಣ ಈ ಮೂರು ವಿಷಯಗಳಿಗೂ ಪ್ರತ್ಯೇಕ ಫಲಿತಾಂಶ ಅಂಕಗಳನ್ನು (ಔಟ್‌ಕಮ್ ಸ್ಕೋರ್) ಲೆಕ್ಕಹಾಕಿದೆ. ನಂತರ ಮೂರು ಅಂಕಗಳನ್ನೂ ಪರಿಗಣಿಸಿ ಸಂಯೋಜಿತ ಫಲಿತಾಂಶ ಅಂಕಗಳನ್ನು (ಕಾಂಪಸಿಟ್ ಔಟ್‌ಕಮ್ ಸ್ಕೋರ್) ಲೆಕ್ಕಹಾಕಿದೆ. ಹಿಂದುಳಿದಿರುವಿಕೆಯ ತೀವ್ರತೆಯನ್ನು ಗುರುತಿಸಲು ಸಮಿತಿಯು 59 ತಾಲ್ಲೂಕುಗಳನ್ನೊಳಗೊಂಡ ನಾಲ್ಕು ಸಮನಾದ ವಿಭಾಗಗಳನ್ನು ಮಾಡಿದೆ.

ಅತ್ಯಂತ ಕಡಿಮೆ ಸಂಯೋಜಿತ ಸೂಚ್ಯಂಕ ಪಡೆದ 59 ತಾಲ್ಲೂಕುಗಳನ್ನು ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಎಂದು ಪರಿಗಣಿಸಿದೆ. ಅತಿ ಹೆಚ್ಚು ಸೂಚ್ಯಂಕ ಹೊಂದಿದ 59 ತಾಲ್ಲೂಕುಗಳನ್ನು ಅಭಿವೃದ್ಧಿಹೊಂದಿದ ತಾಲ್ಲೂಕುಗಳು ಎಂದು ಗುರುತಿಸಿದೆ. ಅದೇ ರೀತಿ ಇದೇ ಸೂಚ್ಯಂಕದ ಆಧಾರದಲ್ಲಿ ತಲಾ 59 ಹೆಚ್ಚು ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳನ್ನಾಗಿ ಸಮಿತಿ ಪಟ್ಟಿ ಮಾಡಿದೆ.

ಇದೇ ರೀತಿಯಲ್ಲಿ ಸಂಪನ್ಮೂಲ/ಮೂಲಸೌಕರ್ಯ ಮಾನದಂಡದ ಆಧಾರದಲ್ಲೂ ಅಂಕಗಳನ್ನು ಲೆಕ್ಕಹಾಕಲಾಗಿದೆ.

ಈ ಮಾನದಂಡದ ಅಡಿಯಲ್ಲಿ ಮೊದಲನೇ ಶ್ರೇಣಿ, ಎರಡನೇ ಶ್ರೇಣಿ ಮತ್ತು ಮೂರನೇ ಶ್ರೇಣಿಯ ಮೂಲಸೌಕರ್ಯಗಳು, ಆರ್ಥಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನೂ ಪರಿಗಣಿಸಿ ಅಂಕಗಳನ್ನು ಲೆಕ್ಕಹಾಕಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಮುಖಾಮುಖಿಯಾಗಿ ನಿಂತು ಪರಸ್ಪರ ಕೈತೋರಿ ವಾಗ್ವಾದ ಮಾಡುತ್ತಿರುವ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮೊಹಮ್ಮದ್ ವಾರಿಸ್ ಅಲಿ ಎಂಬವರು ಫೇಸ್‌ಬುಕ್‌ನಲ್ಲಿ ಈ ಫೋಟೊವನ್ನು ಪೋಸ್ಟ್ ಮಾಡಿದ್ದಾರೆ. ಆದರೆ, ಇದು ಸುಳ್ಳು.



ಫೋಟೊವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ಫೋಟೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಆ ಘಟನೆಯ ಬಗ್ಗೆ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ವಿಶ್ವಾಸಾರ್ಹ ಮಾಧ್ಯಮ ವರದಿಗಳು ಸಿಗಲಿಲ್ಲ. ಚಿತ್ರವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ಚಿತ್ರ ಆಗಿರಬಹುದೇ ಎನ್ನುವ ಅನುಮಾನ ಬಂತು. ಇಬ್ಬರೂ ವಾಗ್ವಾದ ನಡೆಸುವುದನ್ನು ಕ್ಯಾಮೆರಾ ಸಿಬ್ಬಂದಿ ಚಿತ್ರೀಕರಿಸುವುದು ಅದರಲ್ಲಿ ಕಾಣಿಸುತ್ತದೆ. ಸದನದಲ್ಲಿ ಈ ರೀತಿ ವಿಡಿಯೊ ಚಿತ್ರೀಕರಣಕ್ಕೆ ಅವಕಾಶ ಇಲ್ಲ. ಚಿತ್ರದಲ್ಲಿರುವುದು ಸಂಸತ್ತಿನ ಹಳೆಯ ಕಟ್ಟಡದ ಲೋಕಸಭೆಯ ಸಭಾಂಗಣ. ಈಗ ಅಧಿವೇಶನ ನಡೆಯುತ್ತಿರುವುದು ಸಂಸತ್ತಿನ ಹೊಸ ಕಟ್ಟಡದಲ್ಲಿ. ಇದರ ಆಧಾರದಲ್ಲಿ ಫೋಟೊವನ್ನು ಎಐ ಕಂಟೆಂಟ್ ಪತ್ತೆ ಟೂಲ್ 'ಹೈವ್ ಮಾಡರೇಷನ್' ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ಚಿತ್ರ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು


ದೀಪಾ ಹಿರೇಗುತ್ತಿ

ಪ್ರವಾಹಕ್ಕೆ ಎದುರಾಗಿ ಈಜಿದ ದಿಟ್ಟೆ

ಬೆಂಗಳೂರಿನ ರಜನಿ ಎಲ್ಲ ಮಕ್ಕಳಂತೆ ಆಡಿಕೊಂಡಿದ್ದ ಹುಡುಗಿ. ಒಂಬತ್ತು ವರ್ಷದವಳಿದ್ದಾಗ ಸಣ್ಣ ಶೀತವೊಂದಕ್ಕಾಗಿ ವೈದ್ಯರು ಕೊಟ್ಟ ಔಷಧಿ ತೀವ್ರ ಅಲರ್ಜಿಯಾಗಿ ಅವಳ ಕಣ್ಣಿನ ದೃಷ್ಟಿ ನಿಧಾನವಾಗಿ ಕ್ಷೀಣಿಸಲು ಪ್ರಾರಂಭವಾಯಿತು. ಕಾಮರ್ಸ್ ಪದವಿ ಮುಗಿಯುವ ವೇಳೆಗೆ ಬಲಗಡೆಯ ಕಣ್ಣಿನ ದೃಷ್ಟಿ ಸಂಪೂರ್ಣವಾಗಿ ಹೋಯಿತು. ಎಡಗಣ್ಣಿನ ದೃಷ್ಟಿಯೂ ಕ್ಷೀಣಿಸಲು ಶುರುವಾಯಿತು. ಆದರೆ ಅದರ ಹೊರತಾಗಿಯೂ ರಜನಿ ಸಿಎ ಓದಬೇಕೆಂದು ಪಣ ತೊಟ್ಟರು. ದೃಷ್ಟಿ ಸರಿ ಇರುವವರಿಗೇ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಆಗುವುದು ಕಷ್ಟಕರವಾದದ್ದು. ಆದರೆ ರಜನಿ ತಾವು ಚಾರ್ಟರ್ಡ್ ಅಕೌಂಟೆಂಟ್ ಆಗಲೇಬೇಕೆಂದು ತೀರ್ಮಾನಿಸಿದ್ದರು.

ಪರೀಕ್ಷೆಗೆ ತಯಾರಿ ನಡೆಸುತ್ತಿರುವಾಗಲೇ ಎಡಗಣ್ಣಿನ ದೃಷ್ಟಿಯೂ ಹೊರಟುಹೋಯಿತು. ಇದು ಆಗಿದ್ದು 1993ರಲ್ಲಿ. ಧೃತಿಗೆಟ್ಟ ಹುಡುಗಿಗೆ ದಿಕ್ಕೇ ತೋಚಲಿಲ್ಲ. ಕಾರಣ ಆಗ ಓದಲು ಸಹಾಯ ಮಾಡುವ ತಂತ್ರಜ್ಞಾನ ಬೆಳೆದಿರಲಿಲ್ಲ. ಹೀಗಾಗಿ ಏಳು ವರ್ಷ ಓದು ನಿಲ್ಲಿಸಿದರು. ಸಹೋದರ ಮತ್ತು ಪಾಲಕರು ಆತ್ಮಸ್ಥೈರ್ಯ ಮುದುಡಲು ಬಿಡಲಿಲ್ಲ. 2000ನೇ ಇಸವಿಯಲ್ಲಿ ಮತ್ತೆ ಓದಲು ಮರಳಿದರು. ಕಂಪ್ಯೂಟರ್ ಪರದೆಯ ಮೇಲಿನ ವಾಕ್ಯಗಳನ್ನು ಓದುವ ಸಾಫ್ಟ್‌ವೇರ್ ಸಹಾಯ ಮಾಡಿತು. ಹಗಲೂ ರಾತ್ರಿ ಕಷ್ಟಪಟ್ಟರು.

ಅಂತೂ 2002ರಲ್ಲಿ ಭಾರತದ ಮೊದಲ ದೃಷ್ಟಿವಿಹೀನ ಮಹಿಳಾ ಚಾರ್ಟರ್ಡ್ ಅಕೌಂಟೆಂಟ್ ಆದರು ರಜನಿ ಗೋಪಾಲಕೃಷ್ಣ.


ಆದರೆ ರಜನಿ ಕೆಲಸದ ಹುಡುಕಾಟದಲ್ಲಿ ತೊಡಗಿದಾಗ ದೃಷ್ಟಿದೋಷವನ್ನೇ ಮುಖ್ಯವೆಂದು ಪರಿಗಣಿಸಲಾಯಿತು. ಅಂಗವಿಕಲರಿಗೆ ಸೌಲಭ್ಯಗಳ ಕೊರತೆಗಿಂತ ಸಮಸ್ಯೆಯನ್ನುಂಟು ಮಾಡುವ ಸಂಗತಿ ಎಂದರೆ ಸಮಾಜದ ಯೋಚನಾ ವಿಧಾನ ಎನ್ನುತ್ತಾರೆ ರಜನಿ. ಅಂಗವಿಕಲರು ಏನು ಮಾಡಬಲ್ಲರು ಎಂಬ ಪ್ರಶ್ನೆ ಕೇಳದೇ ಅವರಲ್ಲಿರುವ ಸಾಮರ್ಥ್ಯಕ್ಕೆ ಸಮಾಜ ಬೆಲೆ ಕೊಟ್ಟಾಗ ಮಾತ್ರ ಸರ್ಕಾರಗಳ, ಕಾರ್ಪೊರೇಟ್ ಸಂಸ್ಥೆಗಳ ಒಳಗೊಳ್ಳುವಿಕೆಯ ಘೋಷಣೆಗಳಿಗೆ ಅರ್ಥ ಬರುತ್ತದೆ ಎನ್ನುತ್ತಾರೆ ಅವರು. ಬೇರೆಯವರು ತಮ್ಮ ದೃಷ್ಟಿಹೀನತೆಯಿಂದ ಹಿಂಜರಿದರೂ ತಾವು ಹಿಂದೆ ಸರಿಯಲಿಲ್ಲ ಎನ್ನುವ ರಜನಿ ಗೋಪಾಲಕೃಷ್ಣ ಈಗ ಭಾರತದ ಪ್ರಮುಖ ಸಾಫ್ಟ್‌ವೇರ್ ಕಂಪನಿಗಳ ಜತೆ ಕೆಲಸ ಮಾಡುತ್ತಿದ್ದಾರೆ ಮತ್ತು ತಮ್ಮಂತಹುದೇ ಸಮಸ್ಯೆ ಇರುವವರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ.

ಆಘಾತ ಅಪ್ಪಳಿಸಿದಾಗ ರಜನಿ ಅದನ್ನು ಎದುರಿಸಿದ ಬಗೆ ಪ್ರತಿಯೊಬ್ಬರಿಗೂ ಮಾದರಿ. ಸಮಸ್ಯೆ ಶುರುವಾದಾಗ ಶಾಲೆಯಲ್ಲೂ ಸಮಸ್ಯೆಯಾಯಿತು. ಸಂಬಂಧಿಕರು ಪರಿಚಯದವರ ಅನುಕಂಪ ಬಹಳ ಕಿರಿಕಿರಿಯನ್ನುಂಟು ಮಾಡುತ್ತಿತ್ತು. ಅದರಿಂದ ಪಾರಾಗಲು ಹೆಚ್ಚು ಹೆಚ್ಚು ಓದಿದರು. ಕಾಲೇಜಿನಲ್ಲಿ ಸಂವೇದನಾಶೀಲ ಸ್ನೇಹಿತರು ಸಿಕ್ಕಿದರು. ಎರಡನೇ ಕಣ್ಣಿನ ದೃಷ್ಟಿ ಕೂಡ ಹೋದಾಗ ತಮ್ಮ ಮೊದಲ ಸವಾಲು ತನಗಿನ್ನು ಕಣ್ಣು ಕಾಣುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುವುದಾಗಿತ್ತು ಎನ್ನುತ್ತಾರೆ ರಜನಿ. ಆದರೆ ಕೊರಗುತ್ತ ಕೂರುವ ಬದಲು ಉತ್ತಮ ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಪಡೆಯುವುದೊಂದೇ ತಮ್ಮೆದುರು ಇರುವ ದಾರಿ ಎಂದು ಯೋಚಿಸಿದರು. ಅಷ್ಟೇ ಅಲ್ಲ, ಚೆಸ್ ಕಲಿತರು, ಅಡುಗೆ ಕಲಿತರು, ವೀಣೆ ನುಡಿಸಲು ಕಲಿತರು. ತಮ್ಮ ಸಾಧನೆಗೆ ರಾಷ್ಟ್ರಪತಿಗಳಿಂದ ಸನ್ಮಾನವನ್ನೂ ಪಡೆದರು.

ನಮಗೆ ನಾವೇ ಮಿತಿಗಳನ್ನು ಹಾಕಿಕೊಳ್ಳುವುದೇ ಹೊರತು ಮನುಷ್ಯನಿಗೆ ಸಾಧಿಸಲು ಸಾಧ್ಯವಾಗದ್ದು ಏನೂ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದ ರಜನಿಯವರ ಬದುಕು ಸಣ್ಣ ಸಣ್ಣ ವಿಷಯಗಳಿಗೂ ಭರವಸೆ ಕಳೆದುಕೊಳ್ಳುವವರಿಗೆ ಬಹುದೊಡ್ಡ ಮಾದರಿ.

ಪದಬಂಧ 6304

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

4.ಈತ ಹಾದಿಯನ್ನು ತೋರುವವನು (5)
5.ಕೊನೆಗೆ ಶನಿ ಇದ್ದಾಗ ಸಿಡಿಲು ಬಡಿಯಿತೇ? (3)
6.ಇಕ್ಕುಳದಂತಹ ಸಾಧನ ಉಲ್ಟಾ ಆಗಿದೆ (3)
10.ಮೊದಲಿನ ಸ್ಥಿತಿ (4)
11.ಈ ಪರಿ ಬಂದಿರುವ ಅತಿಯಾದ ದುಃಖ (4)
12.ಕನಸು ಇಲ್ಲಿ ದಿಟವಾಗಿದೆ (3)
15.ಪಾದದ ಹೆಬ್ಬೆರಳು (3)
16.ಅಂತರಂಗ ಸ್ಪರ್ಶಿಯಾದುದು (5)

ಮೇಲಿಂದ ಕೆಳಕ್ಕೆ

1.ಮಾನಿನಿಯ ಮೇಲೇ ಈ ಸಂದೇಹ! (3)
2.ಮನದೊಳಗಿರುವ ಕಾಮ (3)
3.ಸಂಕದ ಹತ್ತಿರವಿದ್ದಾಗ ಆದ ನೋವು (3)
5.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
7.ಮನಸ್ಸು ಬದಲಾಗುವಿಕೆ (5)
8.ಚಂದಾಹಣವಿದು (3)
9.ನಡುಕ ಹೀಗೆ ಬಂದಿದೆ (3)
13.ಶುದ್ಧವಾದ ಮನಸ್ಸುಳ್ಳವನು (3)
14.ಆಲಸಿ ಇಲ್ಲಿದ್ದಾನೆ (3)
15.ಮನೆಯ ಎರಡು ಕಂಬಗಳ ನಡುವಿನ ಪ್ರದೇಶ (3)

6303ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಂಬ 3.ಅವಸರ 6.ವಸನ 8.ಲಬತಹ 9.ವರದಿ 10.ಕಡಲು 11.ಚದುರಂಗ 13.ಮಣಕ 15.ಅರಸಿಕ 16.ವಪೆ

ಮೇಲಿಂದ ಕೆಳಕ್ಕೆ:
2.ಬಡವ 3.ಅಧ್ವಾನ 4.ಸಕಲ 5.ಅಹವಾಲು 7.ಸರದಿ 9.ವನಚರ 10.ಕಲ್ಯಾಣ 12.ಗಗ್ಗರ 13.ಮಶಕ 14.ಕಕವ

ಸುಡೊಕು 6688

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

6687 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಫೆಬ್ರವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಿತೀಯ ಗಂ.24-41 ನಕ್ಷತ್ರ: ಮಘ ಗಂ. 22-11, ಯೋಗ: ಶೋಭನ ಗಂ. 26-39 ಕರಣ: ತೈತಿಲ ಗಂ 13-12 ಮಕರ ಮಾಸದ 20 ನೇ ದಿನ. ಮಳೆ ನಕ್ಷತ್ರ : ಶ್ರವಣ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 - 04-30 ಸೂರ್ಯೋದಯ : 07-00 ಸೂರ್ಯಾಸ್ತ : 06-28, ಮುಸ್ಲಿಂ ದಿನಾಂಕ : 1 ಶಬನ್, ಅದೃಷ್ಟ ಸಂಖ್ಯೆ : 5, 11

ಮೇಷ: ಪ್ರಸ್ತುತ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವುದರಿಂದ ಬೀಗದಿರುವುದು ಒಳ್ಳೆಯದು. ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುವ ಘಟನೆಗಳು ನಡೆಯಲಿವೆ. ವಿಶೇಷ ಆಸಕ್ತಿಯನ್ನು ತೋರುವಿರಿ.

ವೃಷಭ: ಗೃಹನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಮಾನಸಿಕ ಒತ್ತಡ ಹೆಚ್ಚುತ್ತದೆ. ಹೆಂಡತಿಯ ತವರು ಮನೆಯ ಕಡೆಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಸಂಬಂಧಗಳು ಗಟ್ಟಿಗೊಳ್ಳುತ್ತವೆ.

ಮಿಥುನ: ಸಲಹೆಯನ್ನು ಎಷ್ಟು ಜನರಲ್ಲಿ ಕೇಳಿದರೂ ಕೊನೆಯ ತೀರ್ಮಾನ ಸ್ವಂತದ್ದಾಗಿರಲಿ. ಕೆಲಸವನ್ನು ಬೇಗ ಮುಗಿಸಬೇಕೆಂಬ ಆತುರವು ಅಚಾತುರ್ಯವನ್ನು ಉಂಟುಮಾಡುವುದು.

ಕರ್ಕಾಟಕ: ಯಾವುದಾದರು ಕೆಲಸ ಮಾಡಿದರೆ ಲಾಭ ಬರುವುದಿಲ್ಲವೆಂದಾರೆ ಒಳ್ಳೆಯ ಕೆಲಸವಾದರೂ ಮಾಡುವುದಿಲ್ಲ. ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ಅರಿತುಕೊಂಡಿದ್ದೀರಿ.

ಸಿಂಹ: ವ್ಯವಹಾರ ರಂಗದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸಿದ ಪರಿಣಾಮ ನಷ್ಟವು ತೋರಿಬರುವುದು. ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳುವ ಕಾರಣದಿಂದ ತೂಕವನ್ನು ಕಡಿಮೆ ಮಾಡುಕೊಳ್ಳುವ ಸಾಹಸಕ್ಕೆ ಕೈಹಾಕುವಿರಿ.

ಕನ್ಯಾ: ಪ್ರೀತಿ ಹಾಗೂ ನಂಬಿಕೆಯ ಪದಗಳಿಗೆ ಅರ್ಥವಿಲ್ಲ ಎಂದು ಒಂದು ಕ್ಷಣ ಎನಿಸಿದರೂ ತಕ್ಷಣ ಆ ನಿರ್ಧಾರಕ್ಕೆ ಬರಬೇಡಿ. ಇನ್ನಿತರೇ ವಿಷಯಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡಿ.

ತುಲಾ: ಐಷಾರಾಮಿ ಖರ್ಚು ವೆಚ್ಚಗಳ ಬಗ್ಗೆ ಜಾಗ್ರತೆಯನ್ನು ವಹಿಸಿ. ಏನೇ ಸಮಸ್ಯೆಗಳಿದ್ದರೂ ಅದನ್ನು ಮಾತಿನ ಮುಖಾಂತರ ಬಗೆಹರಿಸಿಕೊಳ್ಳುವಿರಿ. ಸ್ವಂತ ವ್ಯವಹಾರಗಳು ಇದ್ದಲ್ಲಿ ಅವು ಲಾಭವನ್ನು ತಂದುಕೊಡುತ್ತವೆ.

ವೃಶ್ಚಿಕ: ಬೇರೆಯವರ ಸಹಾಯ ಪಡೆಯದೆ ಶ್ರಮದಿಂದಲೇ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಲಾಭದಾಯಕ. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕಾದವರು ಅದನ್ನು ನಿರ್ಲಕ್ಷಿಸಬೇಡಿ.

ಧನು: ಮಾಡುವ ಕೆಲಸಗಳೆಲ್ಲವೂ ನಿಮಗೆ ಸರಿಯಾಗಿಯೇ ಕಂಡರೂ ಅವೆಲ್ಲವೂ ಸರಿಯಾಗಿಯೇ ಇರುವುದಿಲ್ಲ. ಕಷ್ಟ ನಷ್ಟಗಳನ್ನೇ ಯೋಚಿಸುತ್ತ ಕೂರದಿರಿ. ಅವೆಲ್ಲವೂ ಸದ್ಯದ ಮಟ್ಟಿಗೆ ಕ್ಷಣಿಕವೇ ಆಗಿರುತ್ತದೆ.

ಮಕರ: ನಿರ್ಮಲವಾದ ಮನಸ್ಸಿನ ಕಾರಣಕ್ಕೆ ಎಷ್ಟೇ ಸಣ್ಣ ತಪ್ಪು ನಿಮ್ಮದಾದರೂ ಅಧಿಕವಾಗಿ ಪಶ್ಚಾತಾಪ ಪಡುತ್ತೀರಾ. ದಿನದ ಅಂತ್ಯದಲ್ಲಿ ಯಾರಿಂದಲಾದರು ಶುಭಸುದ್ದಿ ಕೇಳುವಿರಿ. ವೃತ್ತಿ ಬದುಕಿನಲ್ಲಿ ಗೆಲುವು ದೊರೆಯಲಿದೆ.


ಕುಂಭ: ನೋಂದಾಯಿತ ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳಿ. ಹಣಕಾಸಿನ ಅವಶ್ಯಕತೆಯನ್ನು ಪೂರೈಸುವ ಕಾರಣದಿಂದ ಅಧಿಕ ಸಮಯ ಕೆಲಸ ಮಾಡುವಿರಿ.

ಮೀನ: ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿವೆ. ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುವಿರಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,825
ಇಂದಿನ ಅಂತ್ಯ:	25,088
ದಿನದ ಗರಿಷ್ಠ:	25,108
	262

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹560
12 ಕ್ಕೆ	₹80
ಮೈಸೂರು: 100 ಕ್ಕೆ	₹562

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹199
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹182

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹250-756
ದ್ವಿತಳಿ (ಬಿ.ವಿ)	₹273-938

ಮುದ್ರೆಮನೆ ಕಾಫಿ

ಎಪಿ	₹26000
ಎಸಿ	₹14150
ಆರ್‌ಪಿ	₹17850
ಆರ್‌ಸಿ	₹10600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1790 (1800)
ಸೋಯಾ (ರಿಫೈನ್ಡ್)	₹1400 (1405)
ಸೂರ್ಯಕಾಂತಿ (ರಿಫೈನ್ಡ್)	₹1620 (1625)
ಪಾಮೋಲಿನ್	₹1310 (1325)

ಮುಂಬೈ ಧಾರಣೆ (ಶೇಂಗಾ) 02-02-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1800 (1810)
ಒಂದು ವಾರದ ಡೆಲಿವರಿ	1795 (1805)
ಪಾಮ್ ವಾರದ ಡೆಲಿವರಿ	1308 (1323)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,47,000 (1,56,000)
ಬೆಳ್ಳಿ ಕೆ.ಜಿಗೆ	2,54,500 (2,95,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-1600
ಮಧ್ಯಮ	₹600-1200
ಸಣ್ಣ	₹200-600

ಬೇಡಿಕೆ ಹೆಚ್ಚಿಸಲು ಹೂಡಿಕೆ: ನಿರ್ಮಲಾ

ಮುಂದುವರಿಯಲಿದೆ ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣ ಪ್ರಕ್ರಿಯೆ

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು ಮಾಡುವುದಕ್ಕೆ ಹೂಡಿಕೆಯನ್ನು ಆದ್ಯತೆಯ ಸಾಧನವಾಗಿ ಸರ್ಕಾರ ಪರಿಗಣಿಸಿದೆ ಎಂಬುದನ್ನು ಈ ಬಾರಿಯ ಬಜೆಟ್ ಹೇಳುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದ್ದಾರೆ.

ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ ಉದ್ದೇಶವು, ಆರ್ಥಿಕ ಬೆಳವಣಿಗೆಯು ಸರ್ಕಾರದ ಆದ್ಯತೆ ಎಂಬುದರ ಸೂಚಕ ಎಂದು ಅವರು ವಿವರಿಸಿದ್ದಾರೆ.

ಬಜೆಟ್ ಮಂಡನೆಯ ಮಾರನೆಯ ದಿನ ಮಾಧ್ಯಮ ಪ್ರತಿನಿಧಿಗಳ ಜೊತೆ ಸಂವಾದ ನಡೆಸಿದ ನಿರ್ಮಲಾ ಅವರು, 'ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ಕಾರಣದಿಂದಾಗಿ ಚಿನ್ನದ ಬೆಲೆಯಲ್ಲಿ ಅಸ್ಥಿರತೆ ಕಾಣಿಸಿಕೊಂಡಿದೆ. ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನದ ಮೇಲೆ ಹೂಡಿಕೆ ಮಾಡುತ್ತಿವೆ' ಎಂದಿದ್ದಾರೆ.



ಹೂಡಿಕೆದಾರರಿಗೆ ಯಾವುದೇ ಒಂದು ದೇಶದ ಕರೆನ್ಸಿಯ ಮೇಲೆ ನಂಬಿಕೆ ಇಲ್ಲ, ಹೀಗಾಗಿಯೇ ಅವರು ಚಿನ್ನ ಖರೀದಿಗೆ ಮುಗಿಬೀಳುತ್ತಿದ್ದಾರೆ ಎಂಬುದನ್ನೂ ಚಿನ್ನದ ಬೆಲೆ ಏರಿಕೆಯು ತೋರಿಸುತ್ತಿದೆ

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ಹೂಡಿಕೆದಾರರು ಊಹೆಗಳನ್ನು ಆಧರಿಸಿದ ಷೇರು ವಹಿವಾಟುಗಳಲ್ಲಿ ತೊಡಗಿಸಿಕೊಳ್ಳುವುದು ಬೇಡ ಎಂಬ ಉದ್ದೇಶದಿಂದ ಫ್ಯೂಚರ್ಸ್ ಮತ್ತು ಆಪ್ಷನ್ಸ್‌ಗೆ ಸಂಬಂಧಿಸಿದಂತೆ ಷೇರು ವಹಿವಾಟು ತೆರಿಗೆಯನ್ನು (ಎಸ್‌ಟಿಟಿ) ಹೆಚ್ಚು ಮಾಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ.

'ಊಹೆಗಳನ್ನು ಬಹುವಾಗಿ ಆಧರಿಸಿದ ಎಫ್‌ಆ್ಯಂಡ್‌ಒ ವಹಿವಾಟಿನ ಮೇಲಿನ ತೆರಿಗೆಯನ್ನು ಮಾತ್ರ ಹೆಚ್ಚಿಸಲಾಗಿದೆ. ತಮ್ಮ ಮಕ್ಕಳು ಇಂತಹ ವಹಿವಾಟುಗಳಲ್ಲಿ ಹಣ ಕಳೆದುಕೊಳ್ಳುತ್ತಿದ್ದಾರೆ ಎಂದು ನನಗೆ ಹಲವು ಪಾಲಕರಿಂದ ಕರೆಗಳು ಬಂದಿವೆ. ಈ ವಿಚಾರವಾಗಿ ಸರ್ಕಾರ ಮಧ್ಯಪ್ರವೇಶ ಮಾಡಬೇಕು ಎಂದು ಅವರು ಕೋರಿದ್ದಾರೆ. ಎಸ್‌ಟಿಟಿ ಹೆಚ್ಚಳವು ಜನರು ಇಂತಹ ವಹಿವಾಟುಗಳಲ್ಲಿ ಆತುರದಿಂದ ತೊಡಗಿಸಿಕೊಳ್ಳದೆ ಇರುವಂತೆ ಮಾಡುತ್ತದೆ' ಎಂದು ಅವರು ವಿವರಿಸಿದ್ದಾರೆ.

ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣವು ಮುಂದುವರಿಯುತ್ತದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳಿಂದ ಇನ್ನಷ್ಟು ಹೂಡಿಕೆ ಹಿಂತೆಗೆತವನ್ನು ಸರ್ಕಾರ ಉತ್ತೇಜಿಸಲಿದೆ. ಐಡಿಬಿಐ ಬ್ಯಾಂಕ್‌ನ ಷೇರು ವಿಕ್ರಯಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ನಡೆಯುತ್ತಿವೆ ಎಂದಿದ್ದಾರೆ.

ಶೇ 8ರ ಬೆಳವಣಿಗೆಗೆ ಗಮನ

ನವದೆಹಲಿ (ಪಿಟಿಐ): ಆರ್ಥಿಕ ಬೆಳವಣಿಗೆ ದರವನ್ನು ಶೇ 7–8ರ ಮಟ್ಟದಲ್ಲಿ ಉಳಿಸಿಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಈ ಮಟ್ಟದ ಬೆಳವಣಿಗೆ ಸಾಧ್ಯವಾದಾಗ ಎಲ್ಲರಿಗೂ ಪ್ರಯೋಜನ ದಕ್ಕುತ್ತದೆ, ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಜೆಟ್ ಮಂಡನೆಯ ಮಾರನೆಯ ದಿನ ದೇಶದ ವಿವಿಧ ಭಾಗಗಳ ಕಾಲೇಜು ವಿದ್ಯಾರ್ಥಿಗಳ ಜೊತೆ ಸಂವಾದದಲ್ಲಿ ಭಾಗಿಯಾದ ಅವರು, 'ಆರ್ಥಿಕ ಬೆಳವಣಿಗೆ ಚೆನ್ನಾಗಿದ್ದರೆ ಅದರ ಫಲ ಎಲ್ಲರಿಗೂ ಸಿಗುತ್ತದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ತಯಾರಿಕಾ ವಲಯ ಚುರುಕು

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಜನವರಿ ತಿಂಗಳಿನಲ್ಲಿ ಸ್ವಲ್ಪ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಸೋಮವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) 2025ರ ಡಿಸೆಂಬರ್‌ನಲ್ಲಿ 55ರಷ್ಟಿತ್ತು. ಜನವರಿಯಲ್ಲಿ ಅದು 55.4ಕ್ಕೆ ಏರಿಕೆ ಆಗಿದೆ ಎಂದು ಹೇಳಿದೆ.

ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

'ಉತ್ಪನ್ನಗಳಿಗೆ ಹೊಸ ಕಾರ್ಯಾದೇಶ ಹೆಚ್ಚಳವಾಗಿದೆ. ಜೊತೆಗೆ ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಏರಿಕೆಯಾಗಿದೆ. ಇದರಿಂದ ತಯಾರಿಕಾ ವಲಯದ ಚಟುವಟಿಕೆ ಚೇತರಿಕೆ ಕಂಡಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಬೇಡಿಕೆಯಲ್ಲಿ ಹೆಚ್ಚಳ, ಹೊಸ ವ್ಯವಹಾರಗಳ ಬೆಳವಣಿಗೆ ಮತ್ತು ಹೂಡಿಕೆಯು ಉತ್ಪಾದನೆಗೆ ಬೆಂಬಲ ನೀಡಿದವು. ಒಟ್ಟಾರೆ ಮಾರಾಟಕ್ಕೆ ದೇಶೀ ಮಾರುಕಟ್ಟೆಯು ಉತ್ತೇಜನ ನೀಡಿದೆ. ಆದರೆ, ಹೊಸ ರಫ್ತು ವ್ಯವಹಾರದ ಹೆಚ್ಚಳ ಜಾಸ್ತಿ ಇಲ್ಲ. ಏಷ್ಯಾ, ಆಸ್ಟ್ರೇಲಿಯಾ, ಕೆನಡಾ, ಯುರೋಪ್ ಮತ್ತು ಪಶ್ಚಿಮ ಏಷ್ಯಾದಿಂದ ಬೇಡಿಕೆ ಉತ್ತಮವಾಗಿದೆ ಎಂದು ತಿಳಿಸಿದೆ.



ಸ್ಮಾರ್ಟ್‌ಫೋನ್ ಮಾರಾಟ ಆ್ಯಪಲ್ ಪಾಲು ಶೇ 28ಕ್ಕೆ ಏರಿಕೆ

ನವದೆಹಲಿ (ಪಿಟಿಐ): 'ದೇಶದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಆ್ಯಪಲ್ ಕಂಪನಿಯ ಪಾಲು ವರಮಾನ ಮೌಲ್ಯದ ಲೆಕ್ಕದಲ್ಲಿ ಶೇ 28ಕ್ಕೆ ಏರಿಕೆಯಾಗಿದೆ' ಎಂದು ಕೌಂಟರ್‌ಪಾಯಿಂಟ್ ರಿಸರ್ಚ್ ವರದಿ ಹೇಳಿದೆ.

2024ರಲ್ಲಿ ಕಂಪನಿಯ ಈ ಪಾಲು ಶೇ 23ರಷ್ಟಿತ್ತು. 'ಐಫೋನ್ 16' ಮಾರಾಟದಲ್ಲಿನ ಯಶಸ್ಸು, ಫೋನ್ ಖರೀದಿಗೆ ಕಂಪನಿ ನೀಡುವ ಹಣಕಾಸಿನ ನೆರವು, ಕೊಡುಗೆಗಳು ಮಾರುಕಟ್ಟೆ ಪಾಲು ಹೆಚ್ಚಳಕ್ಕೆ ಕಾರಣವಾಗಿವೆ ಎಂದು ತಿಳಿಸಿದೆ.

ಗ್ರಾಹಕರು ಉನ್ನತ ಶ್ರೇಣಿಯ (ಪ್ರೀಮಿಯಂ) ಫೋನ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇದು ಆ್ಯಪಲ್ ಸ್ಮಾರ್ಟ್‌ಫೋನ್‌ಗಳ ಮಾರಾಟ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

ಜಗತ್ತಿನಲ್ಲಿ ಭಾರತವು ಎರಡನೇ ಅತಿದೊಡ್ಡ ಸ್ಮಾರ್ಟ್‌ಫೋನ್ ಮಾರುಕಟ್ಟೆ ಆಗಿದ್ದು, ದೇಶದ ಖರೀದಿದಾರರು ಹೆಚ್ಚು ದುಬಾರಿ ಮಾದರಿಯ ಮೊಬೈಲ್‌ಗಳನ್ನು ಖರೀದಿಸಲು ಮುಂದಾಗುತ್ತಿದ್ದಾರೆ.

ಕಳೆದ ವರ್ಷ ರಿಟೇಲ್ ಮಾರುಕಟ್ಟೆಯಲ್ಲಿ ಮಾರಾಟವಾದ ಒಟ್ಟು ಸ್ಮಾರ್ಟ್‌ಫೋನ್‌ಗಳ ಪೈಕಿ ಶೇ 40ರಷ್ಟಕ್ಕೆ ಹಣಕಾಸು ನೆರವು ಒದಗಿಸಲಾಗಿದೆ. ₹30 ಸಾವಿರಕ್ಕಿಂತ ಹೆಚ್ಚಿನ ಬೆಲೆಯ ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗದಲ್ಲಿ, ಮೂರನೇ ಎರಡರಷ್ಟು ಖರೀದಿಗಳಿಗೆ ಹಣಕಾಸಿನ ನೆರವು ಒದಗಿಸಲಾಗಿದೆ. ಇದು ಗ್ರಾಹಕರು ಉನ್ನತ ದರ್ಜೆಯ ಸ್ಮಾರ್ಟ್‌ಫೋನ್ ಖರೀದಿಸುವ ಸಂದರ್ಭದಲ್ಲಿ ಇಎಂಐ ಆಯ್ಕೆ ಹೆಚ್ಚುತ್ತಿರುವುದನ್ನು ತೋರಿಸುತ್ತದೆ ಎಂದು ಹೇಳಿದೆ.

ಸ್ಯಾಮ್ಸಂಗ್ ಮತ್ತು ಮೋಟೊರೊಲಾ ಸಹ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಹೊಂದಿವೆ ಎಂದು ತಿಳಿಸಿದೆ.

ಚಿನ್ನದ ದರ ₹12,800, ಬೆಳ್ಳಿ ₹52 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಭಾರಿ ಇಳಿಕೆ ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹52 ಸಾವಿರ (ಶೇ 17ರಷ್ಟು) ಕಡಿಮೆಯಾಗಿ, ₹2.60 ಲಕ್ಷಕ್ಕೆ ಇಳಿದಿದೆ.



10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹12,800 (ಶೇ 7.73ರಷ್ಟು) ಇಳಿಕೆಯಾಗಿ, ₹1,52,700ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ಮೂರು ವಹಿವಾಟಿನ ದಿನಗಳಲ್ಲಿ ಬೆಳ್ಳಿ ದರದಲ್ಲಿ ₹1,44,500 (ಶೇ 36ರಷ್ಟು) ಇಳಿಕೆ ಆಗಿದೆ. ಚಿನ್ನದ ಬೆಲೆಯು ₹30,300 (ಶೇ 17ರಷ್ಟು) ಕಡಿಮೆ ಆಗಿದೆ.

ಜನವರಿ 29ರಂದು ಬೆಳ್ಳಿ ದರವು ₹4,04,500 ಮತ್ತು ಚಿನ್ನದ ದರವು ₹1.83 ಲಕ್ಷಕ್ಕೆ ಮುಟ್ಟಿತ್ತು. ಇದು ಚಿನ್ನ ಮತ್ತು ಬೆಳ್ಳಿ ಬೆಲೆಯ ಇದುವರೆಗಿನ ಗರಿಷ್ಠ ಮಟ್ಟ. ಲಾಭದ ಗಳಿಕೆಗಾಗಿ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ಅಮೂಲ್ಯ ಲೋಹಗಳ ಬೆಲೆ ಇಳಿಕೆ ಆಗಿದೆ ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-22467
ತಿಪಟೂರು	₹29000-30800

ಮೇ 31ರವರೆಗೆ ರೇಡಾರ್ ಸ್ಕ್ಯಾನರ್ ಬಳಸಿ ವೈಮಾನಿಕ ಸಮೀಕ್ಷೆ

ಗುಡಿಬಂಡೆ ಗುಡ್ಡಗಳಲ್ಲಿ ಚಿನ್ನದ ನಿಕ್ಷೇಪ?

• ಡಿ.ಎಂ. ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯ ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳ ಬೆಟ್ಟ ಗುಡ್ಡಗಳಲ್ಲಿ ಚಿನ್ನದ ನಿಕ್ಷೇಪಗಳಿಗಾಗಿ ಮೂರು ದಿನಗಳಿಂದ ವೈಮಾನಿಕ ಸಮೀಕ್ಷೆ ನಡೆಸಲಾಗುತ್ತಿದೆ.

ಗುಡಿಬಂಡೆ ತಾಲ್ಲೂಕು ಬೀಚಗಾನಹಳ್ಳಿಯನ್ನು ಕೇಂದ್ರವಾಗಿಸಿಕೊಂಡು ಕೇಂದ್ರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ (ಜಿಎಸ್‌ಐ) ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ಸಮೀಕ್ಷೆ ನಡೆಸುತ್ತಿದ್ದಾರೆ.

ಬಾಗೇಪಲ್ಲಿಯಿಂದ 60 ಕಿ.ಮೀ ದೂರದಲ್ಲಿ, ನೆರೆಯ ಆಂಧ್ರದ ಕದರಿ ಬಳಿ ಚಿನ್ನದ ನಿಕ್ಷೇಪಗಳು ಪತ್ತೆಯಾಗಿವೆ. ಹಾಗಾಗಿ ಇಲ್ಲಿಯೂ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಜಿಎಸ್‌ಐ ತಂಡ ಸಮೀಕ್ಷೆ ಪೂರ್ಣಗೊಳಿಸಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಪ್ರವೇಶಿಸಿದೆ. ಮೇ 31ರವರೆಗೆ ಜಿಲ್ಲೆಯಲ್ಲಿ ಈ ವೈಮಾನಿಕ ಸಮೀಕ್ಷೆ ನಡೆಯಲಿದೆ. ರೇಡಾರ್ ಸ್ಕ್ಯಾನರ್ ಬಳಸಿ ಸಮೀಕ್ಷೆ ನಡೆಯುತ್ತಿದೆ.

ಗುಡಿಬಂಡೆ ತಾಲ್ಲೂಕಿನ ತಿರುಮಣಿ ಬಳಿ ಆದರ್ಶ ಶಾಲೆ ಆವರಣದಲ್ಲಿ ಹೆಲಿಪ್ಯಾಡ್ ನಿರ್ಮಿಸಲಾಗಿದೆ. ನಿತ್ಯ ಆರು ತಾಸು ವೈಮಾನಿಕ ಸಮೀಕ್ಷೆ ನಡೆಸಲಾಗುತ್ತಿದೆ. ಇಬ್ಬರು ಪೈಲೆಟ್ ಸೇರಿದಂತೆ 15 ಸಿಬ್ಬಂದಿ ತಂಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದೆ.

'2019–20ರಲ್ಲಿ ಕೇಂದ್ರ ಗಣಿ ಮತ್ತು ಭೂ ವಿಜ್ಞಾನ ಸಂಸ್ಥೆ ಇಲ್ಲಿ ಚಿನ್ನ, ಅಲ್ಯುಮಿನಿಯಂ, ತಾಮ್ರ ಸೇರಿದಂತೆ ಕೆಲವು ಖನಿಜ ನಿಕ್ಷೇಪಗಳ ಸರ್ವೆ ನಡೆಸಿತ್ತು. ಅದರ ಮುಂದುವರಿದ ಭಾಗವಾಗಿ ಈಗ ಆಳವಾದ ಮತ್ತು ವೈಜ್ಞಾನಿಕ ರೀತಿಯಲ್ಲಿ ಸರ್ವೆ ನಡೆಯುತ್ತಿದೆ' ಎಂದು ಜಿಲ್ಲಾಧಿಕಾರಿ ಜಿ.ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.



ಗುಡಿಬಂಡೆ ತಾಲ್ಲೂಕಿನ ಬೀಚಗಾನಹಳ್ಳಿ ಬಳಿ ನಡೆಯುತ್ತಿರುವ ವೈಮಾನಿಕ ಸಮೀಕ್ಷೆ

ಚಿಂತಾಮಣಿಯಲ್ಲಿ ಚಿನ್ನ?

ಚಿಂತಾಮಣಿ ಭಾಗದಲ್ಲೂ ಖನಿಜ ನಿಕ್ಷೇಪಗಳು ಇದ್ದು, ಈ ಭಾಗದಲ್ಲಿ ಪ್ರತ್ಯೇಕವಾಗಿ ವೈಮಾನಿಕ ಸಮೀಕ್ಷೆ ನಡೆಯುವ ಸಾಧ್ಯತೆ ಇದೆ.

'ಈಗ ಗುಡಿಬಂಡೆ ಭಾಗದಲ್ಲಿ ಸಮೀಕ್ಷೆ, ಹೆಲಿಪ್ಯಾಡ್ ನಿರ್ಮಿಸಲು ಅನುಮತಿ ನೀಡಲಾಗಿದೆ. ಮುಂದೆ ಚಿಂತಾಮಣಿ ಭಾಗದಲ್ಲಿ ಸಮೀಕ್ಷೆಗೆ ಅನುಮತಿ ಕೋರುವ ಸಾಧ್ಯತೆ ಇದೆ' ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸುತ್ತವೆ.

ಖನಿಜ ನಿಕ್ಷೇಪಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಎಲ್ಲ ತಾಲ್ಲೂಕಿನಲ್ಲಿ ಸರ್ವೆ ನಡೆಯಲಿದೆ. ಜನರು ಆಂತಕಕ್ಕೆ ಒಳಗಾಗಬೇಕಾಗಿಲ್ಲ. ವೈಜ್ಞಾನಿಕ ಪರಿಶೀಲನೆ ನಂತರ ನಿಖರ ಮಾಹಿತಿ ಸಿಗಲಿದೆ

ಜಿ.ಪ್ರಭು, ಜಿಲ್ಲಾಧಿಕಾರಿ



ಎಲ್‌ಐಸಿ: ಷೇರು ಮಾರಾಟಕ್ಕೆ ಚಿಂತನೆ

ನವದೆಹಲಿ (ಪಿಟಿಐ): 'ಮುಂದಿನ ಆರ್ಥಿಕ ವರ್ಷದಲ್ಲಿ ಹೊಸದಾಗಿ ಷೇರುಗಳನ್ನು ಬಿಡುಗಡೆ (ಎಫ್‌ಪಿಒ) ಮಾಡುವ ಮೂಲಕ ಭಾರತೀಯ ಜೀವ ವಿಮಾ ನಿಗಮದಲ್ಲಿನ (ಎಲ್‌ಐಸಿ) ಶೇ 6.5ರಷ್ಟು ಷೇರನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ' ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ಹೇಳಿದ್ದಾರೆ.

ಪ್ರಸ್ತುತ ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ಶೇ 96.5ರಷ್ಟು ಷೇರನ್ನು ಹೊಂದಿದೆ. 2022ರ ಮೇ ತಿಂಗಳಿನಲ್ಲಿ ಸಾರ್ವಜನಿಕರಿಗೆ ಷೇರು ಮಾರಾಟ ಪ್ರಕ್ರಿಯೆ (ಐಪಿಒ) ಮೂಲಕ ಶೇ 3.5ರಷ್ಟು ಷೇರುಗಳನ್ನು ಮಾರಾಟ ಮಾಡಲಾಗಿತ್ತು. ಪ್ರತಿ ಷೇರಿಗೆ ₹902ರಿಂದ ₹949 ಬೆಲೆ ನಿಗದಿಪಡಿಸಲಾಗಿತ್ತು. ಈ ಷೇರು ಮಾರಾಟದಿಂದ ಸರ್ಕಾರ ₹21 ಸಾವಿರ ಕೋಟಿ ಸಂಗ್ರಹಿಸಿತ್ತು.

ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ತನ್ನ ಷೇರಿನ ಪಾಲನ್ನು ತಗ್ಗಿಸಲು ಆಲೋಚನೆ ನಡೆಸಿದೆ. ಎಲ್‌ಐಸಿಯ ಎಫ್‌ಪಿಒ ಪ್ರಕ್ರಿಯೆ ನಿಧಾನವಾಗಿ ಮಾಡಬೇಕಿದೆ. ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಗೆ (ಡಿಐಪಿಎಎಂ) ಎಲ್‌ಐಸಿಯಲ್ಲಿನ ಷೇರನ್ನು ಕಡಿಮೆ ಮಾಡುವಂತೆ ಸೂಚಿಸಲಾಗಿದೆ.

ಎಲ್ಲ ಅನುಮೋದನೆ ದೊರೆತರೆ ಮತ್ತು ಮಾರುಕಟ್ಟೆ ಪರಿಸ್ಥಿತಿ ಅನುಕೂಲಕರವಾಗಿದ್ದರೆ ಎಲ್‌ಐಸಿಯ ಎಫ್‌ಪಿಒ ಮುಂದಿನ ಆರ್ಥಿಕ ವರ್ಷದಲ್ಲಿ ಬರುವ ನಿರೀಕ್ಷೆ ಇದೆ.

2027ರ ಮೇ ವೇಳೆಗೆ ಎಲ್‌ಐಸಿಯಲ್ಲಿ ಸಾರ್ವಜನಿಕರ ಷೇರುಪಾಲು ಶೇ 10ರಷ್ಟು ಇರಬೇಕಾಗಿದೆ. ಹೀಗಾಗಿ ಸರ್ಕಾರವು ಆ ಸಮಯಕ್ಕೆ ಮೊದಲು ಶೇ 6.5ರಷ್ಟು ಷೇರುಗಳನ್ನು ಮಾರಾಟ ಮಾಡಬೇಕಿದೆ. ಷೇರುಗಳ ಮಾರಾಟದ ಪ್ರಮಾಣ, ಬೆಲೆ ಮತ್ತು ಸಮಯವನ್ನು ಸರಿಯಾದ ಸಮಯದಲ್ಲಿ ನಿರ್ಧರಿಸಲಾಗುತ್ತದೆ ಎಂದು ನಾಗರಾಜು ತಿಳಿಸಿದ್ದಾರೆ.

ಸರ್ಕಾರಿ ಬ್ಯಾಂಕ್‌ಗಳಲ್ಲಿ ಶೇ 49ರಷ್ಟು ಎಫ್‌ಡಿಐ ಬಗ್ಗೆ ಪರಿಶೀಲನೆ'

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣವನ್ನು ಶೇಕಡ 49ಕ್ಕೆ ಹೆಚ್ಚಿಸುವ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸುತ್ತಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ಹೇಳಿದ್ದಾರೆ.

ಈಗಿನ ನಿಯಮಗಳ ಪ್ರಕಾರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಶೇ 20ರ ಮಿತಿ ಇದೆ. 'ಎಫ್‌ಡಿಐ ಮಿತಿಯನ್ನು ಶೇ 49ಕ್ಕೆ ಹೆಚ್ಚಿಸುವುದರ ಬಗ್ಗೆ ಬೇರೆ ಬೇರೆ ಸಚಿವಾಲಯಗಳ ನಡುವೆ ಸಮಾಲೋಚನೆ ನಡೆಯುತ್ತಿದೆ' ಎಂದು ನಾಗರಾಜು ಹೇಳಿದ್ದಾರೆ.

ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 74ರಷ್ಟು ಎಫ್‌ಡಿಐಗೆ ಅವಕಾಶ ಕಲ್ಪಿಸಲಾಗಿದೆ. ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 49ರಷ್ಟು ಎಫ್‌ಡಿಐಗೆ ಸರ್ಕಾರದ ಅನುಮತಿಯ ಅಗತ್ಯ ಇಲ್ಲ. ಅದಕ್ಕಿಂತ ಹೆಚ್ಚಿನ ಪ್ರಮಾಣದ ಎಫ್‌ಡಿಐಗೆ ಸರ್ಕಾರದಿಂದ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ.

ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳಲ್ಲಿ ಕೇಂದ್ರ ಸರ್ಕಾರದ ಷೇರುಗಳ ಸಂಖ್ಯೆಯು 2020ರ ನಂತರದಲ್ಲಿ ಕಡಿಮೆ ಆಗಿಲ್ಲ. ಆದರೆ ಕೆಲವು ಬ್ಯಾಂಕ್‌ಗಳು ಹೊಸದಾಗಿ ಷೇರುಗಳನ್ನು ವಿತರಣೆ ಮಾಡಿ ಬಂಡವಾಳ ಸಂಗ್ರಹಿಸಿರುವ ಕಾರಣದಿಂದಾಗಿ ಆ ಬ್ಯಾಂಕ್‌ಗಳಲ್ಲಿ ಸರ್ಕಾರದ ಷೇರುಗಳ ಪ್ರಮಾಣ ಕಡಿಮೆ ಆಗಿದೆ.

ಷೇರುಪೇಟೆ ಸೂಚ್ಯಂಕಗಳ ಏರಿಕೆ

ಮುಂಬೈ (ಪಿಟಿಐ): ಬಜೆಟ್ ಮಂಡನೆಯ ದಿನ ಭಾರಿ ಕುಸಿತ ದಾಖಲಿಸಿದ್ದ ಮುಂಬೈ ಷೇರುಪೇಟೆ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕಗಳು ಸೋಮವಾರ ಗಣನೀಯ ಪ್ರಮಾಣದ ಏರಿಕೆ ಕಂಡವು.

ಹೂಡಿಕೆದಾರರು ಬ್ಲ್ಯೂಚಿಪ್ ವರ್ಗದ ತೈಲ ಮತ್ತು ಅನಿಲ, ಬ್ಯಾಂಕಿಂಗ್ ಹಾಗೂ ಆಟೊಮೊಬೈಲ್ ಕಂಪನಿಗಳ ಷೇರುಗಳನ್ನು ಖರೀದಿಸಿದರು. ಮುಂಬೈ ಷೇರುಪೇಟೆಯ ಸೆನ್ಸೆಕ್ಸ್ ಸೋಮವಾರ 943 ಅಂಶ, ರಾಷ್ಟ್ರೀಯ ಷೇರುಪೇಟೆಯ ನಿಫ್ಟಿ 262 ಅಂಶ ಏರಿಕೆ ಕಂಡಿದೆ.

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	53600-54000
ಬೆಟ್ಟೆ	37400-37800
ಕೆಂಪುಗೋಟು	30600-31000
ರಾಶಿ	53100-53500
ಕುಮಟಾ	
ಚಾಲಿ	48569-50259
ಚಿಪ್ಪು	31099-38999
ಕೋಕ	15089-35099
ಫ್ಯಾಕ್ಟರಿ	11069-26549
ಹೊಸಚಾಲಿ	42029-46811
ಪುತ್ತೂರು	
ಕೋಕ	28000-36500
ಹೊಸತು	26000-46000
ಸಾಗರ	
ಬಿಳಿಗೋಟು	24129-35011
ಚಾಲಿ	35899-45270
ಕೋಕ	23989-32699
ಕೆಂಪುಗೋಟು	29299-42170
ರಾಶಿ	43399-56168
ಸಿಪ್ಪೆಗೋಟು	8349-23539
ಶಿವಮೊಗ್ಗ	
ಬೆಟ್ಟೆ	55550-66300
ಗೊರಬಲು	19009-43701
ರಾಶಿ	44444-56559
ಸರಕು	61989-99800
ಸಿದ್ದಾಪುರ	
ಬಿಳಿಗೋಟು	27099-39109
ಚಾಲಿ	41899-49499
ಕೋಕ	21999-31899
ಹೊಸಚಾಲಿ	36399-45099
ಕೆಂಪುಗೋಟು	29469-37019
ರಾಶಿ	47099-55399
ತಟ್ಟಿಬೆಟ್ಟೆ	38899-48099
ಶಿರಸಿ	
ಬೆಟ್ಟೆ	40699-53649
ಬಿಳಿಗೋಟು	26600-42099
ಚಾಲಿ	40699-49239
ಕೆಂಪುಗೋಟು	26899-41800
ರಾಶಿ	51569-58191
ಯಲ್ಲಾಪುರ	
ಆಪಿ	60930-65675
ಬಿಳಿಗೋಟು	16099-35005
ಕೋಕ	14109-31299
ಹಳೆಚಾಲಿ	39975-50471
ಹೊಸಚಾಲಿ	39869-47099
ಕೆಂಪುಗೋಟು	20899-40499
ರಾಶಿ	49019-59350
ತಟ್ಟಿಬೆಟ್ಟೆ	37709-52799

'ಧೈರ್ಯಸ್ಥ ಬಹುಮತ ಸಾಧಿಸಬಲ್ಲ'

ಒಂದನೇ ಪುಟದಿಂದ...

ಅಶೋಕ ಮಾತಿಗೆ ಕೆರಳಿದ ಲಾಡ್, 'ಬೆಳಿಗ್ಗೆ ಹೋಗುವ, ಸಂಜೆ ಹೋಗುವ ಅಗತ್ಯ ನನಗೆ ಇಲ್ಲ. ನೀವು ಶಾಸಕರನ್ನು ಖರೀದಿಸಲು ಹೋಗಿದ್ದವರು. ಅವರ ಕಾಲಿಗೆ ಬಿದ್ದು ಖರೀದಿ ಮಾಡಿದವರು. ನೀವು ಈ ಥರ ಮಾತು ಆಡಬಾರದು' ಎಂದರು.

ಸ್ಪಷ್ಟನೆ ನೀಡಿದ ಡಿ.ಕೆ. ಶಿವಕುಮಾರ್, 'ಅಶೋಕ ಅವರೇ, ನೀವು ಹಿರಿಯ ರಾಜಕಾರಣಿ. ಯಾರು ಏನಾದರೂ ಮಾತನಾಡಲಿ, ನಾನು ತಲೆಕೆಡಿಸಿಕೊಳ್ಳು-ವುದಿಲ್ಲ. ನಾನು ವಿದ್ಯಾರ್ಥಿ ನಾಯಕನಿಂದ ಬೆಳೆದು ಬಂದವನು. ನನ್ನದೇ ಆದ ಮೌಲ್ಯಗಳನ್ನು ಪಾಲಿಸಿಕೊಂಡು, ಉಳಿಸಿಕೊಂಡು ಬಂದಿದ್ದೇನೆ. ರಾಜಕೀಯದಲ್ಲಿ ನಾನು ಎಂತೆಂಥವರ ಏಳುಬೀಳು ನೋಡಿದ್ದೇನೆ. ನಾನು ಬಿದ್ದಿದ್ದೇನೆ, ಎದ್ದಿದ್ದೇನೆ, ಜೈಲುವಾಸ ಎಲ್ಲವನ್ನೂ ಅನುಭವಿಸಿದ್ದೇನೆ. ಇನ್ನು ಒಂದು ತಿಂಗಳು ಕಳೆದರೆ ನಾನು ಪಕ್ಷದ ಅಧ್ಯಕ್ಷನಾಗಿ ಆರು ವರ್ಷ ಪೂರ್ಣಗೊಳ್ಳುತ್ತದೆ' ಎಂದರು.

'ಹಾದಿನೂ ತಪ್ಪಿಲ್ಲ, ಅಸಹಾಯಕನೂ ಅಲ್ಲ'

ಒಂದನೇ ಪುಟದಿಂದ...

'ನಾವು ಜನಪರ, ಸಮಾಜಮುಖಿ ಆಡಳಿತ ನೀಡುತ್ತಿದ್ದು, ಕರ್ನಾಟಕದ್ದು ಅಭಿವೃದ್ಧಿ ಮಾದರಿ ಸರ್ಕಾರವಾಗಿದೆ. ಈ ಅಭಿವೃದ್ಧಿ ಮಾದರಿಯನ್ನು 21ಕ್ಕಿಂತಲೂ ಹೆಚ್ಚು ಕೇಂದ್ರ ಸಚಿವರು ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಶ್ಲಾಘಿಸಿದ್ದಾರೆ. ಸರ್ಕಾರದ ಭಾಷಣವನ್ನು ರಾಜ್ಯಪಾಲರು, ಓದಿದ್ದರೆ, ನಮ್ಮ ಜನಪರ ಆಡಳಿತದ ಬಗ್ಗೆ ಜನರಿಗೆ ಅರಿವು ನೀಡಿದಂತಾಗುತ್ತಿತ್ತು' ಎಂದು ಮುಖ್ಯಮಂತ್ರಿ ತಿಳಿಸಿದರು.

'2013-2018ರವರೆಗಿನ ಸಿದ್ದರಾಮಯ್ಯ ಬೇರೆ, ಈಗಿನವರೇ ಬೇರೆ ಅಂದಿದ್ದಾರೆ' ಎಂದು ಕೆಲವರು ಹೇಳಿದ್ದಾರೆ. ಆದರೆ, ಸಿದ್ದರಾಮಯ್ಯ ಬದಲಾವಣೆ ಆಗಲು ಸಾಧ್ಯನೇ ಇಲ್ಲ' ಎಂದು ಮುಖ್ಯಮಂತ್ರಿ ಹೇಳಿದರು.

'ಸಿದ್ದರಾಮಯ್ಯ ಈಗ ಮೃದು ಆಗಿದ್ದಾರೆ, ಸಂವೇದನೆ ಇಲ್ಲ ಅಂದಿದ್ದಾರೆ. ನಿಮ್ಮ (ಬಿಜೆಪಿ) ಸರ್ಕಾರದ ವೇಳೆ ಆಕ್ಸಿಜನ್ ಇಲ್ಲದೇ ನೂರಾರು ಜನ ಸತ್ತರು ಆಗ ಸಂವೇದನೆ ಇತ್ತಾ? ನೀವು ಕೃಷಿ ಸಾಲ ನಿಲ್ಲಿಸಿದಿರಿ. ಕೃಷಿ ಭಾಗ್ಯ ನಿಲ್ಲಿಸಿದಿರಿ. ಅನುಗ್ರಹ ಕಾರ್ಯಕ್ರಮವನ್ನೂ ನಿಲ್ಲಿಸಿದಿರಿ. ರೈತರ ಬಗ್ಗೆ ನಿಮಗೆ ಸಂವೇದನೆ ಇರಲಿಲ್ಲ' ಎಂದು ವಿರೋಧ ಪಕ್ಷದ ಮೇಲೆ ಹರಿಹಾಯ್ದರು.

'ಮುಧೋಳದಲ್ಲಿ ಕಬ್ಬು ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದಾಗ ನಾವು ಗೋಲಿಬಾರ್ ಮಾಡಲಿಲ್ಲ. ಅದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದೆವು. ಕಬ್ಬು ಬೆಳಗಾರರ ಕಷ್ಟಕ್ಕೆ ಸ್ಪಂದಿಸಿ ಸಂವೇದನೆ ತೋರಿದೆವು. ಮೆಕ್ಕೆಜೋಳ ಬೆಳೆಗಾರರಿಗೆ ಬೆಂಬಲ ಬೆಲೆ ಕೊಟ್ಟೆವು. ಇದು ಸ್ಪಂದನೆ ಅಲ್ಲವೇ. ಸಂವೇದನೆ ಬಗ್ಗೆ ಮಾತನಾಡುವವರಿಗೆ ಸಂವೇದನೆ ಬಗ್ಗೆ ಗೊತ್ತಿರಬೇಕಲ್ಲವೇ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

ಭಾರತ ಮೂಲದ ವಿಜ್ಞಾನಿಗೆ ಕ್ರಾಫೂರ್ಡ್ ಪ್ರಶಸ್ತಿ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಹವಾಮಾನ ವಿಜ್ಞಾನಿ ವೀರಭದ್ರನ್ ರಾಮನಾಥನ್ (82) ಅವರಿಗೆ ಭೂ ವಿಜ್ಞಾನ ಕ್ಷೇತ್ರದಲ್ಲಿನ ಕೊಡುಗೆಗಾಗಿ 2026ನೇ ಸಾಲಿನ ಪ್ರತಿಷ್ಠಿತ ಕ್ರಾಫೂರ್ಡ್ ಪ್ರಶಸ್ತಿ ಸಂದಿದೆ.



ವೀರಭದ್ರನ್ ರಾಮನಾಥನ್

ಅಮೆರಿಕದ ರಾಯಲ್ ಸ್ವೀಡಿಶ್ ಅಕಾಡೆಮಿ ನೀಡುವ ಈ ಪ್ರಶಸ್ತಿಗೆ 'ಭೂ ವಿಜ್ಞಾನದ ನೊಬೆಲ್' ಪ್ರಶಸ್ತಿ ಎಂಬ ಖ್ಯಾತಿ ಇದೆ.

ಜಾಗತಿಕ ತಾಪಮಾನ ಏರಿಕೆಯನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಅತಿ ಮಾಲಿನ್ಯಕಾರಕಗಳು ಹಾಗೂ ವಾತಾವರಣದ ಕಂದು ಮೋಡಗಳ ಬಗ್ಗೆ ದಶಕಗಳಿಂದ ನಡೆಸಿದ ಸಂಶೋಧನೆಗಾಗಿ ರಾಮನಾಥನ್ ಅವರಿಗೆ ಈ ಪ್ರಶಸ್ತಿ ಸಂದಿದೆ. ಇದು 9 ಲಕ್ಷ ಡಾಲರ್ (₹8.24 ಕೋಟಿ) ನಗದು ಬಹುಮಾನವನ್ನೂ ಒಳಗೊಂಡಿದೆ.

1975ರಲ್ಲಿ ನಾಸಾದಲ್ಲಿ ಸೇವೆ ಸಲ್ಲಿಸುತ್ತಿದ್ದ ವೇಳೆ, ರೆಫ್ರಿಜೆರೇಟರ್‌ಗಳಲ್ಲಿ ಬಳಸುವ ಕ್ಲೋರೊಫ್ಲೋರೊ ಕಾರ್ಬನ್ ಅಂಶವು ಕಾರ್ಬನ್ ಡೈಆಕ್ಸೈಡ್ ಗಿಂತಲೂ 10 ಸಾವಿರ ಪಟ್ಟು ಹೆಚ್ಚು ತಾಪಮಾನ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ಸಂಶೋಧಿಸುವ ಮೂಲಕ ರಾಮನಾಥನ್ ಜಗತ್ತಿನ ಗಮನ ಸೆಳೆದಿದ್ದರು.

ಸುಕೋ ಬ್ಯಾಂಕ್: ಮಸ್ಕಿ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಸುಕೋ ಸೌಹಾರ್ದ ಸಹಕಾರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಮೋಹಿತ್ ಮಸ್ಕಿ ಅವರು ಮೂರನೇ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಳ್ಳಾರಿಯ ಮುಖ್ಯ ಕಚೇರಿಯಲ್ಲಿ ಸೋಮವಾರ ನಡೆದ ಆಡಳಿತ ಮಂಡಳಿ ಸದಸ್ಯರ ಸಭೆಯಲ್ಲಿ ಮೋಹಿತ್ ಮಸ್ಕಿ ಅವರನ್ನು ಅಧ್ಯಕ್ಷ ಹಾಗೂ ಮುರಳೀಧರ ರೆಡ್ಡಿ ಪಿ. ಅವರನ್ನು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ವ್ಯವಸ್ಥಾಪಕ ನಿರ್ದೇಶಕ ಜಿ.ಎಸ್.ರವಿ ಸುಧಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮೋಹಿತ್ ಮಸ್ಕಿ

ಮಾನಸಿಕ ಒತ್ತಡ: ಮನೋವೈದ್ಯರ ಭೇಟಿ ಮಾಡಿದ್ದ ಉದ್ಯಮಿ ಸಿ.ಜೆ.ರಾಯ್?

ವ್ಯವಹಾರ, ಐ.ಟಿ ಆಯಾಮದಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿ 'ಕಾನ್ಫಿಡೆಂಟ್ ಗ್ರೂಪ್'ನ ಮುಖ್ಯಸ್ಥ ಸಿ.ಜೆ. ರಾಯ್ ಅವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ರಿಯಲ್ ಎಸ್ಟೇಟ್ ವ್ಯವಹಾರ, ವೈಯಕ್ತಿಕ ಜೀವನ ಹಾಗೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿಯನ್ನು ಆಧರಿಸಿ ಮೂರು ಆಯಾಮದಲ್ಲೂ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪೊಲೀಸರು ತನಿಖೆ ಆರಂಭಿಸಿದ್ದಾರೆ.



ರಾಯ್

ಯಾವ ವಿಚಾರಕ್ಕೆ ಸಂಬಂಧಿಸಿದಂತೆ 'ಕಾನ್ಫಿಡೆಂಟ್ ಗ್ರೂಪ್' ಕಚೇರಿಯ ಮೇಲೆ ದಾಳಿ ನಡೆಸಿ ರಾಯ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು ಎಂದು ಐ.ಟಿ ಇಲಾಖೆಯ ಕೇರಳದ ಅಧಿಕಾರಿಗಳಾದ ಕೃಷ್ಣ ಪ್ರಸಾದ್ ಹಾಗೂ ನಿತಿನ್ ಅವರಿಂದ ಮಾಹಿತಿ ಪಡೆದುಕೊಂಡಿರುವ ಎಸ್‌ಐಟಿ ಪೊಲೀಸರು, ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ್ದಾರೆ.

ದಾಳಿಗೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನೂ ಎಸ್‌ಐಟಿ ಎದುರು ತೋರಿಸಿರುವ ಐ.ಟಿ ಅಧಿಕಾರಿಗಳು, 'ಆ ದಾಖಲೆಯ ಆಧಾರದಲ್ಲಿ ಹೇಳಿಕೆ ಪಡೆಯಲು ಬೆಂಗಳೂರಿಗೆ ಬಂದಿದ್ದೆವು' ಎಂಬುದಾಗಿ ಹೇಳಿಕೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರಕರಣದ ತನಿಖೆಗೆ ಪಶ್ಚಿಮ ವಲಯದ ಜಂಟಿ ಪೊಲೀಸ್ ಕಮಿಷನರ್ ಸಿ.ವಂಶಿಕೃಷ್ಣ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿದೆ. ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಅವರು ತನಿಖಾಧಿಕಾರಿ ಯಾಗಿ ನೇಮಕಗೊಂಡಿದ್ದಾರೆ. ರಾಯ್ ಅವರ ಆತ್ಮಹತ್ಯೆಗೆ ಕಾರಣ ನಿಗೂಢವಾಗಿದ್ದು, ಬೇರೆ ಬೇರೆ ಆಯಾಮದಲ್ಲಿ ಎಸ್‌ಐಟಿ ತನಿಖೆ ನಡೆಸುತ್ತಿದೆ ಎಂದು ಹೇಳಿವೆ.

'2026ರ ಡೈರಿಯೊಂದು ಕಚೇರಿಯಲ್ಲಿತ್ತು. ಅದನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಆ ಡೈರಿಯಲ್ಲಿ ಉದ್ಯಮಕ್ಕೆ ಸಂಬಂಧಿಸಿದಂತೆ ಕೆಲವರ ಹೆಸರುಗಳನ್ನು ರಾಯ್ ಅವರು ಬರೆದಿದ್ದರು. ಕಳೆದ ವರ್ಷದ ಡೈರಿ ಸಿಕ್ಕಿಲ್ಲ' ಎಂದು ಮೂಲಗಳು ಹೇಳಿವೆ.

'ರಾಯ್ ಅವರ ಸಹೋದರ ಸಿ.ಜೆ. ಬಾಬು ಹಾಗೂ ರಾಯ್ ಪುತ್ರನಿಂದ ಪ್ರಾಥಮಿಕ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಪತ್ನಿ ಹಾಗೂ ಪುತ್ರನ ಹೇಳಿಕೆಯನ್ನು ಮತ್ತೊಮ್ಮೆ ಪಡೆದುಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

'ಡಿ.3ರಂದು ಐ.ಟಿ ದಾಳಿಯಾದ ಮೇಲೆ ರಾಯ್ ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಒತ್ತಡ ನಿವಾರಣೆಗಾಗಿ ಮನೋವೈದ್ಯರನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದರು. ಜಯನಗರದ 8ನೇ ಬ್ಲಾಕ್‌ನಲ್ಲಿ ಇರುವ ಮನೋವೈದ್ಯಕೀಯ ಆಸ್ಪತ್ರೆಯ ಮನೋವೈದ್ಯರನ್ನು ಆತ್ಮಹತ್ಯೆ ಮಾಡಿಕೊಳ್ಳುವ ಎರಡು ದಿನ ಮೊದಲು ರಾಯ್ ಭೇಟಿ ಮಾಡಿ ಚಿಕಿತ್ಸೆ, ಕೌನ್ಸೆಲಿಂಗ್ ಪಡೆದುಕೊಂಡಿ ದ್ದರು' ಎಂದು ಮೂಲಗಳು ಹೇಳಿವೆ.

ಸೌಂಡ್‌ಪ್ರೂಫ್ ರೂಂ

ಸಿ.ಜೆ.ರಾಯ್ ಅವರು ಲ್ಯಾಂಗ್‌ಫೋರ್ಡ್ ರಸ್ತೆಯ ತಮ್ಮ ಕಚೇರಿಯಲ್ಲಿ ಶುಕ್ರವಾರ ಮಧ್ಯಾಹ್ನ 3.15ರ ಸುಮಾರಿಗೆ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಕೃತ್ಯ ನಡೆದು 20 ನಿಮಿಷ ಕಳೆದಿದ್ದರೂ ಕಚೇರಿಯ ಸಿಬ್ಬಂದಿ ಹಾಗೂ ಕಚೇರಿಯಲ್ಲೇ ಇದ್ದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ವಿಷಯ ಗೊತ್ತಾಗಿರಲಿಲ್ಲ. ರಾಯ್ ಅವರು ತಮ್ಮ ಕ್ಯಾಬಿನ್‌ಗೆ 'ಸೌಂಡ್‌ಪ್ರೂಫ್ ರೂಂ' (ಶಬ್ದ ನಿರೋಧಕ ಕೊಠಡಿ) ವ್ಯವಸ್ಥೆ ಇತ್ತು. ಗುಂಡು ಹಾರಿಸಿಕೊಂಡಿದ್ದರೂ ಅದರ ಶಬ್ದ ಹೊರಕ್ಕೆ ಕೇಳಿಸಿರಲಿಲ್ಲ. ಸ್ವಲ್ಪ ಸಮಯದ ನಂತರ ವ್ಯವಸ್ಥಾಪಕ ನಿರ್ದೇಶಕ ಟಿ.ಎ.ಜೋಸೆಫ್ ಅವರು ಕ್ಯಾಬಿನ್ ಬಳಿಗೆ ತೆರಳಿ ಬಾಗಿಲು ತಟ್ಟಿದ್ದರು. ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಬಾಗಿಲು ಒಡೆದು ಪರಿಶೀಲಿಸಿದಾಗ ರಾಯ್ ಅವರು ಕುರ್ಚಿಯಲ್ಲಿ ಕುಳಿತ ಸ್ಥಿತಿಯಲ್ಲಿದ್ದರು ಎಂದು ಮೂಲಗಳು ಹೇಳಿವೆ.

ಐ.ಟಿ ಶೋಧಕ್ಕೆ ರಿಟ್ ಅರ್ಜಿ ವಾಪಸು ಪಡೆದಿದ್ದ ರಾಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತ್ಮಹತ್ಯೆಗೆ ಶರಣಾಗಿರುವ ಕಾನ್ಫಿಡೆಂಟ್ ಪ್ರಾಜೆಕ್ಟ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮುಖ್ಯಸ್ಥ ಸಿ.ಜೆ.ರಾಯ್ ತಮ್ಮ ಕಂಪನಿಗಳ ಶೋಧನೆ ಹಾಗೂ ಜಪ್ತಿಗೆ ಕೊಚ್ಚಿಯ ಆದಾಯ ತೆರಿಗೆ ಇಲಾಖೆ ಕಳೆದ ವರ್ಷ ಹೊರಡಿಸಿದ್ದ ಆದೇಶ ರದ್ದುಪಡಿಸುವಂತೆ ಕೋರಿ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ನಂತರ ಎರಡನೇ ದಿನದಲ್ಲಿ ಹಿಂಪಡೆದಿದ್ದರು.

ಕಾನ್ಫಿಡೆಂಟ್ ಪ್ರಾಜೆಕ್ಟ್ಸ್, ಕಾನ್ಫಿಡೆಂಟ್ ಏರ್‌ಲೈನ್ಸ್, ಕಾನ್ಫಿಡೆಂಟ್ ರೆಸಾರ್ಟ್ಸ್, ಕಾನ್ಫಿಡೆಂಟ್ ಎಂಟರ್‌ಟೈನ್‌ಮೆಂಟ್ ಸೇರಿದಂತೆ ಎಂಟು ಕಂಪನಿಗಳ ಶೋಧನೆ ಮತ್ತು ಜಪ್ತಿಗೆ ಕೇರಳದ ಕೊಚ್ಚಿಯಲ್ಲಿರುವ ಆದಾಯ ತೆರಿಗೆ ಇಲಾಖೆ ಕಚೇರಿಯ ಪ್ರಧಾನ ನಿರ್ದೇಶಕರು 2025ರ ನವೆಂಬರ್ 27ರಂದು ಆದೇಶ ಹೊರಡಿಸಿದ್ದರು. ಡಿಸೆಂಬರ್ 3ರಂದು ಪಂಚನಾಮೆ ನಡೆಸಿದ್ದರು.

'ಶೋಧನೆಯ ಆದೇಶ ಮತ್ತು ಪಂಚನಾಮೆಯನ್ನು ಅಕ್ರಮ ಎಂದು ಘೋಷಿಸಿ, ರದ್ದುಪಡಿಸಬೇಕು' ಎಂದು ಕೋರಿ ಎಂಟು ಕಂಪನಿಗಳು ಮತ್ತು ಸಿ.ಜೆ.ರಾಯ್ 2025ರ ಡಿಸೆಂಬರ್ 16ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ಡಿಸೆಂಬರ್ 18ರಂದು ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ಈ ವೇಳೆ ರಾಯ್ ಪರ ವಕೀಲರು ಹಾಜರಾಗಿ, ಅರ್ಜಿ ಹಿಂಪಡೆಯಲು ಮತ್ತು ನಂತರ ಪ್ರಶ್ನಿಸಲು ಅನುಮತಿ ನೀಡುವಂತೆ ಕೋರಿ ಮೆಮೊ ಸಲ್ಲಿಸಿದ್ದರು. ಇದನ್ನು ಮಾನ್ಯ ಮಾಡಿದ್ದ ನ್ಯಾಯಪೀಠ ಅರ್ಜಿ ಹಿಂಪಡೆಯಲು ಅರ್ಜಿದಾರರಿಗೆ ಅನುಮತಿ ನೀಡಿತ್ತು.

ಮಂಗಳವಾರ • ಫೆಬ್ರುವರಿ 3, 2026
ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಸ್ವಚ್ಛ, ಮುದವಾದ ಕಥೆ



ಹಳ್ಳಿಯ ಹಿನ್ನೆಲೆಯಲ್ಲಿ ಚಿತ್ರಿತವಾಗುವ ಸಿನಿಮಾಗಳ ಕಥೆ ಹಾಗೂ ಅದನ್ನು ಹೇಳುವ ರೀತಿ ಚೆನ್ನಾಗಿದ್ದರೆ ಹುಟ್ಟಿ ಬೆಳೆದ ಹಳ್ಳಿಯಲ್ಲೇ ನಡೆದ ಘಟನೆಯಂತೆ ಭಾಸವಾಗುತ್ತದೆ. 'ವಲವಾರ'ವೂ ಇದೇ ರೀತಿ ಇದೆ. ಹೀಗಾಗಿಯೇ ಈ ಕಥೆ ಎಲ್ಲಿ ನಡೆಯುತ್ತಿದೆ ಎನ್ನುವುದನ್ನು ನಿರ್ದೇಶಕರು ಹೇಳುವುದಿಲ್ಲ. ಇದರಿಂದಾಗಿ ತಮ್ಮದೇ ಹಳ್ಳಿಯ ಲೋಕಕ್ಕೆ ವೀಕ್ಷಕರು ಇಳಿಯುತ್ತಾರೆ.

ಮಲೆನಾಡಿನ ಒಂದು ಹಳ್ಳಿ. ಅಲ್ಲೊಂದು ಬಡ ಕುಟುಂಬ. 'ಕುಂಡೇಸಿ'(ವೇದಿಕ್) ಮತ್ತು 'ಕೋಸುಡಿ'(ಶಯನ್) ಎಂಬ ಅಡ್ಡಹೆಸರು ಇರುವ ಅಣ್ಣತಮ್ಮಂದಿರು. ಇವರ ಅಪ್ಪ (ಮಾಲತೇಶ್) ಕೃಷಿಕ. ಅಮ್ಮ(ಹರ್ಷಿತಾ ಗೌಡ) ಮನೆಯಲ್ಲೇ ಇರುವಾಕೆ. ಅಪ್ಪನಿಗೆ ಚಿಕ್ಕ ಮಗನಾದ 'ಕೋಸುಡಿ' ಮೇಲೆ ಪ್ರೀತಿ ಹೆಚ್ಚು ಮತ್ತು 'ಕುಂಡೇಸಿ'ಯನ್ನು ದ್ವೇಷಿಸುವಂತೆಯೇ ಹೊಡೆಯುವಾತ. ಅಪ್ಪನ ಈ ಸಿಟ್ಟಿಗೆ ತುಪ್ಪ ಸುರಿಯುವ ತಮ್ಮ, ಅತ್ತ ಅಮ್ಮನಿಗೆ 'ವಲವಾರ'ವಿಲ್ಲ. ಇಬ್ಬರಿಗೂ ಪ್ರೀತಿ ಹಂಚುವಾಕೆ. ಗಂಡನ ಭಯದಲ್ಲೇ ಸಂಸಾರ ಸಾಗಿಸುವಾಕೆ. ಇಂತಹ 'ಕುಂಡೇಸಿ' ಹಾಗೂ 'ಕೋಸುಡಿ' ಮನೆಯ ಗಬ್ಬ ಹಸುವನ್ನು(ಗೌರ) ಮೇಯಿಸಿಕೊಂಡು ಹೊರಟಾಗ ಕಥೆ ತೆರೆದುಕೊಳ್ಳುತ್ತದೆ.

ಕಳೆದ ವರ್ಷ ತೆರೆಕಂಡಿದ್ದ 'ಪಪ್ಪಿ' ಸಿನಿಮಾದಲ್ಲೂ ಇದೇ ರೀತಿ ಉತ್ತರ ಕರ್ನಾಟಕದ ಬಾಲಕರ ಕಥೆ ಇತ್ತು. ಕಥೆ ಮಕ್ಕಳದ್ದಾದರೂ ವಿಷಯ ಜಾಗತಿಕವಾಗಿತ್ತು. 'ವಲವಾರ'ದಲ್ಲೂ ಈ ರೀತಿಯ ಕಥೆ ಇದೆ. ಇಲ್ಲೊಂದು ಸ್ವಚ್ಛವಾದ, ಮುದವಾದ ಕಥೆಯಿದೆ. ಹದವಾಗಿರುವ ಮುಗ್ಧತೆ ಇದೆ. ಅದನ್ನು 'ಕುಂಡೇಸಿ' ಹಾಗೂ ಆತನ ಅಮ್ಮನ ಮೂಲಕ ತೆರೆಗೆ ತಂದಿದ್ದಾರೆ ನಿರ್ದೇಶಕರು. ಬಾಲ್ಯದ ದಿನಗಳನ್ನು ಮೆಲುಕು ಹಾಕುವಂಥ ಹಲವು ವಿಷಯಗಳು ಇಲ್ಲಿವೆ. ಈ ರೀತಿ ಕಥೆಗೊಂದು ಸುಂದರ ಪರಿಸರವನ್ನು ನೀಡಿ 'ಕೋಪದ ಕೈಗೆ ಬುದ್ಧಿ ಕೊಡಬಾರದು, ತಾಳ್ಮೆಯಿಂದ ಬದುಕುವುದನ್ನು ಕಲಿಯಬೇಕು' ಎಂಬುದನ್ನು ಆತುರವಿಲ್ಲದೆ ತಿಳಿಯಾಗಿ ಹೇಳಿದ್ದಾರೆ ನಿರ್ದೇಶಕರು. ಬಾಲರಾಜ್ ಗೌಡ ಛಾಯಾಚಿತ್ರಗ್ರಹಣ ಇದಕ್ಕೆ ಸಾಥ್ ಕೊಟ್ಟಿದೆ.

ಅಪ್ಪನ ಕೋಪವನ್ನು ನೆನೆಸಿಕೊಂಡೇ ನಡುಗುವ, ತನ್ನೊಳಗಿನ ದುಗುಡವನ್ನು ಹೊರಹಾಕಲು ಕಷ್ಟಪಡುವ 'ಕುಂಡೇಸಿ'ಯಾಗಿ ವೇದಿಕ್ ಜೀವಿಸಿದ್ದಾರೆ. ಕೆಲವೆಡೆ ವಯಸ್ಸಿಗೆ ಮೀರಿದಂಥ ಸಂಭಾಷಣೆಯನ್ನು 'ಕುಂಡೇಸಿ' ಪಾತ್ರಕ್ಕೆ ಬರೆಯಲಾಗಿದೆ. ಇದರತ್ತ ಗಮನಹರಿಸಬಹುದಿತ್ತು. ದ್ವಿತೀಯಾರ್ಧದಲ್ಲಿ 'ಕುಂಡೇಸಿ'ಯೊಂದಿಗೇ ಹೆಜ್ಜೆ ಹಾಕುವ 'ಯದು'ವಾಗಿ ಅಭಯ್ ನಟನೆ ಚೆನ್ನಾಗಿದೆ. ಮಾಲತೇಶ್, ಹರ್ಷಿತಾ ಅವರದ್ದು ಸಹಜವೆನ್ನುವಂಥ ನಟನೆ. ಕದ್ರಿ ಮಣಿಕಾಂತ್ ಸಂಗೀತ ಕಥೆಯ ಏರಿಳಿತವನ್ನು ಮುಟ್ಟಿಸಿದೆ.

–ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ವಲವಾರ(ಕನ್ನಡ)
- ನಿರ್ಮಾಣ: ಜೆ.ಗಿರಿಧರ್ ಹಾಗೂ ಅನಿರುದ್ಧ್ ಗೌತಮ್
- ನಿರ್ದೇಶನ: ಸುತನ್ ಗೌಡ
- ತಾರಾಗಣ: ವೇದಿಕ್ ಕೌಶಲ್, ಶಯನ್, ಮಾಲತೇಶ್, ಹರ್ಷಿತಾ ಗೌಡ, ಅಭಯ್ ಮತ್ತಿತರರು.

ನೋಡಬಹುದಾದ ಚಿತ್ರ


ದಿನೇಶ್, ಸಂಭ್ರಮಶ್ರೀ

'ಸೂರಿ ಅಣ್ಣ' ಟ್ರೇಲರ್ ಬಿಡುಗಡೆ

ನಟ ದಿನೇಶ್ ಕುಮಾರ್ ಅವರ ನಿರ್ಮಾಣದ ಹಾಗೂ ನಿರ್ದೇಶನದ 'ಸೂರಿ ಅಣ್ಣ' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಹರೀಶ್ ರಾಯ್ ನಟಿಸಿರುವ ಕೊನೆಯ ಚಿತ್ರ ಇದಾಗಿದೆ. 'ಸಲಗ' ಚಿತ್ರದಿಂದ 'ಸೂರಿ ಅಣ್ಣ' ಎಂದೇ ಖ್ಯಾತರಾಗಿರುವ ದಿನೇಶ್ ಮಾತನಾಡಿ, 'ಫೆ.20ಕ್ಕೆ 'ಸೂರಿ ಅಣ್ಣ' ರಿಲೀಸ್ ಆಗುತ್ತಿದೆ. ಚಿತ್ರಕ್ಕಾಗಿ ಕಳೆದ ಆರು ವರ್ಷದಿಂದ ಕಷ್ಟಪಟ್ಟಿದ್ದೇನೆ. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಲಿದ್ದೇನೆ. ಜಯಣ್ಣ ಫಿಲಂಸ್‌ನ ಜಯಣ್ಣ ಅವರು ಚಿತ್ರವನ್ನು ಬಿಡುಗಡೆ ಮಾಡಿಕೊಡುತ್ತಿದ್ದಾರೆ. ಯಾರೂ ಈ ರೌಡಿಸಂಗೆ ಬರಬೇಡಿ ಎಂಬುವುದನ್ನು ಚಿತ್ರದಲ್ಲಿ ತೋರಿಸಿದ್ದೇನೆ' ಎಂದರು.

ದಿನೇಶ್ ಅವರಿಗೆ ಜೋಡಿಯಾಗಿ ಸಂಭ್ರಮಶ್ರೀ ನಟಿಸಿದ್ದಾರೆ. ಪ್ರವೀಣ್, ಜಾಕ್ ಜಾಲಿ, ಪ್ರಸಾದ್, ಕಾಮರಾಜ್, ಹೊನ್ನವಳ್ಳಿ ಕೃಷ್ಣ, ಪ್ರಕಾಶ್ ತೂಮಿನಾಡು, ರೇಖಾದಾಸ್, ಕಾಕ್ರೋಚ್ ಸುಧಿ, ವಿನಯ್ ಗೌಡ ತಾರಾಬಳಗದಲ್ಲಿದ್ದಾರೆ.


ಪ್ರಣಮ್ ದೇವರಾಜ್

ಎಂ.ಜಿ.ಆರ್ ಆದ ಪ್ರಣಮ್ ದೇವರಾಜ್

ಪ್ರಣಮ್ ದೇವರಾಜ್ ನಟನೆಯ ಹೊಸ ಸಿನಿಮಾಕ್ಕೆ 'ಎಂ.ಜಿ.ಆರ್' ಎಂದು ಹೆಸರಿಡಲಾಗಿದೆ. ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿದ್ದು, ಈ ಚಿತ್ರದ ಮೂಲಕ ನಟ ಪ್ರಜ್ವಲ್ ದೇವರಾಜ್ ನಿರ್ಮಾಪಕರಾಗುತ್ತಿದ್ದಾರೆ.

ಈ ಹಿಂದೆ ಪ್ರಣಮ್‌ಗೆ 's/o ಮುತ್ತಣ್ಣ' ಚಿತ್ರ ನಿರ್ದೇಶಿಸಿದ್ದ ಶ್ರೀಕಾಂತ್ ಹುಣಸೂರು ಅವರೇ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ತುಂಬ ಸಂತಸದ ಕ್ಷಣವಿದು. ನಾನು ಚಿತ್ರರಂಗಕ್ಕೆ ಬಂದು 30 ವರ್ಷಗಳ ಬಳಿಕ ನಿರ್ಮಾಪಕನಾದೆ. ಪ್ರಜ್ವಲ್ ಚಿತ್ರರಂಗಕ್ಕೆ ಕಾಲಿಟ್ಟು 15 ವರ್ಷಗಳಲ್ಲಿಯೇ ನಿರ್ಮಾಪಕನಾಗುತ್ತಿದ್ದಾನೆ. ಕಲಾವಿದರಾದ ನಮಗೆ ಬೇರೆ ವ್ಯಾಪಾರ, ಆಲೋಚನೆ ಕಡಿಮೆ. ಏನೇ ಮಾಡಿದರೂ ಸಿನಿಮಾದತ್ತಲೇ ಯೋಚನೆ ಹೊರಳುತ್ತದೆ. ಚಿತ್ರರಂಗಕ್ಕೆ ಸೇವೆ ಮಾಡುವುದು ಒಳ್ಳೆಯ ವಿಷಯ. ಈ ನಿರ್ಮಾಣ ಸಂಸ್ಥೆ ಒಳ್ಳೆಯ ಅಭಿರುಚಿಯ ಸಿನಿಮಾಗಳನ್ನು ನೀಡಲಿ. ಪ್ರಣಮ್ ಮೊದಲ ಬಾರಿಗೆ ಆ್ಯಕ್ಷನ್ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ಈ ಚಿತ್ರದ ತಾಂತ್ರಿಕ ವರ್ಗ ಸಮರ್ಥವಾಗಿದೆ. ಹೀಗಾಗಿ ಉತ್ತಮ ಸಿನಿಮಾ ಹೊರಬರಲಿದೆ ಎಂಬ ವಿಶ್ವಾಸವಿದೆ' ಎಂದರು ನಟ ದೇವರಾಜ್.

ಚಿತ್ರಕ್ಕೆ ಚರಣ್‌ರಾಜ್ ಸಂಗೀತ ನಿರ್ದೇಶನವಿದೆ. ಸ್ಕೇಟಿಂಗ್ ಕೃಷ್ಣ ಅವರ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಪಿ.ಬಾಬು ಸಂಕಲನವಿದೆ. ಪುರಾತನ ಫಿಲ್ಮ್ಸ್ ಹಾಗೂ ಡೈನಾಮಿಕ್ ವೆಂಚರ್ಸ್ ಬಂಡವಾಳ ಹೂಡುತ್ತಿವೆ.

'ಶೀರ್ಷಿಕೆ ಕುರಿತು ಕುತೂಹಲ ಇದ್ದೇ ಇರುತ್ತೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತೇವೆ. ಪ್ರಣಮ್ ಅವರಲ್ಲಿ ನಟನೆಯ ಸಾಮರ್ಥ್ಯವಿದೆ. ಹೀಗಾಗಿ ಅವರ ಇನ್ನೊಂದು ಮುಖವನ್ನು ತೋರಿಸುವ ಯತ್ನವಿದು. ಸಂಪೂರ್ಣ ಮಾಸ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ' ಎಂದರು ನಿರ್ದೇಶಕ.

'2005ರಲ್ಲಿ ನಡೆಯುವ ಕಥೆಯಿದು. ಯುಗಾದಿ ವೇಳೆಗೆ ಮುಹೂರ್ತ ಮಾಡುತ್ತಿದ್ದೇವೆ. ನಮ್ಮ ಬ್ಯಾನರ್ ಮೂಲಕ ಹೊಸ ಪ್ರತಿಭೆಗಳಿಗೂ ಅವಕಾಶ ನೀಡುತ್ತೇವೆ' ಎಂದರು ಪ್ರಜ್ವಲ್.



ಕೆಂಪೇಗೌಡ, ಸನ್ಮಿತಾ

ಕಟ್ಲೆ ಟ್ರೇಲರ್ ಬಿಡುಗಡೆ

ಹಾಸ್ಯ ಕಲಾವಿದ ಕೆಂಪೇಗೌಡ ನಾಯಕನಾಗಿ ನಟಿಸಿರುವ 'ಕಟ್ಲೆ' ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗೆ ಬಿಡುಗಡೆಗೊಂಡಿವೆ. ಶ್ರೀವಿಧಾ ಅಭಿನಂದನ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

'ಕಟ್ಲೆಗೆ' ಬೇರೆ, ಬೇರೆ ಪ್ರಾಂತ್ಯಗಳಲ್ಲಿ ಅದರದೇ ಆದ ಅರ್ಥವಿದೆ. ನಮ್ಮ ಸಿನಿಮಾದಲ್ಲಿ ಇದನ್ನು ಕಾಲ ಎಂಬ ಅರ್ಥದಲ್ಲಿ ಬಳಸಿದ್ದೇವೆ. ಪ್ರತಿಯೊಂದು ಜೀವರಾಶಿಗೆ ಕಾಲ ಎಂಬುದು ಇರುತ್ತದೆ. ಯಾವುದೋ ಒಂದು ವ್ಯತ್ಯಾಸದಿಂದ ಕಾಲಚಕ್ರದಲ್ಲಿ ಸ್ಥಗಿತಗೊಳ್ಳುತ್ತದೆ. ಇದರ ಆಧಾರದ ಮೇಲೆ ಚಿತ್ರ ಸಾಗುತ್ತದೆ. ಅದನ್ನು ತಿಳಿಯಲು ಚಿತ್ರ ನೋಡಬೇಕು. ಈ ಕಥೆ ಕಣ್ಣೀರು ತರಿಸುತ್ತದೆ, ನಗಿಸುತ್ತದೆ. ಕ್ಲೈಮಾಕ್ಸ್‌ನಲ್ಲಿ ಸಂದೇಶದೊಂದಿಗೆ ಕೊನೆಗೊಳ್ಳುತ್ತದೆ. ಸಿನಿಮಾ ಬಿಡುಗಡೆಗೆ ಸಿದ್ಧವಿದೆ' ಎಂದರು ನಿರ್ದೇಶಕ.

ಭರತ್‌ಗೌಡ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸನ್ಮಿತಾ ಮತ್ತು ಅಮೃತಾ ನಾಯಕಿಯರು. ಮುಖ್ಯ ಪಾತ್ರದಲ್ಲಿ ಹರ್ಷಿಕಾ ಪೂಣಚ್ಚ ನಟಿಸಿದ್ದಾರೆ. ಟೆನ್ನಿಸ್ ಕೃಷ್ಣ, ತಬಲ ನಾಣಿ, ಹರೀಶ್ ರಾಜ್, ಗಣೇಶ್ ರಾವ್ ಕೇಸರಕರ್ ಮುಂತಾದವರು ನಟಿಸಿದ್ದಾರೆ. ಬೆಂಗಳೂರು, ಶಿರಸಿ, ಮಲೆನಾಡು ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ವಿ.ನಾಗೇಂದ್ರಪ್ರಸಾದ್, ಭರ್ಜರಿ ಚೇತನ್ ಕುಮಾರ್ ಹಾಗೂ ಕಿನ್ನಾಳ್ ರಾಜ್ ಸಾಹಿತ್ಯದ ಗೀತೆಗಳಿಗೆ ಶ್ರೀಧರ್ ವಿ.ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ಅನಿರುದ್ಧ ಛಾಯಾಚಿತ್ರಗ್ರಹಣ, ಚೆಲುವಮೂರ್ತಿ ಸಂಕಲನವಿದೆ.

ಎನ್‌ಸಿಪಿ ಜೊತೆ ವಿಲೀನ ಇಲ್ಲ: ತಟಕರೆ

'ಆಡಳಿತಾರೂಢ ಪಕ್ಷಗಳ ಕೂಟದೊಂದಿಗೆ ಮುಂದುವರಿಯುತ್ತೇವೆ'

ಕರಾಡ್ (ಪಿಟಿಐ): 'ಅಜಿತ್ ಪವಾರ್ ಅವರ ನೇತೃತ್ವದಲ್ಲಿ ಎನ್‌ಸಿಪಿಯು ಬಿಜೆಪಿ ನೇತೃತ್ವದ ಎನ್‌ಡಿಎ ಸೇರ್ಪಡೆಯಾಗಿದೆ. ಈಗ ಅವರ ನಿಧನದ ನಂತರವೂ ಆಡಳಿತಾರೂಢ ಪಕ್ಷಗಳ ಕೂಟದೊಂದಿಗೇ ಎನ್‌ಸಿಪಿ ಮುಂದುವರಿಯಲಿದೆ' ಎಂದು ಮಹಾರಾಷ್ಟ್ರ ಎನ್‌ಸಿಪಿ ಅಧ್ಯಕ್ಷ ಸುನಿಲ್ ತಟಕರೆ ಸೋಮವಾರ ತಿಳಿಸಿದರು.


ಸುನೇತ್ರಾ ಮತ್ತು ಶರದ್

ಪಕ್ಷವು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಜೊತೆಗೆ ವಿಲೀನಗೊಳ್ಳಲಿದೆ ಎಂಬ ವದಂತಿ ಹರಿದಾಡಿದ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದರು.

ದಿವಂಗತ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರನ್ನು ಎನ್‌ಸಿಪಿ ಶಾಸಕಾಂಗ ಪಕ್ಷದ ಮುಖ್ಯಸ್ಥೆಯನ್ನಾಗಿ ನೇಮಿಸಿರುವುದು ಪಕ್ಷದ ನಿರ್ಧಾರ. ಇದಕ್ಕೂ ಮಹಾಯುತಿ ಮೈತ್ರಿಕೂಟದ ಭಾಗವಾಗಿರುವ ಬಿಜೆಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.

'ಯಾವ ಪಕ್ಷವು ಯಾವುದರೊಂದಿಗೆ ವಿಲೀನವಾಗಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಬೇಕು. ಎನ್‌ಡಿಎ ಜೊತೆ ಸೇರಿರುವ ಅಜಿತ್ ಪವಾರ್ ಅವರ ನಿರ್ಧಾರಕ್ಕೆ 2024ರ ಚುನಾವಣೆಯಲ್ಲಿ ರಾಜ್ಯದ ಜನರು ಒಪ್ಪಿಗೆ ನೀಡಿದ್ದಾರೆ. ಪಕ್ಷದ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲು ಎನ್‌ಸಿಪಿ ಶಕ್ತವಾಗಿದೆ' ಎಂದು ಒತ್ತಿ ಹೇಳಿದರು.

ಈ ಮಧ್ಯೆ 'ಎನ್‌ಸಿಪಿ ಬಣಗಳ ವಿಲೀನ ಕುರಿತು ಮಾತುಕತೆಯು ಆರಂಭಿಕ ಹಂತದಲ್ಲಿದೆ. ಅಜಿತ್ ಪವಾರ್ ಅವರು ಫೆಬ್ರುವರಿ 12ರಂದು ವಿಲೀನ ಕುರಿತಂತೆ ಘೋಷಣೆ ಮಾಡಲು ದಿನಾಂಕ ನಿಗದಿ ಮಾಡಿದ್ದರು' ಎಂದು ಶರದ್ ಪವಾರ್ ಅವರು ಹೇಳಿದ್ದಾರೆ.

'ಸುನೇತ್ರಾ ಆಯ್ಕೆ ಹಿಂದೆ ಬಿಜೆಪಿ ಕೈವಾಡ'

ಮುಂಬೈ (ಪಿಟಿಐ): ಎನ್‌ಸಿಪಿ ನಾಯಕಿ ಸುನೇತ್ರಾ ಪವಾರ್ ಅವರನ್ನು ಮಹಾರಾಷ್ಟ್ರದ ಉಪಮುಖ್ಯಮಂತ್ರಿಯಾಗಿ ನೇಮಕ ಮಾಡಿರುವ ತಂತ್ರದ ಹಿಂದೆ ಬಿಜೆಪಿ ನಾಯಕತ್ವದ ಕೈವಾಡವಿದೆ ಎಂದು ಶಿವಸೇನಾ (ಯುಬಿಟಿ) ಸೋಮವಾರ ಆರೋಪಿಸಿದೆ.

ಬಿಜೆಪಿ ನಾಯಕತ್ವ ಮತ್ತು ಎನ್‌ಸಿಪಿ ನಾಯಕರಾದ ಸುನಿಲ್ ತಟಕರೆ, ಪ್ರಫುಲ್ ಪಟೇಲ್ ಅವರಿಗೆ ಎನ್‌ಸಿಪಿ ಬಣಗಳ ವಿಲೀನ ಬೇಕಿಲ್ಲ ಎಂದು ಶಿವಸೇನಾ ಮುಖವಾಣಿ 'ಸಾಮ್ನಾ'ದ ಸಂಪಾದಕೀಯದಲ್ಲಿ ಆರೋಪಿಸಲಾಗಿದೆ.

ಸುನೇತ್ರಾ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಬಗ್ಗೆ ಸುಳಿವೇ ಇರಲಿಲ್ಲ ಎಂದು ಶರದ್ ಪವಾರ್ ಹೇಳಿದ್ದಾರೆ ಎಂದು ಹೇಳಲಾಗಿದೆ.

'ಸುನೇತ್ರಾ ಪವಾರ್ ಅವರ ಉಪಮುಖ್ಯಮಂತ್ರಿ ಹುದ್ದೆಯು ಆಲಂಕಾರಿಕವಾಗಬಾರದು. ಅವರು ಮೂಕ ಬೊಂಬೆಯಾಗಿರದೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು' ಎಂದು ಹೇಳಿದೆ.

ಸನಾತನ ಮನಃಸ್ಥಿತಿಯ ಬಿಜೆಪಿ ಜೊತೆಗಿನ ಎನ್‌ಸಿಪಿ ಮೈತ್ರಿ ಮತ್ತು ಅಜಿತ್ ಪವಾರ್ ಅವರ ನಿಧದ ನಂತರದ ಕಾರ್ಯಕ್ರಮಗಳನ್ನು ಪೂರ್ಣಗೊಳಿಸದೆ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವುದು ಹಿಂದುತ್ವದ ನಂಬಿಕೆಗಳಿಗೆ ಸರಿಹೊಂದುವುದಿಲ್ಲ ಎಂದೂ ಅದು ಟೀಕಿಸಿದೆ.

'ಅಜಿತ್ ಸಾವಿನ ಬಗ್ಗೆ ಶಂಕೆ'

'ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಅವರು, ತಮ್ಮ ಬಳಿ 'ಬಿಜೆಪಿ ಹಗರಣ'ಗಳ ಕಡತ ಇದೆ ಎಂದು ಹೇಳುತ್ತಿದ್ದರು. ಆನಂತರ ನಡೆದ ಘಟನೆಗಳು ನಿಗೂಢವಾಗಿವೆ' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಅಜಿತ್ ಪವಾರ್ ಅವರು ಬಿಜೆಪಿಯೊಂದಿಗಿನ ಮೈತ್ರಿಯನ್ನು ಮುರಿದುಕೊಂಡು ಶರದ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸೇರ್ಪಡೆಯಾಗಲು ನಿರ್ಧರಿಸಿದ್ದರು. 'ಬಿಜೆಪಿ ಹಗರಣಕ್ಕೆ ಸಂಬಂಧಿಸಿದ ಕಡತಗಳಿವೆ, ಇವುಗಳನ್ನು ಬಹಿರಂಗಪಡಿಸುತ್ತೇನೆ' ಎಂದು ಪದೇ ಪದೇ ಹೇಳುತ್ತಿದ್ದರು. ಜನವರಿ 15ರಂದು ಹೀಗೆ ಹೇಳಿದ್ದರು. ಅದಾದ 10 ದಿನಗಳಲ್ಲಿ ವಿಮಾನ ದುರಂತ ನಡೆದಿದೆ. ಇದು ನಿಜಕ್ಕೂ ನಿಗೂಢವಾಗಿದೆ' ಎಂದು ಹೇಳಿದರು.

'ಅಜಿತ್ ಪವಾರ್ ಅವರು ಸ್ವಪಕ್ಷಕ್ಕೆ ಮರಳಿದ್ದರೆ, ಅದು ಬಿಜೆಪಿಯ ಸೋಲಿಗೆ ಕಾರಣವಾಗುತ್ತಿತ್ತು. ದೇಶದ ರಾಜಕೀಯದಲ್ಲಿ ಪರಿವರ್ತನೆಗೆ ಮುನ್ನುಡಿಯಾಗುತ್ತಿತ್ತು' ಎಂದರು.

ಕೇಂದ್ರ, 12 ರಾಜ್ಯಗಳಿಗೆ 'ನೋಟಿಸ್'

ನವದೆಹಲಿ (ಪಿಟಿಐ): ಮತಾಂತರ ನಿಷೇಧ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಭಾರತದ ಚರ್ಚ್‌ಗಳ ರಾಷ್ಟ್ರೀಯ ಮಂಡಳಿ (ಎನ್‌ಸಿಸಿಐ) ಸಲ್ಲಿಸಿದ ಹೊಸ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಕರ್ನಾಟಕ, ರಾಜಸ್ಥಾನ, ಅರುಣಾಚಲ ಪ್ರದೇಶ ಸೇರಿದಂತೆ 12 ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿಗೊಳಿಸಿದೆ.

ಎನ್‌ಸಿಸಿಐ ಪರ ಹಾಜರಾಗಿದ್ದ ಹಿರಿಯ ವಕೀಲೆ ಮೀನಾಕ್ಷಿ ಅರೋರಾ, 'ರಾಜ್ಯಗಳಲ್ಲಿ ಜಾರಿಯಲ್ಲಿರುವ ಕಾನೂನಿಗೆ ಕೂಡಲೇ ತಡೆಯಾಜ್ಞೆ ನೀಡಬೇಕು' ಎಂದು ಕೋರಿದರು.

ಎನ್‌ಸಿಸಿಐ ಸಲ್ಲಿಸಿದ ವರದಿಗಳನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾ.ಜಾಯ್‌ಮಾಲ್ಯ ಬಾಗ್ಚಿ ನೇತೃತ್ವದ ನ್ಯಾಯಪೀಠ, ನಾಲ್ಕು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿತು.

ಈಗಾಗಲೇ ಸಲ್ಲಿಸಿರುವ ಒಂದು ಅರ್ಜಿಯ ಜೊತೆಗೆ ಹೊಸತಾಗಿ ಸಲ್ಲಿಸಿರುವ ಅರ್ಜಿಗಳ ಜೊತೆಗೆ ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠವು ಒಟ್ಟಾಗಿ ಈ ಅರ್ಜಿಗಳನ್ನು ಪರಿಗಣಿಸಲಿದೆ ಎಂದು ಸಿಜೆಐ ತಿಳಿಸಿದರು.

ಕರ್ನಾಟಕ ರಾಜ್ಯಕ್ಕೂ ನೋಟಿಸ್ ಜಾರಿಯಾಗಿದೆ.

ಪೋಶೆ ಅಪಘಾತ: ಮೂವರಿಗೆ ಜಾಮೀನು

ನವದೆಹಲಿ (ಪಿಟಿಐ): ಪುಣೆಯಲ್ಲಿ ನಡೆದಿದ್ದ ಪೋಶೆ ಕಾರು ಅಪಘಾತ ಪ್ರಕರಣದ ಮೂವರು ಆರೋಪಿಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ಜಾಮೀನು ನೀಡಿದೆ.

ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು, ಆರೋಪಿಗಳಾದ ಅಮರ್ ಸತೀಶ್ ಗಾಯಕ್ವಾಡ್, ಆದಿತ್ಯ ಅವಿನಾಶ ಸೂದ್ ಮತ್ತು ಆಶಿಶ್ ಸತೀಶ್ ಮಿತ್ತಲ್ ಅವರಿಗೆ ಜಾಮೀನು ಮಂಜೂರು ಮಾಡಿದೆ. 'ಬಾಲಕ ಮದ್ಯ ಸೇವಿಸಿರುವುದು ಬೇರೆ ವಿಚಾರ. ಆದರೆ, ಸಂಭ್ರಮದ ಸಂದರ್ಭದಲ್ಲಿ ಮಕ್ಕಳಿಗೆ ಕಾರ್ ಕೀ ಮತ್ತು ಹಣ ನೀಡುವುದು ಸ್ವೀಕಾರಾರ್ಹ ವಿಚಾರವಲ್ಲ. ಮಕ್ಕಳು ಎಸಗುವ ಇಂಥ ಕೃತ್ಯಗಳಿಗೆ ಪೋಷಕರೇ ಹೊಣೆ' ಎಂದು ನ್ಯಾಯಪೀಠ ಹೇಳಿದೆ. 2024 ಮೇ 19ರಂದು ಪುಣೆಯ ಕಲ್ಯಾಣಿ ನಗರದಲ್ಲಿ ಪಾನಮತ್ತ ಬಾಲಕ ಚಲಾಯಿಸುತ್ತಿದ್ದ ಕಾರು ಡಿಕ್ಕಿ ಹೊಡೆದು ಇಬ್ಬರು ಟೆಕಿಗಳು ಮೃತಪಟ್ಟಿದ್ದರು.



ಜಾತಿ ದತ್ತಾಂಶ: ಅರ್ಜಿ ವಜಾ

ನವದೆಹಲಿ: 2027ರ ಜನಗಣತಿಯಲ್ಲಿ ನಾಗರಿಕರ ಜಾತಿ ದತ್ತಾಂಶ ದಾಖಲಿಸಲು, ವರ್ಗೀಕರಿಸಲು ಮತ್ತು ಪರಿಶೀಲಿಸಲು ಅಳವಡಿಸಿಕೊಳ್ಳಬೇಕಾದ ವಿಧಾನವನ್ನು ಪ್ರಶ್ನಿಸಿದ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, ಅರ್ಜಿದಾರ ಆಕಾಶ್ ಗೋಯಲ್ ಅವರ ಸಲಹೆಗಳನ್ನು ಪರಿಗಣಿಸುವಂತೆ, ಕೇಂದ್ರ ಸರ್ಕಾರ ಹಾಗೂ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ಕಚೇರಿಗೆ ಸೂಚಿಸಿದೆ.

ಸೇನಾ ವಿಚಾರ: ಕೋಲಾಹಲ

ಒಂದನೇ ಪುಟದಿಂದ....

ಜನರಲ್ ನರವಣೆ ಅವರು ತಮ್ಮ ಆತ್ಮಚರಿತ್ರೆ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ'ಯಲ್ಲಿ (ಅಪ್ರಕಟಿತ) ಈ ಕುರಿತು ಉಲ್ಲೇಖಿಸಿದ್ದಾರೆ. ಈ ಪುಸ್ತಕದ ಕುರಿತ ಒಂದು ಲೇಖನವು ಪ್ರಸಿದ್ಧ ನಿಯತಕಾಲಿಕ ದಲ್ಲಿ (ದಿ ಕ್ಯಾರವಾನ್) ಪ್ರಕಟವಾಗಿದೆ ಎಂದು ರಾಹುಲ್ ಗಾಂಧಿ ಹೇಳಿದರು.

ಆ ನಿಯತಕಾಲಿಕದ ಪ್ರತಿಯನ್ನು ಪ್ರದರ್ಶಿಸಿದ ಅವರು, ಈ ಕುರಿತು ಪದೇ ಪದೇ ಪ್ರಸ್ತಾಪಿಸಿದರು. ಅದಕ್ಕೆ ರಕ್ಷಣಾ ಸಚಿವರಾದಿಯಾಗಿ ಗೃಹ ಸಚಿವ ಅಮಿತ್ ಶಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆಕ್ಷೇಪಿಸಿ, ವಿರೋಧ ವ್ಯಕ್ತಪಡಿಸಿದರು. ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಟಿಎಂಸಿಯ ಮಹುವಾ ಮೊಯಿತ್ರಾ, ಕಲ್ಯಾಣ್ ಬ್ಯಾನರ್ಜಿ, ಆರ್‌ಜೆಡಿಯ ಮನೋಜ್ ಜಾ ಅವರು ರಾಹುಲ್ ಬೆಂಬಲಕ್ಕೆ ನಿಂತರು.

'ಲೋಕಸಭೆಯ ವಿರೋಧ ಪಕ್ಷದ ನಾಯಕರು ತಾವು ಪ್ರಸ್ತಾಪಿಸುತ್ತಿರುವ ಪುಸ್ತಕವನ್ನು ಸದನದ ಮುಂದಿಡಬೇಕು ಎಂದು ನಾನು ಬಯಸುತ್ತೇನೆ. ಆದರೆ ಅದು ಸಾಧ್ಯವಿಲ್ಲ, ಏಕೆಂದರೆ ಆ ಪುಸ್ತಕ ಇನ್ನೂ ಪ್ರಕಟವೇ ಆಗಿಲ್ಲ' ಎಂದು ರಾಜನಾಥ ಸಿಂಗ್ ಹೇಳಿದರು.

ಚೀನಾಕ್ಕೆ ಸಂಬಂಧಿಸಿದ ವಿಷಯ ತುಂಬಾ ಸೂಕ್ಷ್ಮವಾದದ್ದು. ಈ ಕುರಿತು ಲೋಕಸಭೆಯಲ್ಲಿ ಮಾತನಾಡಲು ರಾಹುಲ್ ಗಾಂಧಿ ಅವರಿಗೆ ಅವಕಾಶ ಕೊಡಬೇಕು ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಆಗ್ರಹಿಸಿದರು.

ರಾಹುಲ್ ಅವರು ಪದೇ ಪದೇ 'ಚೀನೀ ಟ್ಯಾಂಕ್'ಗಳು ಎಂದು ಪ್ರಸ್ತಾಪಿಸಿದ್ದಕ್ಕೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದರು. 'ಆ ಪುಸ್ತಕ ಇನ್ನೂ ಪ್ರಕಟವಾಗಿಲ್ಲದ ಕಾರಣ, ಅದನ್ನು ನೀವು ಹೇಗೆ ಇಲ್ಲಿ ಉಲ್ಲೇಖಿಸುತ್ತೀರಿ' ಎಂದು ಗೃಹ ಸಚಿವ ಅಮಿತ್ ಶಾ ಪ್ರಶ್ನಿಸಿದರು.

ಪದೇ ಪದೇ ಎಚ್ಚರಿಕೆ ನೀಡಿದ ಸ್ಪೀಕರ್: ಅಪ್ರಕಟಿತ ಪುಸ್ತಕವನ್ನು ಉಲ್ಲೇಖಿಸದಂತೆ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ರಾಹುಲ್ ಗಾಂಧಿ ಅವರಿಗೆ ಪದೇ ಪದೇ ಎಚ್ಚರಿಕೆ ನೀಡಿದರು.

'ಈ ಕುರಿತು ಪ್ರಸ್ತಾಪಿಸಲು ರಾಹುಲ್ ಗಾಂಧಿ ಅವರಿಗೆ ಸ್ಪೀಕರ್ ಅನುಮತಿ ನಿರಾಕರಿಸಿದ್ದಾರೆ. ಅವರ ರೂಲಿಂಗ್ ಅನ್ನು ರಾಹುಲ್ ಪದೇ ಪದೇ ಉಲ್ಲಂಘಿಸಿದ್ದಾರೆ. ಈ ಮೂಲಕ ಅವರು ಪೀಠಕ್ಕೆ ಅಗೌರವ ತೋರಿದ್ದಾರೆ. ಸದನದ ನಿಯಮ ಪಾಲನೆ ವಿಷಯದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರು ಯುವ ಸಂಸದರಿಗೆ ಮಾದರಿಯಾಗಿಲ್ಲ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆರೋಪಿಸಿದರು.


'ಒಂದು ಉಲ್ಲೇಖಕ್ಕೇಕೆ ಹದರಿಕೆ?': 'ಬಿಜೆಪಿಯವರು ಭಯೋತ್ಪಾದನೆಯ ವಿರುದ್ಧ ಹೋರಾಡುತ್ತೇವೆ ಎನ್ನುತ್ತಾರೆ. ಆದರೆ ಈ ಪುಸ್ತಕದ ಕುರಿತು ಪ್ರಕಟವಾಗಿರುವ ಲೇಖನದ ಒಂದು ಉಲ್ಲೇಖಕ್ಕೆ ಏಕೆ ಹೆದರುತ್ತಿದ್ದಾರೆ? ಹೆದರಿಕೆ ಇಲ್ಲ ಎನ್ನುವುದಾದರೆ ಅದನ್ನು ಓದಲು ಬಿಡಿ' ಎಂದು ರಾಹುಲ್ ಮತ್ತೆ ಕೇಳಿದರು.

ಆಗ ಮತ್ತೆ ಎರಡೂ ಕಡೆಯ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಗದ್ದಲ ತೀವ್ರವಾದ ಪರಿಣಾಮ ಕಲಾಪವನ್ನು ಸ್ಪೀಕರ್ ಎರಡು ಬಾರಿ ಮುಂದೂಡಿದರು. ಆ ಬಳಿಕವೂ ಗದ್ದಲ ಮುಂದುವರಿದಿದ್ದರಿಂದ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

'56 ಇಂಚಿನ ಎದೆಗೇನಾಗಿತ್ತು?'

'ಪ್ರಧಾನಿ ಮತ್ತು ರಕ್ಷಣಾ ಸಚಿವರ ಬಗ್ಗೆ ನರವಣೆ ಅವರು ತಮ್ಮ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಅದು ಲೇಖನವೊಂದರಲ್ಲಿ ಪ್ರಕಟವಾಗಿದೆ. ಅದನ್ನು ಪ್ರಸ್ತಾಪಿಸಲು ನಾನು ಬಯಸಿದ್ದೇನೆ. ಅದು ಹೊರಬಂದರೆ ಈ ಇಬ್ಬರು ನಾಯಕರ ವಾಸ್ತವ ಚಿತ್ರಣ ಬಹಿರಂಗವಾಗುತ್ತದೆ. ಈ ಕಾರಣಕ್ಕಾಗಿಯೇ ಅವರು ಹೆದರುತ್ತಿದ್ದಾರೆ. ಚೀನಾದ ಸೇನೆ ನಮ್ಮ ಎದುರಿದ್ದಾಗ ಈ 56 ಇಂಚಿನ ಎದೆಗೆ ಏನಾಗಿತ್ತು' ಎಂದು ರಾಹುಲ್ ಪ್ರಶ್ನಿಸಿದರು.

'ಅದನ್ನು ಉಲ್ಲೇಖಿಸಿರುವುದು ಸೇನೆಯ ಮಾಜಿ ಮುಖ್ಯಸ್ಥರು. ಅವರು ಪ್ರಧಾನಿ ಮತ್ತು ರಕ್ಷಣಾ ಸಚಿವರ ನಡುವೆ ನಡೆಸಿದ ಸಂಭಾಷಣೆಯನ್ನು ಪ್ರಸ್ತಾಪಿಸಿದ್ದಾರೆ' ಎಂದರು. 'ಮೋದಿ ಮತ್ತು ಸಿಂಗ್ ಅವರು ಸೇನಾ ಮುಖ್ಯಸ್ಥರಿಗೆ ಯಾವ ಆದೇಶ ನೀಡಿದ್ದರು ಎಂಬುದನ್ನು ಸದನದಲ್ಲಿ ಹೇಳಲು ಬಯಸಿದ್ದೇನೆ. ಅದಕ್ಕೇಕೆ ಅವರು ಇಷ್ಟೊಂದು ಆತಂಕಗೊಂಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ' ಎಂದರು.



> **ಅತ್ಯಂತ ಹಿರಿಯ ಸಚಿವರನ್ನು ನಿಯೋಜಿಸಿ ನಿಯಮಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಮತ್ತು ರಾಹುಲ್ ಅವರನ್ನು ಸುಮ್ಮನಿರಿಸಲು ಯತ್ನಿಸಲಾಗಿದೆ**
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ


ಪಶ್ಚಿಮಬಂಗಾಳದ ಎಸ್‌ಐಆರ್ ಸಂತ್ರಸ್ತರೊಂದಿಗೆ ಸಿ.ಎಂ ಮಮತಾ ಬ್ಯಾನರ್ಜಿ ಅವರು ದೆಹಲಿಯ ಮುಖ್ಯಚುನಾವಣಾ ಆಯುಕ್ತರ ಕಚೇರಿಗೆ ಬಂದರು

'ಎಸ್‌ಐಆರ್ ನೆಪ–ಸಂತ್ರಸ್ತರಿಗೆ ಕಾಟ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಯಿಂದಾಗಿ (ಎಸ್‌ಐಆರ್) ತೊಂದರೆ ಗೀಡಾಗಿರುವ ಕುಟುಂಬಗಳಿಗೆ ದೆಹಲಿಯ ಬಂಗ ಭವನದಲ್ಲಿ ಕಿರುಕುಳ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಇದೇ ವಿಚಾರವಾಗಿ ದೆಹಲಿ ಪೊಲೀಸರು ಮತ್ತು ಮಮತಾ ಅವರ ನಡುವೆ ಸೋಮವಾರ ವಾಗ್ವಾದ ನಡೆದಿದ್ದು, ಚಾಣಕ್ಯಪುರಿ, ಮಂಡಿ ಹೌಸ್‌ಗಳಲ್ಲಿನ ಬಂಗ ಭವನದ ಸುತ್ತ ನಿಯೋಜಿಸಲಾದ ಪೊಲೀಸರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಆಯೋಗದೊಂದಿಗಿನ ಸಭೆ ನಿಮಿತ್ತ ಮಮತಾ ದೆಹಲಿಗೆ ಬಂದಿದ್ದಾರೆ. ಈ ವೇಳೆ ಬಂಗ ಭವನಕ್ಕೂ ಭೇಟಿ ನೀಡಿದ್ದಾರೆ. ಭವನದ ಸುತ್ತ ಪೊಲೀಸರನ್ನು ನಿಯೋಜಿಸಿರುವುದರ ಬಗ್ಗೆ ಪ್ರಶ್ನಿಸಿದ ಅವರು, 'ನಾನು ಆಂದೋಲನ ನಡೆಸಲು ಬಂದಿಲ್ಲ. ಅದಕ್ಕಾಗಿಯೇ ಬಂದಿದ್ದರೆ ನೀವು ಹುಚ್ಚರಾಗಿಬಿಡುತ್ತಿದ್ದಿರಿ' ಎಂದು ಭದ್ರತಾ ಸಿಬ್ಬಂದಿ ಜತೆಗೆ ವಾಗ್ವಾದ ನಡೆಸಿದ್ದಾರೆ.

ಕೋಪದಿಂದ ಹೊರ ನಡೆದ ಮಮತಾ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಭೇಟಿಯಾಗಿದ್ದ ಮಮತಾ ಬ್ಯಾನರ್ಜಿ ಅವರು ಚುನಾವಣಾ ಆಯೋಗದ (ಇಸಿ) ಪ್ರತಿಕ್ರಿಯೆಯನ್ನೂ ಕೇಳಿಸಿಕೊಳ್ಳದೇ ಅಸಮಾಧಾನಗೊಂಡ ಸಭೆಯಿಂದ ಹೊರ ನಡೆದಿದ್ದಾರೆ ಎಂದು ಇ.ಸಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಲ್ಲದೇ, ಮಮತಾ ಹಾಗೂ ಅಭಿಷೇಕ್ ಬ್ಯಾನರ್ಜಿ ಅವರು ಪ್ರಸ್ತಾಪಿಸಿದ ವಿಚಾರಗಳೆಲ್ಲವನ್ನೂ ಅಧಿಕಾರಿಗಳು ಪರಿಗಣಿಸಿದ್ದರು. ಆದರೆ, ಸಿಇಸಿ ಅಪ್ರತಿಕ್ರಿಯಿಸುವ ವೇಳೆಗೆ ಟಿಎಂಸಿ ನಾಯಕರು ಅನೇಕ ಬಾರಿ ಮಧ್ಯಪ್ರವೇಶಿಸಿದರು. ಕಾನೂನು ಮೇಲುಗೈ ಸಾಧಿಸುತ್ತದೆ. ಯಾರೇ ಕಾನೂನನ್ನು ಕೈಗೆತ್ತಿಕೊಂಡರೂ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಿಇಸಿ ಹೇಳುತ್ತಿದ್ದಂತೆಯೇ ಸಿಡಿಮಿಡಿಗೊಂಡ ಮಮತಾ ಸಭೆಯಿಂದ ಹೊರ ನಡೆದರು.

ಬೆಂಗಳೂರಿಗೆ ಬಂದ ವಿಮಾನ: ಕಾರ್ಯಾಚರಣೆ ಸ್ಥಗಿತ

ನವದೆಹಲಿ: ಹೀಥ್ರೂದಿಂದ ಬೆಂಗಳೂರಿಗೆ ಬಂದಿಳಿದ ಏರ್ ಇಂಡಿಯಾದ ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನದಲ್ಲಿ, ಎಂಜಿನ್‌ಗೆ ಇಂಧನ ಪೂರೈಸುವ ಸ್ವಿಚ್ ವಿಫಲವಾಗಿದ್ದರಿಂದ ಆ ವಿಮಾನದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಕಳೆದ ವರ್ಷ ಜೂನ್ 12ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದಲ್ಲಿ ಕಾಣಿಸಿಕೊಂಡಿದ್ದ ಸಮಸ್ಯೆಯೇ ಈ ವಿಮಾನದಲ್ಲೂ ಕಾಣಿಸಿಕೊಂಡಿದೆ.



ಎಐ 132 ವಿಮಾನವು ಸೋಮವಾರ ಬೆಂಗಳೂರಿಗೆ ಬಂದಿಳಿಯಿತು. ಬರುವ ಮಾರ್ಗದಲ್ಲಿ ಇಂಧನ ಪೂರೈಕೆ ನಿಯಂತ್ರಿಸುವ ಸ್ವಿಚ್ ಎರಡು ಬಾರಿ ವಿಫಲ ವಾಗಿದೆ. ಸ್ವಿಚ್‌ನಲ್ಲಿ ದೋಷವಿರುವುದನ್ನು ಪೈಲಟ್ ತಿಳಿಸಿದ ನಂತರ ವಿಮಾನವನ್ನು ಕಾರ್ಯಚರಣೆಯಿಂದ ಹಿಂಪಡೆಯಲಾಗಿದೆ ಎಂದು ಏರ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಮೆಜೆಸ್ಟಿಕ್: ಅಕ್ರಮಗಳ ಹಾವಳಿ

ಒಂದನೇ ಪುಟದಿಂದ...

ಗುಬ್ಬಿ ತೋಟದಪ್ಪ ರಸ್ತೆ, ಧನ್ವಂತರಿ ರಸ್ತೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ಸೇತುವೆ, ರೈಲು ನಿಲ್ದಾಣದ ಕಡೆಗೆ ಸಾಗುವ ಅಂಡರ್ ಪಾಸ್‌ಗಳು ಅಪಾಯಕಾರಿ ಸ್ಥಳಗಳಾಗಿ ಪರಿವರ್ತನೆಗೊಂಡಿವೆ ಎಂಬ ದೂರುಗಳೂ ಇವೆ.

ಇತ್ತೀಚಿನ ಪ್ರಕರಣಗಳು: ತುಮಕೂರಿನ ಹದಿನೆಂಟರ ಹರೆಯದ ಯುವತಿಯೊಬ್ಬಳು ಮನೆ ಬಿಟ್ಟು ಬಂದಿದ್ದರು. ಎಲ್ಲಿಗೆ ಹೋಗಬೇಕು ಎಂದು ಗೊತ್ತಾಗದೇ ಮೆಜೆಸ್ಟಿಕ್‌ನಲ್ಲಿ ಕುಳಿತಿದ್ದ ಆಕೆ ಆಗಷ್ಟೇ ಪರಿಚಯವಾಗಿದ್ದ ಯುವತಿ ಜತೆ ಹೋಗಿದ್ದರು. ತುಮಕೂರಿನಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಅಲ್ಲಿನ ಪೊಲೀಸರು ಯುವತಿಯನ್ನು ಹುಡುಕುತ್ತಾ ಬಂದು ಮೆಜೆಸ್ಟಿಕ್‌ನಲ್ಲಿ ಪತ್ತೆ ಹಚ್ಚುವಷ್ಟರಲ್ಲೇ, ಯುವತಿ ವೇಶ್ಯಾವಾಟಿಕೆಯ ದಂಧೆಯಲ್ಲಿ ಸಿಲುಕಿಯಾಗಿತ್ತು.

ಎಸ್‌ಎಸ್‌ಎಲ್‌ಸಿ ಬಳಿಕ ಓದು ಮುಂದುವರಿಸಬೇಕು ಎಂದು ಕನಸು ಹೊತ್ತಿದ್ದ ವಿಜಯಪುರದ ಹುಡುಗಿಗೆ ಆಕೆಯ ಪೋಷಕರು, ಮದುವೆ ಮಾಡಲು ಮುಂದಾಗಿದ್ದರು. ಅದಕ್ಕೆ ಸಮ್ಮತಿ ಇರದ ಹುಡುಗಿಯು, ನಿಶ್ಚಿತಾರ್ಥಕ್ಕೆ ಎರಡು ದಿನ ಮೊದಲೇ, ಮೆಜೆಸ್ಟಿಕ್‌ಗೆ ಬಂದಿಳಿದಿದ್ದಳು. ಮುಂದಿನ ದಾರಿ ಕಾಣದೇ ಅಳುತ್ತಾ ಕುಳಿತಿದ್ದಳು. ಕೆಲಸಕ್ಕೆ ಹೊರಟಿದ್ದ ಮಹಿಳೆಯೊಬ್ಬರು ಈಕೆಯನ್ನು ನೋಡಿ ವಿಚಾರಿಸಿ, 'ನನ್ನ ಕೆಲಸಕ್ಕೆ ತಡವಾಗಿದೆ. ಏನಾದರೂ ಸಹಾಯ ಬೇಕಾದರೆ ಫೋನು ಮಾಡು. ಯಾರೂ ಕರೆದರೂ ಹೋಗಬೇಡ' ಎಂದು ತಿಳಿಸಿ ತಮ್ಮ ಕೆಲಸಕ್ಕೆ ತೆರಳಿದ್ದರು. ಆನಂತರ ಸಂತೈಸುವ ನೆಪದಲ್ಲಿ ಹಲವು ಮಹಿಳೆಯರು ಕರೆದಿದ್ದರೂ ಈ ಹುಡುಗಿ ಹೋಗಿರಲಿಲ್ಲ. ಸಂಜೆ ವಾಪಸ್ಸಾದ ಆ ಮಹಿಳೆ ಸ್ಥಳೀಯ ವಿವಿಧ ಅಧಿಕಾರಿಗಳ ನೆರವಿನೊಂದಿಗೆ 'ಸಖಿ' ಕೇಂದ್ರಕ್ಕೆ ಕರೆದುಕೊಂಡು ಹೋದರು. ಬಾಲ್ಯ ವಿವಾಹಕ್ಕೆ ಶಿಕ್ಷೆ ಏನು ಎಂದು ಪೋಷಕರಿಗೆ ತಿಳಿ ಹೇಳಿ, ಆಕೆಯನ್ನು ಊರಿಗೆ ಕಳುಹಿಸಿಕೊಡಲಾಯಿತು.

ಮರ್ಯಾದಸ್ಥರಿಗೆ ಅವಮಾನ: ಗಂಡ, ಹೆಂಡತಿ ಮತ್ತು ಮಗ ರಾತ್ರಿ 10 ಗಂಟೆಯ ಸುಮಾರಿಗೆ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಬಂದಿದ್ದರು. ಮಗನಿಗೆ ತಿಂಡಿ ಖರೀದಿಸಲು ಅಪ್ಪ, ಮಗ ಹೋಗಿದ್ದರು. ಮಹಿಳೆ ಅಲ್ಲಿಂದ ಕೇವಲ 10 ಅಡಿ ದೂರದಲ್ಲಿ ನಿಂತಿದ್ದರು. ಆಗ ಪುರುಷನೊಬ್ಬ ಮಹಿಳೆಯಲ್ಲಿ 'ಬರ್ತೀರಾ' ಎಂದು ಕೇಳಿದ್ದ. ಕೂಡಲೇ ಮಹಿಳೆ ತನ್ನ ಗಂಡನನ್ನು ಕರೆದರು. ಅಪರಿಚಿತ ಪುರುಷ ಪರಾರಿಯಾದ. ಪೊಲೀಸರಿಗೆ ಈ ಘಟನೆಯನ್ನು ವಿವರಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಇಂಥ ಘಟನೆಗಳು ನಡೆಯುತ್ತಲೇ ಇದ್ದರೂ ನಿಯಂತ್ರಿಸುವ ಪ್ರಯತ್ನ ಆಗುತ್ತಿಲ್ಲ. ಪೊಲೀಸ್ ಬೀಟ್ ಇದೆ ಯಾದರೂ ಅವರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಬಿಎಂಟಿಸಿ ನೌಕರರೊಬ್ಬರು ಅಸಹಾಯಕತೆ ತೋಡಿಕೊಂಡರು.

ಎಲ್ಲಿಂದಲೋ ಬರುವ ಆಟೊಗಳು..

'ಆಟೊಗಳಿಗೂ ವೇಶ್ಯಾವಾಟಿಕೆ ನಡೆಸುವವರಿಗೂ ಕೊಂಡಿ ಇರುತ್ತದೆ. ಇದಕ್ಕೆ ಸಂಬಂಧಿಸಿದ ಆಟೊಗಳು ಎಲ್ಲಿಂದ ಬರುತ್ತವೆ ಎಂದು ಮೇಲ್ನೋಟಕ್ಕೆ ಗೊತ್ತೇ ಆಗುವುದಿಲ್ಲ. ಆದರೆ, ಗಿರಾಕಿಗಳು ಸಿಕ್ಕಿದ ಕೂಡಲೇ ಯಾವುದೇ ಕರೆ ಮಾಡದೆಯೇ ಆಟೊ ಚಾಲಕರಿಗೆ ಸಿಗ್ನಲ್ ಹೋಗುತ್ತದೆ. ಮೇಲ್ಸೇತುವೆಯಿಂದ ರಸ್ತೆಗೆ ಇಳಿಯುವ ಹೊತ್ತಿಗೆ, ಇಲ್ಲವೇ ಬಸ್ ನಿಲ್ದಾಣದಿಂದ ಹೊರ ಬರುವ ಹೊತ್ತಿಗೆ ಸರಿಯಾಗಿ ಆಟೊ ಬಂದು ನಿಲ್ಲುತ್ತದೆ. ಹತ್ತಿಕೊಂಡು ಹೋಗುತ್ತಾರೆ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ವಿವರಿಸಿದರು.

ಪಾಕಿಸ್ತಾನ ನಡೆಯಿಂದ ಭಾರಿ ನಷ್ಟ

ಟಿ20 ವಿಶ್ವಕಪ್: ಭಾರತ ವಿರುದ್ಧದ ಪಂದ್ಯ ಬಹಿಷ್ಕರಿಸಲು ಪಾಕಿಸ್ತಾನ ತೀರ್ಮಾನ

ನವದೆಹಲಿ (ಪಿಟಿಐ): ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಐಸಿಸಿ ಟೂರ್ನಿಗಳಲ್ಲಿ ನಡೆಯುವ ಪಂದ್ಯವು 'ಚಿನ್ನದ ಮೊಟ್ಟೆಯಿಡುವ ಕೋಳಿ'ಯಿದ್ದಂತೆ. ಪ್ರತಿ ಪಂದ್ಯವು ₹2,220 ಕೋಟಿಗೂ (250 ದಶಲಕ್ಷ ಡಾಲರ್) ಹೆಚ್ಚು ವರಮಾನ ತಂದುಕೊಡುತ್ತದೆ ಎಂದು ಕೆಲವು ಅಂದಾಜುಗಳು ಹೇಳುತ್ತವೆ. ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಇತ್ತಂಡಗಳ ನಡುವಣ ಪಂದ್ಯ ನಡೆಯದೇ ಹೋದಲ್ಲಿ ಭಾಗೀದಾರರಿಗೆ ಅಪಾರ ನಷ್ಟವಾಗಲಿದೆ.

ಎರಡು ದೇಶಗಳ ಬಾಂಧವ್ಯ ಹಳಸಿರುವ ಕಾರಣ ಸಾಂಪ್ರದಾಯಿಕ ಎದುರಾಳಿಗಳು ದ್ವಿಪಕ್ಷೀಯ ಸರಣಿಗಳಲ್ಲಿ ಆಡುತ್ತಿಲ್ಲ. ಬಹುತಂಡಗಳ ಟೂರ್ನಿಯಲ್ಲಿ ಮಾತ್ರ ಆಡುತ್ತಿವೆ. ಐಸಿಸಿ ಸಹ ಪ್ರತಿಷ್ಠಿತ ಟೂರ್ನಿಗಳಲ್ಲಿ ಇವೆರಡು ತಂಡಗಳು ಒಂದೇ ಗುಂಪಿನಲ್ಲಿರುವಂತೆ ನೋಡಿಕೊಳ್ಳುತ್ತದೆ. ಪಂದ್ಯದ ಪ್ರಸಾರ ಹಕ್ಕು ಮತ್ತು ಪ್ರಾಯೋಜಕತ್ವದಿಂದ ಹಣದ ಹೊಳೆಯೇ ಹರಿದುಬರುತ್ತದೆ.

ಭಾರತ ತಂಡದ ವಿರುದ್ಧ ಕೊಲಂಬೊದಲ್ಲಿ ಇದೇ 15ರಂದು ನಡೆಯುವ ವಿಶ್ವಕಪ್ ಗುಂಪು ಹಂತದ ಪಂದ್ಯವನ್ನು ಬಹಿಷ್ಕರಿಸುವುದಾಗಿ ಪಾಕಿಸ್ತಾನ ಸರ್ಕಾರ ಭಾನುವಾರ ಪ್ರಕಟಿಸಿದೆ. ಪಾಕಿಸ್ತಾನವು ತನ್ನ ನಿಲುವಿಗೆ ಅಂಟಿಕೊಂಡಲ್ಲಿ ಆ ದೇಶಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಲಿದೆ. ಐಸಿಸಿ ಬೊಕ್ಕಸಕ್ಕೂ ಭಾರಿ ಪ್ರಮಾಣದಲ್ಲಿ ನಷ್ಟವಾಗಲಿದೆ.

ಮಾಧ್ಯಮ ಪ್ರಸಾರದ ಹಕ್ಕು ಪಡೆದಿರುವ ಜಿಯೊಸ್ಟಾರ್, ಐಸಿಸಿ ಜೊತೆ ₹2.74 ಲಕ್ಷ ಕೋಟಿ (3 ಶತಕೋಟಿ ಡಾಲರ್) ಮೊತ್ತದ ಒಪ್ಪಂದ ಮಾಡಿಕೊಳ್ಳಲು ಮಾತುಕತೆಯನ್ನೂ ಆರಂಭಿಸಿತ್ತು.

ಪ್ರಸಾರ ಸಂಸ್ಥೆಯು, ಈ ಪಂದ್ಯಕ್ಕೆ ಜಾಹೀರಾತುಗಳಿಂದ ಬರುವ ₹200 ರಿಂದ 250 ಕೋಟಿ ವರಮಾನ ಕಳೆದುಕೊಳ್ಳಲಿದೆ. 10 ಸೆಕೆಂಡುಗಳ ವಾಣಿಜ್ಯ ಜಾಹೀರಾತು ಸ್ಲಾಟ್‌ಗೆ ಪ್ರಸಾರಸಂಸ್ಥೆಯು ₹40 ಲಕ್ಷದವರೆಗೆ ದರ ನಿಗದಿಪಡಿಸುತ್ತದೆ.

ವಾಕ್‌ಓವರ್‌ನಿಂದ ಭಾರತಕ್ಕೆ ಎರಡು ಪೂರ್ಣ ಪಾಯಿಂಟ್‌ಗಳು ದೊರೆಯಲಿವೆ. ಐಸಿಸಿಯು ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಭಾರಿ ಮೊತ್ತದ ದಂಡವನ್ನು ವಿಧಿಸುವ ಅಧಿಕಾರವನ್ನೂ ಹೊಂದಿದೆ.

ಭಾರತ– ಪಾಕಿಸ್ತಾನ ನಡುವಣ ಪ್ರತಿ ಪಂದ್ಯವು ₹2,200 ಕೋಟಿಗೂ ಹೆಚ್ಚು ಮೌಲ್ಯ ಹೊಂದಿದೆ ಎಂದು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ಪತ್ರಿಕೆಯು ಉದ್ಯಮದ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

'ನಿರ್ಬಂಧ ಅಥವಾ ನಷ್ಟದ ಅಂದಾಜು ತೆಗೆದುಕೊಂಡರೆ, ಪಂದ್ಯ ನಡೆಯದೇ ಹೋದಲ್ಲಿ ಸುಮಾರು ₹2,200 ಕೋಟಿ ನಷ್ಟವಾಗಲಿದೆ. ಪಿಸಿಬಿಯ ವಾರ್ಷಿಕ ಆದಾಯ ಸುಮಾರು 995 ಕೋಟಿ (ಪಾಕ್ ರೂಪಾಯಿ ಲೆಕ್ಕಾಚಾರದಲ್ಲಿ). ವಾಕ್‌ಓವರ್‌ನಿಂದಾಗಿ ಅಪಾರ ನಷ್ಟವಾಗಲಿದ್ದು, ಅಗಾಧ ಪರಿಣಾಮ ಬೀರಲಿದೆ' ಎಂದು ಐಸಿಸಿ ಹಾಗೂ ಪಿಸಿಬಿಯ ಸಂವಹನ ವಿಭಾಗದ ಮಾಜಿ ಮುಖ್ಯಸ್ಥ ಸಮಿ–ಉಲ್–ಹಸನ್ ಬರ್ನಿ ಅವರು ಲೆಕ್ಕಾಚಾರ ತೆರೆದಿಟ್ಟರು.

ಐಸಿಸಿ, ಪಿಸಿಬಿ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು 2027ರವರೆಗೆ ಭಾರತ–ಪಾಕಿಸ್ತಾನ ಪಂದ್ಯಗಳನ್ನು ಹೈಬ್ರಿಡ್ ಮಾದರಿಯಲ್ಲಿ ಆಡಲು ಒಪ್ಪಿರುವ ಕಾರಣ, ಈ (ಆಯ್ದ ಪಂದ್ಯಗಳನ್ನು ಆಡುವ) ನಡೆಯನ್ನು ಸಮರ್ಥಿಸಿಕೊಳ್ಳುವುದು ಪಾಕಿಸ್ತಾನ ಮಂಡಳಿಗೆ ಕಠಿಣವಾಗಲಿದೆ.

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವುದಾಗಿ ಘೋಷಿಸಿದ ಪಾಕಿಸ್ತಾನದ ನಡೆ ಸರಿಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ಸರ್ಕಾರ, ಮಂಡಳಿಯ ನಿರ್ಧಾರಕ್ಕೆ ಬದ್ಧ'

ಕರಾಚಿ (ಪಿಟಿಐ): ಭಾರತ ವಿರುದ್ಧ ಟಿ20 ವಿಶ್ವಕಪ್ ಪಂದ್ಯ ಬಹಿಷ್ಕಾರಕ್ಕೆ ಸಂಬಂಧಿಸಿ ಸರ್ಕಾರ ಅಥವಾ ಪಾಕಿಸ್ತಾನ ಕ್ರಿಕೆಟ್ ಮಂಡಳಿ ನೀಡುವ ನಿರ್ದೇಶನವನ್ನು ಆಟಗಾರರು ಪಾಲಿಸಲಿದ್ದಾರೆ ಎಂದು ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಸೋಮವಾರ ಹೇಳಿದ್ದಾರೆ.


ಸಲ್ಮಾನ್ ಆಘಾ

ತಂಡ ಕೊಲಂಬೊಕ್ಕೆ ನಿರ್ಗಮಿಸುವ ಮೊದಲು ಲಾಹೋರ್‌ನಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಸಲ್ಮಾನ್, 'ಭಾನುವಾರ ಆಸ್ಟ್ರೇಲಿಯಾ ಎದುರಿನ ಟಿ20 ಪಂದ್ಯ ಮುಗಿದ ತಕ್ಷಣ ತಂಡದ ಮ್ಯಾನೇಜರ್ ಅವರು ಸರ್ಕಾರ ತೆಗೆದುಕೊಂಡ ತೀರ್ಮಾನದ ಬಗ್ಗೆ ಆಟಗಾರರಿಗೆ ಮಾಹಿತಿ ನೀಡಿದರು' ಎಂದರು.

'ಟಿ20 ವಿಶ್ವಕಪ್ ಕೇವಲ ಭಾರತ ವಿರುದ್ಧ ಆಡುವುದಕ್ಕಷ್ಟೇ ಸಂಬಂಧಿಸಿಲ್ಲ. ನಾವು ಶ್ರೀಲಂಕಾಕ್ಕೆ ತೆರಳಲಿದ್ದು ಅಲ್ಲಿ ನಡೆಯಲಿರುವ ಉಳಿದೆಲ್ಲಾ ಪಂದ್ಯಗಳನ್ನು ಗೆಲ್ಲಲು ಪ್ರಯತ್ನಿಸುತ್ತೇವೆ. ನಮಗೆ ಇತರ ಮೂರು ಲೀಗ್ ಪಂದ್ಯಗಳಿವೆ. ಅವುಗಳನ್ನು ಗೆದ್ದು ಮುಂದಿನ ಸುತ್ತಿಗೆ ಅರ್ಹತೆ ಪಡೆಯಲು ಯತ್ನಿಸುತ್ತೇವೆ' ಎಂದು ಸಲ್ಮಾನ್ ಹೇಳಿದರು.

ಪಿಸಿಬಿ ಬದ್ಧ: ಒಂದು ವೇಳೆ ಬದ್ಧ ಎದುರಾಳಿಗಳಿಬ್ಬರು ನಾಕೌಟ್‌ನಲ್ಲಿ ಮುಖಾಮುಖಿಯಾಗುವ ಸಂದರ್ಭ ಎದುರಾದಲ್ಲಿ, ತಮ್ಮ ದೇಶದ ಸರ್ಕಾರ ನೀಡುವ ಸೂಚನೆಯಂತೆ ನಡೆದುಕೊಳ್ಳುವುದಾಗಿ ಪಿಸಿಬಿಯ ಉನ್ನತ ಮೂಲವೊಂದು ತಿಳಿಸಿದೆ.

ಪಾಕಿಸ್ತಾನ ಫೆ. 7ರಂದು ನೆದರ್ಲೆಂಡ್ಸ್ ವಿರುದ್ಧ, 10ರಂದು ಅಮೆರಿಕ ವಿರುದ್ಧ ಮತ್ತು 18ರಂದು ನಮೀಬಿಯಾ ವಿರುದ್ಧ ಆಡಲಿದೆ.

ಐಸಿಸಿ ಎಚ್ಚರಿಕೆ

ಕರಾಚಿ (ಪಿಟಿಐ): ಭಾರತ ವಿರುದ್ಧ ಐಸಿಸಿ ಟಿ20 ವಿಶ್ವಕಪ್ ಪಂದ್ಯ ಬಹಿಷ್ಕರಿಸುವ ಪಾಕಿಸ್ತಾನದ ಕ್ರಮವನ್ನು ಪ್ರಶ್ನಿಸಿರುವ ಐಸಿಸಿ, ಈ ನಡೆ ಗಂಭೀರ ಕ್ರಮಗಳಿಗೆ ಕಾರಣವಾಗಬಹುದು ಎಂದು ಎಚ್ಚರಿಸಿದೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಭಾರಿ ದಂಡ ವಿಧಿಸಲು ಐಸಿಸಿಗೆ ಅವಕಾಶವಿದೆ. ಇದರ ಜೊತೆಗೆ ಬೇರೆ ಕೆಲವು ನಿರ್ಬಂಧಗಳನ್ನು ಹೇರಲೂ ಅವಕಾಶವಿದೆ. ಡಬ್ಲ್ಯುಟಿಸಿ (ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್) ಪಾಯಿಂಟ್‌ಗಳನ್ನು ಕಡಿತಗೊಳಿಸುವುದು, ಐಸಿಸಿ ರ‍್ಯಾಂಕಿಂಗ್‌ಗೆ ಪರಿಗಣಿಸದಿರುವುದು, ದ್ವಿಪಕ್ಷೀಯ ಸರಣಿ ಮೇಲೆ ನಿರ್ಬಂಧ, ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಆಡದಂತೆ ವಿದೇಶಿ ಆಟಗಾರರಿಗೆ ಸೂಚನೆ ನೀಡುವುದು ಇವುಗಳಲ್ಲಿ ಒಳಗೊಂಡಿವೆ.

ಆದರೆ, ವಾಕ್ ಓವರ್ ಪಡೆಯಬೇಕಾದರೆ ಭಾರತ ತಂಡ ಕೊಲಂಬೊಕ್ಕೆ ಪಯಣಿಸಬೇಕಾಗುತ್ತದೆ. ಪಂದ್ಯದ ದಿನ (ಫೆ.15) ನಾಯಕ ಸೂರ್ಯಕುಮಾರ್ ಯಾದವ್ ಅವರು ಟಾಸ್ ವೇಳೆ ಹಾಜರಿರಬೇಕಾಗುತ್ತದೆ. ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಅವರು ಆ ವೇಳೆ ಗೈರುಹಾಜರಾದಲ್ಲಿ ಇದನ್ನು ವಾಕ್ ಓವರ್ ಎಂದು ಪರಿಗಣಿಸಿ ಭಾರತಕ್ಕೆ ಎರಡು ಅಂಕಗಳನ್ನು ನೀಡಲಾಗುತ್ತದೆ.

2025ರಲ್ಲಿ ಯುಎಇಯಲ್ಲಿ ನಡೆದ ಏಷ್ಯಾ ಕಪ್ ಟೂರ್ನಿ ವೇಳೆ ಭಾರತ– ಪಾಕ್ ತಂಡಗಳು ಮೂರು ಬಾರಿ ಮುಖಾಮುಖಿಯಾಗಿದ್ದವು.

ಇದೇ 6ರಿಂದ ಮುಂಬೈ ವಿರುದ್ಧ ಕ್ವಾರ್ಟರ್ ಫೈನಲ್ ಪಂದ್ಯ

ರಣಜಿ ತಂಡಕ್ಕೆ ಮರಳಿದ ಕರುಣ್

ಪ್ರಜಾವಾಣಿ ವಾರ್ತೆ


ಕರುಣ್ ನಾಯರ್, ದೇವದತ್ತ ಪಡಿಕ್ಕಲ್ ಪ್ರಜಾವಾಣಿ ಸಂಗ್ರಹ ಚಿತ್ರ

ಬೆಂಗಳೂರು: ಗಾಯದಿಂದ ಚೇತರಿಸಿಕೊಂಡಿರುವ ಅನುಭವಿ ಬ್ಯಾಟರ್ ಕರುಣ್ ನಾಯರ್ ಅವರು ಇದೇ 6ರಿಂದ ನಡೆಯಲಿರುವ ಮುಂಬೈ ವಿರುದ್ಧದ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯಕ್ಕೆ ಕರ್ನಾಟಕ ತಂಡವನ್ನು ಸೇರಿಕೊಂಡಿದ್ದಾರೆ.

15 ಆಟಗಾರರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಸೋಮವಾರ ಪ್ರಕಟಿಸಿದೆ. ದೇವದತ್ತ ಪಡಿಕ್ಕಲ್ ತಂಡವನ್ನು ಮುನ್ನಡೆಸಲಿದ್ದಾರೆ. ಕೆ.ಎಲ್. ರಾಹುಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಅವರೂ ತಂಡದಲ್ಲಿದ್ದಾರೆ.

ಆಲೂರಿನಲ್ಲಿ ನಡೆದಿದ್ದ ಮಧ್ಯಪ್ರದೇಶ ವಿರುದ್ಧದ ಎಲೀಟ್ ಬಿ ಗುಂಪಿನ ಪಂದ್ಯದ ವೇಳೆ 34 ವರ್ಷದ ನಾಯರ್ ಎಡಗೈನ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರು. ಹೀಗಾಗಿ, ಅವರು ಮೊಹಾಲಿಯಲ್ಲಿ ನಡೆದ ಪಂಜಾಬ್ ವಿರುದ್ಧದ ಪಂದ್ಯದಿಂದ ಹೊರಗುಳಿದಿದ್ದರು. ಮುಂಬೈನ ಬಿ.ಕೆ.ಸಿ ಮೈದಾನದಲ್ಲಿ ನಡೆಯುವ ಪಂದ್ಯಕ್ಕೆ ನಾಯರ್ ವಾಪಸಾಗಿರುವುದು ತಂಡದ ಬ್ಯಾಟಿಂಗ್ ಬಲವನ್ನು ಹೆಚ್ಚಿಸಿದೆ.

ತಂಡದ ನೂತನ ನಾಯಕ ಪಡಿಕ್ಕಲ್ (ಔಟಾಗದೇ 120) ಅವರ ಅಜೇಯ ಶತಕದ ನೆರವಿನಿಂದ ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಭಾನುವಾರ ಪಂಜಾಬ್ ತಂಡವನ್ನು ಅವಿಸ್ಮರಣೀಯ ರೀತಿಯಲ್ಲಿ ಮಣಿಸಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದಿದೆ.

ಗಾಯದ ಸಮಸ್ಯೆಯಿಂದಾಗಿ ವೈಶಾಖ ವಿಜಯಕುಮಾರ್ ತಂಡದಿಂದ ಹೊರಗುಳಿದಿದ್ದರೂ ಪ್ರಸಿದ್ಧಕೃಷ್ಣ ವೇಗದ ಬೌಲಿಂಗ್ ವಿಭಾಗದ ಬಲವನ್ನು ಹೆಚ್ಚಿಸಿದ್ದಾರೆ.


ತಂಡ ಹೀಗಿದೆ: ದೇವದತ್ತ ಪಡಿಕ್ಕಲ್ (ನಾಯಕ), ಮಯಂಕ್ ಅಗರವಾಲ್, ಕೆ.ಎಲ್. ರಾಹುಲ್, ಅನೀಶ್ ಕೆ.ವಿ, ಕರುಣ್ ನಾಯರ್, ಆರ್.ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ವೆಂಕಟೇಶ್ ಎಂ, ವಿದ್ಯಾಧರ ಪಾಟೀಲ, ಪ್ರಸಿದ್ಧ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆ.ಎಲ್ (ವಿಕೆಟ್ ಕೀಪರ್), ವಿದ್ವತ್ ಕಾವೇರಪ್ಪ.

ಧ್ರುವ್ ವಾಪಸ್: ಬ್ಯಾಟರ್ ಧ್ರುವ್ ಪ್ರಭಾಕರ್ ಅವರು ಫೆ.6ರಿಂದ ರಾಮನಗರದಲ್ಲಿ ಉತ್ತರಾಖಂಡ ವಿರುದ್ಧ ನಡೆಯುವ ಕರ್ನಲ್ ಸಿ.ಕೆ. ನಾಯ್ಡು ಟೂರ್ನಿಯ (23 ವರ್ಷದೊಳಗಿನ) ಪಂದ್ಯಕ್ಕಾಗಿ ಕರ್ನಾಟಕ ತಂಡಕ್ಕೆ ಮರಳಿದ್ದಾರೆ. ಅವರು ಪಂಜಾಬ್ ವಿರುದ್ಧದ ರಣಜಿ ಟ್ರೋಫಿ ಪಂದ್ಯಕ್ಕೆ ಸೀನಿಯರ್ ತಂಡಕ್ಕೆ ತೆರಳಿದ್ದರು.

ತಂಡ ಹೀಗಿದೆ: ಅನೀಶ್ವರ್ ಗೌತಮ್ (ನಾಯಕ), ಧ್ರುವ ಪ್ರಭಾಕರ್ (ಉಪನಾಯಕ), ಪ್ರಖರ್ ಚತುರ್ವೇದಿ, ಫೈಜಾನ್ ಖಾನ್ (ವಿಕೆಟ್ ಕೀಪರ್), ಕೆ.ಪಿ.ಕಾರ್ತಿಕೇಯ, ಹರ್ಷಿಲ್ ಧರ್ಮಾನಿ, ಹಾರ್ದಿಕ್ ರಾಜ್, ಯಶೋವರ್ಧನ್ ಪರಂತಪ್, ಮನ್ವಂತ್ ಕುಮಾರ್ ಎಲ್, ಧನುಷ್ ಗೌಡ, ಸಮಿತ್ ದ್ರಾವಿಡ್, ಕಾರ್ತಿಕ್ ಎಸ್.ಯು, ಶಶಿಕುಮಾರ್, ಸಂಜಯ್ ಅಶ್ವಿನ್ (ವಿಕೆಟ್ ಕೀಪರ್), ಮೋನೀಶ್ ರೆಡ್ಡಿ.

ಮುಂಬೈ ತಂಡಕ್ಕೆ ಶಾರ್ದೂಲ್, ಜೈಸ್ವಾಲ್


ಶಾರ್ದೂಲ್ ಠಾಕೂರ್


ಯಶಸ್ವಿ ಜೈಸ್ವಾಲ್

ಮುಂಬೈ (ಪಿಟಿಐ): ನಾಯಕ ಶಾರ್ದೂಲ್ ಠಾಕೂರ್ ಮತ್ತು ಭಾರತ ತಂಡದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಪ್ರವಾಸಿ ಕರ್ನಾಟಕ ವಿರುದ್ಧ ನಡೆಯಲಿರುವ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮುಂಬೈ ತಂಡಕ್ಕೆ ಮರಳಿದ್ದಾರೆ.

ಮುಂಬೈ ಡಿ ಗುಂಪಿನಲ್ಲಿ ನಾಲ್ಕು ಗೆಲುವು ಮತ್ತು ಮೂರು ಡ್ರಾಗಳೊಂದಿಗೆ ಅಗ್ರಸ್ಥಾನ ಪಡೆದಿತ್ತು. ಕರ್ನಾಟಕ ತಂಡ ಭಾನುವಾರ ನಡೆದ 'ಎ' ಗುಂಪಿನ ಕೊನೆಯ ಪಂದ್ಯದಲ್ಲಿ ಪಂಜಾಬ್ ತಂಡದ ಮೇಲೆ ರೋಚಕ ಜಯಗಳಿಸಿ ಎರಡನೇ ಸ್ಥಾನ ಪಡೆಯುವಲ್ಲಿ ಯಶಸ್ವಿ ಆಗಿತ್ತು.

ಟಿ20 ವಿಶ್ವಕಪ್ ತಂಡದಲ್ಲಿ ಜೈಸ್ವಾಲ್ ಸ್ಥಾನ ಪಡೆದಿಲ್ಲ. ವಿಜಯ್ ಹಜಾರೆ ಟ್ರೋಫಿ ವೇಳೆ ಆದ ಗಾಯದಿಂದಾಗಿ ಖಾಯಂ ನಾಯಕ ಠಾಕೂರ್ ಅವರು ರಣಜಿ ಆಡಿರಲಿಲ್ಲ. ಸಿದ್ದೇಶ್ ಲಾಡ್ ಅವರು ತಂಡವನ್ನು ಮುನ್ನಡೆಸಿದ್ದರು.

ತಂಡ ಇಂತಿದೆ: ಶಾರ್ದೂಲ್ ಠಾಕೂರ್ (ನಾಯಕ), ಯಶಸ್ವಿ ಜೈಸ್ವಾಲ್, ಮುಶೀರ್ ಖಾನ್, ಸರ್ಫರಾಜ್ ಖಾನ್, ಸಿದ್ದೇಶ್ ಲಾಡ್, ಅಖಿಲ್ ಹೆರವಾಡಕರ್, ಆಕಾಶ್ ಆನಂದ್ (ವಿಕೆಟ್ ಕೀಪರ್), ಹಾರ್ದಿಕ್ ತಮೋರೆ (ವಿಕೆಟ್ ಕೀಪರ್), ಸಾಯಿರಾಜ್ ಪಾಟೀಲ್, ಶಮ್ಸ್ ಮುಲಾನಿ, ತನುಶ್ ಕೋಟ್ಯಾನ್, ತುಷಾರ್ ದೇಶಪಾಂಡೆ, ಮೋಹಿತ್ ಅವಸ್ಥಿ, ಓಂಕಾರ್ ತರ್ಮಲೆ, ದಿವ್ಯಾಂಶ್ ಸಕ್ಸೇನಾ, ಸೂರ್ಯಾಂಶ್ ಶೆಡ್ಗೆ.

ನಾಲ್ಕನೇ ಫೈನಲ್‌ನತ್ತ ಡೆಲ್ಲಿ ಚಿತ್ತ

ಎಲಿಮಿನೇಟರ್‌ನಲ್ಲಿ ಜೆಮಿಮಾ ಪಡೆಗೆ ಜೈಂಟ್ಸ್ ಸವಾಲು

ವಡೋದರಾ (ಪಿಟಿಐ): ಕಳೆದ ಮೂರು ಆವೃತ್ತಿಗಳಲ್ಲಿ ರನ್ನರ್ಸ್ ಅಪ್ ಆಗಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಂಗಳವಾರ ಮಹಿಳಾ ಪ್ರೀಮಿಯರ್ ಲೀಗ್‌ನ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಹಾಲಿ ಆವೃತ್ತಿಯಲ್ಲಿ ಕೊನೆಯ ಹಂತದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ತೋರಿದ ಜೆಮಿಮಾ ರಾಡ್ರಿಗಸ್ ನಾಯಕತ್ವದ ತಂಡವು ಲೀಗ್ ಹಂತದಲ್ಲಿ ಅಗ್ರ ಮೂರರಲ್ಲಿ ಸ್ಥಾನ ಪಡೆದಿದೆ. ಇದುವರೆಗಿನ ನಾಲ್ಕು ಋತುಗಳಲ್ಲಿ ಪ್ಲೇ ಆಫ್‌ಗೆ ಅರ್ಹತೆ ಪಡೆದ ಏಕೈಕ ತಂಡ ಇದಾಗಿದೆ.

ಮಹಿಳಾ ಪ್ರೀಮಿಯರ್ ಲೀಗ್

ಸತತ ನಾಲ್ಕನೇ ಬಾರಿ ಫೈನಲ್ ಪ್ರವೇಶದ ಕನಸು ಕಾಣುತ್ತಿರುವ ಡೆಲ್ಲಿ ತಂಡವು ಹಾಲಿ ಆವೃತ್ತಿಯಲ್ಲಿ ಮಿಶ್ರ ಫಲಿತಾಂಶವನ್ನು ಹೊಂದಿದೆ. ಆಡಿದ ಎಂಟು ಪಂದ್ಯಗಳಲ್ಲಿ ನಾಲ್ಕನ್ನು ಗೆದ್ದರೆ, ಉಳಿದ ಪಂದ್ಯಗಳನ್ನು ಸೋತಿದೆ.

ಡೆಲ್ಲಿ ತಂಡದ ಬೌಲಿಂಗ್ ವಿಭಾಗವನ್ನು ವೇಗಿ ನಂದನಿ ಶರ್ಮಾ ಮುನ್ನಡೆಸುತ್ತಿದ್ದಾರೆ. ಅವರು ಡೆತ್ ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಿದ್ದಾರೆ. ಅವರಿಗೆ ಎಡಗೈ ಸ್ಪಿನ್ನರ್ ಶ್ರೀಚರಣಿ (14) ಮತ್ತು ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಮರೈಝಾನ್ ಕಾಪ್ (10) ಉತ್ತಮ ಬೆಂಬಲ ನೀಡಿದ್ದಾರೆ.

ದಕ್ಷಿಣ ಆಫ್ರಿಕಾದ ಮತ್ತೊಬ್ಬ ಆಟಗಾರ್ತಿ ಲಾರಾ ವೋಲ್ವಾರ್ಟ್ (241 ರನ್‌ಗಳು) ಮತ್ತು ಲಿಜೆಲ್ ಲೀ (240) ಅವರು ಬ್ಯಾಟಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಆದರೆ, ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ (208) ಅವರಿಂದ ನಿರೀಕ್ಷಿತ ಆಟ ಮೂಡಿಬರದಿರುವುದು ತಂಡಕ್ಕೆ ಹಿನ್ನಡೆಯಾಗಿದೆ.

ಮತ್ತೊಂದೆಡೆ ಮೂರು ಪಂದ್ಯಗಳ ಸತತ ಸೋಲಿನಿಂದ ಚೇತರಿಸಿಕೊಂಡ ನಂತರ ಗುಜರಾತ್ ಜೈಂಟ್ಸ್ ತಂಡವು ಉತ್ತಮ ಪ್ರದರ್ಶನ ನೀಡಿ ಎಲಿಮಿನೇಟರ್‌ಗೆ ಪ್ರವೇಶಿಸಿದೆ. ಕೊನೆಯ ಮೂರು ಪಂದ್ಯಗಳಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿದೆ.


ಆ್ಯಷ್ಲೆ ಗಾರ್ಡನರ್, ಜೆಮಿಮಾ ರಾಡ್ರಿಗಸ್

ಲೀಗ್ ಹಂತದ ಎರಡೂ ಪಂದ್ಯಗಳಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿರುವುದರಿಂದ ಜೈಂಟ್ಸ್ ತಂಡವು ಮತ್ತೆ ಪ್ರಾಬಲ್ಯ ಸಾಧಿಸಿ, ಮೊದಲ ಬಾರಿ ಪ್ರಶಸ್ತಿ ಸುತ್ತಿಗೇರುವ ಛಲದಲ್ಲಿದೆ. ಎಲಿಮಿನೇಟರ್ ಪಂದ್ಯದ ವಿಜೇತರು ಇದೇ 5ರಂದು ನಡೆಯಲಿರುವ ಫೈನಲ್ ಪಂದ್ಯದಲ್ಲಿ ಮಾಜಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30, **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಟಿ20 ವಿಶ್ವಕಪ್ ಅಭ್ಯಾಸ ಪಂದ್ಯ ಜಗದೀಶನ್ ಶತಕ; ಭಾರತಕ್ಕೆ ಜಯ

ನವಿ ಮುಂಬೈ (ಪಿಟಿಐ): ನಾರಾಯಣ್ ಜಗದೀಶನ್ (104;55) ಅವರ ಅಮೋಘ ಶತಕದ ನೆರವಿನಿಂದ ಭಾರತ ಎ ತಂಡವು ಸೋಮವಾರ ನಡೆದ ಐಸಿಸಿ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಅಮೆರಿಕ ತಂಡವನ್ನು 38 ರನ್‌ಗಳಿಂದ ಮಣಿಸಿತು.

ಹೊಟ್ಟೆಯ ಕೆಳಭಾಗದ ಶಸ್ತ್ರಚಿಕಿತ್ಸೆಯ ನಂತರ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿದ ತಿಲಕ್ ವರ್ಮಾ ಈ ಪಂದ್ಯದಲ್ಲಿ ಕಣಕ್ಕಿಳಿದು 24 ಎಸೆತಗಳಲ್ಲಿ 38 ರನ್ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ ಮೂರು ಬೌಂಡರಿ ಮತ್ತು ಎರಡು ಸಿಕ್ಸರ್ ಸೇರಿತ್ತು. ಈ ಮೂಲಕ ಎಡಗೈ ಬ್ಯಾಟರ್ ಫಿಟ್‌ನೆಸ್ ಸಾಬೀತು ಪಡಿಸಿದರು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ತಂಡವು ಜಗದೀಶನ್ ಮತ್ತು ನಾಯಕ ಆಯುಷ್ ಬಡೋನಿ (ಔಟಾಗದೇ 60; 26ಎ) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 238 ರನ್ ಗಳಿಸಿತು. ಭಾರತದ ಇನಿಂಗ್ಸ್‌ನಲ್ಲಿ 13 ಸಿಕ್ಸರ್ ಮತ್ತು 23 ಬೌಂಡರಿಗಳು ದಾಖಲಾದವು. ಅಮೆರಿಕ ತಂಡದ ಒಂಬತ್ತು ಆಟಗಾರರು ಬೌಲಿಂಗ್ ಮಾಡಿದ್ದು ವಿಶೇಷವಾಗಿತ್ತು.


ಜಗದೀಶನ್


ತಿಲಕ್ ವರ್ಮಾ

ಬೃಹತ್ ಗುರಿಯನ್ನು ಬೆನ್ನಟ್ಟಿದ ಅಮೆರಿಕ ತಂಡವು ದಿಟ್ಟ ಪ್ರತಿಕ್ರಿಯೆ ನೀಡಿತು. 19.4 ಓವರ್‌ಗಳಲ್ಲಿ 200 ರನ್ ಗಳಿಸಿ ಹೋರಾಟ ಮುಗಿಸಿತು. ಆಂಡ್ರಿಸ್ ಗೌಸ್ 44 ಮತ್ತು ಸಂಜಯ್ ಕೃಷ್ಣಮೂರ್ತಿ 41 ರನ್ ಗಳಿಸಿದರು.

ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 238 (ಪ್ರಿಯಾಂಶ್ ಆರ್ಯ 28, ನಾರಾಯಣ್ ಜಗದೀಶನ್ 104, ತಿಲಕ್ ವರ್ಮಾ 38, ಆಯುಷ್ ಬಡೋನಿ 60). ಅಮೆರಿಕ: 19.4 ಓವರ್‌ಗಳಲ್ಲಿ 200 (ಆಂಡ್ರಿಸ್ ಗೌಸ್ 44, ಸಂಜಯ್ ಕೃಷ್ಣಮೂರ್ತಿ 41; ರವಿ ಬಿಷ್ಣೋಯಿ 37ಕ್ಕೆ 3, ನಮನ್ ಧೀರ್ 6ಕ್ಕೆ 2).

ವೇತನ ಕಡಿತ: ಬಿಎಫ್‌ಸಿ ಆಟಗಾರರ ಒಪ್ಪಿಗೆ

ನವದೆಹಲಿ (ಪಿಟಿಐ): ಇದೇ 14ರಂದು ಪ್ರಾರಂಭವಾಗುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಋತುವಿಗೆ ದಿಗ್ಗಜ ಸುನಿಲ್ ಚೆಟ್ರಿ ಸೇರಿದಂತೆ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಆಟಗಾರರು ವೇತನ ಕಡಿತಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಫ್ರ್ಯಾಂಚೈಸಿ ಮಾಲೀಕ ಪಾರ್ಥ್ ಜಿಂದಾಲ್ ಹೇಳಿದ್ದಾರೆ.

ಫ್ರ್ಯಾಂಚೈಸಿ ಮತ್ತು ಕ್ರೀಡೆಯ ಹಿತದೃಷ್ಟಿಯಿಂದ ಈ ತ್ಯಾಗ ಮಾಡಿದ್ದಕ್ಕಾಗಿ ತಂಡದ ಆಟಗಾರರನ್ನು ಜಿಂದಾಲ್ ಶ್ಲಾಘಿಸಿದ್ದಾರೆ. ಆಡಳಿತ ಮಂಡಳಿಯು ತಂಡದ ಆಟಗಾರರೊಂದಿಗೆ ಮುಕ್ತ, ಪ್ರಾಮಾಣಿಕ ಸಂಭಾಷಣೆ ನಡೆಸಿದೆ ಎಂದು ಅವರು ತಿಳಿಸಿದ್ದಾರೆ.

ಸ್ಕ್ವಾಷ್: ಅನಾಹತ್ ಸಿಂಗ್ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ತಾರೆ ಅನಾಹತ್ ಸಿಂಗ್ ಅವರು ವಾಷಿಂಗ್ಟನ್‌ನಲ್ಲಿ ಸೋಮವಾರ ಮುಕ್ತಾಯಗೊಂಡ ಸ್ಕ್ವಾಷ್ ಆನ್ ಫೈರ್ ಓಪನ್ ಟೂರ್ನಿಯ ಕಿರೀಟ ತಮ್ಮದಾಗಿಸಿಕೊಂಡರು. ಈ ಹಾದಿಯಲ್ಲಿ ಅವರು 12–10, 11–5, 11–7ರಿಂದ ಅಗ್ರ ಶ್ರೇಯಾಂಕದ ಆಟಗಾರ್ತಿ, ಇಂಗ್ಲೆಂಡ್‌ನ ಜಾರ್ಜಿನಾ ಕೆನಡಿ ಅವರಿಗೆ ಆಘಾತ ನೀಡಿದರು.

ಪಿಎಸ್‌ಎ ಕಂಚಿನ ಪದಕ ಮಟ್ಟದ ಟೂರ್ನಿಯಲ್ಲಿ ಅನಾಹತ್ ಅವರಿಗೆ ಇದು ಚೊಚ್ಚಲ ಪ್ರಶಸ್ತಿಯಾಗಿದೆ.

ದೆಹಲಿಯ 17 ವರ್ಷ ವಯಸ್ಸಿನ ಆಟಗಾರ್ತಿ ಪಿಎಸ್‌ಎ ಟೂರ್ ಮಟ್ಟದ 26 ಟೂರ್ನಿಗಳಲ್ಲಿ ಈವರೆಗೆ ಭಾಗವಹಿಸಿದ್ದು, 15ರಲ್ಲಿ ಚಾಂಪಿಯನ್ ಆಗಿದ್ದಾರೆ. ಅದರೊಂದಿಗೆ ವಿಶ್ವ ಕ್ರಮಾಂಕದಲ್ಲಿ 31ನೇ ಸ್ಥಾನ ಪಡೆದಿದ್ದಾರೆ.


ಪ್ರಶಸ್ತಿಯೊಂದಿಗೆ ಅನಾಹತ್ ಸಿಂಗ್

ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿ ತನ್ವಿ ಬಳಗ

ಕಿಂಗ್ಡಾವೊ (ಚೀನಾ) (ಪಿಟಿಐ): ಅನುಭವಿ ಪಿ.ವಿ. ಸಿಂಧು ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿಯಲಿರುವ ಭಾರತ ಮಹಿಳಾ ತಂಡವು ಮಂಗಳವಾರ ಇಲ್ಲಿ ಆರಂಭವಾಗುವ ಏಷ್ಯಾ ಟೀಂ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿದೆ. ಪುರುಷರ ತಂಡವು ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

2024ರಲ್ಲಿ (ಮಲೇಷ್ಯಾ) ನಡೆದ ಕಳೆದ ಆವೃತ್ತಿಯಲ್ಲಿ ಭಾರತದ ಮಹಿಳಾ ತಂಡವು ಚೊಚ್ಚಲ ಚಿನ್ನ ಗೆಲ್ಲುವ ಮೂಲಕ ಚಾರಿತ್ರಿಕ ಸಾಧನೆ ಮೆರೆದಿತ್ತು. ಆ ತಂಡದಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಇದ್ದರು. ಆದರೆ, ಈ ಬಾರಿ ಅವರು ಹಿಂದೆ ಸರಿದಿರುವುದು ಭಾರತದ ಪದಕದ ನಿರೀಕ್ಷೆಗೆ ಆರಂಭಿಕ ಹೊಡೆತ ನೀಡಿದೆ. ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಮಹಿಳಾ ತಂಡವನ್ನು ಮುನ್ನಡೆಸಲಿದ್ದಾರೆ.

17 ವರ್ಷ ವಯಸ್ಸಿನ ತನ್ವಿ ಅವರು 2024ರಲ್ಲಿ ಪ್ರಶಸ್ತಿ ಗೆದ್ದ ಭಾರತ ತಂಡದಲ್ಲಿದ್ದರು. ಆದರೆ, ಯಾವುದೇ ಪಂದ್ಯಗಳನ್ನು ಆಡಲು ಅವರಿಗೆ ಅವಕಾಶ ಸಿಕ್ಕಿರಲಿಲ್ಲ. 18 ವರ್ಷದ ಉನ್ನತಿ ಹೂಡಾ 2025ರ ಯಶಸ್ವಿ ಋತುವಿನ ನಂತರ ಈ ಟೂರ್ನಿಗೆ ಮರಳಿದ್ದಾರೆ. ಉಳಿದಂತೆ ಮಾಳವಿಕಾ ಬನ್ಸೋಡ್ ಮತ್ತು ರಕ್ಷಿತಾ ರಾಮರಾಜ್ ಸಿಂಗಲ್ಸ್ ಜವಾಬ್ದಾರಿಯನ್ನು ಹಂಚಿಕೊಳ್ಳುವರು.


ಭಾರತದ ತನ್ವಿ ಶರ್ಮಾ

ಅನುಭವಿ ಗಾಯತ್ರಿ ಗೋಪಿಚಂದ್, ಟ್ರೀಸಾ ಜೋಲಿ ಜೋಡಿಯೊಂದಿಗೆ ಪ್ರಿಯಾ ಕೊಂಜೆಂಗ್‌ಬಮ್, ಶ್ರುತಿ ಮಿಶ್ರಾ ಹಾಗೂ ತನಿಶಾ ಕ್ರಾಸ್ಟೊ ಅವರು ಡಬಲ್ಸ್ ಸವಾಲನ್ನು ಮುನ್ನಡೆಸಲಿದ್ದಾರೆ.

ಭಾರತ ಮಹಿಳಾ ತಂಡವು ವೈ ಗುಂಪಿನಲ್ಲಿದ್ದು, ಬುಧವಾರ ಮ್ಯಾನ್ಮಾರ್ ವಿರುದ್ಧ ಅಭಿಯಾನ ಆರಂಭಿಸಲಿದೆ. ನಂತರದಲ್ಲಿ ಥಾಯ್ಲೆಂಡ್ ತಂಡದೊಂದಿಗೆ ಸೆಣಸಲಿದೆ.

2016 ಮತ್ತು 2020ರಲ್ಲಿ ಕಂಚಿನ ಪದಕವನ್ನು ಗೆದ್ದಿರುವ ಭಾರತದ ಪುರುಷ ತಂಡವು ಈ ಬಾರಿ ಸುಧಾರಿತ ಪ್ರದರ್ಶನದ ಛಲದಲ್ಲಿದೆ. ಸಿ ಗುಂಪಿನಲ್ಲಿರುವ ಭಾರತ ಪುರುಷರ ತಂಡ ಬುಧವಾರ ಸಿಂಗಪುರ ವಿರುದ್ಧ ಕಣಕ್ಕಿಳಿಯಲಿದೆ. ನಂತರ ಜಪಾನ್ ತಂಡವನ್ನು ಎದುರಿಸಲಿದೆ.

ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್ ಅವರು ಸಿಂಗಲ್ಸ್ ಸವಾಲನ್ನು ಮುನ್ನಡೆಸುವರು. ಯುವ ತಾರೆ ಆಯುಷ್ ಶೆಟ್ಟಿ ಮತ್ತು ತರುಣ್ ಮನ್ನೆಪಳ್ಳಿ ಸಿಂಗಲ್ಸ್‌ನ ಜವಾಬ್ದಾರಿ ಹಂಚಿಕೊಳ್ಳಲಿದ್ದಾರೆ. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ ಅವರೊಂದಿಗೆ ಸಾಯಿ ಪ್ರತೀಕ್ ಕೆ, ಪೃಥ್ವಿ ಕೃಷ್ಣಮೂರ್ತಿ ರಾಯ್ ಮತ್ತು ಹರಿಹರನ್ ಅಂಶಕರುಣನ್ ಡಬಲ್ಸ್‌ನಲ್ಲಿ ಆಡುವರು.

ಸಂಕ್ಷಿಪ್ತ ಸುದ್ದಿ

ಐಎಸ್‌ಎಲ್: ಪ್ರಸಾರದ ಹಕ್ಕು ಫ್ಯಾನ್‌ಕೋಡ್ ಪಾಲು

ಬೆಂಗಳೂರು: ಇದೇ 14ರಂದು ಆರಂಭವಾಗಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯಗಳ ಪ್ರಸಾರದ ಹಕ್ಕುಗಳನ್ನು ಫ್ಯಾನ್‌ಕೋಡ್ ಸಂಸ್ಥೆ ಖರೀದಿಸಿದೆ. ನಿರ್ಮಾಣ ಹಕ್ಕು ಕೆಲಿಡೊಸ್ಕೋಪ್ ಸ್ಟುಡಿಯೊಸ್ (ಕೆಪಿಎಸ್) ಸಂಸ್ಥೆಯ ಪಾಲಾಗಿದೆ.

ಟೆಲಿವಿಷನ್, ಡಿಜಿಟಲ್ ಮಾಧ್ಯಮ ಹಾಗೂ ನಿರ್ಮಾಣ ಹಕ್ಕುಗಳಿಗೆ ಫ್ಯಾನ್‌ಕೋಡ್ ₹8.62 ಕೋಟಿ ಬಿಡ್ ಸಲ್ಲಿಸಿತ್ತು. ಎಬಿಪಿ ನೆಟ್‌ವರ್ಕ್ (₹6.89 ಕೋಟಿ– ಡಿಜಿಟಲ್ ಹಾಗೂ ನಿರ್ಮಾಣ ಹಕ್ಕು), ಜಿಯೊ ಟಿವಿ (₹5 ಕೋಟಿ– ಡಿಜಿಟಲ್ ಹಕ್ಕು) ಹಾಗೂ ಕೆಪಿಎಸ್ (₹5.25 ಕೋಟಿ– ನಿರ್ಮಾಣ ಹಕ್ಕು) ಸಂಸ್ಥೆಗಳು ಅಂತಿಮ ಬಿಡ್‌ನಲ್ಲಿ ಭಾಗವಹಿಸಿದ್ದವು.

ಕಳೆದ ಬಾರಿ, ವಯಾಕಾಮ್ ಸಂಸ್ಥೆಯು ವಾರ್ಷಿಕ ₹275 ಕೋಟಿಯಂತೆ 2023–24 ಹಾಗೂ 2024–25ನೇ ಸಾಲಿನ ಐಎಸ್‌ಎಲ್ ಲೀಗ್ ಪಂದ್ಯಗಳ ನೇರಪ್ರಸಾರದ ಹಕ್ಕುಗಳನ್ನು ಖರೀದಿಸಿತ್ತು. ಆದರೆ, ಈ ಬಾರಿ ಲೀಗ್ ವಿಳಂಬವಾಗಿದ್ದು, ಪ್ರಸಾರದ ಹಕ್ಕುಗಳು ಗಣನೀಯವಾಗಿ ಕಡಿಮೆ ಮೊತ್ತಕ್ಕೆ ಮಾರಾಟವಾಗಿವೆ.

ಬಿಬಿಸಿ ಕ್ರೀಡಾ ಪ್ರಶಸ್ತಿ: ಕೌರ್, ಸ್ಮೃತಿ ಸೇರಿ ಐವರ ನಾಮನಿರ್ದೇಶನ

ನವದೆಹಲಿ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಉಪನಾಯಕಿ ಸ್ಮೃತಿ ಮಂದಾನ ಅವರು ಬಿಬಿಸಿ ನೀಡುವ 'ಭಾರತದ ವರ್ಷದ ಮಹಿಳಾ ಕ್ರೀಡಾಪಟು' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಮಹಿಳಾ ಚೆಸ್ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್, ಪಿಸ್ತೂಲ್ ಶೂಟರ್ ಸುರುಚಿ ಸಿಂಗ್, ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಜ್ಯೋತಿ ಯರ್ರಾಜಿ ಅವರೂ 2025ರ ಪ್ರತಿಷ್ಠಿತ ವಾರ್ಷಿಕ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿರುವ ಇತರ ಮೂವರು.

36 ವರ್ಷದ ಕೌರ್ ನೇತೃತ್ವದಲ್ಲಿ ಭಾರತ ಮಹಿಳಾ ತಂಡವು ಕಳೆದ ನವೆಂಬರ್‌ನಲ್ಲಿ ಮೊದಲ ಬಾರಿ ವಿಶ್ವಕಪ್ ಗೆದ್ದುಕೊಂಡಿತು. ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್‌ನಲ್ಲಿ 339 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟುವ ವೇಳೆ ಹರ್ಮನ್ 88 ಎಸೆತಗಳಲ್ಲಿ 89 ರನ್ ಗಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು.

29 ವರ್ಷದ ಎಡಗೈ ಬ್ಯಾಟರ್ ಮಂದಾನ ಅವರು ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಎರಡನೇ ಅತಿ ಹೆಚ್ಚು ಶತಕಗಳನ್ನು ಗಳಿಸಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಅವರು ಆಸ್ಟ್ರೇಲಿಯಾ ವಿರುದ್ಧ 50 ಎಸೆತಗಳಲ್ಲಿ ಶತಕ ಗಳಿಸಿದ್ದರು. ಇದು ಈ ಮಾದರಿಯಲ್ಲಿ ಭಾರತದ ಆಟಗಾರನೊಬ್ಬನ ವೇಗದ ಶತಕವಾಗಿದ್ದು, ವಿರಾಟ್ ಕೊಹ್ಲಿ ಅವರ ದಾಖಲೆಯನ್ನು ಮುರಿದರು.

ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿ: ಭಾರತದ ಆಟಗಾರರಿಗೆ ಹಿನ್ನಡೆ

ನಾದಿರ್ಬೆಕ್ ಅಬ್ದುಸತ್ತಾರೋವ್‌ಗೆ ಕಿರೀಟ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು 88ನೇ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಭಾನುವಾರ ಪ್ರಶಸ್ತಿ ಗೆದ್ದುಕೊಂಡರು.

ನಾಲ್ಕನೇ ಬಾರಿ ಈ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಅವರು ಈ ಹಿಂದಿನ ಮೂರು ಯತ್ನಗಳಲ್ಲಿ ಸ್ವಲ್ಪದರಲ್ಲೇ ಪ್ರಶಸ್ತಿ ವಂಚಿತರಾಗಿದ್ದರು.

ಚೆಸ್‌ನ ವಿಂಬಲ್ಡನ್ ಎನಿಸಿರುವ ಈ ಟೂರ್ನಿಯಲ್ಲಿ 14 ಆಟಗಾರರು ಭಾಗವಹಿಸಿದ್ದು, ಉಜ್ಬೇಕ್ ಆಟಗಾರ 13 ಸುತ್ತುಗಳಿಂದ 9 ಅಂಕ ಸಂಗ್ರಹಿಸಿದರು. ಅವರು ಕೊನೆಯ ಸುತ್ತಿನಲ್ಲಿ ಕಪ್ಪುಕಾಯಿಗಳಲ್ಲಿ ಆಡಿ ಭಾರತದ ಅರ್ಜುನ್ ಇರಿಗೇಶಿ (4.5) ಅವರನ್ನು ಮಣಿಸಿದರು.

ಉಜ್ಬೇಕಿಸ್ತಾನದ ಮತ್ತೊಬ್ಬ ಆಟಗಾರ ಹಾಗೂ ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋವ್ (8.5) ಅವರು ಕೊನೆಯ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಥಾಯ್ ದೈ ವಾನ್ ನುಯೆನ್ (3) ಅವರನ್ನು ಸೋಲಿಸಿದರು.


ಪ್ರಶಸ್ತಿಯೊಂದಿಗೆ ನಾದಿರ್ಬೆಕ್ ಅಬ್ದುಸತ್ತಾರೋವ್ ಸಂಭ್ರಮ ಫಿಡೆ ಚಿತ್ರ

ಸ್ಥಳೀಯ ಆಟಗಾರ ಹಾಗೂ 2021ರ ವಿಜೇತ ಜೋರ್ಡನ್ ವಾನ್ ಫೊರೀಸ್ಟ್, ಅಮೆರಿಕದ ಹ್ಯಾನ್ಸ್ ನೀಮನ್ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ತಲಾ 7.5 ಅಂಕ ಪಡೆದರು. ಆದರೆ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

ಭಾರತಕ್ಕೆ ನಿರಾಸೆ: ಭಾರತದ ನಾಲ್ವರು ಆಟಗಾರರು ಕಣದಲ್ಲಿದ್ದರೂ ಯಾರಿಂದಲೂ ಉತ್ತಮ ಪ್ರದರ್ಶನ ಮೂಡಿಬರಲಿಲ್ಲ. ವಿಶ್ವ ಚಾಂಪಿಯನ್ ಗುಕೇಶ್ (6.5 ಅಂಕ), ಪ್ರಜ್ಞಾನಂದ (5.5), ಅರವಿಂದ ಚಿದಂಬರಮ್ (4.5) ಮತ್ತು ಅರ್ಜುನ್ ಇರಿಗೇಶಿ (4.5) ಅವರು ಕ್ರಮವಾಗಿ 10 ರಿಂದ 13ರವರೆಗಿನ ಸ್ಥಾನ ಗಳಿಸಿದರು.

ಪ್ರಜ್ಞಾನಂದ ಅಂತಿಮ ಸುತ್ತಿನಲ್ಲಿ ವಾನ್ ಫೊರೀಸ್ಟ್ ಅವರ ಜೊತೆ ಡ್ರಾ ಮಾಡಿಕೊಂಡರೆ, ರಷ್ಯದ ವ್ಲಾದಿಮಿರ್ ಫೆಡೊಸೀವ್ (6.5) ಅವರು ಅರವಿಂದ್ (4.5) ಅವರನ್ನು ಸೋಲಿಸಿದರು. ಗುಕೇಶ್ ಮತ್ತು ವಿನ್ಸೆಂಟ್ ಕೀಮರ್ ನಡುವಣ ಪಂದ್ಯ ಡ್ರಾ ಆಯಿತು.

ಆರಂಭದ ಪಂದ್ಯಗಳಿಗೆ ಹ್ಯಾಜಲ್‌ವುಡ್ ಅಲಭ್ಯ

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರು ಗಾಯದಿಂದ ಇನ್ನೂ 'ಪುನಶ್ಚೇತನ'ದಲ್ಲಿರುವ ಕಾರಣ ಟಿ20 ವಿಶ್ವಕಪ್‌ನ ಆರಂಭದ ಪಂದ್ಯಗಳಿಗೆ ತಂಡದೊಂದಿಗೆ ಪಯಣಿಸುವುದಿಲ್ಲ ಎಂದು ರಾಷ್ಟ್ರೀಯ ಆಯ್ಕೆಗಾರ ಟೋನಿ ಡೋಡ್‌ಮೇಡ್ ಸೋಮವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.



ನಥಾನ್ ಎಲಿಸ್, ಟಿಮ್ ಡೇವಿಡ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಈಗಾಗಲೇ ಕೊಲಂಬೊ ತಲುಪಿದ್ದಾರೆ. ವಿಶ್ವಕಪ್ ಆಡುವ ಆಸ್ಟ್ರೇಲಿಯಾ ತಂಡ ಪಾಕಿಸ್ತಾನದಿಂದ ಮಂಗಳವಾರ ಕೊಲಂಬೊಕ್ಕೆ ಬಂದಿಳಿಯಲಿದೆ ಎಂದು ಡೋಡ್‌ಮೇಡ್ ತಿಳಿಸಿದ್ದಾರೆ.

ಆಸ್ಟ್ರೇಲಿಯಾ ತಂಡವು ತನ್ನ ಮೊದಲ ಪಂದ್ಯವನ್ನು 11ರಂದು ಐರ್ಲೆಂಡ್ ವಿರುದ್ಧ ಆಡಲಿದೆ.